ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಮಂಗಳೂರು

ಭಾನುವಾರ, 12 ಏಪ್ರಿಲ್ 2026

ಸಂಪುಟ 48, ಸಂಚಿಕೆ 24, ಪುಟಗಳು 12+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com
epaper.hosadigantha.com
Hosadigantha Digital



ಸಶಸ್ತ್ರ ಪಡೆಗಳಲ್ಲಿ ಸಿರಿಧಾನ್ಯ ಬಳಕೆಗೆ ಕೇಂದ್ರ ಉತ್ತೇಜನ: ರಾಜನಾಥ್ ಸಿಂಗ್

|೦೭

ಸಂಸತ್ ಆವರಣದಲ್ಲಿ ಮೋದಿ-ರಾಗಾ ಅಪರೂಪದ ಸಂಭಾಷಣೆ

|೦೭



ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ : ದಶಮಿ, ನಕ್ಷತ್ರ: ಶ್ರವಣ

ದಿನದ ಮಾತು

ಕಷ್ಟವನ್ನು ಕಾಣದ, ಸೋಲನ್ನು ಅನುಭವಿಸದ ಮನುಷ್ಯನನ್ನು ನಂಬಬೇಡಿ.

▲ ಅರವಿಂದ

ಬಲ್ಲವನೇ ಬಲ್ಲ ಭಾಷೆಯ ಸವಿಯ

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ರಾಜ್ಯದ ವಂದೇ ಭಾರತ್ ಸ್ಲೀಪರ್ ರೈಲಿಗೆ ಸಮ್ಮತಿ

• **ಬೆಂಗಳೂರು:** ಬೆಂಗಳೂರು-ಮುಂಬೈ ವಂದೇ ಭಾರತ್ ಸ್ಲೀಪರ್ ರೈಲು ಕಾರ್ಯಾಚರಣೆಗೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅನುಮತಿ ನೀಡಿದ್ದಾರೆ. ಕೆಎಸ್ ಆರ್ ಬೆಂಗಳೂರು ಮತ್ತು ಛತ್ರಪತಿ ಶಿವಾಜಿ ಮಹಾರಾಜ್ ನಡುವೆ ಹೊಸ ವಂದೇ ಭಾರತ್ ಸ್ಲೀಪರ್ ರೈಲನ್ನು ಪರಿಚಯಿಸಲು ಅನುಮೋದನೆ ನೀಡಲಾಗಿದೆ ಎಂದು ಅಶ್ವಿನಿ ವೈಷ್ಣವ್ ತಿಳಿಸಿರುವ ಅಧಿಕೃತ ಅನುಮತಿ ಪತ್ರವನ್ನು ಸಂಸದ ಪಿ.ಸಿ.ಮೋಹನ್ ಅವರು ತಮ್ಮ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ➡ಪುಟ ೪

ಊಹಾ ಪತ್ರಿಕೋದ್ಯಮ ಬಿಡಿ: ಸಿಎಂ ಸಿದ್ದರಾಮಯ್ಯ

• ಪುಟ ೫

ಫಲ ನೀಡೀತೇ ಶಾಂತಿ ಮಾತು? | ಸಂಘರ್ಷ ಅಂತ್ಯ ಯತ್ನ

ನಿರ್ಣಾಯಕ ಸಂಧಾನ

• **ಇಸ್ಲಾಮಾಬಾದ್:** ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ರಕ್ತಸಿಕ್ತ ಸಂಘರ್ಷಕ್ಕೆ ತೆರೆ ಎಳೆಯುವ ನಿಟ್ಟಿನಲ್ಲಿ ಅಮೆರಿಕ ಮತ್ತು ಇರಾನ್ ನಡುವಿನ ನಿರ್ಣಾಯಕ ಶಾಂತಿ ಮಾತುಕತೆ ಶನಿವಾರ ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದ್‌ನಲ್ಲಿ ಆರಂಭವಾಗಿದ್ದು, ಇದರ ನಡುವೆಯೇ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಎಚ್ಚರಿಕೆಯ ಮಾತುಗಳೂ ಹೊರಬಿದ್ದಿವೆ.



ಮಧ್ಯಪ್ರಾಚ್ಯ ಸಮರಾಂಗಣ

ಉಭಯ ಕಡೆಯವರು ಮುಖಾಮುಖಿಯಾಗಿ ಈ ಮಾತುಕತೆ ನಡೆಸುತ್ತಿದ್ದಾರೆ. ಈ ಮಾತುಕತೆ ಫಲಪ್ರದವಾಗುವ ಬಗ್ಗೆ ಅಮೆರಿಕ ಉಪಾಧ್ಯಕ್ಷ ವ್ಯಾನ್ಸ್ ಆಶಯ ವ್ಯಕ್ತಪಡಿಸಿದ್ದಾರೆ.

ಈ ಉನ್ನತ ಮಟ್ಟದ ಮಾತುಕತೆಗೆ ಮುನ್ನ, ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ನೇತೃತ್ವದ ಅಮೆರಿಕ ನಿಯೋಗ ಹಾಗೂ ಇರಾನ್ ಸಂಸತ್ ಅಧ್ಯಕ್ಷ ಮೊಹಮ್ಮದ್ ಬಾಗೆರ್ ಗಾಲಿಬಾಫ್ ನೇತೃತ್ವದ ಇರಾನಿ ನಿಯೋಗ ಪ್ರತ್ಯೇಕವಾಗಿ ಪಾಕಿಸ್ತಾನದ ಪ್ರಧಾನಿ ಶೆಹಬಾಝ್ ಷರೀಫ್ ಅವರನ್ನು ಭೇಟಿ ಮಾಡಿದವು. ವ್ಯಾನ್ಸ್ ಜತೆ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್ ಮತ್ತು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಳಿಯ ಜಾರೆಡ್ ಕುಶ್ನರ್ ಆಗಮಿಸಿದ್ದಾರೆ. ಇರಾನ್ ನಿಯೋಗದಲ್ಲಿ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ, ಸುಪ್ರೀಮ್ ರಾಷ್ಟ್ರೀಯ ರಕ್ಷಣಾ ಮಂಡಳಿ ಕಾರ್ಯದರ್ಶಿ ಅಲಿ ಅಕ್ಬರ್ ಅಹ್ಮದಿಯನ್ ಹಾಗೂ ಕೇಂದ್ರೀಯ ಬ್ಯಾಂಕ್ ಗವರ್ನರ್ ಅಬ್ದೊಲ್‌ನಾಸರ್ ಹೆಮ್ಮತಿ ಸೇರಿದ್ದಾರೆ. ➡ಪುಟ ೪

ಕದಡಿದ ಕದನ ವಿರಾಮ

ನಾಲ್ಕು ದಿನಗಳ ಹಿಂದೆ ಇರಾನ್ ಮತ್ತು ಅಮೆರಿಕ ಎರಡು ವಾರಗಳ ಕದನ ವಿರಾಮ ಘೋಷಿಸಿದ್ದವು. ಆದರೆ, ಲೆಬನಾನ್ ಮೇಲೆ ಇಸ್ರೇಲ್ ನಡೆಸಿದ ಭಾರೀ ವಾಯು ದಾಳಿಯಲ್ಲಿ 300ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ಈ ಕದನ ವಿರಾಮ ಛಿದ್ರವಾಗಿದೆ. ಟೆಹ್ರಾನ್ ಈ ದಾಳಿಯು ಕದನ ವಿರಾಮದ ಷರತ್ತುಗಳ ಉಲ್ಲಂಘನೆ ಎಂದು ಆರೋಪಿಸಿದರೆ, ಅಮೆರಿಕ ಮತ್ತು ಇಸ್ರೇಲ್ ಲೆಬನಾನ್ ಒಪ್ಪಂದದ ಭಾಗವಲ್ಲ ಎಂದು ಸಮರ್ಥಿಸಿಕೊಂಡಿವೆ. ಇರಾನ್ ಅಧ್ಯಕ್ಷ ಮಸೂದ್ ಪೆಝೆಷ್ಕಿಯಾನ್ ಲೆಬನಾನ್ ಮೇಲಿನ ಇಸ್ರೇಲಿ ದಾಳಿಯು ಕದನ ವಿರಾಮವನ್ನು ಬಹಿರಂಗವಾಗಿ ಉಲ್ಲಂಘಿಸಿದೆ ಎಂದೂ, ಇದು ಮಾತುಕತೆಯನ್ನೇ ಅರ್ಥಹೀನಗೊಳಿಸುತ್ತದೆ ಎಂದೂ ಹೇಳಿದ್ದಾರೆ.



ಇರಾನ್‌ನ 10 ಅಂಶಗಳ ಬೇಡಿಕೆ ಪಟ್ಟಿ

ಮಾತುಕತೆಗೆ ಮುನ್ನ ಇರಾನ್ 10 ಅಂಶಗಳ ಯೋಜನೆಯನ್ನು ಮಂಡಿಸಿದ್ದು, ಅದರಲ್ಲಿ ಪಶ್ಚಿಮ ಏಷ್ಯಾದಿಂದ ಅಮೆರಿಕ ಸೇನೆಯ ವಾಪಸಾತಿ, ಇರಾನ್ ವಿರುದ್ಧದ ನಿರ್ಬಂಧಗಳ ತೆರವು ಮತ್ತು ಹಾರ್ಮುಝ್ ಜಲಸಂಧಿಯ ಮೇಲೆ ಇರಾನ್‌ಗೆ ನಿಯಂತ್ರಣ ನೀಡುವ ಬೇಡಿಕೆಗಳು ಸೇರಿವೆ. ಇರಾನ್‌ನ ಅರೆ-ಅಧಿಕೃತ ತಸ್ನಿಮ್ ಸುದ್ದಿಸಂಸ್ಥೆ, ಇಸ್ರೇಲಿ ಆಕ್ರಮಣವನ್ನು ನಿಲ್ಲಿಸುವುದು ಮತ್ತು ಇರಾನ್‌ನ ಸ್ಥಗಿತ ಆಸ್ತಿಗಳನ್ನು ಮುಕ್ತಗೊಳಿಸುವುದು ಸೇರಿದಂತೆ ಟೆಹ್ರಾನ್‌ನ ಪೂರ್ವಷರತ್ತುಗಳು ಈಡೇರುವವರೆಗೆ ನೇರ ಮಾತುಕತೆ ಆರಂಭವಾಗುವುದಿಲ್ಲ ಎಂದು ಮೊದಲು ವರದಿ ಮಾಡಿತ್ತು. ಆದರೆ ನಂತರ, ಅಮೆರಿಕವು ಇರಾನ್‌ನ ಸ್ಥಗಿತ ಆಸ್ತಿಗಳನ್ನು ಬಿಡುಗಡೆ ಮಾಡಲು ಒಪ್ಪಿದೆ ಎಂದು ತಿಳಿದ ಮೂಲವನ್ನು ಉಲ್ಲೇಖಿಸಿ ಹೇಳಿದೆ. ಆದರೆ ಈ ವರದಿಗೆ ಅಧಿಕೃತ ದೃಢೀಕರಣ ದೊರೆತಿಲ್ಲ.

- ಇಸ್ಲಾಮಾಬಾದ್‌ನಲ್ಲಿ ಅಮೆರಿಕ-ಇರಾನ್ ಶಾಂತಿ ಮಾತುಕತೆ ಆರಂಭ
- ಪಾಕಿಸ್ತಾನ ಮಧ್ಯಸ್ಥಿಕೆ; ವಿಶ್ವದ ಕಣ್ಣು ಸೆರೆನಾ ಹೋಟೆಲ್‌ನತ್ತ
- ಜಾಗತಿಕ ಇಂಧನ ಮಾರುಕಟ್ಟೆ ಮೇಲೆ ನೇರ ಪರಿಣಾಮ

ಅಮೆರಿಕ-ಇರಾನ್ ಎಚ್ಚರಿಕೆ ನುಡಿಗಳು

ಅಧ್ಯಕ್ಷ ಟ್ರಂಪ್ ಈಗಾಗಲೇ ಮಾತುಕತೆ ಫಲ ನೀಡದಿದ್ದಲ್ಲಿ ಇರಾನ್ ವಿರುದ್ಧ ಸೇನಾ ಕಾರ್ಯಾಚರಣೆ ಪುನರಾರಂಭಿಸುವ ಎಚ್ಚರಿಕೆ ನೀಡಿದ್ದಾರೆ. ಜತೆಗೆ, ಹೋರ್ಮುಜ್ ಜಲಸಂಧಿಯಿಂದ ಅಮೆರಿಕದ ಎರಡು ಯುದ್ಧ ನೌಕೆಗಳು ತೆರಳಿರುವ ಬಗ್ಗೆಯೂ ಅವರು ಮಾಹಿತಿ ಹಂಚಿಕೊಂಡಿದ್ದಾರೆ. ಇತ್ತ ಪಾಕಿಸ್ತಾನಕ್ಕೆ ಹೊರಡುವ ಮುನ್ನ ವ್ಯಾನ್ಸ್ ಅವರು, ಅಮೆರಿಕ ಅಧ್ಯಕ್ಷರು ಹೇಳಿದಂತೆ, ಇರಾನಿಯರು ಸದ್ಭಾವನೆಯಿಂದ ಮಾತುಕತೆ ನಡೆಸಲು ಸಿದ್ಧರಿದ್ದರೆ, ನಾವು ಖಂಡಿತವಾಗಿ ಸ್ನೇಹಹಸ್ತ ಚಾಚುತ್ತೇವೆ. ಆದರೆ ನಮ್ಮನ್ನು ವಂಚಿಸಲು ಯತ್ನಿಸಿದರೆ, ನಮ್ಮ ಸಂಧಾನ ತಂಡ ಅಷ್ಟು ಸಹನಶೀಲವಾಗಿರದು ಎಂದು ಹೇಳಿದ್ದಾರೆ.

ರೈತರ ಪಾಲಿಗೆ ಕೈ ಕಂಟಕ: ದೇವೇಗೌಡ

ಜೆಡಿಎಸ್ ಸಮಾವೇಶ ಭಾರೀ ಶಕ್ತಿ ಪ್ರದರ್ಶನ



• **ಬೆಂಗಳೂರು:** ಮುಂಬರುವ ಜಿಬಿಎ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆ ಗಮನದಲ್ಲಿಟ್ಟುಕೊಂಡು ಜೆಡಿಎಸ್ ಪಕ್ಷವು ಜನತಾ ಸಮಾವೇಶ, ಪಕ್ಷದ ಬೆಳ್ಳಿಹಬ್ಬ ಆಚರಣೆ ಮಾಡುವ ಮೂಲಕ ಶಕ್ತಿ ಪ್ರದರ್ಶನ ಮಾಡಿತು.

ಕೆಂಗೇರಿಯ ಕೊಮ್ಮಘಟ್ಟ ರಸ್ತೆಯಲ್ಲಿರುವ ನೈಸ್ ಮೋದಿ ಗ್ರೌಂಡ್‌ನಲ್ಲಿ ಆಯೋಜಿಸಲಾಗಿದ್ದ ಜೆಡಿಎಸ್ ಪಕ್ಷದ ಜನತಾ ಸಮಾವೇಶ ಹಾಗೂ ಬೆಳ್ಳಿಹಬ್ಬ ಮಹೋತ್ಸವ ಜೆಡಿಎಸ್ ಅಸ್ತಿತ್ವ ಕಳೆದುಕೊಳ್ಳುತ್ತಿದೆ ಎಂದು ಟೀಕಿಸುವವರಿಗೆ ಸವಾಲಾಗಿ ಪರಿಣಮಿಸಿತು. ಬೆಂಗಳೂರಿನಲ್ಲೂ ಜೆಡಿಎಸ್ ನೆಲೆ ಭದ್ರವಾಗಿದೆ ಎಂಬುದನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ಈ ಬೃಹತ್ ಸಮಾವೇಶ ಸಾಕ್ಷಿಯಾಯಿತು.

ಸಮಾವೇಶದಲ್ಲಿ ಮಾತನಾಡಿದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು, ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಬೆಂಗಳೂರು ನಗರಕ್ಕೆ ನೀಡಿರುವ ಕೊಡುಗೆ ಅಪಾರ. ಆ ಕೊಡುಗೆ ಇಂದಿಗೂ ಮಾದರಿ ಎಂದು ಸ್ಮರಿಸಿದರು. ರೈತರು ಸಂಕಷ್ಟದಲ್ಲಿದ್ದಾಗ, ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡ ಸಂದರ್ಭದಲ್ಲಿ ಅವರ ನೆರವಿಗೆ ನಿಂತು ರೈತರ ಸಾಲ ಮನ್ನಾ ಮಾಡುವ ಮೂಲಕ ಅವರ ಕುಟುಂಬಕ್ಕೆ ಆರ್ಥಿಕ ನೆರವು ನೀಡುವ ಕೆಲಸ ಮಾಡಿದ್ದಾರೆ. ಆದರೆ ಈಗಿನ ಕಾಲಘಟ್ಟದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರ ರೈತರಿಗೆ ಅನುಕೂಲವಾಗುವ ಇಂತಹ ಒಂದೇ ಒಂದು ಕೆಲಸ ಮಾಡಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ➡ಪುಟ ೪

ನಮ್ಮ ಮನೆಗೆ ಸೂಟ್‌ಕೇಸ್ ಹಿಡಿದು ಬರುವುದಿಲ್ಲ

ಮಿಸ್ಟರ್ ಸಿದ್ದರಾಮಯ್ಯನವರೇ ನಮ್ಮ ಮನೆಗೆ ಬರುವವರು ಸೂಟ್‌ಕೇಸ್ ಇರುವವರಲ್ಲ, ಸೂಟು ಬೂಟು ಹಾಕಿಕೊಂಡು ಬರುವವರಲ್ಲ, ರೋಗಿಗಳು, ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವವರು, ಹೃದಯ ಸಂಬಂಧಿ ಕಾಯಿಲೆಗಳಿಂದ ಬಳಲುತ್ತಿರುವವರು ಸಹಾಯಹಸ್ತ ಕೇಳಲು ಬರುತ್ತಾರೆ. ನಿಮ್ಮ ಮನೆಗೆ ಇವರು ಬರುತ್ತಾರೆಯೇ ಎಂದು ಎಚ್‌ಡಿಕೆ ಪ್ರಶ್ನಿಸಿದರು.

ಜಿಬಿಎ ಚುನಾವಣೆ 2028ಕ್ಕೆ ದಿಕ್ಸೂಚಿ ಆಗಿದೆ. ನಮ್ಮ ಸರ್ಕಾರದ ಅವಧಿಯಲ್ಲಿ ಏನೇನು ಯೋಜನೆಗಳನ್ನು ಕೈಗೆತ್ತಿಕೊಂಡು ಅಭಿವೃದ್ಧಿಪಡಿಸಲಾಗಿದೆಯೋ ಅವುಗಳನ್ನು ಕರಪತ್ರಗಳ ಮೂಲಕ ಮನೆ ಮನೆಗೆ ತಲುಪಿಸುವ ಕೆಲಸವನ್ನು ಕಾರ್ಯಕರ್ತರು ಮಾಡಬೇಕು.

■ ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಮಹಿಳಾ ಮೀಸಲಾತಿ ಬೆಂಬಲಿಸಿ



• **ಬೆಂಗಳೂರು:** ಲೋಕಸಭೆ ಮತ್ತು ವಿಧಾನಸಭೆಯಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ನಾರಿ ಶಕ್ತಿ ವಂದನ್ ಮಸೂದೆ ಹಿನ್ನೆಲೆಯಲ್ಲಿ ಮಹಿಳೆಯರಿಗೆ ತಮ್ಮ ಹಕ್ಕಿನ ಬಗ್ಗೆ ಮುಂದಿನ 10 ದಿನಗಳಲ್ಲಿ ಹೆಚ್ಚಿನ ಜಾಗೃತಿ ಮೂಡಿಸಲಾಗುವುದು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜಕೀಯ ಪಕ್ಷಗಳು ಮಹಿಳಾ ಮೀಸಲಾತಿ ಮಸೂದೆ ಸ್ವೀಕರಿಸಬೇಕು. ವಿವಿಧ ಕ್ಷೇತ್ರಗಳಲ್ಲಿ ಮಹಿಳೆಗೆ ಟಿಕೆಟ್ ಸಿಗುವಂತಾಗಲಿ ಎಂದು ಆಶಿಸಿದರು. ➡ಪುಟ ೪

ಭಾವೈಕ್ಯತೆ, ವೈಚಾರಿಕತೆ ಬೆಳೆಸಿಕೊಳ್ಳಿ: ಸಿಎಂ

• **ಕಲಬುರಗಿ:** ಜಾತಿ ರಹಿತ ಸಮ-ಸಮಾಜ ನಿರ್ಮಾಣವಾಗಬೇಕಾದರೆ ದ್ವೇಷ ಬಿಟ್ಟು ಎಲ್ಲರು ಪರಸ್ಪರ ಪ್ರೀತಿ ವಿಶ್ವಾಸದೊಂದಿಗೆ ಭಾವೈಕ್ಯತೆಯಿಂದ ಮನುಷ್ಯರಾಗಿ ಬಾಳಬೇಕಿದೆ. ಮೂಢನಂಬಿಕೆ ಬಿಟ್ಟು ವೈಚಾರಿಕತೆ ಬೆಳೆಸಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸೂಗೂರ ದೇಗುಲ ಲೋಕಾರ್ಪಣೆಗೊಳಿಸಿದ ಸಿದ್ದರಾಮಯ್ಯ

ಶನಿವಾರ ಜಿಲ್ಲೆಯ ಚಿತ್ತಾಪುರ ತಾಲೂಕಿನ ಸೂಗೂರ (ಎನ್) ಗ್ರಾಮದಲ್ಲಿ ಮಹಾತ್ಮ ಭೋಜಲಿಂಗೇಶ್ವರ ಸಿದ್ಧ ಸಂಸ್ಥಾನ ಮಠದಿಂದ ಆಯೋಜಿಸಿದ್ದ ಶ್ರೀ ಭೋಜಲಿಂಗೇಶ್ವರರ ನೂತನ ದೇವಸ್ಥಾನ ಲೋಕಾರ್ಪಣೆ ಮತ್ತು ಮೂರ್ತಿ ಪ್ರತಿಷ್ಠಾಪನೆ, ನೂತನ ಬೆಳ್ಳಿ ರಥೋತ್ಸವ ಚಾಲನೆ ಹಾಗೂ ಕಲ್ಯಾಣ ಮಂಟಪ ಉದ್ಘಾಟಿಸಿ ಮಾತನಾಡಿದರು. ಸಮಾಜದಲ್ಲಿ ಅನೇಕ ಜಾತಿ ಧರ್ಮಗಳಿವೆ, ಅನೇಕ ಭಾಷೆ ಸಂಸ್ಕೃತಿಗಳಿವೆ. ➡ಪುಟ ೪

ದಾವಣಗೆರೆ ವಿದ್ಯಮಾನ | ಕೈನಲ್ಲಿ ಜೋರಾಯ್ತು ಅಸಮಾಧಾನ

ಕಾಂಗ್ರೆಸ್‌ನಲ್ಲಿ ರಾಜೀನಾಮೆ ಪರ್ವ

• **ಬೆಂಗಳೂರು:** ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಗೆ ಮತದಾನ ಮುಕ್ತಾಯಗೊಂಡ ಬೆನ್ನಲ್ಲೇ ಕಾಂಗ್ರೆಸ್ ಪಕ್ಷದಲ್ಲಿ ಅಲ್ಪಸಂಖ್ಯಾತರ ಅಸಮಾಧಾನ ಸ್ಫೋಟಗೊಂಡಿದ್ದು, ರಾಜೀನಾಮೆ ಪರ್ವ ಶುರುವಾಗಿದೆ.

ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರವಾಗಿ ಕೆಲವು ಅಲ್ಪಸಂಖ್ಯಾತ ನಾಯಕರುಗಳು ಸರಿಯಾಗಿ ಕೆಲಸ ಮಾಡಲಿಲ್ಲ. ಹೀಗಾಗಿ ಕಾಂಗ್ರೆಸ್ ಪಕ್ಷಕ್ಕೆ ಏನಾದರೂ ಹಿನ್ನಡೆಯಾದರೆ, ನಮ್ಮ ಪಕ್ಷದೊಳಗಿನ ಕೆಲವು ಅಲ್ಪಸಂಖ್ಯಾತ ನಾಯಕರುಗಳೇ ಕಾರಣ ಎಂದು ಶುಕ್ರವಾರವಷ್ಟೇ ಸ್ವಪಕ್ಷಿಯ ಶಾಸಕರುಗಳೇ ಆರೋಪಿಸಿದ್ದರು. ಇದರ ಬೆನ್ನಲ್ಲೇ, ಉಪ ಚುನಾವಣೆಯಲ್ಲಿ ಕೆಲವು ಅಲ್ಪಸಂಖ್ಯಾತ ನಾಯಕರುಗಳ ಭಾಗವಹಿಸುವಿಕೆ, ಹಾಗೂ ಪ್ರಚಾರದ ಕಾರ್ಯವೈಖರಿ ಕುರಿತು ಎಐಸಿಸಿಗೆ ವರದಿ ನೀಡಲಾಗಿತ್ತು. ಇದರ ಬೆನ್ನಲ್ಲೇ, ರಾಜೀನಾಮೆ ಪರ್ವ ಆರಂಭವಾಗಿದೆ. ➡ಪುಟ ೪

ರಾಜೀನಾಮೆ ಪತ್ರದಲ್ಲಿ ಜಮೀರ್ ಹೆಸರು

ಅಬ್ದುಲ್ ಜಬ್ಬಾರ್ ತಮ್ಮ ರಾಜೀನಾಮೆ ಪತ್ರದಲ್ಲಿ ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಸಚಿವ ಜಮೀರ್ ಅಹ್ಮದ್ ಖಾನ್ ಅವರನ್ನು ದಾವಣಗೆರೆ ಉಪಚುನಾವಣೆ ಪ್ರಚಾರಕ್ಕೆ ಬರಬೇಡಿ ಎಂದು ಬಹಿರಂಗವಾಗಿ ಹೇಳುವ ಮೂಲಕ ಅಗೌರವ ತೋರಲಾಗಿದೆ. ಇದು ರಾಜ್ಯಾದ್ಯಂತ ಇರುವ ಅಲ್ಪಸಂಖ್ಯಾತ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಮುಸ್ಲಿಂ ಸಮುದಾಯದ ಮನಸ್ಸಿಗೆ ನೋವುಂಟುಮಾಡಿದೆ ಎಂದು ಪತ್ರದಲ್ಲಿ ಹೇಳಿದ್ದಾರೆ.

ಏನಾಸಂ ಜಾರಿ ಭರವಸೆ

ಟಿಎಂಸಿ ವಿರುದ್ಧ ಪ್ರಧಾನಿ ಮೋದಿ ತೀವ್ರ ವಾಗ್ದಾಳಿ



• **ಜಂಗೀಪುರ/ಕುಳ್ತಂಡಿ:** ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಟಿಎಂಸಿ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿ, ಚುನಾವಣೆಯನ್ನು 'ರಾಜ್ಯದ ಅಸ್ತಿತ್ವ ಮತ್ತು ಭವಿಷ್ಯ ಉಳಿಸುವ ಹೋರಾಟ' ಎಂದು ಚಿತ್ರಿಸಿದರು. ಬಿಜೆಪಿ ಅಧಿಕಾರಕ್ಕೆ ಬಂದರೆ ಏಕರೂಪ ನಾಗರಿಕ ಸಂಹಿತೆ (ಏನಾಸಂ) ಜಾರಿಗೆ ತಂದು ಓಲೈಕೆಯ ರಾಜಕೀಯ ಅಂತ್ಯ ಮಾಡುವುದಾಗಿ ಅವರು ಭರವಸೆ ನೀಡಿದರು. ➡ಪುಟ ೪

ಮೀನಾಬ್ ಶಾಲೆ ಮೇಲೆ ನಡೆದ ದಾಳಿಯಲ್ಲಿ ಹತ್ಯೆಯಾದ ಮಕ್ಕಳಿಗೆ ಗೌರವ ನೀಡಿದ ಇರಾನ್

ಸಂತ್ರಸ್ತರ ಚಿತ್ರಗಳನ್ನು ಹೊತ್ತ ಇರಾನ್ ನಿಯೋಗ



ಇಸ್ಲಾಮಾಬಾದ್: ಅಮೆರಿಕದೊಂದಿಗೆ ಶಾಂತಿ ಮಾತುಕತೆ ನಡೆಸಲು ಪಾಕಿಸ್ತಾನಕ್ಕೆ ಪ್ರಯಾಣಿಸುತ್ತಿದ್ದ ಇರಾನ್ ನಿಯೋಗ ಶನಿವಾರ ತನ್ನ ವಿಮಾನದಲ್ಲಿ ಮೀನಾಬ್ ಶಾಲೆಯ ಮೇಲಿನ ದಾಳಿಗೆ ಬಲಿಯಾದವರ ಭಾವಚಿತ್ರಗಳು ಮತ್ತು ವೈಯಕ್ತಿಕ ವಸ್ತುಗಳನ್ನು ಪ್ರದರ್ಶಿಸಿತು. ಈ ಮೂಲಕ ಮಾತುಕತೆ ಆರಂಭಕ್ಕೂ ಮೊದಲೇ ಅಮೆರಿಕನ್ನರಿಗೆ ಪ್ರಬಲ ಸಂದೇಶ ರವಾನಿಸುವ ಪ್ರಯತ್ನ ಮಾಡಿದೆ.

ಸಾಂಕೇತಿಕ ಪ್ರಯಾಣ: ರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಗರ್ ಗಾಲಿಬಾಫ್ ವಿಮಾನದ ಒಳಗಿನ ಚಿತ್ರಗಳನ್ನು ಹಂಚಿಕೊಂಡಿದ್ದು, ನಿಯೋಗ ಆ ವಿಮಾನಕ್ಕೆ "ಮೀನಾಬ್ 168" ಎಂದು ಹೆಸರಿಸಿದೆ. ಫೆ.28 ರಂದು ಮೀನಾಬ್‌ನ ಶಜರೆ ತಯ್ಯೆಬೆ ಪ್ರಾಥಮಿಕ ಶಾಲೆಯ ಮೇಲೆ ನಡೆದ ದಾಳಿಯಲ್ಲಿ ಮೃತಪಟ್ಟ ಮಕ್ಕಳು ಮತ್ತು ಸಿಬ್ಬಂದಿಗೆ ಸೇರಿದ ಭಾವಚಿತ್ರಗಳು, ರಕ್ತಸಿಕ್ತ ಶಾಲಾ ಬ್ಯಾಗ್‌ಗಳು, ಬೂಟುಗಳು ಮತ್ತು ಬಿಳಿ ಹೂವುಗಳನ್ನು ವಿಮಾನದ ಸೀಟುಗ ಳಲ್ಲಿ ಇರಿಸಲಾಗಿತ್ತು. ಗಾಲಿಬಾಫ್ ಈ ಸಂತ್ರಸ್ತರನ್ನು ತಮ್ಮ ಈ ಪ್ರಯಾಣದ "ಸಹ ಪ್ರಯಾಣಿಕರು" ಎಂದು ಕರೆದಿದ್ದಾರೆ.

ರಾಜತಾಂತ್ರಿಕ ನಿಲುವು: ಪಾಕಿಸ್ತಾನಕ್ಕೆ ಆಗಮಿಸಿದ ನಂತರ ಮಾತನಾಡಿದ ಗಾಲಿಬಾಫ್, ಇರಾನ್ ಉತ್ತಮ ಉದ್ದೇಶಗಳೊಂದಿಗೆ ಮಾತುಕತೆಗೆ ಪ್ರವೇಶಿಸಿದೆ, ಆದರೆ ನಮಗೆ ಯಾರ ಮೇಲೂ ನಂಬಿಕೆಯಿಲ್ಲ ಎಂದು ತಿಳಿಸಿದರು. ಅಮೆರಿಕದೊಂದಿಗಿನ ಮಾತುಕತೆಗಳಲ್ಲಿನ ಹಿಂದಿನ ವೈಫಲ್ಯಗಳು ಮತ್ತು ಒಪ್ಪಂದದ ಉಲ್ಲಂಘನೆಗಳಿಂದ ತಾವು ಅವರ ಬಗ್ಗೆ ನಂಬಿಕೆ ಕಳೆದುಕೊಂಡಿರುವುದಾಗಿ ಹೇಳಿದ್ದಾರೆ. ಇರಾನ್ ನಿಯೋಗದಲ್ಲಿ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಮತ್ತು ಕೇಂದ್ರ ಬ್ಯಾಂಕ್ ಗವರ್ನರ್ ಅಬ್ದೋಲ್ನಾಸರ್ ಹೆಮ್ಮತಿ ಕೂಡ ಇದ್ದಾರೆ.

ಸಂಘರ್ಷದ ಹಿನ್ನೆಲೆ: ಕನಿಷ್ಠ 165 ಜನರನ್ನು ಬಲಿ ಪಡೆದ ಮತ್ತು 100 ಕ್ಕೂ ಹೆಚ್ಚು ಜನರನ್ನು ಗಾಯಗೊಳಿಸಿದ ಮೀನಾಬ್ ದಾಳಿ, ಇರಾನ್‌ನ ವಾದಕ್ಕೆ ಪ್ರಮುಖ ಕೇಂದ್ರಬಿಂದುವಾಗಿದೆ. ಈ ದಾಳಿಯನ್ನು ಅಮೆರಿಕ-ಇಸ್ರೇಲ್ ಪಡೆಗಳು ನಡೆಸಿವೆ ಎಂದು ಇರಾನ್ ಆರೋಪಿಸಿದರೆ, ಅಮೆರಿಕ ಈ ವಾದವನ್ನು ತಿರಸ್ಕರಿಸಿದೆ. ಇರಾನ್‌ನ ಯುದ್ಧಸಾಮಗ್ರಿಗಳೇ ಇದಕ್ಕೆ ಕಾರಣ, ಎಂದು ಯುಎಸ್ ಹೇಳಿಕೊಂಡಿದೆ. ಇಸ್ಲಾಮಾಬಾದ್ ಮಾತುಕತೆಗಳು ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಜಾರಿಗೆ ಬಂದಿರುವ ಎರಡು ವಾರಗಳ ಕದನ ವಿರಾಮದ ಸಮಯದಲ್ಲಿ ನಡೆಯುತ್ತಿವೆ.

ಚೇತರಿಸುತ್ತಿರುವ ಇರಾನ್ ಸರ್ವೋಚ್ಚ ನಾಯಕ ಮೊಜ್ತಬಾ?

ಟೆಹ್ರಾನ್: ಯುದ್ಧದ ಆರಂಭದ ದಿನಗಳಲ್ಲೇ ಇರಾನ್‌ನ ಈಗಿನ ಸರ್ವೋಚ್ಚ ನಾಯಕ ಮತ್ತು ಆಯತೊಲ್ಲಾ ಅಲಿ ಖಮೇನಿ ಅವರ ಪುತ್ರ ಮೊಜ್ತಬಾ ಖಮೇನಿಯವರ ಮುಖ ಮತ್ತು ಕಾಲಿಗೆ ಗಂಭೀರ ಗಾಯಗಳಾಗಿದ್ದವು. ಆದರಿಂದ ಚೇತರಿಸಿಕೊಳ್ಳದ ಹಿನ್ನೆಲೆ ಮೊಜ್ತಬಾ ಅವರನ್ನು ನೂತನ ಸರ್ವೋಚ್ಚ ನಾಯಕನೆಂದು ಘೋಷಿಸಿದರೂ ಅವರು ಸಾರ್ವಜನಿಕವಾಗಿ ಕಾಣಿಸಿಕೊಂಡಿಲ್ಲ. ಮೊಜ್ತಬಾ ಅವರ ಆರೋಗ್ಯ ಸ್ಥಿತಿ ಹೇಗಿದೆ? ಮತ್ತು ಅವರು ಎಲ್ಲಿದ್ದಾರೆಂಬ ಪ್ರಶ್ನೆಗಳು ಹೆಚ್ಚಾಗುತ್ತಿವೆ. ತಂದೆಯನ್ನು ಬಲಿ ತೆಗೆದುಕೊಂಡಿದ್ದ ಅಮೆರಿಕದ ಬಾಂಬ್ ದಾಳಿಯಿಂದ ಪುತ್ರ ಮೊಜ್ತಬಾಗೂ ಗಂಭೀರ ಗಾಯವನ್ನು ಉಂಟುಮಾಡಿದೆ ಎನ್ನಲಾಗುತ್ತಿದೆ.



ಮೊಜ್ತಬಾರ ಆಂತರಿಕ ಮೂಲಗಳ ಪ್ರಕಾರ, ತಂದೆ ಅಲಿ ಖಮೇನಿ ಮೃತಪಟ್ಟಿದ್ದ ವೈಮಾನಿಕ ದಾಳಿಯಲ್ಲಾದ ಗಂಭೀರ ಗಾಯಗಳಿಂದ ಇನ್ನೂ ಚೇತರಿಸಿಕೊಳ್ಳುತ್ತಿದ್ದಾರೆ. ಟೆಹ್ರಾನ್‌ನಲ್ಲಿನ ಸರ್ವೋಚ್ಚ ನಾಯಕರ ನಿವಾಸದ ಮೇಲೆ ಅಮೆರಿಕ ಬಾಂಬ್ ದಾಳಿ ನಡೆಸಿದ್ದಾಗ, ಮೊಜ್ತಬಾ ಮುಖ ಹಾಗೂ ಒಂದು ಅಥವಾ ಎರಡೂ ಕಾಲುಗಳಿಗೆ ಗಂಭೀರ ಗಾಯಗಳಾಗಿವೆ. ದಾಳಿ ಪರಿಣಾಮ ಅವರ ಮುಖ ವಿಕೃತಗೊಂಡಿದೆ. ಆದಾಗ್ಯೂ, 56 ವರ್ಷದ ಮೊಜ್ತಬಾ ಮಾನಸಿಕವಾಗಿ ಚುರುಕಾಗಿದ್ದು, ಪ್ರಮುಖ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ ಎಂದು ತಿಳಿದುಬಂದಿದೆ.

ತಾತ್ಕಾಲಿಕ ಕದನ ವಿರಾಮ ಘೋಷಣೆ ಬಳಿಕ ಬಂದ ಮೊದಲ ಎಲ್‌ಪಿಜಿ ಹಡಗು

ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಮಧ್ಯೆ, ಎಲ್‌ಪಿಜಿ ಹೊತ್ತ ಮತ್ತೊಂದು ಭಾರತದ ಹಡಗು, ಜಾಗ್ ವಿಕ್ರಮ್, ಹಾರ್ಮುಜ್ ಜಲಸಂಧಿಯನ್ನು ದಾಟಿದೆ. ಅಮೆರಿಕ ಮತ್ತು ಇರಾನ್ ನಡುವೆ 2 ವಾರಗಳ ತಾತ್ಕಾಲಿಕ ಕದನ ವಿರಾಮ ಘೋಷಿಸಿದ ಬಳಿಕ ಹಾರ್ಮುಜ್ ದಾಟಿದ ಮೊದಲ ಭಾರತೀಯ ಹಡಗು ಎಂದು ಹಡಗು ಇದಾಗಿದೆ. ಶುಕ್ರವಾರ ರಾತ್ರಿ ಮತ್ತು ಶನಿವಾರ ಬೆಳಗ್ಗೆ ನಡುವೆ ಎಲ್ ಪಿಜಿ ಹೊತ್ತ ಭಾರತದ ಕಾರ್ಯತಂತ್ರದ ಜಲಮಾರ್ಗದ ಮೂಲಕ ಚಲಿಸಿತು ಮತ್ತು ಶನಿವಾರ ಮಧ್ಯಾಹ್ನ ಜಲಸಂಧಿಯ ಪೂರ್ವಕ್ಕೆ ಒಮನ್ ಕೊಲ್ಲಿಯಲ್ಲಿದ್ದು, ಪೂರ್ವಕ್ಕೆ ಸಾಗುತ್ತಿದೆ.



ಹಾರ್ಮುಜ್ ದಾಟಿದ 2 ಅಮೆರಿಕ ಯುದ್ಧ ನೌಕೆ

ಯುದ್ಧ ಶಾಂತಿ ಮಾತುಕತೆ ಮಧ್ಯೆ ಎರಡು ಅಮೆರಿಕ ಯುದ್ಧನೌಕೆಗಳು ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗಿವೆ ಎಂದು ವರದಿಯಾಗಿದೆ. ಇದು ಇರಾನ್‌ನೊಂದಿಗಿನ ಯುದ್ಧ ಪ್ರಾರಂಭವಾದ ನಂತರದ ಮೊದಲ ಸಾರಿಗೆಯಾಗಿದೆ. ಅಮೆರಿಕದ ನೌಕಾಪಡೆಯ ಮಾರ್ಗದರ್ಶಿ ಕ್ಷಿಪಣಿ ವಿಧ್ವಂಸಕಗಳು ಜಲಸಂಧಿಯ ಮೂಲಕ ಹಾದು ಹೋದವು. ಯಾವುದೇ ಸಮಸ್ಯೆಗಳ ಬಗ್ಗೆ ವರದಿಯಾಗಿಲ್ಲ ಎಂದು ಅಮೆರಿಕದ ಮೂವರು ಅಧಿಕಾರಿಗಳನ್ನು ಉಲ್ಲೇಖಿಸಿ ದಿ ವಾಲ್ ಸ್ಟ್ರೀಟ್ ಜರ್ನಲ್ ವರದಿ ಮಾಡಿದೆ. ಈ ಕಾರ್ಯಾಚರಣೆಯನ್ನು ಟೆಹ್ರಾನ್ನ ಅಧಿಕಾರಿಗಳೊಂದಿಗೆ ಸಮನ್ವಯಗೊಳಿಸಲಾಗಿಲ್ಲ ಎಂದು ಅಮೆರಿಕದ ಮಾಧ್ಯಮ ಸಂಸ್ಥೆ ಆಕ್ಸಿಯೋಸ್ ಹೇಳಿದೆ.



ಹಾರ್ಮುಜ್ ಜಲಸಂಧಿ ಶೀಘ್ರವೇ ಮುಕ್ತ: ಟ್ರಂಪ್

ವಾಷಿಂಗ್ಟನ್: ಪಶ್ಚಿಮ ಏಷ್ಯಾ ಯುದ್ಧವನ್ನು ಕೊನೆಗಾಣಿಸುವ ನಿಟ್ಟಿನಲ್ಲಿ ಇರಾನ್ ಜೊತೆಗಿನ ಶಾಂತಿ ಮಾತುಕತೆಗಳು ಪಾಕಿಸ್ತಾನದಲ್ಲಿ ಆರಂಭವಾಗಿವೆ, ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಇದೇ ವೇಳೆ ಹಾರ್ಮುಜ್ ಜಲಸಂಧಿಯಲ್ಲಿ ಶೀಘ್ರದಲ್ಲೇ ಸಂಚಾರ ಸಹಜವಾಗಲಿದೆ, ಎಂದು ಅವರು ಪ್ರತಿಪಾದಿಸಿದ್ದಾರೆ.

ಹಾರ್ಮುಜ್ ಜಲಸಂಧಿ ಮತ್ತು ಇಂಧನ ಪ್ರಭಾವ: ಇರಾನ್‌ನಿಂದ ನಿರ್ಬಂಧಿಸಲ್ಪಟ್ಟಿರುವ ಹಾರ್ಮುಜ್ ಜಲಸಂಧಿಗೆ ಪರ್ಯಾಯ ಮಾರ್ಗಗಳನ್ನು ಜಾಗತಿಕ ತೈಲ ಸಾಗಣೆ ಸಂಸ್ಥೆಗಳು ಈಗಾಗಲೇ ಕಂಡು ಕೊಳ್ಳುತ್ತಿವೆ ಎಂದು ಅಧ್ಯಕ್ಷ ಟ್ರಂಪ್ ತಿಳಿಸಿದ್ದಾರೆ. ವಿಶ್ವದ ಕಚ್ಚಾ ತೈಲದ ಐದನೇ ಒಂದು ಭಾಗವು ಈ ಕಾರಿಡಾರ್ ಮೂಲಕ ಹಾದುಹೋಗುತ್ತದೆಯಾದರೂ, ಹಲವು ರಾಷ್ಟ್ರಗಳು ಇತರ ಇಂಧನ ಆಯ್ಕೆಗಳನ್ನು ಅನ್ವೇಷಿಸುತ್ತಿವೆ. ಅಮೆರಿಕದ ಬಳಿ ಸಾಕಷ್ಟು ತೈಲ ದಾಸ್ತಾನು ಇದ್ದು, ಅನೇಕ ಖಾಲಿ ಟ್ಯಾಂಕರ್‌ಗಳು ತೈಲವನ್ನು ತುಂಬಿಸಿಕೊಳ್ಳಲು ಅಮೆರಿಕದತ್ತ ಬರುತ್ತಿವೆ ಎಂದಿದ್ದಾರೆ.



ರಾಜತಾಂತ್ರಿಕ ಎಚ್ಚರಿಕೆ

ಇಸ್ಲಾಮಾಬಾದ್ ಮಾತುಕತೆಗಳು ಫಲ ನೀಡದಿದ್ದರೆ ಅಮೆರಿಕ ತನ್ನ ಹಾದಿ ಬದಲಿಸಲು ಸಿದ್ಧವಾಗಿದೆ, ಎಂದು ಟ್ರಂಪ್ ಎಚ್ಚರಿಸಿದ್ದಾರೆ. ಇರಾನ್ ಅನ್ನು ವಿಫಲ ರಾಷ್ಟ್ರ ಎಂದು ಕರೆದ ಅವರು, ಜಲಸಂಧಿಯ ಮುಕ್ತ ಸಂಚಾರದ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಉಭಯ ದೇಶಗಳು ರಚನಾತ್ಮಕವಾಗಿ ತೊಡಗಿಸಿಕೊಳ್ಳಬೇಕೆಂದು ಪಾಕಿಸ್ತಾನದ ವಿದೇಶಾಂಗ ಸಚಿವರು ಆಗ್ರಹಿಸಿದ್ದಾರೆ. ಅಂತರಾಷ್ಟ್ರೀಯ ಇಂಧನ ಮಾರುಕಟ್ಟೆಗಳು ಮತ್ತು ಜಾಗತಿಕ ಹಡಗು ಸಾಗಣೆ ಮಾರ್ಗಗಳ ಮೇಲೆ ಯುದ್ಧ ಪ್ರಭಾವ ಬೀರಿದ ಹಿನ್ನೆಲೆಯಲ್ಲಿ ಈ ಚರ್ಚೆಗಳು ಮಹತ್ವ ಪಡೆದಿವೆ.

ಇರಾನ್‌ಗೆ ಶಸ್ತ್ರಾಸ್ತ್ರ ಕಳುಹಿಸಲು ಚೀನಾ ಸಿದ್ಧತೆ

- ಅಮೆರಿಕ ಗುಪ್ತಚರ ಸಂಸ್ಥೆಯಿಂದ ವರದಿ
- ಯುದ್ಧ ಸ್ಥಗಿತ ಅನಿಶ್ಚಿತ; ಮಧ್ಯಪ್ರಾಚ್ಯ ಉದ್ವಿಗ್ನತೆ ತೀವ್ರಗೊಳ್ಳುವ ಭೀತಿ
- ಶತ್ರು ವಿಮಾನ ನಿರೋಧಕ ಕ್ಷಿಪಣಿ

ವಾಷಿಂಗ್ಟನ್: ಅಮೆರಿಕ ಮತ್ತು ಇರಾನ್ ನಡುವಿನ ಎರಡು ವಾರಗಳ ಕದನ ವಿರಾಮ ಒಪ್ಪಂದ ಅತ್ಯಂತ ದುರ್ಬಲ ಸ್ಥಿತಿಯಲ್ಲಿದ್ದು, ಸಂಘರ್ಷ ಮತ್ತಷ್ಟು ಉಲ್ಬಣಗೊಳ್ಳುವ ಸಾಧ್ಯತೆ ತಳ್ಳಿ ಹಾಕುವಂತಿಲ್ಲ. ಈ ಮಧ್ಯೆ, ಚೀನಾ ಶೀಘ್ರದಲ್ಲೇ ಇರಾನ್‌ಗೆ ಹೊಸ ವಾಯು ರಕ್ಷಣಾ ವ್ಯವಸ್ಥೆಗಳನ್ನು ಕಳುಹಿಸಲಿದೆ ಎಂದು ಅಮೆರಿಕದ ಗುಪ್ತಚರ ಇಲಾಖೆ ತಿಳಿಸಿದ್ದು, ಸಿಎನ್‌ಎನ್ ವರದಿ ಮಾಡಿದೆ.

ಚೀನಾ ಇರಾನ್‌ಗೆ ಮ್ಯಾನ್‌ಪ್ಯಾಡ್ ಎಂದು ಕರೆಯಲ್ಪಡುವ ಭುಜದ ಮೇಲೆ ಇರಿಸಿ ಹಾರಿಸಬಹುದಾದ ಶತ್ರು ವಿಮಾನ ನಿರೋಧಕ ಕ್ಷಿಪಣಿ ವ್ಯವಸ್ಥೆಗಳನ್ನು ಕಳಿಸಲು ಸಿದ್ಧತೆ ನಡೆಸಿದೆ ಎಂದು ಹೇಳಲಾಗಿದೆ. ಇದು ಮುಂಬರುವ ಕೆಲವು ವಾರಗಳಲ್ಲಿ ನಡೆಯಬಹುದೆಂದು ಅಂದಾಜಿಸಲಾಗಿದೆ.

ಚೀನಾ ನಿರಾಕರಣೆ

ಈ ಗುಪ್ತಚರ ವರದಿಯನ್ನು ಚೀನಾ ಸ್ಪಷ್ಟವಾಗಿ ನಿರಾಕರಿಸಿದೆ. ವಾಷಿಂಗ್ಟನ್‌ನಲ್ಲಿರುವ ಚೀನಾ ರಾಯಭಾರ ಕಚೇರಿ, ಚೀನಾ ಯಾವತ್ತೂ ಯಾವ ಸಂಘರ್ಷ ಪಕ್ಷಕ್ಕೂ ಶಸ್ತ್ರಾಸ್ತ್ರಗಳನ್ನು ಒದಗಿಸಿಲ್ಲ. ಅಮೆರಿಕ ನಿರಾಧಾರ ಆರೋಪಗಳನ್ನು ಮಾಡುವುದನ್ನು ನಿಲ್ಲಿಸಬೇಕು. ಉದ್ವಿಗ್ನತೆ ತಗ್ಗಿಸಲು ಎಲ್ಲ ಪಕ್ಷಗಳೂ ಪ್ರಯತ್ನಿಸಬೇಕು ಎಂದು ಹೇಳಿಕೆ ನೀಡಿದೆ.

ಕಿರುಸುದ್ದಿ

ಧುರಂಧರ್ 2 ಗೆಲುವು: ಆರೆಸ್ಸೆಸ್ ಕಚೇರಿಗೆ ರಣವೀರ್ ಸಿಂಗ್ ಭೇಟಿ

ನಾಗ್ಪುರ: ಬಾಲಿವುಡ್ ನಟ ರಣವೀರ್ ಸಿಂಗ್ ನಟಿಸಿರುವ ಆದಿತ್ಯ ಧರ್ ನಿರ್ದೇಶನ ಮಾಡಿದ ಧುರಂಧರ್ 2 ಸಿನಿಮಾ ಕಳೆದ ತಿಂಗಳು ಬಿಡುಗಡೆ ಆಗಿದ್ದು ಎಲ್ಲೆಡೆ ಭಾರೀ ಪ್ರಶಂಸೆಗೆ ಪಾತ್ರವಾಗುತ್ತಿದೆ. ಈ ಬೆನ್ನಲ್ಲೆ ನಟ ರಣವೀರ್ ಸಿಂಗ್ ಆರ್‌ಎಸ್‌ಎಸ್ ಕಚೇರಿಗೆ ಭೇಟಿ ನೀಡಿ, ಆರ್‌ಎಸ್‌ಎಸ್ ಸರಸಂಘಚಾಲಕ್ ಮೋಹನ್ ಭಾಗವತ್ ಅವರನ್ನು ಭೇಟಿ ಮಾಡಿದ್ದಾರೆ. ಇದೇವೇಳೆ ನಾಗ್ಪುರದ ರೇಶಿಮ್‌ಬಾಗ್‌ನಲ್ಲಿರುವ ಡಾ.ಹೆಡ್ಗೆವಾರ್ ಸ್ಮೃತಿ ಮಂದಿರಕ್ಕೆ ಭೇಟಿ ನೀಡಿದ ಸಿಂಗ್, ಆರ್‌ಎಸ್‌ಎಸ್ ಸಂಸ್ಥಾಪಕ ಕೆ.ಬಿ ಹೆಡ್ಗೆವಾರ್ ಮತ್ತು ಎಂಎಸ್ ಗೋಲ್ವಾಲ್ಕರ್ ಅವರ ಸ್ಮಾರಕಗಳಿಗೆ ಪುಷ್ಪ ನಮನ ಸಲ್ಲಿಸಿದ್ದಾರೆ.ಈ ವೇಳೆ ಆರ್‌ಎಸ್‌ಎಸ್ ಪ್ರತಿನಿಧಿಗಳು ಅವರಿಗೆ ಸ್ಮೃತಿ ಮಂದಿರದ ಇತಿಹಾಸ ತಿಳಿಸಿಕೊಟ್ಟಿದ್ದಾರೆ. ಅವರು ಸುಮಾರು 1.5 ಗಂಟೆಗಳ ಕಾಲ ಕಳೆದಿದ್ದು, ರಣವೀರ್ ಮೋಹನ್ ಭಾಗವತ್ ಅವರನ್ನು ಭೇಟಿ ಮಾಡಿ ತಮ್ಮ ಚಿತ್ರದ ಬಗ್ಗೆ ಚರ್ಚಿಸಿದ್ದಾರೆ ಎಂದು ವರದಿಯಾಗಿದೆ.

ಕೇರಳ ಸರ್ಕಾರಕ್ಕೆ ಗಡುವು ನೀಡಿದ ಹೈ

- ಕಾಸರಗೋಡು ತಾಲ್ಲೂಕಿನಲ್ಲಿ ಕನ್ನಡ ಬಳಕೆ ಅರ್ಜಿ
- ಎರಡು ತಿಂಗಳಲ್ಲಿ ತೀರ್ಮಾನಿಸಿ

ಕೊಚ್ಚಿ: ಕಾಸರಗೋಡು ತಾಲ್ಲೂಕಿನಲ್ಲಿ ಅಧಿಕೃತ ವ್ಯವಹಾರಗಳಲ್ಲಿ ಕನ್ನಡ ಭಾಷೆಯ ಬಳಕೆಗೆ ಸಂಬಂಧಿಸಿದ ಮನವಿಯನ್ನು ಎರಡು ತಿಂಗಳೊಳಗೆ ಪರಿಶೀಲಿಸಿ ತೀರ್ಮಾನ ಕೈಗೊಳ್ಳುವಂತೆ ಕೇರಳ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಸೂಚಿಸಿದೆ. ಮುಖ್ಯ ನ್ಯಾ.ಸೌಮೆನ್ ಸೇನ್ ಹಾಗೂ ನ್ಯಾ.ಶ್ಯಾಮ್ ಕುಮಾರ್ ವಿ.ಎಂ. ಅವರನ್ನೊಳಗೊಂಡ ಪೀಠವು ಕಾಸರಗೋಡು ಮೂಲದ ವಕೀಲರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಿಚಾರಣೆ ನಡೆಸಿ ಈ ಆದೇಶ ನೀಡಿದೆ. ಅರ್ಜಿದಾರರ ವಾದದ ಪ್ರಕಾರ, ಕಾಸರಗೋಡು ಮತ್ತು ಮಂಜೇಶ್ವರ ತಾಲ್ಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಲವು ಸರ್ಕಾರಿ ಕಚೇರಿಗಳು ಕನ್ನಡದಲ್ಲಿ ಸಲ್ಲಿಸಲಾದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ ಹಾಗೂ ಅವುಗಳನ್ನು ಪ್ರಕ್ರಿಯೆಗೊಳಿಸುವುದಿಲ್ಲ ಎಂಬುದು ಬೆಳಕಿಗೆ ಬಂದಿದೆ.

1982ರ ಮಾ.5ರಂದು ಕಣ್ಣೂರು ಜಿಲ್ಲೆಯ ಜಿಲ್ಲಾಧಿಕಾರಿ ಹೊರಡಿಸಿದ್ದ ಸರ್ಕ್ಯೂಲರ್‌ನಲ್ಲಿ ಆಗಿನ ಕಾಸರಗೋಡು ತಾಲ್ಲೂಕನ್ನು ಕನ್ನಡ ಭಾಷಾಭಿಮಾನಿಗಳ ಪ್ರದೇಶವೆಂದು ಘೋಷಿಸಿ, ಅಧಿಕೃತ ಪತ್ರ ವ್ಯವಹಾರಗಳಲ್ಲಿ ಕನ್ನಡ ಬಳಕೆಗೆ ಅನುಮತಿ ನೀಡಲಾಗಿತ್ತು. ಆದರೆ, ಈ ನಿರ್ದೇಶನಗಳು ಜಾರಿಗೆ ಬರದೆ ಉಳಿದಿವೆ ಎಂದು ಅರ್ಜಿದಾರರು ದೂರಿದ್ದಾರೆ. ಈ ಸಂಬಂಧ ಅರ್ಜಿದಾರರು ಜನವರಿಯಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸಿ, ಸಂಬಂಧಿತ ಎಲ್ಲಾ ಇಲಾಖೆಗಳಿಗೆ ಅಗತ್ಯ ಸೂಚನೆ ನೀಡುವಂತೆ ಕೋರಿದ್ದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲವೆಂದು ತಿಳಿಸಿದ್ದಾರೆ.

ಸಂಸತ್ ಆವರಣದಲ್ಲಿ ಮೋದಿ-ರಾಗಾ ಅಪರೂಪದ ಸಂಭಾಷಣೆ



ಹೊಸದಿಲ್ಲಿ: ಪ್ರಧಾನಮಂತ್ರಿ ನರೇಂದ್ರ ಮೋದಿ ಶನಿವಾರ ಸಂಸತ್ತಿನ ಆವರಣದಲ್ಲಿ ತಮ್ಮ ಕಾರನ್ನು ನಿಲ್ಲಿಸಿ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಕೆಲಕಾಲ ಮಾತುಕತೆ ನಡೆಸಿದ್ದು ಗಮನ ಸೆಳೆಯಿತು.

ಇಬ್ಬರೂ ನಾಯಕರು ತಮ್ಮ ಮುಂದಿನ ಕಾರ್ಯಕ್ರಮಗಳಿಗೆ ತೆರಳುವ ಮುನ್ನ ಸೌಜನ್ಯಯುತವಾಗಿ ಮಾತನಾಡುತ್ತಿರುವ ದೃಶ್ಯಗಳು ಕಂಡುಬಂದವು. ಪ್ರಧಾನಮಂತ್ರಿ ಸಂಸತ್ ಸಂಕೀರ್ಣಕ್ಕೆ ಆಗಮಿಸುತ್ತಿದ್ದಾಗ ಈ ಅನೌಪಚಾರಿಕ ಸಂವಹನ ನಡೆದಿದೆ. ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷ ಕಾಂಗ್ರೆಸ್‌ನ ಉನ್ನತ ನಾಯಕರ ನಡುವಿನ ಅಪರೂಪದ ನೇರ ಮಾತುಕತೆ, ಎಂದು ಅನೇಕರು ಬಣ್ಣಿಸಿದ್ದಾರೆ. ಯಾವ ವಿಚಾರದ ಕುರಿತು ಈ ಇಬ್ಬರೂ ಮಾತನಾಡಿದ್ದಾರೆ ಎಂಬುದು ಬಹಿರಂಗವಾಗಿಲ್ಲ. ಸಮಾಜ ಸುಧಾರಕ ಮಹಾತ್ಮ ಜ್ಯೋತಿಬಾ ಫುಲೆ ಅವರ 200ನೇ ಜನ್ಮದಿನದ ಅಂಗವಾಗಿ ಪಾರ್ಲಿಮೆಂಟ್ ಆವರಣದಲ್ಲಿರುವ ಪ್ರೇರಣಾ ಸ್ಥಳಕ್ಕೆ ಆಗಮಿಸಿದ ಪ್ರಧಾನಿ ಮೋದಿ ಪುಷ್ಪ ನಮನ ಸಲ್ಲಿಸಿದರು. ಶಿಕ್ಷಣ ಮತ್ತು ಸಾಮಾಜಿಕ ನ್ಯಾಯಕ್ಕೆ ಫುಲೆ ಅವರು ನೀಡಿದ ಕೊಡುಗೆಗಳನ್ನು ಗೌರವಿಸಲು ಈ ಕಾರ್ಯಕ್ರಮದಲ್ಲಿ ಹಲವಾರು ಗಣ್ಯರು ಭಾಗವಹಿಸಿದ್ದರು.

ಪ್ರತ್ಯೇಕ ಉಗ್ರ ವಿರೋಧಿ ಕಾರ್ಯಾಚರಣೆ: ಇಬ್ಬರ ಸೆರೆ

ಡೆಹ್ರಾಡೂನ್: ಭಯೋತ್ಪಾದನಾ ಚಟುವಟಿಕೆಗಳು ಮತ್ತು ದೇಶವಿರೋಧಿ ಗುಂಪುಗಳೊಂದಿಗೆ ಸಂಪರ್ಕ ಹೊಂದಿದ್ದ ಆರೋಪದ ಮೇಲೆ ಡೆಹ್ರಾಡೂನ್ ಮತ್ತು ಭುವನೇಶ್ವರದಲ್ಲಿ ಕಾನೂನು ಜಾರಿ ಸಂಸ್ಥೆಗಳು ನಡೆಸಿದ ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ಇಬ್ಬರನ್ನು ಬಂಧಿಸಿವೆ.

ಡೆಹ್ರಾಡೂನ್‌ನಲ್ಲಿ ಗೂಢಚರ್ಯೆ: ಸರ್ಕಾರಿ ಮತ್ತು ರಕ್ಷಣಾ ಸಂಸ್ಥೆಗಳ ಛಾಯಾಚಿತ್ರಗಳನ್ನು ಪಾಕಿಸ್ತಾನದ ಹ್ಯಾಂಡ್ಲರ್‌ಗಳಿಗೆ ಕಳುಹಿಸುತ್ತಿದ್ದ ಆರೋಪದ ಮೇಲೆ ಉತ್ತರಾಖಂಡ್ ವಿಶೇಷ ಕಾರ್ಯ ಪಡೆ (ಎಸ್‌ಟಿಎಫ್) ವಿಕ್ರಾಂತ್ ಕಶ್ಯಪ್ ಎಂಬಾತನನ್ನು ಬಂಧಿಸಿದೆ. ಪಾಕಿಸ್ತಾನಿ ಭಯೋತ್ಪಾದಕ ಶೆಹಜಾದ್ ಭಟ್ಟಿ ಸೂಚನೆಯಂತೆ ಕಶ್ಯಪ್ ಕಾರ್ಯನಿರ್ವಹಿಸುತ್ತಿದ್ದ ಎಂದು ಹಿರಿಯ ಪೊಲೀಸ್ ಅಧೀಕ್ಷಕ ಅಜಯ್ ಸಿಂಗ್ ತಿಳಿಸಿದ್ದಾರೆ. ಆರೋಪಿ, ಇನ್‌ಸ್ಟಾಗ್ರಾಮ್ ಮತ್ತು ವಾಟ್ಸಾಪ್ ಮೂಲಕ ಪೊಲೀಸ್ ಪ್ರಧಾನ ಕಚೇರಿ ಮತ್ತು ಬಸ್ ನಿಲ್ದಾಣದ ವಿವರಗಳನ್ನು ಹಂಚಿಕೊಂಡಿದ್ದ ಎನ್ನಲಾಗಿದೆ. ಬಂಧನದ ವೇಳೆ ಆತನಿಂದ ಪಿಸ್ತೂಲ್, ಗುಂಡುಗಳು ಮತ್ತು ಸ್ಪ್ರೇ ಪೇಂಟ್ ವಶಪಡಿಸಿಕೊಳ್ಳಲಾಗಿದೆ.

ಭುವನೇಶ್ವರದಲ್ಲಿ ಉಗ್ರಗಾಮಿ ಚಟುವಟಿಕೆ: ಮತ್ತೊಂದು ಕಾರ್ಯಾಚರಣೆಯಲ್ಲಿ, ದೆಹಲಿ ಮತ್ತು ಒಡಿಶಾ ಪೊಲೀಸರು ಭುವನೇಶ್ವರದಲ್ಲಿ 22 ವರ್ಷದ ಶೇಖ್ ಇಮ್ರಾನ್ ಎಂಬಾತನನ್ನು ಬಂಧಿಸಿದ್ದಾರೆ. ರಾಷ್ಟ್ರೀಯ ಭದ್ರತೆಗೆ ಹಾನಿಕಾರಕವಾದ ವಿಷಯಗಳನ್ನು ಹಂಚಿಕೊಳ್ಳುತ್ತಿದ್ದ ಆರೋಪಿ ಭಯೋತ್ಪಾದಕರ ಸಾಮಾಜಿಕ ಮಾಧ್ಯಮ ಗ್ರೂಪ್‌ನ ಸಕ್ರಿಯ ಸದಸ್ಯ, ಎಂದು ಅಧಿಕಾರಿಗಳು ಹೇಳಿದ್ದಾರೆ. ದಿಲ್ಲಿಯಲ್ಲಿ ಈ ಹಿಂದೆ ವಶಕ್ಕೆ ಪಡೆಯಲಾಗಿದ್ದ ಯುವಕರ ವಿಚಾರಣೆಯ ನಂತರ ಈ ಬಂಧನ ನಡೆದಿದೆ. ಅಧಿಕಾರಿಗಳು ಆತನಿಂದ ಮೊಬೈಲ್ ಫೋನ್ ಮತ್ತು ಲ್ಯಾಪ್‌ಟಾಪ್ ವಶಪಡಿಸಿಕೊಂಡಿದ್ದಾರೆ.

ಸಶಸ್ತ್ರ ಪಡೆಗಳಲ್ಲಿ ಸಿರಿಧಾನ್ಯ ಬಳಕೆಗೆ ಕೇಂದ್ರ ಉತ್ತೇಜನ

ರಾಯ್ಸೆನ್: ಸಶಸ್ತ್ರ ಪಡೆಗಳಲ್ಲಿ ಸಿರಿಧಾನ್ಯಗಳ ಬಳಕೆಯನ್ನು ಉತ್ತೇಜಿಸುವ ಮೂಲಕ ಜೈ ಜವಾನ್ ಜೈ ಕಿಸಾನ್ ಘೋಷವಾಕ್ಯದಂತೆ ರೈತರ ಆರ್ಥಿಕ ಬಲವರ್ಧನೆಗಾಗಿ ಕೇಂದ್ರ ಸರ್ಕಾರ ಕೆಲಸ ಮಾಡುತ್ತಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಶನಿವಾರ ಹೇಳಿದ್ದಾರೆ. 1965ರಲ್ಲಿ ಇಂಡೋ-ಪಾಕ್ ಯುದ್ಧ ಸಂದರ್ಭದಲ್ಲಿ ಆಹಾರ ಕೊರತೆ ಉಂಟಾಗಿದ್ದ ಸಂದರ್ಭ ಮಾಜಿ ಪ್ರಧಾನಿ ಲಾಲ್ ಬಹದೂರ್ ಶಾಸ್ತ್ರಿಯವರು ಜೈ ಜವಾನ್ ಜೈ ಕಿಸಾನ್ ಘೋಷ ವಾಕ್ಯದೊಂದಿಗೆ ಸೈನಿಕರ ಆತ್ಮಸ್ಥೈರ್ಯ ಮತ್ತು ಉತ್ಪಾದನೆ ಹೆಚ್ಚಿಸಲು ರೈತರಿಗೆ ಸ್ಫೂರ್ತಿ ತುಂಬಿದ್ದರು. ತಕ್ಷಣವೇ ಈ ಘೋಷವಾಕ್ಯವು ಆತ್ಮನಿರ್ಭರ (ಸ್ವಾವಲಂಬಿ) ಭಾರತದ ಚಿಹ್ನೆಯಾಗಿ ಬದಲಾಯಿತು. 3 ದಿನಗಳ ಉನ್ನತ ಕೃಷಿ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಸಿಂಗ್, ಜೋಳ, ಸಜ್ಜೆ ಮತ್ತು ರಾಗಿ ಹಿಟ್ಟಿನಿಂದ ತಯಾರಿಸಲಾದ ಆಹಾರಗಳನ್ನು ಸಶಸ್ತ್ರ ಪಡೆಗಳಲ್ಲಿ ಪರಿಚಯಿಸಲಾಗಿದೆ.

ಚಂದ್ರನ ಕಕ್ಷೆಯಿಂದ ಹಿಂತಿರುಗಿದ ನಾಲ್ವರು ಗಗನಯಾತ್ರಿಗಳು

ಆರ್ಟೆಮಿಸ್ 2 ಯಶಸ್ವಿ ಸ್ಪ್ಲ್ಯಾಶ್‌ಡೌನ್

ವಾಷಿಂಗ್ಟನ್: ಆರ್ಟೆಮಿಸ್-2 ಗಗನಯಾನ ಯೋಜನೆಯ ನಾಲ್ವರು ಗಗನಯಾತ್ರಿಗಳು ಐತಿಹಾಸಿಕ ಚಂದ್ರ ಪರಿಭ್ರಮಣ ಮಿಷನ್ ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, ಶುಕ್ರವಾರ ಪೆಸಿಫಿಕ್ ಮಹಾಸಾಗರದಲ್ಲಿ ರೋಮಾಂಚಕ ಸ್ಪ್ಲಾಶ್‌ಡೌನ್ ನಡೆಸಿ ಇಳಿದರು. ಐದು ದಶಕಗಳ ನಂತರ ಮಾನವಕುಲ ಮತ್ತೆ ಚಂದ್ರನ ಮಡಿಲಿಗೆ ತೆರಳಿ ಸುರಕ್ಷಿತವಾಗಿ ಮರಳಿದ ಈ ಕ್ಷಣ ಇತಿಹಾಸದ ಪುಟಗಳಲ್ಲಿ ಚಿರಸ್ಥಾಯಿಯಾಯಿತು.

ಈ ಯಾನದಲ್ಲಿ ಕೇವಲ ಗಗನಯಾನ ದಾಖಲೆಗಳಷ್ಟೇ ಅಲ್ಲ ಚಂದ್ರನ ದೂರದ ಭಾಗದ ಅಪರೂಪದ ದೃಶ್ಯಗಳು, ಸಂಪೂರ್ಣ ಸೂರ್ಯಗ್ರಹಣ, ಮತ್ತು ಕಪ್ಪು ಆಕಾಶದ ಹಿನ್ನೆಲೆಯಲ್ಲಿ ಹೊಳೆಯುತ್ತಿದ್ದ ನಮ್ಮ ನೀಲಿ ಭೂಮಿಯ ದೃಶ್ಯ ಇವೆಲ್ಲ ಜಗತ್ತಿನ ಮನಸ್ಸನ್ನು ಆವರಿಸಿದವು.

ಇತಿಹಾಸ ಬರೆದ ನಾಲ್ವರು: ಕಮಾಂಡರ್ ರೀಡ್ ವೈಸ್‌ಮನ್, ಪೈಲಟ್ ವಿಕ್ಟರ್ ಗ್ಲೋವರ್, ಕ್ರಿಸ್ಟಿನಾ ಕೋಚ್ ಮತ್ತು ಕೆನಡಾದ ಜೆರೆಮಿ ಹ್ಯಾನ್ಸನ್ ಈ ನಾಲ್ವರು ಸ್ಯಾನ್‌ಡಿಯೆಗೋ ಕರಾವಳಿಯ ಬಳಿ ಸಮುದ್ರಕ್ಕಿಳಿದ ಕ್ಯಾಪ್ಸೂಲ್‌ನಿಂದ ಹೊರಬಂದರು. ಮಿಲಿಟರಿ ಹೆಲಿಕಾಪ್ಟರ್‌ಗಳ ಮೂಲಕ ಒಬ್ಬೊಬ್ಬರನ್ನಾಗಿ ಮೇಲೆತ್ತಿ ಯುಎಸ್‌ಎಸ್ ಜಾನ್ ಪಿ. ಮರ್ಥಾ ಎಂಬ ನೌಕಾ ಹಡಗಿಗೆ ಕರೆದೊಯ್ಯಲಾಯಿತು. ಇದಾದ ಮೇಲೆ ನಾಸಾ ಮಿಷನ್ ಕಂಟ್ರೋಲ್‌ನಲ್ಲಿ ಸಂಭ್ರಮ ಉಕ್ಕಿ ಹರಿಯಿತು.



ಚಂದ್ರನ ದಾಖಲೆ ಮತ್ತು ಅಪರೂಪದ ದೃಶ್ಯ

ಏ.1ರಂದು ಫ್ಲೋರಿಡಾದಿಂದ ಉಡಾವಣೆಗೊಂಡ ಈ ತಂಡ ಭೂಮಿಯಿಂದ 4,06,771 ಕಿ.ಮೀ. ದೂರ ತಲುಪಿ ಅಪೋಲೊ-13ರ ಅಂತರದ ದಾಖಲೆ ಮುರಿಯಿತು ಇದು ಮನುಷ್ಯರು ಇದುವರೆಗೆ ಭೂಮಿಯಿಂದ ಅತ್ಯಂತ ದೂರ ತೆರಳಿದ ಕ್ಷಣ. ಸೋಮವಾರ ನಡೆದ ದಾಖಲೆ ಫ್ಲೈಬೈ ವೇಳೆ ಚಂದ್ರನ ದೂರದ ಭಾಗದ ಕಣಿವೆಗಳನ್ನು ಮನುಷ್ಯ ಕಣ್ಣಿಗೆ ಮೊದಲ ಬಾರಿ ತೋರಿದರು.

ದಾಖಲೆ ವೇಗದ ಮರುಪ್ರವೇಶ

ಇಂಟೆಗ್ರಿಟಿ ಎಂದು ನಾಮಕರಣಗೊಂಡ ಓರಿಯನ್ ಕ್ಯಾಪ್ಸೂಲ್ ಭೂಮಿಯ ವಾತಾವರಣವನ್ನು ಮ್ಯಾಕ್ 33 ವೇಗದಲ್ಲಿ (ಶಬ್ದದ ವೇಗಕ್ಕಿಂತ 33 ಪಟ್ಟು) ಪ್ರವೇಶಿಸಿತು. ಅಂದರೆ ಸೆಕೆಂಡಿಗೆ ಸುಮಾರು 11,026 ಮೀಟರ್ ವೇಗ. 1960-70ರ ಅಪೊಲೊ ಯುಗದ ನಂತರ ಇಷ್ಟು ವೇಗದಲ್ಲಿ ಬಂದ ಮೊದಲ ಕ್ಯಾಪ್ಸೂಲ್ ಇದೇ. ಕ್ಯಾಪ್ಸೂಲ್ ಕೆಂಪು-ಕೆಂಡದ ಪ್ಲಾಸ್ಮಾ ಮಳೆಯಲ್ಲಿ ಮುಳುಗಿ ಆರು ನಿಮಿಷ ಸಂಪರ್ಕ ಕಡಿದುಕೊಂಡಾಗ ಮಿಷನ್ ಕಂಟ್ರೋಲ್‌ನಲ್ಲಿ ಉಸಿರು ಬಿಗಿಹಿಡಿದ ನಿಶ್ಶಬ್ದ ತುಂಬಿತ್ತು. ಸ್ಪ್ಲಾಶ್‌ಡೌನ್ ಕ್ಷಣ ಕ್ಯಾಪ್ಸೂಲ್ ಗಂಟೆಗೆ 30 ಕಿಮೀ ವೇಗಕ್ಕೆ ಇಳಿದು ಸಮುದ್ರ ತಲುಪಿತು.

ಮತದಾರರ ಪಟ್ಟಿಗೆ ತೀವ್ರ ಶುದ್ಧೀಕರಣ ಪೂರ್ಣ

ಎಸ್‌ಐಆರ್: ಶೇ.10 ಮತದಾರರ ಕಡಿತ

ಹೊಸದಿಲ್ಲಿ: ಚುನಾವಣಾ ಆಯೋಗ ನಡೆಸಿದ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ದ್ವಿತೀಯ ಹಂತದ ಬಳಿಕ ಒಂಬತ್ತು ರಾಜ್ಯಗಳು ಹಾಗೂ ಮೂರು ಕೇಂದ್ರಾಡಳಿತ ಪ್ರದೇಶಗಳ ಒಟ್ಟು ಮತದಾರರ ಪಟ್ಟಿಯಲ್ಲಿ ಶೇ.10.2 ಇಳಿಕೆ ಕಂಡುಬಂದಿದೆ. ಈ ಪ್ರಕ್ರಿಯೆಯಲ್ಲಿ 60 ಲಕ್ಷಕ್ಕೂ ಹೆಚ್ಚು ಮೃತ ಮತದಾರರ ಹೆಸರುಗಳನ್ನು ತೆಗೆಯಲಾಗಿದೆ ಎಂದು ಆಯೋಗ ಮತ್ತು ರಾಜ್ಯಾಧಿಕಾರಿಗಳ ಮಾಹಿತಿ ತಿಳಿಸಿದೆ.

ಅಕ್ಟೋಬರ್ 27ರಂದು ದ್ವಿತೀಯ ಹಂತದ ಎಸ್‌ಐಆರ್ ಘೋಷಣೆಯ ವೇಳೆಗೆ, ಈ 12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಟ್ಟು ಮತದಾರರ ಸಂಖ್ಯೆ 50.99 ಕೋಟಿಗೂ ಹೆಚ್ಚು ಇತ್ತು. ಪರಿಷ್ಕರಣೆ ಬಳಿಕ ಇದು 45.81 ಕೋಟಿಗೆ ಇಳಿದು, ಒಟ್ಟು 5.18 ಕೋಟಿ ಮತದಾರರ ಕಡಿತ ದಾಖಲಾಗಿದೆ.

ಈ ಅವಧಿಯಲ್ಲಿ ಒಟ್ಟು 66,88,636 ಮೃತ ಮತದಾರರ ಹೆಸರುಗಳು ತೆಗೆದುಹಾಕಲ್ಪಟ್ಟಿವೆ. ಇದರಲ್ಲಿ ಉತ್ತರ ಪ್ರದೇಶದಲ್ಲಿ ಗರಿಷ್ಠ 25.47 ಲಕ್ಷ, ಬಳಿಕ ಚುನಾವಣೆಗೆ ಸಜ್ಜಾಗಿರುವ ಪಶ್ಚಿಮ ಬಂಗಾಳದಲ್ಲಿ 24.16 ಲಕ್ಷ ಹೆಸರುಗಳು ಸೇರಿವೆ. ಇದಷ್ಟೇ ಅಲ್ಲದೆ, ಎಸ್‌ಐಆರ್ ಪ್ರಕ್ರಿಯೆಯಲ್ಲಿ ಸಲ್ಲಿಸಲಾದ ಆಕ್ಷೇಪಣೆಗಳು ಹಾಗೂ ಪರಿಶೀಲನೆಯ ನಂತರ ಇನ್ನೂ 63.16 ಲಕ್ಷ ಹೆಸರುಗಳನ್ನು ತೆಗೆದುಹಾಕಲಾಗಿದೆ. ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ತಮಿಳುನಾಡು, ರಾಜಸ್ಥಾನ, ಛತ್ತೀಸ್‌ಗಢ, ಕೇರಳ, ಪುದುಚೇರಿ, ಅಂಡಮಾನ್- ನಿಕೋಬಾರ್ ದ್ವೀಪಗಳು, ಲಕ್ಷದ್ವೀಪ, ಗುಜರಾತ್, ಮಧ್ಯಪ್ರದೇಶ ಮತ್ತು ಗೋವಾ ರಾಜ್ಯಗಳ ಅಂತಿಮ ಮತದಾರರ ಪಟ್ಟಿಗಳನ್ನು ವಿವಿಧ ದಿನಗಳಲ್ಲಿ ಪ್ರಕಟಿಸಲಾಗಿದೆ. ಇವುಗಳಲ್ಲಿ ಉತ್ತರ ಪ್ರದೇಶವೇ ಕೊನೆಯದಾಗಿ ಶುಕ್ರವಾರ ತನ್ನ ಅಂತಿಮ ಪಟ್ಟಿಯನ್ನು ಬಿಡುಗಡೆ ಮಾಡಿದೆ.

ಈಗಾಗಲೇ ಬಿಹಾರದಲ್ಲಿ ಪೂರ್ಣಗೊಂಡಿದ್ದ ಎಸ್‌ಐಆರ್ ಪ್ರಕ್ರಿಯೆಯ ನಂತರ, ಸುಮಾರು 51 ಕೋಟಿ ಮತದಾರರನ್ನು ಒಳಗೊಂಡ ದ್ವಿತೀಯ ಹಂತವೂ ಮುಕ್ತಾಯಗೊಂಡಿದೆ. ಇನ್ನೂ ಉಳಿದಿರುವ ಸುಮಾರು 40 ಕೋಟಿ ಮತದಾರರನ್ನು 17 ರಾಜ್ಯಗಳು ಹಾಗೂ ಐದು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮುಂದಿನ ಹಂತದಲ್ಲಿ ಒಳಪಡಿಸಲಾಗುವುದು. ಈ ಪ್ರಕ್ರಿಯೆ ಈ ತಿಂಗಳ ಐದು ವಿಧಾನಸಭಾ ಚುನಾವಣೆಗಳ ನಂತರ ಆರಂಭವಾಗುವ ಸಾಧ್ಯತೆ ಇದೆ.

ಆಂಧ್ರ ಪ್ರದೇಶ, ಅರುಣಾಚಲ ಪ್ರದೇಶ, ಚಂಡೀಗಢ, ದಾದ್ರಾ ಮತ್ತು ನಗರ ಹವೇಳಿ-ದಮನ ದಿಯು, ಹರಿಯಾಣ, ಹಿಮಾಚಲ ಪ್ರದೇಶ, ಜಮ್ಮು-ಕಾಶ್ಮೀರ, ಜಾರ್ಖಂಡ್, ಕರ್ನಾಟಕ, ಲಡಾಖ್, ಮಹಾರಾಷ್ಟ್ರ ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ದೆಹಲಿ, ಒಡಿಶಾ, ಪಂಜಾಬ್, ಸಿಕ್ಕಿಂ, ತ್ರಿಪುರಾ, ತೆಲಂಗಾಣ ಮತ್ತು ಉತ್ತರಾಖಂಡ ರಾಜ್ಯಗಳು ಮುಂದಿನ ಹಂತದಲ್ಲಿ ಒಳಗೊಳ್ಳಲಿವೆ. ಇದಲ್ಲದೆ, ಅಸ್ಸಾಂನಲ್ಲಿ ಎಸ್‌ಐಆರ್ ಬದಲಿಗೆ ವಿಶೇಷ ಪರಿಷ್ಕರಣೆ ಪ್ರಕ್ರಿಯೆ ಫೆಬ್ರವರಿ 10ರಂದು ಪೂರ್ಣಗೊಂಡಿದೆ.

ಕಿರುಸುದ್ದಿ

ಸಮೂಹ ನೃತ್ಯ, ಸಮೂಹ ಗೀತಗಾಯನ ಸ್ಪರ್ಧೆಗಳಲ್ಲಿ ಅಮಿತ್ ಪ್ರಭು ಪ್ರಥಮ



ಬಂಟ್ವಾಳ: ಮೈಸೂರಿನಲ್ಲಿ ನಡೆದ 2025-26ನೇ ಸಾಲಿನ ರಾಷ್ಟ್ರಮಟ್ಟದ ರಾಷ್ಟ್ರೀಯ ಭಾವೈಕ್ಯತಾ ಶಿಬಿರದಲ್ಲಿ ಮಂಗಳೂರು ವಿಶ್ವವಿದ್ಯಾಲಯ ತಂಡವನ್ನು ಪ್ರತಿನಿಧಿಸಿದ್ದ ಬಂಟ್ವಾಳದ ಶ್ರೀ ವೆಂಕಟರಮಣಸ್ವಾಮಿ ಕಾಲೇಜಿನ ದ್ವಿತೀಯ ಬಿ.ಕಾಂ ವಿದ್ಯಾರ್ಥಿ ಅಮಿತ್ ಪ್ರಭು ಸಮೂಹ ನೃತ್ಯ ಹಾಗೂ ಸಮೂಹ ಗೀತಗಾಯನ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದು ವಿಶ್ವವಿದ್ಯಾಲಯ ಹಾಗೂ ಕಾಲೇಜಿಗೆ ಕೀರ್ತಿಯನ್ನು ತಂದಿರುತ್ತಾರೆ. ಇವರನ್ನು ಕಾಲೇಜು ಆಡಳಿತ ಮಂಡಳಿ, ಪ್ರಾಂಶುಪಾಲರು, ಎನ್.ಎಸ್.ಎಸ್.ಕಾರ್ಯಕ್ರಮಾಧಿಕಾರಿ ಹಾಗೂ ಎಲ್ಲಾ ಬೋಧಕವರ್ಗದವರು ಅಭಿನಂದಸಿದ್ದಾರೆ.

ಎನ್ನೆಸ್ಸೆಸ್ ರಾಷ್ಟ್ರೀಯ ಏಕತಾ ಶಿಬಿರ





ಪುತ್ತೂರು: ನಗರದ ಸಂತ ಫಿಲೋಮಿನಾ ಸ್ವಾಯತ್ತ ಕಾಲೇಜಿನ ಎನ್ನೆಸ್ಸೆಸ್ ಕಾರ್ಯಕ್ರಮಾಧಿಕಾರಿ ಡಾ.ಕೆ. ಚಂದ್ರಶೇಖರ್ ಹಾಗೂ ಎನ್ನೆಸ್ಸೆಸ್ ಘಟಕ ನಾಯಕಿ ಲವಿಕಾ ಜಿ. ಮಂಗಳೂರು ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿ ಇತ್ತೀಚೆಗೆ ಮೈಸೂರಿನಲ್ಲಿ ನಡೆದ ರಾಷ್ಟ್ರೀಯ ಏಕತಾ ಶಿಬಿರದಲ್ಲಿ ಭಾಗವಹಿಸಿದರು. ವಾರಪೂರ್ತಿ ನಡೆದ ಈ ಶಿಬಿರವನ್ನು ಮೈಸೂರು ವಿ.ವಿ. ಆಯೋಜಿಸಿತ್ತು. ಮಹಾರಾಷ್ಟ್ರ, ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಗೋವಾ ಹಾಗೂ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು. ಶಿಬಿರದ ಉದ್ದೇಶ ದೇಶದ ಏಕತೆ, ಸಾಂಸ್ಕೃತಿಕ ವಿನಿಮಯ ಹಾಗೂ ಯುವಕರಲ್ಲಿ ಐಕ್ಯತೆಯ ಮನೋಭಾವವನ್ನು ಬೆಳೆಸುವುದಾಗಿತ್ತು. ಮಂಗಳೂರು ವಿ.ವಿ. ತಂಡ ಅತ್ಯುತ್ತಮ ಪ್ರದರ್ಶನ ನೀಡಿ ಗುಂಪು ನೃತ್ಯ ಹಾಗೂ ಗುಂಪು ಗಾನ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನಗಳನ್ನು ಗಳಿಸಿದೆ.

ಎನ್.ಎಂ.ಎಂ.ಎಸ್. ಪರೀಕ್ಷೆ: ಲಿಖಿತಾ ಪ್ರಥಮ



ನಿಡ್ಪಳ್ಳಿ: ಒಳ್ಯದ ಸರಕಾರಿ ಉನ್ನತ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿ ಲಿಖಿತಾ ಕೆ. 2026-27ನೇ ಸಾಲಿನ ಎನ್.ಎಂ.ಎಂ.ಎಸ್. ಪರೀಕ್ಷೆಯಲ್ಲಿ ದ.ಕ. ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಿದ್ದಾರೆ. ದ.ಕ. ಜಿಲ್ಲೆಯಲ್ಲಿ 5274 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಅದರಲ್ಲಿ ಲಿಖಿತಾ ಪ್ರಥಮ ಸ್ಥಾನ ಪಡೆದಿದ್ದಾರೆ. ಅವರಿಗೆ ಮುಖ್ಯ ಗುರು ಜನಾರ್ದನ ಅಲ್ಚಾರು ಅವರ ಮಾರ್ಗದರ್ಶನದಲ್ಲಿ ಶಿಕ್ಷಕಿ ದಿವ್ಯಾ ಸಾಲಿಗ್ರಾಮ, ರೂಪ ಮಾಯಿಲಕಾನ, ಸ್ವರ್ಣಲತಾ ಕೋಡಿ, ಜಯಲತಾ ಕೊಂದಲ್ಕಾನ ತರಬೇತಿ ನೀಡಿದ್ದಾರೆ. ಅವರು ನೀರಮೂಲೆ ಯಶೋಧಾ ಮತ್ತು ಶಿವರಾಮ ದಂಪತಿ ಪುತ್ರಿ.

ಗೊನ್ಝಾಗ: ಶಶಿಕಲಾಗೆ ಹಿಮಾಲಯನ್ ವುಡ್ ಬ್ಯಾಡ್ಜ್



ಮಂಗಳೂರು: ಸಂತ ಅಲೋಶಿಯಸ್ ಗೊನ್ಝಾಗ ಶಾಲೆಯ ಕಬ್ ಮಾಸ್ಟರ್ ಶಶಿಕಲಾ ಅವರಿಗೆ ಬೆಂಗಳೂರಿನ ಶಾಂತಿಗೃಹದಲ್ಲಿರುವ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಇತ್ತೀಚೆಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಪ್ರತಿಷ್ಠಿತ ಹಿಮಾಲಯನ್ ವುಡ್ ಬ್ಯಾಡ್ಜ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಈ ಕೋರ್ಸ್ ಅನ್ನು ಕರ್ನಾಟಕದ ಬೆಂಗಳೂರಿನ ದೊಡ್ಡಬಳ್ಳಾಪುರದಲ್ಲಿರುವ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರದಲ್ಲಿ, ಸ್ಕೌಟ್ಸ್ ಮತ್ತು ಗೈಡ್ಸ್ ಕೋರ್ಸ್‌ನ ನಾಯಕ ವಿ.ಎಂ.ನಾರಾಯಣ ಸ್ವಾಮಿ ಅವರ ಮಾರ್ಗದರ್ಶನದಲ್ಲಿ ನಡೆಸಲಾಯಿತು. ತರಬೇತಿ ಕಾರ್ಯಕ್ರಮವನ್ನು 2025 ರ ಸೆಪ್ಟೆಂಬರ್ 24 ರಿಂದ 30 ರವರೆಗೆ ನಡೆಸಲಾಯಿತು. ಸಂತ ಅಲೋಶಿಯಸ್ ಗೊನ್ಝಾಗ ಶಾಲೆಯ ಪ್ರಾಂಶುಪಾಲರಾದ ರೋಹನ್ ಡಿ ಅಲ್ಮೇಡ ಅವರು ಆಡಳಿತ ಮಂಡಳಿ, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಪರವಾಗಿ ಶಶಿಕಲಾ ಅವರ ಈ ಸಾಧನೆಗೆ ಅಭಿನಂದನೆಯನ್ನು ಸಲ್ಲಿಸಿದ್ದಾರೆ.



ಬ್ರಹ್ಮಕಲಶೋತ್ಸವ ಸಡಗರದಲ್ಲಿರುವ ಹನುಮಗಿರಿ ಶ್ರೀ ಕೇತ್ರಕ್ಕೆ ಶುಕ್ರವಾರ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಆಗಮಿಸಿದ್ದು, ಅಮರಗಿರಿಯ ಭಾರತ್ ಮಾತಾ ಮಂದಿರಕ್ಕೆ ಭೇಟಿ ನೀಡಿ ವೀಕ್ಷಿಸಿದರು. ಈ ಸಂದರ್ಭ ಸಂಸದ ಕ್ಯಾ. ಬ್ರಿಜೇಶ್ ಚೌಟ, ಶಾಸಕ ಅಶೋಕ್ ರೈ, ಮಾಜಿ ಶಾಸಕ ಸಂಜೀವ ಮಠಂದೂರು ಮೊದಲಾದವರು ಉಪಸ್ಥಿತರಿದ್ದರು.

ಕರ್ನಾಟಕ ಪಿಯು ಪರೀಕ್ಷೆಯಲ್ಲಿ ಶೇ.98.17 ಅಂಕ ಪಡೆದ ಕಾಸರಗೋಡಿನ ವರ್ಷಾ ಭಟ್



ಕಾಸರಗೋಡು: ಕಾಸರಗೋಡಿನ ವಿದ್ಯಾರ್ಥಿನಿ ವರ್ಷಾ ಭಟ್ ಅವರು ಕರ್ನಾಟಕ ಪ್ರಿ ಯೂನಿವರ್ಸಿಟಿ (ಪಿಯುಸಿ) ವಾಣಿಜ್ಯ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ವರ್ಷಾ 600ರಲ್ಲಿ 589 ಅಂಕಗಳನ್ನು ಗಳಿಸುವ ಮೂಲಕ ಶೇಕಡಾ 98.17ರಷ್ಟು ಅಂಕ ಗಳಿಸಿ ಗಮನಾರ್ಹ ಯಶಸ್ಸನ್ನು ಸಾಧಿಸಿದ್ದಾರೆ. ಪರೀಕ್ಷಾ ಫಲಿತಾಂಶಗಳನ್ನು ಶುಕ್ರವಾರ ಪ್ರಕಟಿಸಲಾಗಿತ್ತು.

ಕಾಸರಗೋಡು ಕರಂದಕ್ಕಾಡಿನ ಶಾರದಾ ನಿವಾಸದ ಶ್ರೀನಾಥ್ ಭಟ್ ಮತ್ತು ಸ್ವಪ್ನಾ ನಾಯಕ್ ಅವರ ಪುತ್ರಿ ವರ್ಷಾ. ಮಂಗಳೂರಿನ ಕೆನರಾ ಪ್ರೀ-ಯೂನಿವರ್ಸಿಟಿ ಕಾಲೇಜ್‌ನ ವಿದ್ಯಾರ್ಥಿನಿಯಾದ ವರ್ಷಾ ಅವರ ಕಠಿಣ ಪರಿಶ್ರಮ ಮತ್ತು ಅಧ್ಯಯನದಲ್ಲಿನ ವಿಶ್ವಾಸ ಅವರ ಕುಟುಂಬ ಮತ್ತು ಜಿಲ್ಲೆಗೆ ಹೆಮ್ಮೆಪಡುವಂತೆ ಮಾಡಿದೆ.

ವರ್ಷಾ ಕಾಸರಗೋಡಿನ ಬಿಇಎಂ ಶಾಲೆಯಿಂದ ಎಸ್ ಎಸ್‌ಎಲ್‌ಸಿ ಉತ್ತೀರ್ಣರಾದ ನಂತರ ಅವರು ತಮ್ಮ ಅಧ್ಯಯನಕ್ಕಾಗಿ ಮಂಗಳೂರಿನಲ್ಲಿ ಕರ್ನಾಟಕ ಪಿಯುಸಿಗೆ ಸೇರಿದರು.

ವಾಣಿಜ್ಯ ವಿಭಾಗದಲ್ಲಿ ಉತ್ತಮ ಸಾಧನೆ ಮಾಡಿರುವ ವರ್ಷಾ ಅವರು ಮುಂದೆ ಉನ್ನತ ಶಿಕ್ಷಣ ಕ್ಷೇತ್ರದಲ್ಲೂ ಉತ್ತಮ ಸಾಧನೆ ಮಾಡುವ ಗುರಿ ಹೊಂದಿದ್ದಾರೆ. ತಮ್ಮ ಶಿಕ್ಷಕರ ಸರಿಯಾದ ಮಾರ್ಗದರ್ಶನ ಮತ್ತು ಕುಟುಂಬದ ಸಂಪೂರ್ಣ ಬೆಂಬಲವೇ ಯಶಸ್ಸಿನ ಹಿಂದಿನ ಪ್ರಮುಖ ಅಂಶಗಳು ಎಂದು ವರ್ಷಾ ತಿಳಿಸಿದರು.

ಕಾಸರಗೋಡು ಜಿಲ್ಲೆಯ ಪ್ರತಿಭೆಗಳು ಶಿಕ್ಷಣ ಕ್ಷೇತ್ರದಲ್ಲಿ ಮತ್ತೊಮ್ಮೆ ತಮ್ಮ ಶ್ರೇಷ್ಠತೆಯನ್ನು ಸಾಬೀತುಪಡಿಸುತ್ತಿರುವ ಸಂದರ್ಭದಲ್ಲಿ ವರ್ಷಾಳ ಈ ಅದ್ಭುತ ಸಾಧನೆ ಇತರ ವಿದ್ಯಾರ್ಥಿಗಳಿಗೆ ಹೆಚ್ಚಿನ ಸ್ಫೂರ್ತಿಯಾಗಲಿದೆ. ವರ್ಷಾಳ ಅತ್ಯುತ್ತಮ ಯಶಸ್ಸಿಗೆ ಅನೇಕ ಸ್ಥಳೀಯರು ಮತ್ತು ಸಂಬಂಧಿಕರು ಅಭಿನಂದಿಸಿದ್ದಾರೆ.

ಹನುಮಗಿರಿ ಕ್ಷೇತ್ರದಲ್ಲಿ ಬ್ರಹ್ಮಕಲಶ | ಧಾರ್ಮಿಕ ಸಭೆಯಲ್ಲಿ ಕಂಚಿಶ್ರೀಗಳ ಆಶೀರ್ವಚನ

ಹಿಂದೂವಾಗಿ ಜನಿಸುವುದೇ ಭಾಗ್ಯ

ಪುತ್ತೂರು: ಭಗವಾನ್ ನಾಮದ ಜಪವನ್ನು ಪ್ರತಿ ಹಿಂದೂಗಳೂ ಮಾಡಬೇಕು. ಆ ಮೂಲಕ ಪುಣ್ಯ ಸಂಪಾದನೆ ಮಾಡಬೇಕು. ರಾಮತಾರಕ ಮಂತ್ರ ಅದಕ್ಕೆ ಸರಳ ಮಂತ್ರ. ಹಿಂದು ಹಿಂದೂವಾಗಿ ಇರಬೇಕು. ಬೇರೆ ಧರ್ಮಕ್ಕೆ ಎಂದೂ ಹೋಗಬಾರದು. ಹಿಂದೂವಾಗಿ ಹುಟ್ಟುವುದು ಅತ್ಯಂತ ಪುಣ್ಯದಾಯಕ ಎಂದು ಕಂಚಿ ಕಾಮಕೋಟಿ ಪೀಠಾಧಿಪತಿ ಜಗದ್ಗುರು ಶ್ರೀ ಶಂಕರ ವಿಜೇಯೇಂದ್ರ ಸರಸ್ವತಿ ಸ್ವಾಮೀಜಿ ಹೇಳಿದರು.

ಹನುಮಗಿರಿ ಶ್ರೀ ಕೋದಂಡರಾಮ, ಪಂಚಮುಖಿ ಆಂಜನೇಯ ಕ್ಷೇತ್ರದಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವದಲ್ಲಿ ಶನಿವಾರ ಕೋಟಿ ಶ್ರೀ ರಾಮತಾರಕ ಮಂತ್ರ ಮಹಾಯ್ಞದ ಪೂರ್ಣಾಹುತಿಯಲ್ಲಿ ಪಾಲ್ಗೊಂಡ ಅವರು ಧರ್ಮ ಸಂದೇಶ ನೀಡಿದರು. ಸುಮಾರು 13 ಸಾವಿರ ಮಂದಿ ಶ್ರೀರಾಮ ತಾರಕ ಜಪದೀಕ್ಷೆ ಪಡೆದು ಕರ್ನಾಟಕದ ಸಂಸ್ಕೃತಿ, ಭಾಷಾ ಸಾಹಿತ್ಯ ಪ್ರವಾಹದಲ್ಲಿ ಸ್ನಾನ ಮಾಡಿ ರಾಮಜಪ ಮಾಡಿರುವುದು ಸತ್ಪೇರಣೆ ನೀಡಲಿದೆ ಎಂದರು.

ರಾಮನಾಮವೇ ಜನ್ಮರಕ್ಷಕ ಮಂತ್ರ. ರಾಮನಾಮಕ್ಕೆ ತಾರಕ ಮಂತ್ರ ಎಂದೂ ಹೆಸರಿದೆ. ಸುಖ ಸಂಸಾರ, ಆನಬಂದಕ್ಕೆ ರಾಮನಾಮ ಮಂತ್ರ ಪೂರಕವಾಗಿದೆ. ಆಂಜನೇಯನ ಉಪಾಸನೆಯ ಮೂಲಕ ವಜ್ರದೇಹ ಆಗುತ್ತದೆ. ರಾಮ ನಾಮ ಸಂಕೀರ್ತನೆ ಮಾಡಿದವರನ್ನು ಅಪಮಾನ ಮಾಡಬಾರದು. ರಾಮನಾಮ ಸ್ಮರಣೆಯಿಂದ ಸ್ವರ್ಗಾಧಿ ಪ್ರಾಪ್ತಿಯಾಗುತ್ತದೆ ಎಂದು ಹೇಳಿದ ಅವರು, ಹನುಮಗರಿ ಕ್ಷೇತ್ರದಲ್ಲಿ ಸೇವಾ ಕಾರ್ಯಗಳಾಗಬೇಕು. ಲಘು ಉದ್ಯೋಗಗಳು ಇರಬೇಕು, ಪ್ರಕೃತಿಯ ಸಂರಕ್ಷಣೆಯೂ ಆಗಬೇಕು. ವಿಶೇಷ ಆರ್ಥಿಕ ವಲಯ ಆಗಬೇಕು. ಆರ್ಥಿಕ ಅಭಿವೃದ್ಧಿಯ ಜತೆಗೆ, ಧರ್ಮ ರಕ್ಷಣೆಯ ಕಾರ್ಯ ನಿರಂತರವಾಗಿ ಆಗಬೇಕು ಎಂದು ಆಶಯ ವ್ಯಕ್ತಪಡಿಸಿದರು.



ನಮಗೆಲ್ಲರಿಗೂ ಧರ್ಮ, ದೇಶದ ಪರವಾಗಿ ಆತ್ಮಗೌರವ ಇರಬೇಕು. ಆಗ ದೇಶ, ಧರ್ಮದ ವಿಕಾಸ ಸಾಧ್ಯವಾಗುತ್ತದೆ. ಧರ್ಮ ಸಂರಕ್ಷಣೆ ಮಾಡುವವರನ್ನು ಪ್ರೋತ್ಸಾಹ ಮಾಡಬೇಕು ಎಂದರು.

ರಾಘವೇಶ್ವರ ಶ್ರೀ ಆಶೀರ್ವಚನ

ಶ್ರೀ ಸಂಸ್ಥಾನ ಗೋಕರ್ಣ ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮೀಜಿ ಆಶೀರ್ವಚನ ನೀಡಿ, ಶ್ರೀರಾಮ ಸ್ಥಾನ ಅತ್ಯಂತ ಎತ್ತರವಾದುದು. ಈ ಕಾರಣಕ್ಕೆ ರಾಮನನ್ನು ಮರ್ಯಾದಾ ಪುರುಷೋತ್ತಮ ಎನ್ನುತ್ತಾರೆ. ಅಯೋಧ್ಯೆಯಿಂದ ರಾಮ, ಆಂಜನಾದ್ರಿಯಿಂದ ಆಂಜನೇಯ ಜ್ಯೋತಿಯ ಮೂಲಕ ಕ್ಷೇತ್ರಕ್ಕೆ ಬಂದಿದ್ದಾರೆ. ಕೋಟಿ ರಾತಾರಕ ಜಪಯಜ್ಞ ಯಾಗದ ಮೂಲಕ ಸತ್ ಪರಿವರ್ತನೆ ಆಗಲಿದೆ. ಕಲಿತ ಜಪವನ್ನು ಜೋಪಾನ ಮಾಡಿಕೊಂಡು ಅನುಸರಿಸಬೇಕು ಎಂದು ಹೇಳಿದರು.

ಗುರುಪುರ ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಸ್ವಾಮೀಜಿ ಆಶೀರ್ವಚನ ನೀಡಿ, ಹಿಂದೂ ಸಮಾಜದ ಶ್ರೇಯಸ್ಸಿಗಾಗಿ ಹಾಗೂ ಲೋಕ ಕಲ್ಯಾಣಕ್ಕಾಗಿ ಇಂತಹ ಸತ್ಕರ್ಮಗಳು ಆಗಬೇಕು. ಧರ್ಮ ಸುಖದಲ್ಲಿದ್ದರೆ ಎಲ್ಲವೂ ಸುಖಕರವಾಗಿರುತ್ತದೆ ಎನ್ನುವುದು ನಮ್ಮ ನಂಬಿಕೆ. ಈ ಕಾರಣದಿಂದ ಧರ್ಮ ಸಂಸ್ಕಾರ ವೃದ್ಧಿಗಾಗಿ ನಮ್ಮೆಲ್ಲರ ಕೊಡುಗೆ ಇರಬೇಕು ಎಂದು ಹೇಳಿದರು.

ಶ್ರೀ ಧರ್ಮಶ್ರೀ ಪ್ರತಿಷ್ಠಾನದ ಮಹಾಪೋಷಕರಾದ ಜಿ.ಕೆ. ಮಹಾಬಲೇಶ್ವರ ಭಟ್, ಕೆ.ಎಂ. ನಟರಾಜ್, ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ. ಶ್ಯಾಂ ಭಟ್, ಆಳದಂಗಡಿ ಅರಮನೆಯ ಪದ್ಮಪ್ರಸಾದ್ ಅಜಿಲ, ಮಾಜಿ ಶಾಸಕಿ ಶಕುಂತಳಾ ಟಿ. ಶೆಟ್ಟಿ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸ್ವಾಗತ ಸಮಿತಿ ಅಧ್ಯಕ್ಷ ಡಾ. ರವೀಶ್ ಪಡುಮಲೆ, ಆಡಳಿತ ಧರ್ಮದರ್ಶಿನನ್ಯ ಅಚ್ಯುತ ಮೂಡೆತ್ತಾಯ, ಹೊರೆಕಾಣಿಕೆ ಸಮಿತಿ ಸಂಚಾಲಕ ಶಶಿಕುಮಾರ್ ರೈ ಬಾಲ್ಯೊಟ್ಟು, ಬ್ರಹ್ಮಕಲಶೋತ್ಸವ ಸಮಿತಿ ಉಪಾಧ್ಯಕ್ಷರಾದ ಸೀತಾರಾಮ ರೈ ಕೆದಂಬಾಡಿಗುತ್ತು, ಬೂಡಿಯಾರು ರಾಧಾಕೃಷ್ಣ ರೈ, ಸಾಜ ರಾಧಾಕೃಷ್ಣ ಆಳ್ವ, ಶ್ರೀರಾಮ ಪಕ್ಕಳ, ಮುರಳೀಕೃಷ್ಣ ಹಸಂತಡ್ಕ, ರವಿಕಿರಣ ಶೆಟ್ಟಿ ಬೆದ್ರಾಡಿ, ಪ್ರಧಾನ ಕಾರ್ಯದರ್ಶಿಗಳಾದ ಆರ್.ಸಿ. ನಾರಾಯಣ ರೆಂಜ, ನಹುಷ ಪಿ.ವಿ., ಜೀವಂಧರ್ ಜೈನ್, ವಿದ್ಯಾ ಆರ್. ಗೌರಿ ಸೇರಿದಂತೆ ಸಮಿತಿಗಳ ಪದಾಧಿಕಾರಿಗಳು, ಸಾವಿರಾರು ಭಕ್ತರು ಪಾಲ್ಗೊಂಡರು. ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ, ಜೀವರಾಜ್ ಮೊದಲಾದವರು ಭೇಟಿ ನೀಡಿದರು.

> **ಇಂದು ಬ್ರಹ್ಮಕಲಶಾಭಿಷೇಕ**
> ಏ.12ರಂದು ಭಾನುವಾರ ಬೆಳಗ್ಗೆ 5 ಗಂಟೆಗೆ ಗಣಪತಿ ಹೋಮ, ಪ್ರತಿಷ್ಠಾಪಾಣಿ, ಬೆಳಗ್ಗೆ 8.20ರಿಂದ 10.20ರ ವೃಷಭ ಲಗ್ನ ಸುಮುಹೂರ್ತದಲ್ಲಿ ಕೋದಂಡರಾಮ ಮತ್ತು ಪಂಚಮುಖಿ ಆಂಜನೇಯ ದೇವರ ಪ್ರತಿಷ್ಠೆ, ಪರಿವಾರ ದೇವರ ಪ್ರತಿಷ್ಠೆ, ಬ್ರಹ್ಮಕಲಶಾಭಿಷೇಕ, ಪ್ರತಿಷ್ಠಾಬಲಿ, ಮಹಾಪೂಜೆ, ಮಹಾ ಮಂತ್ರಾಕ್ಷತೆ, ಪ್ರಸಾದ ವಿತರಣೆ ನಡೆಯಲಿದೆ. ಸಂಜೆ 7ರಿಂದ ಶ್ರೀ ಕೋದಂಡರಾಮ ದೇವರಿಗೆ ರಂಗಪೂಜೆ, ಪ್ರಸಾದ ವಿತರಣೆ, ಸಂಜೆ 7 ರಿಂದ ಶ್ರೀ ಕೋದಂಡರಾಮ ದೇವರಿಗೆ ರಂಗಪೂಜೆ, ಪ್ರಸಾದ ವಿತರಣೆ, ಶ್ರೀ ದೇವರ ಉತ್ಸವ ಬಲಿ, ದರ್ಶನ ಬಲಿ, ಬಟ್ಟಲು ಕಾಣಿಕೆ, ಪ್ರಸಾದ ವಿತರಣೆ ನಡೆಯಲಿದೆ.

ವಂಡ್ಸೆ ಸರಕಾರಿ ಶಾಲೆಯಲ್ಲಿ ರೈನ್‌ಬೋ ಎಜ್ಯುಕೇಶನ್ ಫೆಸ್ಟ್, ಬಾಲವನ ಉದ್ಘಾಟನೆ

ಶಿಕ್ಷಣದ ಜೊತೆಗೆ ಹೊಸ ತಂತ್ರಜ್ಞಾನವೂ ಅಗತ್ಯ

ಕುಂದಾಪುರ : ಹಣ ಇದ್ದ ಮಾತ್ರಕ್ಕೆ ಎಲ್ಲ ಕೆಲಸ ಮಾಡಲು ಸಾಧ್ಯವಿಲ್ಲ. ನಿರಂತರವಾಗಿ ಪ್ರಯತ್ನ ಮಾಡುವ ಮೂಲಕ ಕೆಲಸದಲ್ಲಿ ಯಶಸ್ಸು ಕಾಣಲು ಸಾಧ್ಯವಾಗುತ್ತದೆ. ಖಾಸಗಿ ಆಂಗ್ಲ ಮಾಧ್ಯಮ ಶಾಲೆಗಳ ಇಂಗ್ಲೀಷ್ ವ್ಯಾಮೋಹದಿಂದ ಸರಕಾರಿ ಕನ್ನಡ ಮಾಧ್ಯಮ ಶಾಲೆಗಳಿಗೆ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ಶಾಲೆಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣದ ಜೊತೆಗೆ ಹೊಸ ತಂತ್ರಜ್ಞಾನವನ್ನು ಪರಿಚಯಿಸುವ ಕೆಲಸ ಆಗಬೇಕು ಎಂದು ಶ್ರೀ ಮೂಕಾಂಬಿಕಾ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಕೃಷ್ಣಮೂರ್ತಿ ಮಂಜರು ಹೇಳಿದರು.

ಬೈಂದೂರು ಶೈಕ್ಷಣಿಕ ವಲಯದ ವಂಡ್ಸೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪರಿಚಯಿಸಲಾಗಿರುವ ಐರಿಸ್ ಎ.ಐ ರೋಬೊ ಟೀಚರ್, ಶೈಕ್ಷಣಿಕ ವಿಷಯಗಳ ಮಾದರಿಗಳ ಪ್ರದರ್ಶನ 'ರೈನ್‌ಬೋ ಎಜ್ಯುಕೇಶನ್ ಫೆಸ್ಟ್' ಹಾಗೂ ಶಾಲೆಯ ವಠಾರದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಬಾಲವನವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.



ರಾಜ್ಯದಲ್ಲಿ ಸರಕಾರಿ ಶಾಲೆಯೊಂದರಲ್ಲಿ ಎ.ಐ ರೋಬೊ ಶಿಕ್ಷಕಿಯನ್ನು ಪರಿಚಯಿಸುವ ಮೂಲಕ ಚರಿತ್ರೆಯ ಪುಟಗಳಲ್ಲಿ ವಂಡ್ಸೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ದಾಖಲಾಗಿದೆ. ಸದಾ ಹೊಸತನ, ಪ್ರಯೋಗಶೀಲತೆ ಹಾಗೂ ಸಾಧನೆಗಳ ಮೂಲಕ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡಿರುವ ವಂಡ್ಸೆ ಸರಕಾರಿ ಶಾಲೆ ಎಲ್ಲ ಮೂಲಭೂತ ಸೌಲಭ್ಯಗಳನ್ನು ಹೊಂದುವ ಮೂಲಕ ನಂ.1 ಶಾಲೆಗೆ ಬೆಳೆದು ನಿಂತಿದೆ ಎಂದು ಅವರು ಶ್ಲಾಘಿಸಿದರು.

ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷೆ ಪೂರ್ಣಿಮಾ ಶೆಟ್ಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಸದಸ್ಯ ರಾಜೇಶ ಕಾರಂತ್, ಬೈಂದೂರು ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ನಾಗೇಶ ನಾಯ್ಕ್, ಕೆಡಿಪಿ ಸದಸ್ಯ ಶರತ್ ಕುಮಾರ್ ಶೆಟ್ಟಿ, ಹಳೆ ವಿದ್ಯಾರ್ಥಿ ಸಂಘದ ಗೌರವಾಧ್ಯಕ್ಷ ವಂಡಬಳ್ಳಿ ಜಯರಾಮ ಶೆಟ್ಟಿ, ಶ್ರೀ ಮೂಕಾಂಬಿಕಾ ಚಾರಿಟೇಬಲ್ ಟ್ರಸ್ಟ್ ಸದಸ್ಯ ಕುಸುಮಾಕರ ಶೆಟ್ಟಿ, ಶಿಕ್ಷಣ ಸಂಯೋಜಕ ವೆಂಕಪ್ಪ ಉಪ್ಪಾರ, ಕರ್ಕುಂಜೆ ಸಿಆರ್‌ಪಿ ರವಿಚಂದ್ರ, ಶಿಕ್ಷಕರ ಸಂಘದ ಪ್ರತಿನಿಧಿ ಪ್ರತಾಪ್ ಕುಮಾರ್ ಶೆಟ್ಟಿ, ಮುಖ್ಯೋಪಾಧ್ಯಾಯ ಶಂಕರ, ದಾನಿ ಆರಿಫಾ ಅಬುಬಕರ್ ಮೊದಲಾದವರು ಉಪಸ್ಥಿತರಿದ್ದರು. ಇದೇ ಸಂದರ್ಭ ದಾನಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಶಾಲೆಯ ಪ್ರಭಾರ ಮುಖ್ಯೋಪಾಧ್ಯಾಯ ಸೋಮರಾಯ ಜನ್ನು ಸ್ವಾಗತಿಸಿ, ಶ್ರೀ ಮೂಕಾಂಬಿಕಾ ಚಾರಿಟೇಬಲ್ ಟ್ರಸ್ಟ್‌ನ ಕಾರ್ಯದರ್ಶಿ ಉದಯ ಕುಮಾರ್ ಶೆಟ್ಟಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಶಿಕ್ಷಕ ಸುಧಾಕರ ದಾನಿಗಳನ್ನು ಪರಿಚಯಿಸಿದರು. ದೈಹಿಕ ಶಿಕ್ಷಣ ಶಿಕ್ಷಕ ರಾಜು ಎನ್. ಮತ್ತು ಶಿಕ್ಷಕಿ ಉಷಾ ಐ.ಎಸ್. ಕಾರ್ಯಕ್ರಮ ನಿರ್ವಹಿಸಿದರು.

ಏ.14: ಆಳ್ವಾಸ್ ಕಾಲೇಜಿನಲ್ಲಿ 'ಏರೋ ಡೈನಾಮಿಕ್ಸ್‌ಡ್ರೋನ್ ಟ್ರೈನಿಂಗ್ ಅಕಾಡೆಮಿ' ಆರಂಭ

ಮಂಗಳೂರು: ಏರೋಡೈನಾಮಿಕ್ಸ್ ಅಕಾಡೆಮಿ ವತಿಯಿಂದ ಡಿಜಿಸಿಎ ಅಧಿಕೃತ ಡ್ರೋನ್ ತರಬೇತಿ ಸಂಸ್ಥೆ 'ಏರೋಡೈನಾಮಿಕ್ಸ್ ಡ್ರೋನ್ ಟ್ರೈನಿಂಗ್ ಅಕಾಡೆಮಿ' ಮೂಡುಬಿದಿರೆಯ ಆಳ್ವಾಸ್ ಕಾಲೇಜಿನಲ್ಲಿ ಏ.14ರಂದು ಆರಂಭಗೊಳ್ಳಲಿದೆ ಎಂದು ಗ್ರೂಪ್ ಕ್ಯಾಪ್ಟನ್ ಸುಧೀರ್ ಅಮೀನ್ ತಿಳಿಸಿದರು. ದಕ್ಷಿಣ ಕನ್ನಡದ ಮೊದಲ ಡ್ರೋನ್ ತರಬೇತಿ ಅಕಾಡೆಮಿ ಇದಾಗಿದೆ. ಈ ಅಕಾಡೆಮಿ ಮೂಲಕ ಆಳ್ವಾಸ್ ಕಾಲೇಜಿನಲ್ಲಿ ಡ್ರೋನ್ ಹಾರಾಟ ಕುರಿತು ಒಂದು ವಾರದ ತರಬೇತಿ ನೀಡಲಾಗುವುದು. ಇದು ಡಿಜಿಸಿಎ ಅನುಮೋದಿತ ಡ್ರೋನ್ ಪೈಲಟ್ ತರಬೇತಿ ಆಗಿದೆ. ಡಿಜಿಸಿಎ ಗೈಡ್‌ಲೈನ್ ಆಧಾರಿತವಾಗಿ ಈ ತರಬೇತಿ ನೀಡಲಾಗುವುದು. ಆಧುನಿಕ ಡ್ರೋನ್‌ಗಳ ಜತೆಗೆ ಪ್ರಾಯೋಗಿಕ ಸೆಷನ್‌ಗಳು ಇರಲಿವೆ. ತರಬೇತಿ ಬಳಿಕ ಪ್ರಮಾಣಪತ್ರ ನೀಡಲಾಗುವುದು ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

ವೈಮಾನಿಕ ಛಾಯಾಗ್ರಹಣ ಮತ್ತು ವಿಡಿಯೋಗ್ರಫಿ, ಸಮೀಕ್ಷೆ ಮತ್ತು ನಕ್ಷೆ ರಚನೆ, ಕೃಷಿ ಮತ್ತು ಮೇಲ್ವಿಚಾರಣೆ, ಮೂಲಸೌಕರ್ಯ ಮತ್ತು ಸ್ಮಾರ್ಟ್ ಟೆಕ್ ಯೋಜನೆಗಳು ಮುಂತಾದ ಕಡೆ ಈ ತರಬೇತಿ ಪಡೆದವರಿಗೆ ವೃತ್ತಿ ಅವಕಾಶಗಳಿವೆ. ಉದ್ಘಾಟನಾ ಸಮಾರಂಭದಲ್ಲಿ ಸಂಸದರು, ಶಾಸಕರು, ಉದ್ಯಮ ವೃತ್ತಿಪರರು ಭಾಗವಹಿಸಲಿದ್ದಾರೆ ಎಂದರು. ಪ್ರಮುಖರಾದ ಧ್ಯಾನ್ ಕುವೆಲ್ಲೊ, ಶಾಲಿ, ಅಲ್ವಿನ್ ಕ್ರಾಸ್ತಾ, ವಿಶಾಲ್ ಡಿಸೋಜ, ರವಿ ಶೆಟ್ಟಿ ಉಪಸ್ಥಿತರಿದ್ದರು.

ಚೀನಾದ ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್ ಅಂಗಳದಲ್ಲಿ ಇಂದು ಫೈನಲ್ ಪಂದ್ಯ ಸೆಣಸಾಡಲಿದ್ದಾರೆ ನಮ್ಮೂರಿನ ಪ್ರತಿಭೆ

ಸಾಣೂರಿನ ಆಯುಷ್ ಶೆಟ್ಟಿಗೆ ಕರಾವಳಿಗರಿಂದ 'ಆಲ್ ದಿ ಬೆಸ್ಟ್'!

ಗಣೇಶ್ ನಾಯಕ್, ಸಾಣೂರು

ಕಾರ್ಕಳ: ಸಣ್ಣ ಹಳ್ಳಿಯಿಂದ ಬಂದು, ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶದ ಕೀರ್ತಿ ಹೆಚ್ಚಿಸಿ, ಸದ್ಯ ಭಾರತದ ಅತ್ಯಂತ ಭರವಸೆಯ ಬ್ಯಾಡ್ಮಿಂಟನ್ ಆಟಗಾರರಲ್ಲಿ ಒಬ್ಬರಾಗಿದ್ದಾರೆ.

ಹೌದು, ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಸಾಣೂರು ಗ್ರಾಮದ ಆಯುಷ್ ಶೆಟ್ಟಿ ಅವರು ಇದೀಗ ಬ್ಯಾಡ್ಮಿಂಟನ್‌ನಲ್ಲಿ ಅದ್ವಿತೀಯ ಸಾಧನೆ ಮಾಡಿ ಅವರ ಸಾಧನೆ ಇಂದು ರಾಷ್ಟ್ರವ್ಯಾಪಿ ಸಂಭ್ರಮಕ್ಕೆ ಕಾರಣವಾಗಿದೆ.

ಕಾರ್ಕಳ ಪ್ರತಿಭೆ

ಆಯುಷ್ ಶೆಟ್ಟಿಯವರು 2005ರ ಮೇ 3ರಂದು ಉಡುಪಿ ಜಿಲ್ಲೆಯ ಕಾರ್ಕಳದ ಸಾಣೂರಿನಲ್ಲಿ ಜನಿಸಿದರು. ತಂದೆ ರಾಮ್ ಪ್ರಕಾಶ್ ಶೆಟ್ಟಿ, ತಾಯಿ ಶಾಲ್ಮಲಿ ಶೆಟ್ಟಿ. ಆಯುಷ್ ಶೆಟ್ಟಿ 8 ವರ್ಷದ ಬಾಲಕನಿದ್ದಾಗ ತಂದೆಯಿಂದ ಬ್ಯಾಡ್ಮಿಂಟನ್ ಆಡುವುದನ್ನು ಪ್ರೇರಣೆ ಪಡೆದರು. ತಮ್ಮ ಮನೆಯ ಹಿತ್ತಲಿನಲ್ಲಿ ಬ್ಯಾಡ್ಮಿಂಟನ್ ಆಡಲು ಪ್ರಾರಂಭ ಮಾಡಿದರು. ತಂದೆ ರಾಮ್ ಪ್ರಕಾಶ್ ಶೆಟ್ಟಿ ಅವರು ಕೂಡ ಉತ್ತಮ ಬ್ಯಾಡ್ಮಿಂಟನ್ ಆಟಗಾರ ಆಗಿದ್ದಾರೆ. ಆಯುಷ್ ಶೆಟ್ಟಿಯವರು 10ನೇ ತರಗತಿವರೆಗೂ ಸಾಣೂರಿನ ಪ್ರಕೃತಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ.

ಆಯುಷ್ ಆರಂಭದಲ್ಲಿ ಕಾರ್ಕಳದ ಜಾನ್ ಸ್ಪೋರ್ಟ್ ಅಕಾಡಮಿ ಹಾಗೂ ಮಂಗಳೂರಿನಲ್ಲಿ ತರಬೇತುದಾರರಾದ ಸುಭಾಷ್ ಮತ್ತು ಚೇತನ್ ಅವರ ಅಡಿಯಲ್ಲಿ ತರಬೇತಿ ಪಡೆದರು. ಉತ್ತಮ ತರಬೇತಿಗಾಗಿ ಆಯುಷ್ 12 ನೇ ವಯಸ್ಸಿನಲ್ಲಿ ತಮ್ಮ ಕುಟುಂಬದೊಂದಿಗೆ ಬೆಂಗಳೂರಿಗೆ ಸ್ಥಳಾಂತರಗೊಂಡರು.





> **ಒಲಿಂಪಿಕ್ಸ್ ಪದಕ ಸಿಗಲಿ**
> ಆಯುಷ್ ದೇಶಕ್ಕೆ ಕೀರ್ತಿ ತಂದಿದ್ದಾನೆ. ಆಯುಷ್‌ಗೆ ಕರೆ ಮಾಡಿ ಶುಭ ಹಾರೈಸಿದ್ದೇವೆ. ಪುತ್ರ ಆಯುಷ್‌ನ ಈ ಸಾಧನೆ ಕಂಡು ಸಾಕಷ್ಟು ಖುಷಿ, ಹೆಮ್ಮೆ ಆಗುತ್ತಿದೆ. ಬಾಲ್ಯದಿಂದಲೂ ಆತ ಬ್ಯಾಡ್ಮಿಂಟನ್ ಬಗ್ಗೆ ಅತಿಯಾದ ಆಸಕ್ತಿ ಹೊಂದಿದ್ದನು. ಪ್ರತಿಭೆ, ಆಸಕ್ತಿ ಗುರುತಿಸಿ ಅದಕ್ಕೆ ಅನುಗುಣವಾಗಿ ಸಹಕಾರ ನೀಡಿದೆವು. ಹಲವು ಪ್ರಶಸ್ತಿ ಗೆದ್ದು ಭಾರತಕ್ಕೆ ಕೀರ್ತಿ ತಂದಿದ್ದಾನೆ. ಇಂಥ ಅನೇಕ ಪ್ರಶಸ್ತಿಗಳನ್ನು ಗೆದ್ದು ತರಲಿ. ಮುಂದಿನ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವುದು ಆತನ ಗುರಿಯಾಗಿದೆ.
> ■ ರಾಮ್ ಪ್ರಕಾಶ್ ಶೆಟ್ಟಿ, ಸಾಣೂರು ಆಯುಷ್‌ನ ತಂದೆ.

ಇಲ್ಲಿ ಇವರು ಪ್ರಕಾಶ್ ಪಡುಕೋಣೆ ಬ್ಯಾಡ್ಮಿಂಟನ್ ಸೇರಿಕೊಂಡರು. ಈ ಅಕಾಡೆಮಿಯಲ್ಲಿ ಸಾಗರ್ ಚೋಪ್ರಾ ಅವರಿಂದ ತರಬೇತಿ ಪಡೆಯುತ್ತಾ ಇದ್ದಾರೆ. ನಂತರ ಆಯುಷ್ ಶೆಟ್ಟಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಡಲು ಆರಂಭಿಸಿದರು.

ಇವರು ಬೆಂಗಳೂರಿನ ರೇವಾ ವಿಶ್ವವಿದ್ಯಾಲಯದಲ್ಲಿ ಕ್ರೀಡಾ ವಿಜ್ಞಾನದಲ್ಲಿ ಬಿಎಸ್ಸಿ ವ್ಯಾಸಂಗ ಮಾಡುತ್ತಿದ್ದಾರೆ

ಜಾಗತಿಕ ಸಾಧನೆ

6 ಅಡಿ 4 ಇಂಚು ಎತ್ತರ ಹೊಂದಿ ಭರ್ಜರಿ ಸ್ಮ್ಯಾಶ್ ಹೊಡೆಯುವ ಆಯುಷ್ ಶೆಟ್ಟಿ 2023ರ ಬಿಡಬ್ಲ್ಯುಎಫ್ ವಿಶ್ವ ಜೂನಿಯರ್ ಚಾಂಪಿಯನ್‌ಶಿಪ್‌ನಲ್ಲಿ ಕಂಚಿನ ಪದಕ ಗೆದ್ದು ಸುದ್ದಿಯಾದರು, ಇದು ಲಕ್ಷ್ಯ ಸೇನ್ ನಂತರ ಭಾರತಕ್ಕೆ ಬಂದ ಮೊದಲ ಜೂನಿಯರ್ ವಿಶ್ವ ಪದಕವಾಗಿತ್ತು.

ಯುಎಸ್ ಓಪನ್ 2025 ಜಯ

2025ರ ಯುಎಸ್ ಓಪನ್ ಸೂಪರ್ 500 ಟೂರ್ನಿಯಲ್ಲಿ ಬ್ರಿಯಾನ್ ಯಾಂಗ್ ಅವರನ್ನು ಸೋಲಿಸಿ, ಚೊಚ್ಚಲ ಬಿಡಬ್ಲ್ಯುಎಫ್ ವರ್ಲ್ಡ್ ಟೂರ್ ಪ್ರಶಸ್ತಿಯನ್ನು ಗೆದ್ದರು.

ಹೀಗೆ ಹಲವು ಅಂತಾರಾಷ್ಟ್ರೀಯ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ.

ಇಂದಿನ ತನಕ ಅವರು ಗಳಿಸಿದ ಪ್ರಶಸ್ತಿಯು ಅವರ ಕಠಿಣ ಪರಿಶ್ರಮ ಮತ್ತು ತರಬೇತಿಯ ಫಲಿತಾಂಶವಾಗಿದೆ. ಅವರು ಬಾಲ್ಯದಿಂದಲೂ ಬ್ಯಾಡ್ಮಿಂಟನ್‌ನಲ್ಲಿ ತೋರಿಸಿದ ಆಸಕ್ತಿ ಮತ್ತು ಪೋಷಕರ ಬೆಂಬಲವು ಅವರ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿದೆ.

> **ಇಂದು ಫೈನಲ್**
> ನಿಂಗ್ಬೋದಲ್ಲಿ ನಡೆದ 2026 ರ ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್ ಶಿಪ್‌ನಲ್ಲಿ, ಭಾರತದ ಆಯುಷ್ ಶೆಟ್ಟಿ ಏ. 11ರಂದು ವಿಶ್ವದ ನಂ. 1 ಕುನ್ಲಾವುಟ್ ವಿಟಿಡ್ಸನ್ರ್ ಅವರನ್ನು ಸೋಲಿಸುವ ಮೂಲಕ ಪುರುಷರ ಸಿಂಗಲ್ಸ್ ಫೈನಲ್ ತಲುಪಿದ್ದಾರೆ. ಪುರುಷರ ಸಿಂಗಲ್ಸ್ ನಲ್ಲಿ ಆಯುಷ್ ಶೆಟ್ಟಿ ಅವರು ಭಾರತೀಯ (ವಿಶ್ವ ನಂ. 25) ಅಗ್ರ ಶ್ರೇಯಾಂಕಿತ ಮತ್ತು ಹಾಲಿ ಚಾಂಪಿಯನ್ ಕುನ್ಲಾವುಟ್ ವಿಟಿಡ್ಸನ್ರ್ (10-21, 21-19, 21-17) ಅವರನ್ನು ದಿಗ್ಭ್ರಮೆಗೊಳಿಸಿ ಫೈನಲ್ ತಲುಪಿದ್ದಾರೆ.
> ದಿನೇಶ್ ನಂತರ ಏಷ್ಯನ್ ಸಿಂಗಲ್ಸ್ ಫೈನಲ್ ತಲುಪಿದ ಎರಡನೇ ಭಾರತೀಯ ಆಯುಷ್ ಶೆಟ್ಟಿ. 1965 ರಲ್ಲಿ ಖನ್ನಾ ಚಿನ್ನ ಗೆದ್ದಿದ್ದರು.
> ಏ.12ರಂದು ನಡೆಯಲಿರುವ ಚಿನ್ನದ ಪದಕ ಪಂದ್ಯ ಭಾರತೀಯ ಕಾಲಮಾನ ಬೆಳಿಗ್ಗೆ 9 ಘಂಟೆಗೆ ನಡೆಯಲಿದೆ.

> **ಆಯುಷ್ ಶ್ರಮಜೀವಿ**
> ಪ್ರತಿಭಾನ್ವಿತ ಬ್ಯಾಡ್ಮಿಂಟನ್ ಆಟಗಾರ ಆಯುಷ್ ಶೆಟ್ಟಿ ಶ್ರಮಜೀವಿ, ತಂದೆಯೊಂದಿಗೆ ಕ್ರೀಡೆಯಲ್ಲಿ ಬೆಳೆದವರು. ಅಂದು ಹಿತ್ತಲಲ್ಲಿ ಆಡುವುದನ್ನು ಆರಂಭಿಸಿ, ಇಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಿಂಚುತ್ತಿದ್ದಾರೆ. ಇದೀಗ ಬ್ಯಾಡ್ಮಿಂಟನ್‌ನಲ್ಲಿ ಅದ್ವಿತೀಯ ಸಾಧನೆ ಮಾಡಿ ಇಂದು ರಾಷ್ಟ್ರವ್ಯಾಪಿ ಸಂಭ್ರಮಕ್ಕೆ ಕಾರಣವಾಗಿದೆ.
> ■ ಜಾನ್ ಡಿ ಸಿಲ್ವಾ ಸಾಣೂರು, ಅಧ್ಯಕ್ಷರು, ಜಾನ್ಸ್ ಸ್ಪೋರ್ಟ್ಸ್ ಅಕಾಡೆಮಿ, ಕಾರ್ಕಳ

ಮಹಿಳಾ ಮೀಸಲಾತಿ ಬೆಂಬಲಿಸಿ

ಪುಟ ೧➡ ಮಹಿಳಾ ಮೀಸಲಾತಿ ಎಂಬುದು ಬಹಳ ವರ್ಷಗಳ ಬೇಡಿಕೆಯಾಗಿತ್ತು. ಅದು ಈಡೇರುವ ವಿಚಾರದಲ್ಲಿ ಸಂಶಯವಿತ್ತು. ಮೋದಿ ಅವರು ದೇಶದ ಪ್ರಧಾನಿಯಾದ ಮೇಲೆ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಸೇರಿ ಎಲ್ಲ ಕ್ಷೇತ್ರಗಳಲ್ಲಿ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿದ್ದಾರೆ ಎಂದರು. ಸುಮಾರು 15 ವರ್ಷಗಳ ಹಿಂದೆ ಇದು ಸಂಸತ್ತಿನಲ್ಲಿ ಚರ್ಚೆಗೆ ಬಂದಾಗ ಕೆಲವು ರಾಜಕೀಯ ಪಕ್ಷದವರು ಮಸೂದೆಯ ಹಾಳೆಯನ್ನು ಹರಿದು ಪ್ರಬಲ ವಿರೋಧ ವ್ಯಕ್ತಪಡಿಸಿದ್ದರು. ಕಾಂಗ್ರೆಸ್ ಹಳದಿ ಗ್ಲಾಸ್ ಹಾಕಿಕೊಂಡಿದೆ. ಆದರಿಂದ ಯಾವುದನ್ನು ನೋಡಿದರೂ ಹಳದಿ, ಚುನಾವಣೆಯೇ ಅವರಿಗೆ ಗೋಚರಿಸುತ್ತಿದೆ. ಮಹಿಳಾ ಮೀಸಲಾತಿ ಮಸೂದೆಯು ರಾಜ್ಯಗಳ ಚುನಾವಣೆ ಮೇಲೆ ಪ್ರಭಾವ ಬೀರುವುದೆಂದು ನನಗೆ ಅನಿಸುತ್ತಿಲ್ಲ ಎಂದರು.


ಇಂದಿನಿಂದ ಸಹಿ ಸಂಗ್ರಹ: ಮಹಿಳಾ ಮೋರ್ಚಾ ರಾಜ್ಯ ಅಧ್ಯಕ್ಷೆ ಸಿ.ಮಂಜುಳಾ ಅವರು ಮಾತನಾಡಿ, ನಾರಿ ಶಕ್ತಿ ವಂದನ್ ಎಂಬ ಕಾಯ್ದೆ ಬಗ್ಗೆ ಎಲ್ಲ ಜಿಲ್ಲೆಗಳಲ್ಲಿ ಮಹಿಳಾ ಮೋರ್ಚಾದಿಂದ ಮಹಿಳಾ ಸಮಾವೇಶ ಆಯೋಜಿಸಲಾಗುವುದು. ಭಾನುವಾರ(ಏ.12) ಕೆ.ಆರ್. ಪುರದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರ ನೇತೃತ್ವದಲ್ಲಿ ಸಹಿ ಸಂಗ್ರಹ ಆರಂಭವಾಗುತ್ತದೆ. ಇದು ರಾಜ್ಯದಾದ್ಯಂತ ನಡೆಯಲಿದೆ. ಮಸೂದೆ ಬೆಂಬಲಿಸಲು ಮಿಸ್ಡ್ ಕಾಲ್ ಅಭಿಯಾನ ಮಾಡುತ್ತಿದ್ದೇವೆ ಎಂದು ತಿಳಿಸಿದರು.



ಇಂದಿರಾ ಗಾಂಧಿ, ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ಹೊರತುಪಡಿಸಿ ಸಾಮಾನ್ಯ ಮಹಿಳೆಯರು ಸಂಸತ್ತಿಗೆ ಬರುವುದು ಕಾಂಗ್ರೆಸ್‌ನವರಿಗೆ ಬೇಕಾಗಿಲ್ಲ. ಈ ಮಾನಸಿಕತೆಯನ್ನು ಕಾಂಗ್ರೆಸ್ಸಿಗರು ಬದಲಿಸಿಕೊಳ್ಳಲಿ.

■ **ಶೋಭಾ ಕರಂದ್ಲಾಜೆ,** ಕೇಂದ್ರ ಸಚಿವೆ

ರಾಮ ಬಾಣ



ಉದ್ಯಮಿಗೆ ₹15 ಕೋಟಿ ವಂಚನೆ

◆ **ಬೆಂಗಳೂರು:** ಇತ್ತೀಚೆಗೆ ಡಿಜಿಟಲ್ ಅರೆಸ್ಟ್ ಎಂಬ ಹೆಸರಿನಲ್ಲಿ ನಡೆಯುತ್ತಿರುವ ಸೈಬರ್ ವಂಚನೆ ಪ್ರಕರಣಗಳು ಹೆಚ್ಚುತ್ತಿದ್ದು, ಸಿಬಿಐ ಅಧಿಕಾರಿಗಳ ಸೋಗಿನಲ್ಲಿ ಉದ್ಯಮಿಯೊಬ್ಬರನ್ನು ಡಿಜಿಟಲ್ ಅರೆಸ್ಟ್ ಮಾಡುವ ಮೂಲಕ ಬರೋಬ್ಬರಿ 15.45 ಕೋಟಿ ರೂ.ಗಳನ್ನು ವಂಚಿಸಿದ್ದ ಇಬ್ಬರು ಸೈಬರ್ ವಂಚಕರನ್ನು ಸಿಇಎನ್ ಪೊಲೀಸರು ಬಂಧಿಸಿದ್ದಾರೆ.

ಸೈಬರ್ ಕಮಾಂಡ್ ವಿಭಾಗದ ಡಿಜಿಪಿ ಡಾ.ಪ್ರಣವ್ ಮೋಹಾಂತಿ ಮಾಹಿತಿ ನೀಡಿದ್ದು, ಹೈದರಾಬಾದ್ ಮೂಲದ ವೆಂಕಟೋಶ್ ನಾಯಿಕ, ಮತ್ತು ದೇವಾವತ್ ಶ್ರೀಪಾದ್ ನಾಯಿಕ ಬಂಧಿತ ಆರೋಪಿಗಳು. ಪ್ರಕರಣದ ರುವಾರಿ ತಲೆಮರೆಸಿಕೊಂಡಿದ್ದು, ಶೋಧ ನಡೆಸಲಾಗುತ್ತಿದೆ. ಬೆಳಗಾವಿ ಮೂಲದ ಉದ್ಯಮಿ ಅಜಿತ್ ಗೋಪಾಲಕೃಷ್ಣ ಅವರಿಗೆ ಕಳೆದ ಫೆ.7 ರಂದು ಅಪರಿಚಿತ ಕರೆ ಬಂದಿತ್ತು. ಕರೆ ಮಾಡಿದ ವ್ಯಕ್ತಿ ತನ್ನನ್ನು ಸಿಬಿಐ ನಿರ್ದೇಶಕ ಕೆ. ಸುಬ್ರಹ್ಮಣ್ಯಂ ಎಂದು ಪರಿಚಯಿಸಿಕೊಂಡಿದ್ದ. ನಿಮ್ಮ ಹೆಸರಿನಲ್ಲಿರುವ ಸಿಮ್ ಕಾರ್ಡ್‌ಗಳು ಮನಿ ಲಾಂಡರಿಂಗ್ ಪ್ರಕರಣದಲ್ಲಿ ಸಿಲುಕಿಕೊಂಡಿರುವ ನರೇಶ್ ಗೋಯಲ್ ಅವರಿಗೆ ಸಂಬಂಧಿಸಿವೆ. ನಿಮ್ಮ ಖಾತೆಯಿಂದ 25 ಲಕ್ಷ ರೂ. ವರ್ಗಾವಣೆ ಆಗಿದ್ದು, ನಿಮಗೆ 5 ಲಕ್ಷ ರೂ. ಕಮಿಷನ್ ಸಂದಾಯವಾಗಿದೆ ಎಂದು ಹೆದರಿಸಿದ್ದ ಎಂದು ತಿಳಿಸಿದರು.

2 ಕೋಟಿ ರೂ. ಹಣ ಫ್ರೀಜ್: ಬಂಧನದ ಭೀತಿ ಹುಟ್ಟಿಸಿದ ವಂಚಕರು, ಉದ್ಯಮಿಯನ್ನು ವಿಡಿಯೋ ಕಾಲ್ ಮೂಲಕ ಸುಮಾರು 1 ತಿಂಗಳು ನಿರಂತರವಾಗಿ ಕಣ್ಗಾವಲಿನಲ್ಲಿಟ್ಟಿದ್ದರು. ತನಿಖೆಗೆ ಸಹಕರಿಸದಿದ್ದರೆ ಜೈಲಿಗೆ ಹಾಕುವುದಾಗಿ ಬೆದರಿಸಿ, ಫೆ.9ರಂದು ಅಜಿತ್ ಗೋಪಾಲಕೃಷ್ಣ ಅವರಿಂದ ವಿವಿಧ ಬ್ಯಾಂಕ್ ಖಾತೆಗಳಿಗೆ 15.45 ಕೋಟಿ ರೂ.ಗಳನ್ನು ಆರ್‌ಟಿಜಿಎಸ್ ಮೂಲಕ ವರ್ಗಾಯಿಸಿಕೊಂಡಿದ್ದರು. ವಂಚನೆಗೊಳಗಾದ ಉದ್ಯಮಿ ಬೆಳಗಾವಿ ಸೈಬರ್ ಕ್ರೈಂ ಪೊಲೀಸರಿಗೆ ದೂರು ನೀಡಿದ್ದರು. ಸೈಬರ್ ಕಮಾಂಡ್ ಡಿಜಿಪಿ ಪ್ರಣವ್ ಮೋಹಂತಿ ಅವರ ಮಾರ್ಗದರ್ಶನದಲ್ಲಿ ತನಿಖೆ ನಡೆಸಿದ ಸಿಸಿಬಿಯ ಸೈಬರ್ ವಿಭಾಗದ ತಂಡ, ಆರೋಪಿಗಳು ಬಳಸಿದ್ದ 10ಕ್ಕೂ ಹೆಚ್ಚು ಬ್ಯಾಂಕ್ ಖಾತೆಗಳನ್ನು ಪತ್ತೆಹಚ್ಚಿದೆ. ಹೈದರಾಬಾದ್‌ನ ಗಚ್ಚಿಬೌಲಿ ಹಾಸ್ಟೆಲ್‌ನಲ್ಲಿ ಅಡಗಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಸದ್ಯ 2 ಕೋಟಿ ರೂ. ಹಣವನ್ನು ಫ್ರೀಜ್ ಮಾಡಲಾಗಿದೆ. ಈ ಪ್ರಕರಣದಲ್ಲಿ ಮುಖ್ಯ ಆರೋಪಿ ತಲೆಮರೆಸಿಕೊಂಡಿದ್ದು, ಆತನಿಗಾಗಿ ಬಲೆ ಬೀಸಲಾಗಿದೆ ಎಂದರು.

ಕಿಡಿ ನುಡಿ

◆ ವಾಸುದೇವರಾವ್ ಕಕ್ಕೆನೇಜಿ

◈ ನಾನು ವಿದ್ವಾಂಸನಲ್ಲ, ಯಕ್ಷಗಾನ ಕ್ಷೇತ್ರದಲ್ಲಿ ದುಡಿಯುವ ಒಬ್ಬ ಕೆಲಸಗಾರ ಅಷ್ಟೆ
- ಡಾ. ಎಂ. ಪ್ರಭಾಕರ ಜೋಷಿ

- ವಿದ್ಯಾ ದದಾತಿ ವಿನಯಂ, ತುಂಬಿದ ಕೊಡ ತುಳುಕುವುದಿಲ್ಲ, ಫಲಭರಿತ ವೃಕ್ಷವು ಬಾಗುತ್ತದೆ ಎಂಬ ನುಡಿಗಳ ನೆನೆಪಾಗುತ್ತೆ, ಅಲ್ವಾ?

ದಿನ ಭವಿಷ್ಯ

ಮೇಷ
ನಿರ್ಧಾರ ಸೂಕ್ತ ಫಲ ನೀಡಲಿದೆ. ಹಿರಿಯರ ಜತೆ ವಾಗ್ವಾದ ತಪ್ಪಿಸಿ. ದಿನದ ಅಂತ್ಯಕ್ಕೆ ವಿಶ್ರಾಂತಿಯ ಅಗತ್ಯ ಬೀಳಬಹುದು. ಮಕ್ಕಳ ಸಾಧನೆ ತೃಪ್ತಿಕರ.

ವೃಷಭ
ನಿಮ್ಮ ಸುತ್ತಲಿನ ಜನರ ಜತೆ ಗೊಂದಲಕ್ಕೆ ಆಸ್ಪದವಾಗದಂತೆ ವರ್ತಿಸಿರಿ. ಆರ್ಥಿಕ ಗುರಿ ಸಾಧನೆ. ಇನ್ನಿತರ ಕಾರ್ಯದಲ್ಲಿ ಸಫಲತೆ.

ಮಿಥುನ
ದಂಪತಿ ಮಧ್ಯೆ ತಪ್ಪಭಿಪ್ರಾಯ ಸಂಭವ. ಉದ್ಯೋಗದಲ್ಲಿ ಬಡ್ತಿ ಸಿಗಬಹುದು. ಉದ್ಯಮದಲ್ಲಿ ಹೂಡಿದ ಹಣ ಲಾಭ ತರಲಿದೆ.

ಕಟಕ
ಧಾರ್ಮಿಕ ಕಾರ್ಯದಲ್ಲಿ ಹೆಚ್ಚು ತೊಡಗುವಿರಿ. ಸಮಸ್ಯೆಯಿಂದ ಬೆಂದ ಮನಸ್ಸಿಗೆ ಸಮಾಧಾನ. ಆತ್ಮೀಯರ ಜತೆಗಿನ ಸಂಬಂಧ ಸುಧಾರಣೆ.

ಸಿಂಹ
ಹದಗೆಟ್ಟಿದ್ದ ಸಂಬಂಧ ಸುಧಾರಿಸಲಿದೆ. ನೀವೂ ಹೊಂದಿಕೊಂಡು ನಡೆಯಿರಿ. ತಾಳ್ಮೆ ಕಳಕೊಂಡರೆ ಆರೋಗ್ಯ ಹದಗೆಡಬಹುದು.

ಕನ್ಯಾ
ಮನೆಯ ವ್ಯವಹಾರ ಹೆಚ್ಚು ಸಮಯ ಕೋರುವುದು. ಇತರ ವಿಷಯಗಳಿಗೆ ಸಮಯ ಸಾಲದು. ವೃತ್ತಿ ಒತ್ತಡ ಇಂದು ಕಡಿಮೆ.

ತುಲಾ
ನಿಮ್ಮ ಸಜ್ಜನಿಕೆ ಎಲ್ಲರ ಮೆಚ್ಚುಗೆಗೆ ಪಾತ್ರ. ಸಮಾನ ಮನಸ್ಕ ವ್ಯಕ್ತಿಗಳ ಜತೆ ಸಂವಾದದಿಂದ ನೆಮ್ಮದಿ. ಸಾಮಾಜಿಕ ಕಾರ್ಯದ ಹೊಣೆ ಬೀಳಲಿದೆ.

ವೃಶ್ಚಿಕ
ಅನಿರೀಕ್ಷಿತ ಧನಲಾಭ. ಸಣ್ಣಪುಟ್ಟ ಅವಘಡ ಆಗದಂತೆ ಎಚ್ಚರ ವಹಿಸಿ. ಕೆಲಸವನ್ನು ಬಾಕಿ ಇಡಬೇಡಿ. ಬಳಿಕ ಹೆಚ್ಚು ಒತ್ತಡ ಅನುಭವಿಸುವಿರಿ.

ಧನು
ಸೌಹಾರ್ದಕರ ಮನೆಯ ವಾತಾವರಣ. ಎಲ್ಲರ ಜತೆ ಕೂಡಿ ಕಳೆಯುವ ಅವಕಾಶ. ದುಬಾರಿ ವಸ್ತು ಖರೀದಿ ಅಸಂತೃಪ್ತಿ ತರಬಹುದು.

ಮಕರ
ಇತರರ ಕೆಲಸದ ಬಗ್ಗೆ ಅತಿಯಾದ ಟೀಕೆ ಮಾಡಬೇಡಿ. ನಿಮ್ಮ ಕೆಲಸದ ಫಲಿತಾಂಶದ ಬಗ್ಗೆ ಅಂಜಿಕೆಯೂ ಬೇಡ. ಸಮಾಧಾನದಿಂದಿರಿ.

ಕುಂಭ
ಹೊಂದಾಣಿಕೆ ಇಲ್ಲದ ನಿಮ್ಮ ಮನಸ್ಥಿತಿಯಿಂದ ಪ್ರತಿಕೂಲ ಪರಿಸ್ಥಿತಿ ಸೃಷ್ಟಿಯಾದೀತು. ಇತರರ ಮಾತು ಕೇಳುವ ವ್ಯವಧಾನ ಪ್ರದರ್ಶಿಸಿ.

ಮೀನ
ಮನಸ್ಸಿನ ಒತ್ತಡ ಇಂದು ನಿವಾರಣೆ. ಆತಂಕಗೊಂಡಿದ್ದ ವಿಚಾರ ಸಮಾಧಾನಕರ ಇತ್ಯರ್ಥ. ಹೆಚ್ಚುತ್ತಿರುವ ಖರ್ಚು ನಿಯಂತ್ರಣ ಅವಶ್ಯ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 7,4,0,6

ನಿರ್ಣಾಯಕ ಸಂಧಾನ

ಪುಟ ೧➡ **ಬಿಗಿ ಭದ್ರತಾ ವ್ಯವಸ್ಥೆ:** ಮಾತುಕತೆ ಸೆರೆನಾ ಹೋಟೆಲ್‌ನಲ್ಲಿ ನಡೆಯುತ್ತಿದ್ದು, ಇಸ್ಲಾಮಾಬಾದ್‌ಗೆ 'ರೆಡ್ ಅಲರ್ಟ್' ಘೋಷಿಸಲಾಗಿದೆ. 10,000ಕ್ಕೂ ಹೆಚ್ಚು ಪೊಲೀಸ್ ಮತ್ತು ಭದ್ರತಾ ಸಿಬ್ಬಂದಿಯನ್ನು ಬಹು-ಹಂತದ ಭದ್ರತೆಗಾಗಿ ನಿಯೋಜಿಸಲಾಗಿದೆ. ಪ್ರಮುಖ ಕಟ್ಟಡಗಳಿರುವ 'ರೆಡ್ ಝೋನ್'ನ್ನು ಸೇನೆ ಮತ್ತು ರೇಂಜರ್ಸ್ ರಕ್ಷಣೆಯಲ್ಲಿ ಇರಿಸಲಾಗಿದ್ದು, ಅಧಿಕೃತ ವ್ಯಕ್ತಿಗಳು ಮತ್ತು ನಿವಾಸಿಗಳಿಗೆ ಮಾತ್ರ ಪ್ರವೇಶ ನೀಡಲಾಗುತ್ತಿದೆ. ಉಭಯ ನಿಯೋಗಗಳನ್ನು ನೂರ್ ಖಾನ್ ವಾಯುನೆಲೆಯಲ್ಲಿ ಉಪ ಪ್ರಧಾನಿ ಇಸ್ಹಾಕ್ ಡಾರ್, ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಆಸಿಮ್ ಮುನೀರ್ ಹಾಗೂ ಗೃಹ ಸಚಿವ ಸೈಯದ್ ಮೊಹ್ಸಿನ್ ರಝಾ ನಕ್ವಿ ಅವರು ಸ್ವಾಗತಿಸಿದರು.

ಇಸ್ರೇಲ್ ಫಸ್ಟ್ ಬೇಡ: ಇರಾನ್ ಎಚ್ಚರಿಕೆ

ಇರಾನ್‌ನ ಮೊದಲ ಉಪಾಧ್ಯಕ್ಷ ಮೊಹಮ್ಮದ್ ರೆಝಾ ಅರೆಫ್, ಅಮೆರಿಕ ಅಧ್ಯಕ್ಷ ಟ್ರಂಪ್ ಅವರ 'ಅಮೆರಿಕ ಫಸ್ಟ್' ನೀತಿಗೆ ಅನುಗುಣವಾಗಿ ಕಾರ್ಯನಿರ್ವಹಿಸಿದರೆ ಒಪ್ಪಂದ ಸಾಧ್ಯ ಎಂದಿದ್ದಾರೆ. ಆದರೆ, ನಮ್ಮ ಎದುರಿಗೆ 'ಇಸ್ರೇಲ್ ಫಸ್ಟ್' ಪ್ರತಿನಿಧಿಗಳು ಬಂದರೆ ಯಾವುದೇ ಒಪ್ಪಂದ ಆಗದು ಎಂದು ಸಾಮಾಜಿಕ ಜಾಲತಾಣದಲ್ಲಿ ಎಚ್ಚರಿಕೆ ನೀಡಿದ್ದಾರೆ. ಶಾಂತಿ ಒಪ್ಪಂದವಾಗದಿದ್ದರೆ ಇಡೀ ವಿಶ್ವ ಹೆಚ್ಚಿನ ಬೆಲೆ ತೆರಬೇಕಾಗುತ್ತದೆ ಎಂದೂ ಅವರು ಹೇಳಿದ್ದಾರೆ.

ಗಾಲಿಬಾಫ್ ಭಾವುಕ ಸಂದೇಶ

ಸಂಸತ್ ಅಧ್ಯಕ್ಷ ಗಾಲಿಬಾಫ್ ಪಾಕಿಸ್ತಾನಕ್ಕೆ ಹೊರಡುವ ಮುನ್ನ ವಿಮಾನದೊಳಗಿನ ಚಿತ್ರವನ್ನು ಹಂಚಿಕೊಂಡಿದ್ದಾರೆ. ಆ ಚಿತ್ರದಲ್ಲಿ, ದಾಳಿಯಲ್ಲಿ ಹತರಾದ ಮಿನಾಬ್ ಶಾಲಾ ವಿದ್ಯಾರ್ಥಿಗಳ ಭಾವಚಿತ್ರಗಳನ್ನು ವಿಮಾನದ ಆಸನಗಳ ಮೇಲೆ ಇರಿಸಲಾಗಿತ್ತು. ಈ ಪ್ರಯಾಣದಲ್ಲಿ ನನ್ನ ಸಂಗಾತಿಗಳು - ಮಿನಾಬ್ 168 ಎಂದು ಅವರು ಸಾಮಾಜಿಕ ಜಾಲತಾಣದಲ್ಲಿ ಬರೆದಿದ್ದಾರೆ. ಇಸ್ಲಾಮಾಬಾದ್‌ಗೆ ಬಂದ ನಂತರ ಗಾಲಿಬಾಫ್ ಸುದ್ದಿಗಾರರೊಂದಿಗೆ ಮಾತನಾಡಿ, ಒಂದು ವರ್ಷದೊಳಗೆ ಎರಡು ಬಾರಿ, ಮಾತುಕತೆ ನಡೆಯುತ್ತಿರುವಾಗಲೇ, ಇರಾನ್‌ನ ಸದ್ಭಾವನೆಯ ನಡುವೆಯೂ ಅವರು ನಮ್ಮ ಮೇಲೆ ದಾಳಿ ಮಾಡಿದರು ಎಂದು ಅಮೆರಿಕದ ಮೇಲಿನ ಅಪನಂಬಿಕೆಯನ್ನು ವ್ಯಕ್ತಪಡಿಸಿದರು. ನಮ್ಮಲ್ಲಿ ಸದ್ಭಾವನೆ ಇದೆ, ಆದರೆ ನಂಬಿಕೆ ಇಲ್ಲ ಎಂದು ಅವರು ಖಡಾಖಂಡಿತವಾಗಿ ಹೇಳಿದರು.

ಏನಾಸಂ ಜಾರಿ ಭರವಸೆ

ಪುಟ ೧➡ ಮುರ್ಶಿದಾಬಾದ್ ಜಿಲ್ಲೆಯ ಜಂಗೀಪುರದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಜನಸಂಖ್ಯಾ ಸಮತೋಲನ ಬದಲಾಗುತ್ತಿದೆ ಎಂದು ಆರೋಪಿಸಿ, 'ಬಂಗಾಳದಲ್ಲಿ ಬೆಂಗಾಲಿಗಳು ಅಲ್ಪಸಂಖ್ಯಾತ ರಾಗಲು ಬಿಡುವುದಿಲ್ಲ' ಎಂದರು. ಟಿಎಂಸಿ ಮಾ-ಮಾಟಿ-ಮಾನುಷ್ ಘೋಷಣೆಯಿಂದ ದೂರ ಸರಿದು, ಮತ ಬ್ಯಾಂಕ್ ರಾಜಕೀಯ ಮತ್ತು ನುಸುಳುಕೋರರ ಬೆಂಬಲಕ್ಕೆ ನಿಂತಿದೆ ಎಂದು ಟೀಕಿಸಿದರು.

ರಾಮನವಮಿ ಮೆರವಣಿಗೆಗಳ ವೇಳೆ ನಡೆದ ಹಿಂಸಾಚಾರಕ್ಕೂ ಟಿಎಂಸಿ ಕಾರಣ ಎಂದು ದೂರಿದರು. ಕುಶ್ಮಂಡಿಯಲ್ಲಿ ನಡೆದ ಮತ್ತೊಂದು ಸಭೆಯಲ್ಲಿ ಮಾತನಾಡಿದ ಮೋದಿ, 'ಪ.ಬಂಗಾಳದಲ್ಲಿ ಸರ್ಕಾರವೇ ಸಿಂಡಿಕೇಟ್, ಸಿಂಡಿಕೇಟೇ ಸರ್ಕಾರ' ಎಂದು ಆರೋಪಿಸಿದರು. ಆರ್ಥಿಕ ಕ್ಷೇತ್ರದಲ್ಲಿಯೂ ರಾಜ್ಯ ಹಿನ್ನಡೆಯಲ್ಲಿದ್ದು, 8 ಲಕ್ಷ ಕೋಟಿ ರೂ. ಸಾಲದ ಬಾಧೆ ಇದೆ ಎಂದು ಮೋದಿ ಹೇಳಿದರು. ಕೈಗಾರಿಕೆಗಳು ರಾಜ್ಯವನ್ನು ತೊರೆಯುತ್ತಿರುವುದರಿಂದ ಉದ್ಯೋಗಾವಕಾಶಗಳು ಕಡಿಮೆಯಾಗಿದ್ದು, ಯುವಕರು ವಲಸೆ ಹೋಗುವ ಸ್ಥಿತಿ ಉಂಟಾಗಿದೆಂದು ಆರೋಪಿಸಿದರು.

ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ಉಲ್ಲೇಖಿಸಿದ ಪ್ರಧಾನಿ, ಬಿಜೆಪಿ ಸರ್ಕಾರ ಬಂದರೆ ಇಂತಹ ಎಲ್ಲಾ ಪ್ರಕರಣಗಳನ್ನು ಮರುತೆರೆಯಲಾಗುವುದು ಮತ್ತು ಪ್ರತಿಯೊಬ್ಬ ಅಪರಾಧಿಗೂ ಶಿಕ್ಷೆ ಖಚಿತಪಡಿಸಲಾಗುವುದು ಎಂದು ಎಚ್ಚರಿಸಿದರು. ಆರ್‌ಜಿ ಕರ್ ಆಸ್ಪತ್ರೆ ಪ್ರಕರಣವನ್ನು ಉಲ್ಲೇಖಿಸಿ, ಟಿಎಂಸಿ ಸರ್ಕಾರ ಆರೋಪಿಗಳಿಗೆ ಬೆಂಬಲ ನೀಡಿದೆಯೆಂದು ಆರೋಪಿಸಿದರು.

ಜೆಡಿಎಸ್ ಸಮಾವೇಶ ಭಾರೀ ಶಕ್ತಿ ಪ್ರದರ್ಶನ

ಪುಟ ೧➡ ನಗರ, ಸ್ಥಳೀಯ ಸಂಸ್ಥೆಗಳಾದ ಜಿ.ಪಂ., ತಾ.ಪಂ.ಗಳಿಗೆ ರಾಜ್ಯ ಸರ್ಕಾರ ಅನಿವಾರ್ಯವಾಗಿ ಚುನಾವಣೆ ನಡೆಸಬೇಕಿದೆ ನ್ಯಾಯಾಲಯದ ಆದೇಶದಿಂದಾಗಿ ಸರ್ಕಾರ ಅನಿವಾರ್ಯವಾಗಿ ಚುನಾವಣೆ ನಡೆಸಬೇಕಿದೆ ಎಂದು ಹೇಳಿದರು. ದೇಶದಲ್ಲಿ ಮಹಿಳಾ ಮೀಸಲಾತಿ ಕೊಟ್ಟಿದ್ದು ಕರ್ನಾಟಕ ಸರ್ಕಾರ. ಲೀಲಾದೇವಿ ಆರ್.ಪ್ರಸಾದ್ ಅವರು ಸಚಿವರಾಗಿದ್ದಾಗ ದೆಹಲಿಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ನಾಯಕರಿಗೂ ನಿಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಮಹಿಳಾ ಮೀಸಲಾತಿ ಅಳವಡಿಸಿಕೊಳ್ಳಬೇಕು ಎಂದು ಮನವಿ ಸಲ್ಲಿಸಿದ್ದರು. ಅವರ ಪ್ರಯತ್ನದ ಕೆಲವು ಸಾಕಾರಗೊಳ್ಳುತ್ತಿವೆ ಎಂದರು.

ನನ್ನ ರಾಜಕೀಯ ಜೀವನದಲ್ಲಿ ಇಂತಹ ಕೆಟ್ಟ ಸರ್ಕಾರ ನೋಡಿಲ್ಲ. 65 ವರ್ಷದ ರಾಜಕೀಯ ಜೀವನದಲ್ಲಿ ನಾನು ಕಂಡ ಅತ್ಯಂತ ಕೆಟ್ಟ ಸರ್ಕಾರ ಎಂದು ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಗೌಡರು ಟೀಕಿಸಿದರು. ಮುಂದೆ ನಾವೇ ಅಧಿಕಾರಕ್ಕೆ ಬರುತ್ತೇವೆ ಎಂದು ಹೇಳುತ್ತಿದ್ದಾರೆ. ತಮ್ಮ ಪಕ್ಷದ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿ ಪಕ್ಷವನ್ನು ಬಲಪಡಿಸಬೇಕು. ನಮ್ಮದು ಪ್ರಾದೇಶಿಕ ಪಕ್ಷ. ರಾಷ್ಟ್ರೀಯ ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡಿದ್ದೇವೆ. ಇತಿಮಿತಿಯಲ್ಲಿ ಕೆಲಸ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಸರ್ಕಾರದಿಂದ ದುಸ್ಥಿತಿ: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮಾತನಾಡಿ, ಕಾಂಗ್ರೆಸ್ ಸರ್ಕಾರ ಬಿಬಿಎಂಪಿ ಇದ್ದುದನ್ನು ಜಿಬಿಎ ಎಂದು ಬದಲಾಯಿಸಿ ಬೆಂಗಳೂರು ನಗರದ ಜನರ ದುಸ್ಥಿತಿಗೆ ಮುಂದಾಗಿದೆ ಎಂದು ಕಿಡಿಕಾರಿದರು. ಜೆಡಿಎಸ್ ಪಕ್ಷ ಅಧಿಕಾರದಲ್ಲಿದ್ದಾಗ ಬೇರೆಯವರ ಹಂಗಿನಲ್ಲಿತ್ತು, ಸ್ವತಂತ್ರವಾಗಿ ಸರ್ಕಾರ ನಡೆಸಲು ಸಾಧ್ಯವಾಗಲಿಲ್ಲ. ನಗರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದ್ದ ಸರ್ಕಾರವನ್ನು ಬೀಳಿಸುವಲ್ಲಿ ಕಾಣದ ಕೈಗಳು ಕೆಲಸ ಮಾಡಿದವು, ಆದರೂ ಎದೆಗುಂದದೆ ಬೆಂಗಳೂರು ನಗರದ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಬೆಂಗಳೂರಿಗೆ ಮೆಟ್ರೋ ರೈಲು ತರಲು ಬಹಳಷ್ಟು ಶ್ರಮಿಸಿದ್ದೇನೆ ಎಂದು ತಿಳಿಸಿದರು. ಮಾಜಿ ಸಚಿವ ಎಚ್.ಡಿ.ರೇವಣ್ಣ, ವಿಧಾನಪರಿಷತ್ ಸದಸ್ಯ ಜವರಾಯಿಗೌಡ, ಬಂಡೆಪ್ಪ ಕಾಶೆಂಪೂರ್, ವೈ.ಎಸ್.ವಿ. ದತ್ತಾ, ಡಾ. ಕೆ. ಅನ್ನದಾನಿ, ಸಾ.ರಾ. ಮಹೇಶ, ಎನ್.ಆರ್. ಸಂತೋಷ್, ಚೇತನ್ ಗೌಡ. ಎಸ್, ಕೇಶವಮೂರ್ತಿ ಉಪಸ್ಥಿತರಿದ್ದರು.



ಜಿಬಿಎ ವ್ಯಾಪ್ತಿಯಲ್ಲಿ ಇ-ಖಾತಾ ವಿಚಾರದಲ್ಲೂ ನಾಗರಿಕರಿಗೆ ತೊಂದರೆಯಾಗುತ್ತಿದೆ. ಆಸ್ತಿತೆರಿಗೆ ಶೇ.25ರಷ್ಟು ಹೆಚ್ಚಳ ಮಾಡಿದ್ದಾರೆ. ಸ್ಕೈಡೆಕ್ ನಿರ್ಮಾಣ ಮಾಡಲು ಹೊರಟಿದ್ದಾರೆ. ಆಕಾಶದಲ್ಲಿ ನಿಂತು ರಸ್ತೆ ಗುಂಡಿ, ಕಸದ ರಾಶಿ ನೋಡಬೇಕಾ.

■ **ನಿಖಿಲ್ ಕುಮಾರಸ್ವಾಮಿ,** ಯುವ ಘಟಕದ ಅಧ್ಯಕ್ಷ

ರಾಜ್ಯದ ವಂದೇ ಭಾರತ್ ಸ್ಲೀಪರ್ ರೈಲಿಗೆ ಸಮ್ಮತಿ

ಪುಟ ೧➡ ಇತ್ತೀಚೆಗಷ್ಟೇ ದೇಶದಲ್ಲಿ ಮೊದಲ ವಂದೇ ಭಾರತ್ ಸ್ಲೀಪರ್ ರೈಲು ಸಂಚಾರ ಆರಂಭಿಸಲಾಗಿದೆ. ಸುದೀರ್ಘ ಹಾಗೂ ಆರಾಮದಾಯಕ ರಾತ್ರಿ ಪ್ರಯಾಣದ ಉದ್ದೇಶದಿಂದ ಈ ರೈಲನ್ನು ಪರಿಚಯಿಸಲಾಗಿದ್ದು, ಐಷಾರಾಮಿ ಮತ್ತು ಉತ್ತಮ ಪ್ರಯಾಣದ ಅನುಭವ ನೀಡುತ್ತದೆ. ಏಕೆಂದರೆ, ಪ್ರಯಾಣಿಕ ಸ್ನೇಹಿ ವ್ಯವಸ್ಥೆ, ವಿನ್ಯಾಸ, ಆಧುನಿಕ ರೈಲ್ವೆ ಮೂಲಸೌಕರ್ಯಗಳನ್ನು ಈ ರೈಲು ಒಳಗೊಂಡಿದೆ.

ರಾಜ್ಯದ ಮೊದಲ ಸ್ಲೀಪರ್ ರೈಲು: ಕರ್ನಾಟಕಕ್ಕೆ ಮೊದಲ ವಂದೇ ಭಾರತ್ ಸ್ಲೀಪರ್ ರೈಲು ಇದಾಗಿದ್ದು, ಮುಂಬೈನಿಂದ ಬೆಂಗಳೂರು ಮಧ್ಯೆ ಸುಮಾರು 1,211 ಕಿ.ಮೀ. ದೂರವಿದೆ.

ಇಷ್ಟು ದೂರವನ್ನು ಕ್ರಮಿಸಲು ಸುಮಾರು 23.30 ಗಂಟೆ ಬೇಕಾಗುತ್ತದೆ. ಈ ರೈಲಿನ ಆಗಮನ, ನಿರ್ಗಮನ, ಸಮಯದ ಮಿತಿ, ವೇಳಾಪಟ್ಟಿಯನ್ನು ರೈಲ್ವೆ ಇಲಾಖೆ ಕೆಲವೇ ದಿನಗಳಲ್ಲಿ ಪ್ರಕಟಿಸಲಿದೆ.

ಕಾಂಗ್ರೆಸ್‌ನಲ್ಲಿ ರಾಜೀನಾಮೆ ಪರ್ವ

ಪುಟ ೧➡ **ನಸೀರ್ ಅಹ್ಮದ್‌ಗೂ ರಾಜೀನಾಮೆ ಸೂಚನೆ:** ಉಪ ಚುನಾವಣೆಗೆ ಟಿಕೆಟ್ ಆಕಾಂಕ್ಷಿಯಾಗಿದ್ದ ವಿಧಾನಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಇನ್ನೊಂದೆಡೆ ಸಿಎಂ ರಾಜಕೀಯ ಕಾರ್ಯದರ್ಶಿಯಾಗಿರುವ ನಸೀರ್ ಅಹ್ಮದ್ ಅವರಿಗೂ ರಾಜೀನಾಮೆ ನೀಡುವಂತೆ ಹೈಕಮಾಂಡ್ ಸೂಚಿಸಿದೆ ಎನ್ನಲಾಗಿದೆ.

ಈ ಕುರಿತು ಕೆಪಿಸಿಸಿ ಅಧ್ಯಕ್ಷರಿಗೆ ಪತ್ರ ಬರೆದಿರುವ ಅಬ್ದುಲ್ ಜಬ್ಬಾರ್, ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಅಲ್ಪಸಂಖ್ಯಾತರಿಗೆ ಸಿಗಬೇಕೆಂದು ಪ್ರಯತ್ನಿಸಿದರೂ, ಕಾರಣಾಂತರಗಳಿಂದ ಟಿಕೆಟ್ ಕೈತಪ್ಪಿತ್ತು. ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷರಾಗಿ ಸೇವೆ ಸಲ್ಲಿಸುವುದು ತಮಗೆ ದೊರೆತ ಗೌರವ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ. ಈ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಕೆ.ಅಬ್ದುಲ್ ಜಬ್ಬಾರ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಮ್ ಅಹಮದ್, ಶಾಸಕ ರಿಜ್ವಾನ್ ಅರ್ಷದ್ ಅವರುಗಳೇ ಮೊದಲು ನನಗೆ ಚುನಾವಣೆಗೆ ನಿಲ್ಲುವಂತೆ ಹೇಳಿದ್ದರು.

ಈಗ ಅವರೇ ಉಲ್ಟಾ ಹೊಡೆದಿದ್ದಾರೆ. ಹೆಗಲೂ ನಮ್ಮದೇ, ಗುಂಡು ನಮ್ಮದೇ ಎಂಬಂತಾಗಿದೆ. ಕಾಂಗ್ರೆಸ್ ಕಚೇರಿಯಲ್ಲಿ ಪಕ್ಷದ ಮುಖಂಡರ ವಿರುದ್ಧವೇ ಸುದ್ದಿಗೋಷ್ಠಿ ಮಾಡಬಾರದಿತ್ತು. ಈ ವಿಚಾರದಲ್ಲಿ ನನಗೆ ದುಃಖವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹೈಕಮಾಂಡ್‌ಗೆ ವರದಿ ಬೆನ್ನಲ್ಲೇ ರಾಜೀನಾಮೆ ಪರ್ವ: ದಾವಣಗೆರೆ ಉಪಚುನಾವಣೆಯಲ್ಲಿ ನಡೆದ ಆಂತರಿಕ ಚಟುವಟಿಕೆಗಳ ಬಗ್ಗೆ ಎಐಸಿಸಿ ಉಸ್ತುವಾರಿ ಕಾರ್ಯದರ್ಶಿ ಅಭಿಷೇಕ್ ದತ್ ಹೈಕಮಾಂಡ್‌ಗೆ ವರದಿ ಸಲ್ಲಿಸಿದ್ದರು. ಈ ವರದಿಯಲ್ಲಿ ಅಲ್ಪಸಂಖ್ಯಾತ ನಾಯಕರ ನಡವಳಿಕೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಲಾಗಿತ್ತು ಎನ್ನಲಾಗಿದೆ.

ಸಿಎಂ ರಾಜಕೀಯ ಕಾರ್ಯದರ್ಶಿಯಿಂದಲೂ ರಾಜೀನಾಮೆ?: ಅಬ್ದುಲ್ ಜಬ್ಬಾರ್ ರಾಜೀನಾಮೆ ಬೆನ್ನಲ್ಲೇ, ಹೈಕಮಾಂಡ್ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಜೀರ್ ಅಹ್ಮದ್ ಖಾನ್ ಅವರಿಗೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಸೂಚನೆ ನೀಡಿದೆ ಎನ್ನಲಾಗಿದೆ. ಹೈಕಮಾಂಡ್ ಸೂಚನೆ ಮೇರೆಗೆ ಶೀಘ್ರದಲ್ಲೇ ನಜೀರ್ ಅಹ್ಮದ್ ಅವರು ಸಿಎಂ ಸಿದ್ದರಾಮಯ್ಯಗೆ ರಾಜೀನಾಮೆ ಸಲ್ಲಿಸಲಿದ್ದಾರೆ ಎಂದು ತಿಳಿದುಬಂದಿದೆ.

ಅಲ್ಪಸಂಖ್ಯಾತ ಘಟಕದ ಪ್ರಮುಖ ನಾಯಕರ ರಾಜೀನಾಮೆ ಪರ್ವ ಈಗ ಸಚಿವ ಜಮೀರ್ ಅಹ್ಮದ್ ಖಾನ್ ಅವರತ್ತ ತಿರುಗಿದೆ. ದಾವಣಗೆರೆ ಉಪಚುನಾವಣೆಯ ಗೊಂದಲಗಳಿಗೆ ತಲೆದಂಡವಾಗಿ ಜಮೀರ್ ಅವರ ಸಚಿವ ಸ್ಥಾನಕ್ಕೂ ಕುತ್ತು ಬರಲಿದೆಯೇ? ಅಥವಾ ಹೈಕಮಾಂಡ್ ಅವರನ್ನು ರಕ್ಷಿಸಲಿದೆಯೇ ಎಂಬ ಪ್ರಶ್ನೆ ಈಗ ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿದೆ.

ಮತದಾನ, ಸ್ಪರ್ಧಿಸುವ ಹಕ್ಕು ಮೂಲಭೂತವಲ್ಲ

◆ **ಹೊಸದಿಲ್ಲಿ:** ಮತದಾನ ಮಾಡುವ ಹಕ್ಕು ಹಾಗೂ ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕುಗಳು ಮೂಲಭೂತ ಹಕ್ಕುಗಳಲ್ಲ ಎಂದು ಸುಪ್ರೀಂ ಪುನರುಚ್ಚರಿಸಿದೆ. ಇವು ಕೇವಲ ಕಾನೂನುಬದ್ಧ ಹಕ್ಕುಗಳಾಗಿದ್ದು, ಕಾನೂನು ನಿಗದಿಪಡಿಸಿದ ಮಿತಿಯೊಳಗೆ ಮಾತ್ರ ಅನ್ವಯಿಸುತ್ತವೆ ಎಂದು ಸರ್ವೋಚ್ಚ ನ್ಯಾಯಾಲಯ ಸ್ಪಷ್ಟಪಡಿಸಿದೆ. ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ, ಆರ್. ಮಹಾದೇವನ್ ಅವರ ಪೀಠವು ರಾಜಸ್ಥಾನದ ಜಿಲ್ಲಾ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಚುನಾವಣೆಗೆ ಸಂಬಂಧಿಸಿದ ಪ್ರಕರಣವನ್ನು ವಿಚಾರಣೆ ಮಾಡುವ ವೇಳೆ ಈ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ.

ಕೋರ್ಟ್ ಹೇಳಿದ್ದೇನು?: ಮತದಾನ ಹಕ್ಕು ಮತ್ತು ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕು ಎರಡೂ ಪರಸ್ಪರ ಭಿನ್ನ ಸ್ವರೂಪದವು. ಮತದಾನ ಹಕ್ಕು ನಾಗರಿಕರಿಗೆ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡುತ್ತದೆ.

ವೈಚಾರಿಕತೆ ಬೆಳೆಸಿಕೊಳ್ಳಿ: ಸಿಎಂ

ಪುಟ ೧➡ ವೈವಿಧ್ಯತೆ ಇರುವ ಸಮಾಜದಲ್ಲಿ ಏಕತೆ ಪ್ರದರ್ಶನ ಮಾಡುವುದು ಅತ್ಯವಶ್ಯ. ಯಾವುದೇ ಧರ್ಮ ದ್ವೇಷ ಮಾಡಲು ಹೇಳುವುದಿಲ್ಲ ಎಲ್ಲರನ್ನೂ ಪ್ರೀತಿಸಿದಾಗಲೇ ಮಾನವ ಸಮಾಜ ನಿರ್ಮಾಣ ಸಾಧ್ಯ ಎಂದರು.



ಸ್ವಚ್ಛ ಮನಸಿನಿಂದ ದೇವಸ್ಥಾನಕ್ಕೆ ಹೋಗಿ ನಮಗಷ್ಟೇ ಅಲ್ಲದೇ ಎಲ್ಲರಿಗೂ ಒಳ್ಳೆಯದು ಮಾಡು ಎಂದು ಪ್ರಾರ್ಥಿಸಿದಾಗ ಮಾತ್ರ ಫಲ ಸಿಗುತ್ತದೆ. ಬಸವಣ್ಣ, ಸೂಫಿ ಸೇರಿ ಹಲವು ಸಂತರು ಇದನ್ನೇ ಪ್ರತಿಪಾದಿಸಿದ್ದಾರೆ. ಬಸವಣ್ಣ ಕಾಯಕ ಹಾಗೂ ದಾಸೋಹ ಎರಡಕ್ಕೂ ಆದ್ಯತೆ ನೀಡಿದ್ದಾರೆ.

ಎಲ್ಲರೂ ಕಷ್ಟಪಟ್ಟು ದುಡಿಯಬೇಕು. ಹಾಗೆ ಬಂದುದನ್ನು ಎಲ್ಲರೂ ಸಮಾನವಾಗಿ ಹಂಚಿಕೊಳ್ಳಬೇಕು. ಕಾಯಕ ಹಾಗೂ ದಾಸೋಹಗಳನ್ನು ಎಲ್ಲರೂ ಮಾಡಬೇಕು. ಕೆಲವರೇ ಮಾಡಿದರೆ ಅಸಮಾನತೆ ಸಮಾಜ ನಿರ್ಮಾಣವಾಗುತ್ತದೆ. ಪ್ರತಿಯೊಬ್ಬರಿಗೆ ಸಮಾನತೆ ಹಾಗೂ ಆರ್ಥಿಕ ಶಕ್ತಿ ಬಂದಾಗ ಮಾತ್ರ ಸಮಾನತೆ ಬರಲು ಸಾಧ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಯಾತ್ರಿ ನಿವಾಸಕ್ಕೆ 1 ಕೋಟಿ ಹಣ ಸಹಾಯ ಮಾಡುವುದಾಗಿ ತಿಳಿಸಿದರು. ಸಂಸ್ಥಾನದ ಹಿರಗಪ್ಪ ತಾತನವರ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ, ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಶಾಸಕರಾದ ಎಂ.ವೈ. ಪಾಟೀಲ, ಅಲ್ಲಮಪ್ರಭು ಪಾಟೀಲ, ಚೆನ್ನಾರೆಡ್ಡಿ ತುನ್ನೂರು, ಎಂಎಲ್ಸಿ ಚಂದ್ರಶೇಖರ ಪಾಟೀಲ ಹುಮನಾಬಾದ, ತಿಪ್ಪಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ, ಮಜಹರ್ ಆಲಂ ಖಾನ್, ಸೈಯದ್ ಮಹೆಬೂಬ್ ಚಿಸ್ತಿ ಸಾಹೇಬ್, ದೇವೆಂದ್ರಪ್ಪ ಮರತೂರು, ಮಾಲಾ ನಾರಾಯಣರಾವ, ಬಾಬು ಹೊನ್ನನಾಯಕ್, ರೇವುನಾಯಕ ಬೆಳಮಗಿ, ಶರಣಪ್ಪ ಮಾನೆಗಾರ, ಲಿಂಗಾರೆಡ್ಡಿ ಭಾಸರೆಡ್ಡಿ, ಭೀಮಣ್ಣ ಸಾಲಿ, ಭಾಗಣ್ಣಗೌಡ ಸಂಕನೂರ, ಶಿವಾನಂದ ಪಾಟೀಲ ಮರತೂರು, ಮಹೇಶ ರೆಡ್ಡಿ ಮುದ್ನಾಳ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ವಿಟಿಯು ಸಿಂಡಿಕೇಟ್ ಸದಸ್ಯ ಮಹಾಂತೇಶ ಬೀಳಗಿ ನಿರೂಪಿಸಿದರು. ಶಂಕರಗೌಡ ಲಿಂಗಸುಗೂರು ಸ್ವಾಗತಿಸಿದರು.

ಜಾತಿ ವ್ಯವಸ್ಥೆ ಸ್ವಲ್ಪ ಕಡಿಮೆಯಾಗಿದೆಯಾದರೂ ಇನ್ನೂ ಪೂರ್ಣವಾಗಿ ಹೋಗಿಲ್ಲ. ಪ್ರತಿಯೊಬ್ಬರೂ ವೈಚಾರಿಕತೆ, ವೈಜ್ಞಾನಿಕ ಹಿನ್ನೆಲೆಯುಳ್ಳ ವಿದ್ಯೆ ಪಡೆದುಕೊಳ್ಳಬೇಕು. ಬಸವಣ್ಣನವರು ಆ ಕಾಲದಲ್ಲಿಯೇ ಕರ್ಮ ಸಿದ್ಧಾಂತ ತಿರಸ್ಕಾರ ಮಾಡಿದ್ದರು.

■ **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಗಾಯಕಿ ಆಶಾ ಭೋಸ್ಲೆ ಆಸ್ಪತ್ರೆಗೆ ದಾಖಲು

◆ **ಮುಂಬೈ:** ಪ್ರಸಿದ್ಧ ಬಾಲಿವುಡ್‌ನ ಹಿರಿಯ ಹಿನ್ನೆಲೆ ಗಾಯಕಿ ಆಶಾ ಭೋಸ್ಲೆ ಅವರು ಅನಾರೋಗ್ಯದಿಂದ ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.



92 ವರ್ಷದ ಆಶಾ ಭೋಸ್ಲೆ ಅವರನ್ನು ಶನಿವಾರ ಸಂಜೆ ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಾಥಮಿಕ ವರದಿಗಳ ಪ್ರಕಾರ, ಹೃದಯ ಸಂಬಂಧಿತ ತೊಂದರೆ (ಕಾರ್ಡಿಯಾಕ್ ಅರೆಸ್ಟ್) ಹಾಗೂ ಉಸಿರಾಟ ಸಂಬಂಧಿತ ಸಮಸ್ಯೆಗಳ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಇದಕ್ಕೆ ಪೂರಕವಾಗಿ, ಕೆಲವು ವರದಿಗಳು ಅವರು ಸೌಮ್ಯ ಹೃದಯಾಘಾತ ಅನುಭವಿಸಿದ್ದಾರೆಯೆಂದು ತಿಳಿಸಿವೆ. ಪ್ರಸ್ತುತ ವೈದ್ಯರ ನಿಗಾದಲ್ಲಿ ಚಿಕಿತ್ಸೆ ಮುಂದುವರಿದಿದ್ದು, ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ಹೇಳಲಾಗಿದೆ. ಎಂಟು ದಶಕಗಳಿಗೂ ಅಧಿಕ ಕಾಲ ಸಂಗೀತ ಕ್ಷೇತ್ರದಲ್ಲಿ ಸಕ್ರಿಯವಾಗಿರುವ ಆಶಾ ಭೋಸ್ಲೆ, ಹಿಂದಿ ಸಿನೆಮಾ ಸೇರಿದಂತೆ ಅನೇಕ ಭಾಷೆಗಳ ಹಾಡುಗಳ ಮೂಲಕ ಭಾರತೀಯ ಸಂಗೀತ ಲೋಕದಲ್ಲಿ ಅಜರಾಮರ ಗುರುತು ಮೂಡಿಸಿದ್ದಾರೆ.

ಯುಡಿಎಫ್‌ನ ಅತ್ಯುತ್ಸಾಹಕ್ಕೆ ಬಿಜೆಪಿ ತಡೆ ಹಾಕಿದೆಯೇ?

ರಾಜಕೀಯ ವಿಶ್ಲೇಷಣೆ

◆ **ತಿರುವನಂತಪುರಂ:** ಕೇರಳ ವಿಧಾನಸಭೆ ಚುನಾವಣೆಯ ಭಾಗವಾಗಿ ಗುರುವಾರ ಎಲ್ಲ 140ವಿಧಾನಸಭಾ ಕ್ಷೇತ್ರಗಳಿಗೆ ಮತದಾನ ನಡೆದಿದೆ.ಕೇರಳದ ಮತದಾರರು ಉತ್ಸಾಹದಿಂದ ಮತದಾನ ಮಾಡಿದ್ದು, ಕಳೆದ ಬಾರಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಮತದಾನಗೈದಿರುವುದು ಹಲವು ರೀತಿಯ ರಾಜಕೀಯ ಲೆಕ್ಕಾಚಾರಗಳಿಗೆ ಕಾರಣವಾಗಿದೆ.ಆಳುವ ಎಲ್‌ಡಿಎಫ್ ಮತ್ತು ವಿಪಕ್ಷ ಯುಡಿಎಫ್‌ಗಳ ನಡುವೆ ಈ ಬಾರಿ ಬಿಜೆಪಿ ಬಲವಾದ ಸ್ಪರ್ಧೆ ಒಡ್ಡಿರುವುದು ರಾಜಕೀಯ ಪಂಡಿತರ ಲೆಕ್ಕಾಚಾರಗಳನ್ನು ಬುಡಮೇಲುಗೊಳಿಸೀತೇ ಎಂಬ ಚರ್ಚೆ ರಾಜಕೀಯವಲಯದಲ್ಲಿ ನಡೆದಿದೆ.

ಕೇರಳದಲ್ಲಿ ಸಾಮಾನ್ಯವಾಗಿ ಒಂದು ಬಾರಿ ಎಲ್‌ಡಿಎಫ್ ಅಧಿಕಾರಕ್ಕೆ ಬಂದರೆ ಮತ್ತಿನ ಬಾರಿ ಯುಡಿಎಫ್ ಅಧಿಕಾರಕ್ಕೆ ಬರುವುದು ನಡೆಯುತ್ತಾ ಬಂದ ವಿದ್ಯಮಾನ. ಆದರೆ 2021ರ ವಿಧಾನಸಭಾ ಚುನಾವಣೆಯಲ್ಲಿ ಈ ಪರಂಪರೆ ವ್ಯತ್ಯಾಸವಾಗಿ ಎಲ್‌ಡಿಎಫ್ ಎರಡನೇ ಬಾರಿ ಅಧಿಕಾರಕ್ಕೆ ಬಂದು ಅಚ್ಚರಿ ನಿರ್ಮಿಸಿತ್ತು.ಎಡರಂಗ 99ಸ್ಥಾನಗಳನ್ನು ಹೊಂದಿದ್ದರೆ ಯುಡಿಎಫ್ ಕೇವಲ 41ಸ್ಥಾನಗಳನ್ನಷ್ಟೇ ಪಡೆಯಲು ಶಕ್ತವಾಗಿ ಹೀನಾಯ ಸೋಲುಣ್ಣುವಂತಾಗಿತ್ತು.

2021ರಲ್ಲಿ ಸಿಪಿಎಂ ನೇತೃತ್ವದ ಎಲ್‌ಡಿಎಫ್ ಶೇ.25.38ರಷ್ಟು ಮತಗಳನ್ನು ಪಡೆದಿದ್ದರೆ, ಸೋಲುಂಡ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಶೇ.25.12ರಷ್ಟು ಮತಗಳನ್ನು ಗಳಿಸಿತ್ತು.ಇನ್ನು ಬಿಜೆಪಿ ಯಾವುದೇ ಸ್ಥಾನ ಪಡೆಯದಿದ್ದರೂ ಶೇ.11.3ರಷ್ಟು ಮತ ಗಳಿಸಿ ಗಮನ ಸೆಳೆದಿತ್ತು.

ಈ ಬಾರಿಯ ಚುನಾವಣೆಯಲ್ಲಿ ಎಡರಂಗದ ವಿರುದ್ಧ ಆಡಳಿತ ವಿರೋಧಿ ಅಲೆ ಇದ್ದು, ತಾನೇ ಅಧಿಕಾರಕ್ಕೆ ಬರುವುದಾಗಿ ಯುಡಿಎಫ್ ಅತ್ಯುತ್ಸಾಹದಿಂದ ಹೇಳಿಕೊಂಡಿದೆ. ಆದಾಗ್ಯೂ ಬಿಜೆಪಿ ಈ ಬಾರಿ ಪ್ರಬಲವಾಗಿ ಬೆಳೆದುನಿಂತಿರುವುದು ಯುಡಿಎಫ್ ಪಾಳಯದಲ್ಲಿ ಆತಂಕಕ್ಕೂ ಕಾರಣವಾಗಿದೆ. ಇತ್ತೀಚಿನ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ ರಾಜಧಾನಿ ತಿರುವನಂತಪುರಂ ಮಹಾನಗರ ಪಾಲಿಕೆಯಲ್ಲಿ ಎಲ್‌ಡಿಎಫ್ ಮತ್ತು ಯುಡಿಎಫ್‌ಗಳ ಸವಾಲನ್ನು ಎದುರಿಸಿ ಗೆದ್ದು ಅಧಿಕಾರಕ್ಕೆ ಬಂದಿತ್ತು.ಬಿಜೆಪಿಯ ಮತಹಂಚಿಕೆಯ ಪ್ರಮಾಣ ಕೂಡ ತೀವ್ರವಾಗಿ ಏರಿಕೆಯಾಗಿತ್ತು. ಆದ್ದರಿಂದ ಈ ಬಾರಿ ಬಿಜೆಪಿಯ ಪ್ರಬಲ ಸ್ಪರ್ಧೆ ತನ್ನ ಗೆಲುವಿನ ನಾಗಾಲೋಟಕ್ಕೆ ತಡೆ ಒಡ್ಡಬಹುದೆಂಬ ಆತಂಕ ಯುಡಿಎಫ್‌ನ್ನು ಆಂತರಿಕವಾಗಿ ಕಾಡುತ್ತಿದೆ. ಈ ಬಾರಿ ಕಾಂಗ್ರೆಸ್ ಪಕ್ಷದೊಳಗಿನ ತೀವ್ರ ಅಂತಃಕಲಹವನ್ನು ತೇಪೆಹಚ್ಚಿ ಸ್ಪರ್ಧೆಗಿಳಿದಿದ್ದ ಯುಡಿಎಫ್ ಎಡರಂಗ ಬಿಜೆಪಿಯ ಬಿ ಟೀಮ್ ಎಂದು ಚುನಾವಣಾ ಪ್ರಚಾರದುದ್ದಕ್ಕೂ ಆರೋಪಿಸುತ್ತಾ ಬಂದಿರುವುದು ಇದೇ ಹಿನ್ನೆಲೆಯಲ್ಲಿ. ಅಲ್ಪಸಂಖ್ಯಾತರಲ್ಲಿ 'ಬಿಜೆಪಿ ಗುಮ್ಮ'ನನ್ನು ತೋರಿಸಿ ಮತಗಳಿಸುವುದು ಯುಡಿಎಫ್‌ನ ತಂತ್ರವಾಗಿತ್ತು.

ಅಲ್ಲದೆ ಈ ಬಾರಿ ಕೇರಳದಲ್ಲಿ ಮತೀಯ ಕಟ್ಟರ್‌ವಾದಿಗಳನ್ನು ಹೊರತುಪಡಿಸಿದರೆ , ಅಲ್ಪಸಂಖ್ಯಾತರಲ್ಲಿ ಬಿಜೆಪಿಯ ಬಗ್ಗೆ ತೀವ್ರತರವಾದ ಅಸಹನೆಯೇನೂ ಇಲ್ಲದಿದ್ದುದು ಕೂಡ ಯುಡಿಎಫ್ ಪಾಳಯದಲ್ಲಿ ಆತಂಕಕ್ಕೆ ಕಾರಣವಾಗಿತ್ತು .ಕಾಂಗ್ರೆಸ್ ಸತತವಾಗಿ ಬಿಜೆಪಿ ವಿರುದ್ಧ ಮುಸ್ಲಿಮರು ಮತ್ತು ಕ್ರೈಸ್ತ ಸಮುದಾಯಗಳಲ್ಲಿ ಅಪನಂಬಿಕೆಯನ್ನು ಬಿತ್ತುವ ಕೆಲಸವನ್ನು ಮಾಡುತ್ತಾ ಬಂದಿದ್ದರೂ,ವಿದೇಶಗಳಲ್ಲಿ ಸಿಲುಕಿಕೊಂಡ ಭಾರತೀಯರನ್ನು ಜೋಪಾನವಾಗಿ ರಕ್ಷಿಸಿ ತಾಯ್ನಾಡಿಗೆ ಕರೆತರುವಲ್ಲಿ ಮೋದಿ ಸರಕಾರದ ಪ್ರಾಮಾಣಿಕ ಕ್ರಮಗಳು ಅಲ್ಪಸಂಖ್ಯಾತರಲ್ಲಿ ಬಿಜೆಪಿ ಬಗ್ಗೆ ಇದ್ದ ಭಾವನೆಯನ್ನು ಬದಲಿಸುವಂತೆ ಮಾಡಿದೆ.ಹಾಗೆಯೇ ಮೋದಿ ಸರಕಾರದ ಅಭಿವೃದ್ಧಿ ಯೋಜನೆಗಳು ಯಾವುದೇ ತಾರತಮ್ಯ ಇಲ್ಲದೆ ದೇಶದ ಎಲ್ಲ ನಾಗರಿಕರಿಗೂ ತಲುಪುತ್ತಿರುವುದು ಕೂಡ ಅಲ್ಪಸಂಖ್ಯಾತ ಸಮುದಾಯದ ಪ್ರಜ್ಞಾವಂತರು ಮತ್ತು ಜನಸಾಮಾನ್ಯರನ್ನು ಭಿನ್ನವಾಗಿ ಯೋಚಿಸುವಂತೆ ಮಾಡಿತ್ತು. ವಿಶೇಷವಾಗಿ ಮಹಿಳೆಯರಲ್ಲಿ ಮೋದಿ ಸರಕಾರದ ಬಗ್ಗೆ ಸದಭಿಪ್ರಾಯ ಮೂಡುವಂತೆ ಮಾಡಿದ್ದ ಅಂಶ ಕಾಂಗ್ರೆಸ್ ಪಾಳಯದಲ್ಲಿ ಆತಂಕ ಉಂಟು ಮಾಡಿರುವುದನ್ನು ಆ ಪಕ್ಷದ ನಾಯಕರ ಹೇಳಿಕೆಗಳು ವ್ಯಕ್ತಗೊಳಿಸಿದ್ದವು.

ಈ ವರೆಗಿನ ಪ್ರತಿ ಚುನಾವಣೆಯಲ್ಲಿ ಬಿಜೆಪಿ ಪ್ರಬಲ ಸ್ಪರ್ಧೆ ಒಡ್ಡಿದ ಕ್ಷೇತ್ರಗಳಲ್ಲಿ ಯುಡಿಎಫ್ ಮತ್ತು ಎಲ್‌ಡಿಎಫ್‌ಗಳು ಅಡ್ಡ ಮತದಾನದ ಮೂಲಕ ಬಿಜೆಪಿಯನ್ನು ಸೋಲಿಸುತ್ತಿದ್ದವು. ಈ ಬಾರಿ ಇದೇ ತಂತ್ರ ಮುಂದುವರಿದಿದೆಯೇ ಅಥವಾ ವ್ಯತ್ಯಾಸವಾಗಿದೆಯೇ ಎಂಬುದನ್ನು ಮೇ 4ರ ಫಲಿತಾಂಶ ತೋರಿಸಿಕೊಡಲಿದೆ.

ಕೇರಳದಲ್ಲಿ ಬಿಜೆಪಿ ಒಂದು ಶಕ್ತಿಯೇ ಅಲ್ಲ, ಅದು ಗೆಲುವಿನ ಹಂತಕ್ಕೆ ಹೋಗಲು ಸಾಧ್ಯವೇ ಇಲ್ಲ ಎಂಬಂತೆ ಮಾಧ್ಯಮ ವರ್ಗವೂ ಬಿಂಬಿಸುತ್ತಾ ಬಂದಿದ್ದರೂ, ಈ ಬಾರಿ ಬಿಜೆಪಿ ಅನೇಕ ಕ್ಷೇತ್ರಗಳಲ್ಲಿ ಪ್ರಬಲ ಶಕ್ತಿಯಾಗಿ ಹೊರಹೊಮ್ಮಿರುವುದು ಎದ್ದು ಕಾಣುತ್ತಿರುವ ಅಂಶ. ಎಲ್‌ಡಿಎಫ್ ಮತ್ತು ಯುಡಿಎಫ್‌ಗಳ ಅದಲುಬದಲಾಗಿ ಆಡಳಿತ ನಡೆಸಿದರೂ ಕೇರಳದ ಅಭಿವೃದ್ಧಿ,ಶಿಕ್ಷಣ, ಆರೋಗ್ಯಕ್ಷೇ, ಯುವಜನತೆಗೆ ಉದ್ಯೋಗ ಸೇರಿದಂತೆ ಮೂಲಸೌಕರ್ಯಗಳ ಅಭಿವೃದ್ಧಿ ವಿಷಯದಲ್ಲಿ ಸಾಕ್ಷರ ಕೇರಳ ಹಿಂದೆ ಬಿದ್ದಿರುವುದು ಕೇರಳದ ಪ್ರಜ್ಞಾವಂತರಲ್ಲಿ ಈ ಬಾರಿ ಚರ್ಚೆಗೆ ಕಾರಣವಾಗಿರುವ ಒಂದು ಪ್ರಮುಖ ಅಂಶವಾಗಿತ್ತು.

ಈ ಎಲ್ಲ ಹಿನ್ನೆಲೆಯಲ್ಲಿ ಕೇರಳದಲ್ಲಿ ಈ ಬಾರಿ ಅಂಡರ್ ಕರೆಂಟ್ ಯಾವ ರೀತಿ ಕೆಲಸ ಮಾಡಿದೆ ?ಯುಡಿಎಫ್‌ನ ಆಂತರಿಕ ಗೊಂದಲದ ಪರಿಣಾಮ ಏನಾಗಿದೆ?ಆಡಳಿತ ವಿರೋಧಿ ಅಲೆ ಎಡರಂಗಕ್ಕೆ ಎಷ್ಟು ತೀವ್ರವಾಗಿ ಹೊಡೆತ ನೀಡಿದೆ ?ಬಿಜೆಪಿಯ ಸ್ಪರ್ಧೆ ಮತ್ತು ಅದರ ಮತಗಳು ಗೆಲುವಿನ ಮತಗಳಾಗಿ ಪರಿವರ್ತನೆಗೊಳ್ಳಲಿದೆಯೇ? ಬಿಜೆಪಿ ಎಷ್ಟು ಸ್ಥಾನಗಳನ್ನು ಗೆಲ್ಲಲಿದೆ ?ಅದು ಎಷ್ಟು ಪ್ರಬಲ ಸ್ಪರ್ಧೆ ಒಡ್ಡಲಿದೆ ಎಂಬಿತ್ಯಾದಿ ಅಂಶಗಳು ಕೇರಳದ ಈ ಬಾರಿಯ ಚುನಾವಣಾ ಫಲಿತಾಂಶದ ಲೆಕ್ಕಾಚಾರಗಳನ್ನೇ ಬದಲಿಸಬಹುದು ಎಂಬ ಮಾತೂ ರಾಜಕೀಯ ವಿಮರ್ಷಕರಿಂದ ಕೇಳಿಬರುತ್ತಿದೆ.

ಒಬಿಸಿಗೆ ಕೊಡವರ ಸೇರ್ಪಡೆ ಸಂಸದ ಯದುವೀರ್ ಭರವಸೆ

ಬೆಂಗಳೂರು: ಕೊಡವರು ಒಬಿಸಿಗೆ ಸೇರಲು ಸಂಪೂರ್ಣ ಅರ್ಹತೆ ಹೊಂದಿದ್ದಾರೆ. ಈ ಬಗ್ಗೆ ನಿಯಮಾನುಸಾರ ರಾಜ್ಯ ಸರ್ಕಾರದಿಂದಲೇ ಪ್ರಸ್ತಾವನೆ ಬರಬೇಕು. ಆ ನಂತರ ಚರ್ಚೆ ನಡೆಸಲಾಗುವುದು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭರವಸೆ ನೀಡಿದರು.



ಕೊಡವ ಸಮಾಜ ಬೆಂಗಳೂರು ವತಿಯಿಂದ ಶನಿವಾರ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕನ್ವೆನ್ಷನ್ ಸೆಂಟರ್‌ನಲ್ಲಿ ಹಮ್ಮಿಕೊಳ್ಳಲಾದ ಎಂ.ಸೋಮಯ್ಯ ವಿರಚಿತ ದಿವ್ಯ ಜೀವನ ಭವ್ಯ ಮಾನವ, ಕೂರ್ಗ್: ದ ಲ್ಯಾಂಡ್ ಆಫ್ ಜನರಲ್ಸ್ ಹಾಗೂ ಡಿವೈನ್ ಲೈಫ್ ಸಬ್‌ಲೈನ್ ಹ್ಯುಮಾನಿಟಿ ಕೃತಿ ಲೋಕಾರ್ಪಣೆ ಸಮಾರಂಭದಲ್ಲಿ ಅವರು ಮಾತನಾಡಿದರು. ಕೊಡಗಿನ ಅರಣ್ಯ, ಎಸ್ಟೇಟ್, ಜನರು ವಾಸಿಸುವ ಸ್ಥಳವನ್ನು ರಕ್ಷಣೆ ಮಾಡಬೇಕಾದರೆ 294 ಕಿ.ಮೀ ರೈಲ್ವೆ ಬ್ಯಾರಿಕೇಡ್ ಮಾಡಬೇಕಾಗುತ್ತದೆ. ಇದರೊಂದಿಗೆ ಕನಕಪುರ, ಸಕಲೇಶಪುರ ಮುಂತಾದ ಕಡೆಗಳಲ್ಲಿ ರೈಲ್ವೆ ಬ್ಯಾರಿಕೇಡ್‌ಮಾಡಬೇಕೆನ್ನುವ ಬೇಡಿಕೆಯಿದೆ. ಜತೆಗೆ ಕೊಡವ ಸಮಾಜದವರು ಒಬಿಸಿ ಪಟ್ಟಿಗೆ ಸೇರಿಸುವ ಬಗ್ಗೆ ಸಂಸತ್ತಿನಲ್ಲಿ ಮಾತನಾಡಿದ್ದೇನೆ, ಈ ಬಗ್ಗೆ ರಾಜ್ಯ ಸರ್ಕಾರದಿಂದಲೇ ಪ್ರಸ್ತಾವನೆ ಬರಬೇಕು. ಒಬಿಸಿ ಪಟ್ಟಿಗೆ ಸೇರಲು ಸಂಪೂರ್ಣ ಅರ್ಹತೆಯಿದ್ದರೂ, ಈ ಬಗ್ಗೆ ನಿಯಮಾನು ಸಾರ ರಾಜ್ಯ ಸರ್ಕಾರದಿಂದಲೇ ಪ್ರಸ್ತಾ ವನೆ ಬರಬೇಕು. ಆ ನಂತರ ಚರ್ಚೆ ನಡೆಸಲಾಗುವುದು ಎಂದರು.

ಸಂಸದ ತೇಜಸ್ವಿ ಸೂರ್ಯ ಮಾತನಾಡಿ, ಕೊಡವ ಸಮಾಜವು ಕೇವಲ ಕರ್ನಾಟಕ ಮಾತ್ರವಲ್ಲದೇ ಭಾರತಕ್ಕೆ ಅನೇಕ ಕೊಡುಗೆ ನೀಡಿದ ವೀರ ಸಮಾಜವಾಗಿದೆ. ಹಾಕಿ, ಸೈನ್ಯ, ನವೋದ್ಯಮಕ್ಕೆ ಕೊಡವ ಯುವಕರು ದೇಶದ ಪ್ರಗತಿಗೆ ಕೆಲಸ ಮಾಡುತ್ತಿದ್ದಾರೆ. ಈಗ ನೀಡಲಾಗಿರುವ ಮನವಿ ಪತ್ರಕ್ಕೆ ಧ್ವನಿಗೂಡಿಸುವ ಕಾರ್ಯ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಡಿಸಿಎಂಗೆ ಅಭಿನಂದನೆ



1ನೇ ತರಗತಿ ಪ್ರವೇಶಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಮಹತ್ವದ ಆದೇಶದಿಂದ ಮಕ್ಕಳ ಕನಿಷ್ಠ ವಯೋಮಿತಿಯನ್ನು 6 ವರ್ಷದ ಬದಲಾಗಿ 5 ವರ್ಷ 10 ತಿಂಗಳಿಗೆ ನಿಗದಿಪಡಿಸಿರುವ ಹಿನ್ನೆಲೆಯಲ್ಲಿ ಶನಿವಾರ ಸದಾಶಿವನಗರದ ನಿವಾಸದಲ್ಲಿ ಪೋಷಕರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು.

ನೀರಾನೆ ಹಂಸಿಣಿಗೆ ಆರೋಗ್ಯ ವ್ಯತ್ಯಯ: ತಜ್ಞರಿಂದ ತಪಾಸಣೆ

ಶಿವಮೊಗ್ಗ: ತರಬೇತಿ ವೈದ್ಯೆ ಡಾ. ಸಮೀಕ್ಷಾ ರೆಡ್ಡಿ ಅವರನ್ನು ಬಲಿ ಪಡೆದಿದ್ದ ತ್ಯಾವರೆಕೊಪ್ಪದ ಹುಲಿ ಮತ್ತು ಸಿಂಹಧಾಮದ ಗರ್ಭಾವಸ್ಥೆಯಲ್ಲಿರುವ ನೀರಾನೆ ಹಂಸಿಣಿ ಆರೋಗ್ಯದಲ್ಲಿ ಏರುಪೇರಾಗಿದ್ದು, ಬನ್ನೇರುಘಟ್ಟ ಮತ್ತು ಮೈಸೂರು ಮೃಗಾಲಯದ ತಜ್ಞ ವೈದ್ಯರ ತಂಡ ಆಗಮಿಸಿ ಹಂಸಿಣಿಯ ಆರೋಗ್ಯ ತಪಾಸಣೆ ನಡೆಸಿ ರಕ್ತ ಸೇರಿದಂತೆ ಕೆಲ ಮಾದರಿಗಳನ್ನು ಸಂಗ್ರಹಿಸಿ ತೆರಳಿದೆ.



ನೀರಾನೆಗಳು ಗರ್ಭ ಧರಿಸಿದ 250 ದಿನಗಳೊಳಗೆ ಮರಿ ಹಾಕುತ್ತವೆ. ಎಂಟು ವರ್ಷದ ಈ ಹಂಸಿಣಿ ಗರ್ಭ ಧರಿಸಿ 265 ದಿನ ಕಳೆದರೂ ಮರಿ ಹಾಕದಿರುವುದು ವೈದ್ಯರ ಆತಂಕಕ್ಕೆ ಕಾರಣವಾಗಿದೆ. ತುಂಬು ಗರ್ಭಿಣಿಯಾಗಿರುವ ಹಂಸಿಣಿ ಹೆರಿಗೆ ಅವಧಿ ಮುಗಿದ್ದರೂ ಮರಿ ಹಾಕುವುದಕ್ಕೆ ವಿಳಂಬ ಮಾಡುತ್ತಿದೆ. ಶಸ್ತ್ರಚಿಕಿತ್ಸೆ ಮೂಲಕ ಹೆರಿಗೆ ಮಾಡಿಸುವುದು ಅಸಾಧ್ಯವಾಗಿದೆ. ಹಾಗಾಗಿ ತಜ್ಞ ವೈದ್ಯರ ತಂಡವನ್ನು ಕರೆಸಿ ತಪಾಸಣೆ ನಡೆಸಲಾಗಿದೆ. ವರದಿ ಬಂದ ಬಳಿಕವೇ ಹೊಟ್ಟೆಯೊಳಗೆ ಮರಿ ಯಾವ ಸ್ಥಿತಿಯಲ್ಲಿದೆ ಎಂದು ಖಚಿತವಾಗಬೇಕಿದೆ. ಈಗಾಗಲೇ ಎರಡು ಮರಿಗಳೂ ಕೂಡ ಗರ್ಭಾವಸ್ಥೆಯಲ್ಲಿಯೇ ಮೃತಪಟ್ಟಿದ್ದವು. ಹೀಗಾಗಿ 3ನೇ ಮರಿ ಉಳಿಸಿಕೊಳ್ಳಲು ಯತ್ನ ನಡೆಸಲಾಗುತ್ತಿದೆ.

> **ನೀರಾನೆ ಆರೋಗ್ಯದಲ್ಲಿ ವ್ಯತ್ಯಯವಾಗಿದೆ. ಮರಿ ಹಾಕುವುದು ವಿಳಂಬವಾಗುತ್ತಿದೆ. ಹೀಗಾಗಿ ಬನ್ನೇರುಘಟ್ಟ ಮತ್ತು ಮೈಸೂರಿನಿಂದ ತಜ್ಞ ವೈದ್ಯರನ್ನು ಕರೆಯಿಸಲಾಗಿತ್ತು. ವೈದ್ಯರ ತಂಡ ಡಯಾಗ್ನಾಸಿಸ್ ಮಾಡುವ ನಿಟ್ಟಿನಲ್ಲಿ ಕೆಲವು ಮಾದರಿಗಳನ್ನು ತೆಗೆದುಕೊಂಡು ಹೋಗಿದೆ.**
> ■ **ಅಮರಾಕ್ಷರ, ಹುಲಿ ಮತ್ತು ಸಿಂಹಧಾಮದ ಸಿಇಒ**

ಕಿರುಸುದ್ದಿ

ಐದು ವರ್ಷ ಸಿದ್ದರಾಮಯ್ಯ ಸಿಎಂ: ಸತೀಶ ಜಾರಕಿಹೊಳಿ

ಬೆಳಗಾವಿ: ರಾಜ್ಯ ರಾಜಕೀಯದಲ್ಲಿ ಸಿಎಂ ಬದಲಾವಣೆ ಕುರಿತ ಚರ್ಚೆಗಳು ಮತ್ತೆ ಮುನ್ನೆಲೆಗೆ ಬಂದ ಬೆನ್ನಲ್ಲೇ, ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಪೂರ್ಣಾವಧಿ ಅಧಿಕಾರದಲ್ಲಿ ಮುಂದುವರಿಯಲಿದ್ದಾರೆ ಎಂದು ಹೇಳುವ ಮೂಲಕ ಸಚಿವ ಸತೀಶ ಜಾರಕಿಹೊಳಿ ಊಹಾಪೋಹಗಳಿಗೆ ತೆರೆ ಎಳೆದಿದ್ದಾರೆ. ಶನಿವಾರ ಹುಕ್ಕೇರಿಯಲ್ಲಿ ಬಿಜೆಪಿ ಮುಖಂಡ ರಮೇಶ್ ಕತ್ತಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಮುಖ್ಯಮಂತ್ರಿ ಸ್ಥಾನದ ಬದಲಾವಣೆ ಕುರಿತಾದ ಚರ್ಚೆಗಳಿಗೆ ಪೂರ್ಣವಿರಾಮ ಹಾಕಿದ್ದಾರೆ. ಹೈಕಮಾಂಡ್ ನಿರ್ಧಾರದಂತೆ ಸಿದ್ದರಾಮಯ್ಯನವರು ಪೂರ್ಣ ಐದು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ. ಇದರಲ್ಲಿ ಯಾವುದೇ ಗೊಂದಲಗಳಿಲ್ಲ ಎಂದು ಸ್ಪಷ್ಟಪಡಿಸಿದರು. ಸರ್ಕಾರದ ನಾಯಕತ್ವದ ಬಗ್ಗೆ ಅನಾವಶ್ಯಕವಾಗಿ ಹರಡುತ್ತಿರುವ ವದಂತಿಗಳಲ್ಲಿ ಯಾವುದೇ ಸತ್ಯಾಂಶವಿಲ್ಲ ಎಂದು ಜಾರಕಿಹೊಳಿ ವಿವರಿಸಿದರು. ಸರ್ಕಾರ ಕೇವಲ ಅಭಿವೃದ್ಧಿ ಕಾರ್ಯಗಳತ್ತ ತನ್ನ ಗಮನವನ್ನು ಕೇಂದ್ರೀಕರಿಸಿದೆ. ವಿರೋಧ ಪಕ್ಷದ ನಾಯಕರು ರಾಜಕೀಯ ಪ್ರೇರಿತ ಚರ್ಚೆಗಳನ್ನು ಹುಟ್ಟು ಹಾಕುತ್ತಿದ್ದಾರೆ. ಆದರೆ, ಸರ್ಕಾರ ತನ್ನ ಜನಪರ ಕಾರ್ಯಕ್ರಮಗಳ ಮೂಲಕ ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಅಂಬೇಡ್ಕರ್ ಪ್ರಶಸ್ತಿಗೆ ಘೋಷಣೆ

ಬೆಂಗಳೂರು: 2026ನೇ ಸಾಲಿನ ಡಾ. ಬಿ.ಆರ್. ಅಂಬೇಡ್ಕರ್ ಪ್ರಶಸ್ತಿಗೆ ನಾಡಿನ ಐವರು ಸಾಧಕರನ್ನು ಆಯ್ಕೆ ಮಾಡಲಾಗಿದ್ದು, ಆಯ್ಕೆಯಾದ ಸಾಧಕರಿಗೆ ಏ.14ರಂದು ಆಚರಿಸಲಾಗುವ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆಯಂದು ಸಿಎಂ ಪ್ರದಾನ ಮಾಡಲಿದ್ದಾರೆ. ಹೋರಾಟ, ಸಾಹಿತ್ಯ ಸಾಧನೆಗೆ ಬೆಂಗಳೂರು ಕೇಂದ್ರ ವಿಭಾಗದಿಂದ ಮಂಗಳೂರು ವಿಜಯ್ ಅವರಿಗೆ, ಹೋರಾಟ ಮತ್ತು ಪತ್ರಿಕೋದ್ಯಮ ಸೇವೆಗೆ ಬೆಂಗಳೂರು ವಿಭಾಗದಿಂದ ಸಿ.ಎಂ ಮುನಿಯಪ್ಪ ಅವರಿಗೆ, ಹೋರಾಟದ ಕ್ಷೇತ್ರದಿಂದ ಮೈಸೂರು ವಿಭಾಗದಿಂದ ಎಚ್.ಎನ್. ಅಣ್ಣಯ್ಯ ಅವರಿಗೆ, ಸಾಹಿತ್ಯ ಸಂಘಟನೆ ಕ್ಷೇತ್ರದಿಂದ ಕಲಬುರಗಿ ವಿಭಾಗದಿಂದ ಹನುಮಂತರಾವ್ ಬಿ. ದೊಡ್ಡಮನಿ ಮತ್ತು ಬೆಳಗಾವಿ ವಿಭಾಗದಿಂದ ದೇವದಾಸಿ ವಿಮುಕ್ತಿಗೆ ಹೋರಾಡಿದ ಶೋಭಾ ಗಸ್ತಿ ಅವರ ಹೆಸರನ್ನು ಆಯ್ಕೆ ಮಾಡಲಾಗಿದೆ.

6 ಹಸುಗಳ ಸಜೀವ ದಹನ ಆರೋಪಿ ಇಮ್ರಾನ್ ಬಂಧನ

ಬೆಂಗಳೂರು: ಆರು ಹಸುಗಳ ಸಜೀವ ದಹನಕ್ಕೆ ಕಾರಣವಾಗಿದ್ದ ಆರೋಪಿಯನ್ನು ಡಿ.ಜೆ ಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮೊಹಮ್ಮದ್ ಇಮ್ರಾನ್ (49) ಬಂಧಿತ. ಸಿಸಿಟಿವಿ ದೃಶ್ಯಗಳನ್ನು ಆಧಾರಿಸಿ ಆರೋಪಿ ಬಂಧಿಸಲಾಗಿದ್ದು, ಶಾಂಪುರ ರಸ್ತೆಯಲ್ಲಿನ ಪ್ಲೈವುಡ್ ಅಂಗಡಿಯಲ್ಲಿ ಕಳೆದ ಏ.7ರಂದು ಮುಂಜಾನೆ ಬೆಂಕಿ ಕಾಣಿಸಿಕೊಂಡಿತ್ತು. ಬೆಂಕಿಯ ಕೆನ್ನಾಲಿಗೆ ಕ್ಷಣಾರ್ಧದಲ್ಲಿ ಪಕ್ಕದಲ್ಲಿದ್ದ ಶ್ರೀನಿವಾಸ್ ಎಂಬುವರಿಗೆ ಸೇರಿದ ದನದ ಕೊಟ್ಟಿಗೆಗೆ ವ್ಯಾಪಿಸಿದ ಪರಿಣಾಮ ಆರು ಹಸುಗಳು ಹೊರಬರಲಾಗದೆ ಸ್ಥಳ ದಲ್ಲೇ ಸಜೀವ ದಹನವಾಗಿದ್ದವು ಎಂದು ಪೊಲೀಸರು ಹೇಳಿದರು. ಬೆಂಕಿ ಅವಘಡ ಆಕಸ್ಮಿಕವಲ್ಲ, ಬದಲಾಗಿ ಕಿಡಿಗೇಡಿಯೊಬ್ಬನ ಕೃತ್ಯ ಎಂಬುದು ಪೊಲೀಸರ ತನಿಖೆಯಲ್ಲಿ ತಿಳಿದುಬಂದಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಕೆ.ಜಿ ಹಳ್ಳಿ ನಿವಾಸಿಯಾದ ಆರೋಪಿ, ಮನೆ ಬಳಿ ರಾತ್ರಿ ವೇಳೆ ಓಡಾಡುತ್ತಿದ್ದ. ಹಾಗೆಯೇ, ಓಡಾಡುವಾಗ ನಾಯಿಗಳು ನನ್ನನ್ನು ಅಟ್ಟಾಡಿಸಿ ದ್ದವು, ಅವುಗಳನ್ನು ಹೆದರಿಸಲು ರಸ್ತೆಯ ಬದಿಯಲ್ಲಿದ್ದ ಕಸಕ್ಕೆ ಬೆಂಕಿ ಹಚ್ಚಿದೆ. ಹಸುಗಳನ್ನು ಕೊಲ್ಲುವ ಉದ್ದೇಶ ಇರಲಿಲ್ಲ ಎಂದು ಪೊಲೀಸರ ತನಿಖೆ ವೇಳೆ ಆರೋಪಿ ಹೇಳಿಕೊಂಡಿದ್ದಾನೆ. ಸದ್ಯ ತನಿಖೆ ಮುಂದುವರೆದಿದೆಂದು ಬೆಂ.ಪೂರ್ವ ವಿಭಾಗದ ಡಿಸಿಪಿ ವಿಕ್ರಮ್ ಆಮಟೆ ತಿಳಿಸಿದ್ದಾರೆ.

ಪತ್ರಕರ್ತರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು
ಊಹಾ ಪತ್ರಿಕೋದ್ಯಮ ಬಿಡಿ

ಬೀದರ್: ಪತ್ರಕರ್ತರು ಸಂವಿಧಾನದ ಆಶಯಗಳನ್ನು ಜಾರಿಗೊಳಿಸುವ ಕೆಲಸ ಮಾಡುತ್ತಿದ್ದೇವೆಯೇ ಎಂದು ಒಮ್ಮೆ ಆತ್ಮವಿಮರ್ಶೆ ಮಾಡಿಕೊಳ್ಳಬೇಕು ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.

ಅವರು ಶನಿವಾರ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಮತ್ತು ಬೀದರ್ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಆಯೋಜಿಸಿದ್ದ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಊಹಾ ಪತ್ರಿಕೋದ್ಯಮ ಸಮಾಜಕ್ಕೆ ಅತ್ಯಂತ ಅಪಾಯಕಾರಿಯಾದದ್ದು. ಕ್ಷುಲ್ಲಕ ವಿಚಾರವನ್ನು ದಿನವಿಡೀ ತೋರಿಸುವವರು ಅದರ ಪರಿಣಾಮದ ಬಗ್ಗೆಯೂ ಯೋಚಿಸಬೇಕು. ಗಂಡ ಹೆಂಡತಿ ಜಗಳವನ್ನು ಇಡೀ ದಿನ ತೋರಿಸಿದರೆ ಅದರಿಂದ ಸಮಾಜಕ್ಕೆ ಏನು ಪ್ರಯೋಜನ ಎಂದು ಪ್ರಶ್ನಿಸಿದರು.

ಅಂಬೇಡ್ಕರ್ ಮತ್ತು ಮಹಾತ್ಮಗಾಂಧಿ ಇಬ್ಬರೂ ಪತ್ರಕರ್ತರಾಗಿ ಧ್ವನಿ ಇಲ್ಲದವರ ಧ್ವನಿಯಾಗಿದ್ದರು. ಸಮಾಜದಲ್ಲಿರುವ ನ್ಯೂನ್ಯತೆಗಳನ್ನು ಹೋಗಲಾಡಿಸಿ ಸಮಾಜವನ್ನು ಕಟ್ಟುವ ಕಾಯಕವನ್ನು ಬಸವಾದಿ ಶರಣರು ಮಾಡಿದ್ದರು. ಶರಣರ ಆಶಯದ ಸಮ ಸಮಾಜ ಆಗದಿದ್ದರೆ ಅಸಮಾನತೆ ಮುಂದುವರೆಯುತ್ತದೆ. ಮುಂದುವರೆಯಲಿ ಎನ್ನುವುದು ಪಟ್ಟ ಭದ್ರರ ಹಿತಾಸಕ್ತಿಯಾಗಿದೆ .ಬಸವಣ್ಣ ತಿರಸ್ಕರಿಸಿದ್ದ ಕರ್ಮಸಿದ್ಧಾಂತವನ್ನು ಪಾಲಿಸುವವರು ಈಗ ಹೆಚ್ಚಾಗಿದ್ದಾರೆ. ಈ ಮೌಢ್ಯ ಆಚರಿಸುವವರೆಲ್ಲಾ ವಿದ್ಯಾವಂತರೇ ಎನ್ನುವುದು ಬೇಸರದ ಸಂಗತಿ. ಪತ್ರಕರ್ತರು ಕೇವಲ ಮಾಹಿತಿ ಕೊಡುವವರಾಗದೆ, ಸಮಾಜ ಸುಧಾರಣೆಗೂ ಒತ್ತು ನೀಡಬೇಕು ಎಂದರು.

ಜಾತಿ ಸಮಾಜ ಚಲನೆ ಇಲ್ಲದ್ದು. ಸಮಾಜವನ್ನು ಚಲನಶೀಲಗೊಳಿಸಲು ವಸ್ತುನಿಷ್ಠವಾದ ವೃತ್ತಿಪರತೆಯನ್ನು ಪತ್ರಕರ್ತರು ಪಾಲಿಸಬೇಕು. ಪತ್ರಕರ್ತರು ಸತ್ಯ ಬರೆದರೂ ಕೆಲವೊಮ್ಮೆ ಸಂಪಾದಕರುಗಳು



> **ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ನೀಡುವ ಸವಲತ್ತನ್ನು ಜಾರಿ ಮಾಡಿದ್ದೇ ನಾನು. ಇದರಲ್ಲಿನ ನಿಯಮಗಳಲ್ಲಿ ತೊಂದರೆ ಇದ್ದರೆ, ಆ ಬಗ್ಗೆ ಚರ್ಚಿಸಿ ನಿವಾರಣೆಗೊಳಿಸಲಾಗುವುದು.**
> ■ **ಸಿದ್ದರಾಮಯ್ಯ, ಮುಖ್ಯಮಂತ್ರಿ**

ಮಾಲೀಕರ ಒತ್ತಡಕ್ಕೆ ಮಣಿದು ಬದಲಾಯಿಸಿಬಿಡುತ್ತಾರೆ. ನಾನು ಮಂತ್ರಿಯಾಗಿ 40 ವರ್ಷ ಆಯ್ತು. ನಮ್ಮ ಸರ್ಕಾರದ ಪರವಾಗಿ ಬರೆಯಿರಿ ಎಂದು ಇವತ್ತಿನವರೆಗೂ ನಾನು ಯಾರನ್ನೂ ಕೇಳಿಲ್ಲ ಎಂದರು.

ರಾಜ್ಯ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶಿವಾನಂದ ತಗಡೂರ್ ಮಾತನಾಡಿ, ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿ ಆರಂಭಿಸಿ ಕಳೆದ ಐದು ವರ್ಷಗಳಲ್ಲಿ 1.1 ಕೋಟಿ ರೂ. ಉಳಿಕೆ ಮಾಡಿ ಠೇವಣಿ ಇಡಲಾಗಿದೆ. ಪತ್ರಕರ್ತರು ಅಪಘಾತಕ್ಕೀಡಾದಾಗ, ತೊಂದರೆಯಲ್ಲಿದ್ದಾಗ ನೆರವಾಗಲು ಆಪತ್ಬಾಂಧವ ಯೋಜನೆ ಆರಂಭಿಸಲಾಗಿದೆ. ಮುಖ್ಯಮಂತ್ರಿಗಳ ಕಾಳಜಿಯಿಂದ ಆಯವ್ಯಯದಲ್ಲಿ ಮಾಧ್ಯಮ ಸಂಜೀವಿನಿ (ಮಾಧ್ಯಮ ಆರೋಗ್ಯ ಸಂಜೀವಿನಿ) ಯೋಜನೆ ಘೋಷಿಸಿದ್ದು, ಸಮರ್ಪಕ ಈ ಯೋಜನೆಯ ಅನುಷ್ಠಾನಕ್ಕೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಸೂಚಿಸುವಂತೆ ಮನವಿ ಮಾಡಿದರು.

ಸಮ್ಮೇಳನ ಸ್ವಾಗತ ಸಮಿತಿ ಅಧ್ಯಕ್ಷ, ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಸಮ್ಮೇಳನ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು.ಸಚಿವರುಗಳಾದ ರಹೀಂ ಖಾನ್, ಶರಣ ಪ್ರಕಾಶ್ ಪಾಟೀಲ್, ಸಿಎಂ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್, ಜಿಲ್ಲಾಧ್ಯಕ್ಷರಾದ ಆನಂದ್ ದೇವಪ್ಪ, ಸಮ್ಮೇಳನದ ಪ್ರಧಾನ ಭಾಷಣಕಾರರಾಗಿರುವ ಹಿರಿಯ ಸಂಪಾದಕರಾದ ವಿಶ್ವೇಶ್ವರ ಭಟ್, ಸಂಸದರಾದ ಸಾಗರ್ ಖಂಡ್ರೆ, ಮಾಜಿ ಸಚಿವರಾದ ರಾಜಶೇಖರ್ ಪಾಟೀಲ್, ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ್ ಇದ್ದರು. ಹಾರಕುಡ ಹಿರೇಮಠ ಸಂಸ್ಥಾನದ ಡಾ.ಚನ್ನವೀರ ಶಿವಾಚಾರ್ಯರು, ಬಸವಕಲ್ಯಾಣ ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ಡಾ.ಬಸವಲಿಂಗ ಪಟ್ಟದೇವರು ಇವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪತ್ರಕರ್ತರ ಸಂಘದ ರಾಜ್ಯ ಮತ್ತು ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅಲ್ಪಸಂಖ್ಯಾತ ಘಟಕಕ್ಕೆ ಜಬ್ಬಾರ್ ರಾಜೀನಾಮೆ

ದಾವಣಗೆರೆ: ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಮತದಾನ ಮುಕ್ತಾಯಗೊಂಡ ಬೆನ್ನಲ್ಲೇ ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ವಿಧಾನ ಪರಿಷತ್ ಸದಸ್ಯ ಕೆ.ಅಬ್ದುಲ್ ಜಬ್ಬಾರ್ ರಾಜೀನಾಮೆ ನೀಡಿದ್ದಾರೆ.



ದಾವಣಗೆರೆ ದಕ್ಷಿಣ ಕ್ಷೇತ್ರದ ಟಿಕೆಟ್ ಅಲ್ಪ ಸಂಖ್ಯಾತರಿಗೆ ಸಿಗಬೇಕೆಂದು ಪ್ರಯತ್ನಿಸಿದರೂ, ಕಾರಣಾಂತರಗಳಿಂದ ಟಿಕೆಟ್ ಕೈತಪ್ಪಿತ್ತು.

ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷರಾಗಿ ಸೇವೆ ಸಲ್ಲಿಸುವುದು ತಮಗೆ ದೊರೆತ ಗೌರವ ಎಂದು ಅಬ್ದುಲ್ ಜಬ್ಬಾರ್ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ. ಕಾಂಗ್ರೆಸ್‌ನ ಆಂತರಿಕ ತೀರ್ಮಾನ, ಸ್ಥಳೀಯ ನಾಯಕರ ನಡುವಿನ ಸಮನ್ವಯದ ಕೊರತೆಯಿಂದಾಗಿ ಅಬ್ದುಲ್ ಜಬ್ಬಾರ್ ಈ ನಿರ್ಧಾರ ಕೈಗೊಂಡಿದ್ದಾರೆ. ಜಿಲ್ಲಾ ನಾಯಕರ ನಿರ್ಲಕ್ಷ್ಯ ಮತ್ತು ಅಲ್ಪಸಂಖ್ಯಾತ ಸಮುದಾಯವನ್ನು ನಡೆಸಿಕೊಳ್ಳುತ್ತಿರುವ ರೀತಿಯ ಬಗ್ಗೆ ಅಸಮಾಧಾನಗೊಂಡು, ಪ್ರತಿಭಟನೆಯ ರೂಪದಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಈ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಎಂಎಲ್‌ಸಿ ಕೆ.ಅಬ್ದುಲ್ ಜಬ್ಬಾರ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಮ್ ಅಹಮದ್, ಶಾಸಕ ರಿಜ್ವಾನ್ ಅರ್ಷದ್

> **ದಾವಣಗೆರೆ ದಕ್ಷಿಣ ಮತದಾನ ಮುಕ್ತಾಯ ಬೆನ್ನಲ್ಲೇ ಕಾಂಗ್ರೆಸ್ ಭಿನ್ನಮತ ಸ್ಫೋಟ**

ಅವರುಗಳೇ ಮೊದಲು ನನಗೆ ಚುನಾವಣೆಗೆ ನಿಲ್ಲುವಂತೆ ಹೇಳಿದ್ದರು. ಈಗ ಅವರೇ ಉಲ್ಟಾ ಹೊಡೆದಿದ್ದು, ಹೆಗಲೂ ನಮ್ಮದೇ ಗುಂಡು ನಮ್ಮದೇ ಎಂಬಂತಾಗಿದೆ. ಕಾಂಗ್ರೆಸ್ ಕಚೇರಿಯಲ್ಲಿ ಪಕ್ಷದ ಮುಖಂಡರ ವಿರುದ್ಧವೇ ಸುದ್ದಿಗೋಷ್ಠಿ ಮಾಡಬಾರದಿತ್ತು. ಈ ವಿಚಾರದಲ್ಲಿ ನನಗೆ ದುಃಖವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾಂಗ್ರೆಸ್ ಪಕ್ಷಕ್ಕೆ ನಮ್ಮ ಕೈಲಾದಷ್ಟು ಕೆಲಸ ಮಾಡಿದ್ದೇವೆ. ನನಗೆ ಆರೋಗ್ಯ ಸರಿ ಇರಲಿಲ್ಲ. 20–30 ದಿನ ದಾವಣಗೆರೆಯಲ್ಲಿದ್ದ ಇವರ್‍ಯಾರೂ ಬಂದು ನನ್ನೊಂದಿಗೆ ಮಾತಾಡಲಿಲ್ಲ. ಅಭ್ಯರ್ಥಿ (ಸಮರ್ಥ್ ಶಾಮನೂರು), ಅವರ ತಂದೆ (ಸಚಿವ ಎಸ್.ಎಸ್.ಮಲ್ಲಿಕಾರ್ಜುನ್) ಅಥವಾ ತಾಯಿ(ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್) ಕೂಡ ನನ್ನನ್ನು ಪ್ರಚಾರಕ್ಕೆ ಕರೆದಿಲ್ಲ. ನಾನು ಮೂರು ಬಾರಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ, ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ, ಕೆಪಿಸಿಸಿ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ, ಮೂರು ಸಲ ವಿಧಾನ ಪರಿಷತ್ ಸದಸ್ಯನಾಗಿದ್ದೇನೆ. ಆದರೂ ನಮ್ಮನ್ನು ಬಳಸಿಕೊಂಡಿಲ್ಲ ಅಂದ್ರೆ ಜನಪ್ರಿಯತೆ ಬಗ್ಗೆ ಸಲೀಂ, ರಿಜ್ವಾನ್ ಬಳಿ ಕಲಿಯುವ ಅಗತ್ಯವಿದೆ ಅಂತಾ ಅನಿಸುತ್ತದೆ ಎಂದರು.

ಒಂದೇ ವರ್ಷದಲ್ಲಿ 55 ಗಿಗಾ ವ್ಯಾಟ್ ವಿದ್ಯುತ್ ಹೆಚ್ಚಳ
ದೇಶದಲ್ಲಿ ಇಂಧನ ಕೊರತೆ ಇಲ್ಲ

ಧಾರವಾಡ: ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಒಂದೇ ವರ್ಷದಲ್ಲಿ ಗಿಗಾವ್ಯಾಟ್ ಲೆಕ್ಕದಲ್ಲಿ ವಿದ್ಯುತ್ ಹೆಚ್ಚಳ ಮಾಡುತ್ತಿದೆ. ಇದರಲ್ಲಿ 55 ಗಿಗಾ ವ್ಯಾಟ್ ಸೇರಿಸಿದ್ದು ದೇಶದ ಇತಿಹಾಸದಲ್ಲಿಯೇ ಪ್ರಥಮ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಹೇಳಿದರು.



ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, 2014ರಲ್ಲಿ 250 ಗಿಗಾ ವ್ಯಾಟಿದ್ದ ವಿದ್ಯುತ್ ಉತ್ಪಾದನೆಯು ಇಂದು 20ರಷ್ಟು ದ್ವಿಗುಣವಾಗಿದೆ. ಸರಿಯಾದ ಯೋಜನೆ ಮಾಡಿದರೆ, ದೇಶದಲ್ಲಿ ವಿದ್ಯುತ್ ಕಡಿತವೇ ಆಗದ ಸ್ಥಿತಿಗೆ ಬಂದಿದ್ದಾಗಿ ತಿಳಿಸಿದರು.

44 ಗಿಗಾ ವ್ಯಾಟ್ ಸೋಲಾರ್ ಮತ್ತು ಉಳಿದ ಬಯೋ ಎನರ್ಜಿ ಆಗಿ ಸಮಸ್ಯೆ ಇದ್ದಾಗಲೂ ನಾವು ಭದ್ರವಾಗಿದ್ದೇವೆ. 2014ರಲ್ಲಿ 22ರಷ್ಟು ವಿದ್ಯುತ್ ಲೈನ್ ಇತ್ತು. ಇಂದು 63 ಸಾವಿರ ಕಿಲೋ ಮೀಟರ್ ಉದ್ದದ ಲೈನ್, 1.5 ಲಕ್ಷ ಉದ್ದವಾಗಿದೆ ಎಂದರು.

ಇಂಧನ ಕೊರತೆ ಬಗ್ಗೆ ಕೆಲವು ವಿಪಕ್ಷದ ನಾಯಕರು ಬೊಬ್ಬೆ ಹಾಕುತ್ತಿದ್ದು, ನಾವು ಸುರಕ್ಷಿತವಾಗಿದ್ದೇವೆ. ಪೆಟ್ರೋಲ್, ಡೀಸೆಲ್ ಸಿಗುತ್ತಿದೆ ಅಲ್ಲವೇ? ಮನೆಗೂ ಕೂಡ ಎಲ್‌ಪಿಜಿ ಲಭಿಸುತ್ತಿದೆ ಅಲ್ಲವೇ? ತೈಲ ಸಮಸ್ಯೆ ಯಾರಿಗೆ ಆಗಿದೆ? ಎಂದು ಪ್ರಶ್ನೆ ಮಾಡಿದರು.

ಭೂಮಿ ಒಳಗಿರುವ ಎಲ್‌ಪಿಜಿ ತೆಗೆಯಬೇಕು. ನಮ್ಮಲ್ಲಿ ಎಲ್‌ಪಿಜಿ ಉತ್ಪಾದನೆಗೆ ಬೇಕಾದ ಭೂಮಿ ಇಲ್ಲ. ಅದು ನೈಸರ್ಗಿಕವಾಗಿ ಇರುವುದು. ಆದರೂ ಕಚ್ಚಾ ತೈಲ ಆಮದು ಮಾಡಿಕೊಂಡು, ನಮ್ಮಲ್ಲಿ ಎಲ್‌ಪಿಜಿ ಶೇ.20ರಷ್ಟು ಉತ್ಪಾದಿಸುತ್ತಿದೆ ಎಂದರು.

ದೇಶದಲ್ಲಿ ಏನೂ ಸಮಸ್ಯೆ ಆಗಿಲ್ಲ. 2014ರಲ್ಲಿ ಪವನ ವಿದ್ಯುತ್ ಕಡಿಮೆ ಇತ್ತು. ಈಗ ಗಿಗಾ ವ್ಯಾಟ್‌ನಲ್ಲಿ ವಿದ್ಯುತ್ ಹೆಚ್ಚಳ ಜತೆ ರಿಫೈನಿಂಗ್ ಸಾಮರ್ಥ್ಯ ಹೆಚ್ಚಿಸಿದೆ. ಆಟೋ ರಿಕ್ಷಾ ಎಲ್‌ಪಿಜಿ ಸಮಸ್ಯೆಗೆ 300 ಖಾಸಗಿ ಔಟ್‌ಲೆಟ್ ಕಾರಣ ಎಂದು ಹೇಳಿದರು.

70 ಸರ್ಕಾರಿ ಬಂಕ್‌ಗಳಿವೆ. ಸಾಕಷ್ಟು ಸಂಗ್ರಹ ಇದ್ದರೂ, ದರ ಹೆಚ್ಚಿಸಿಲ್ಲ. ಆದರೆ, 300 ಬಂಕ್‌ಗಳಲ್ಲಿ ದರದ ಸಮಸ್ಯೆ ಉಂಟಾಗಿದೆ. ದರವೂ ಹೆಚ್ಚಿಸಿದೆ. ಹೀಗಾಗಿ ಸಭೆ ನಡೆಸಿ, ದರಪಟ್ಟಿ ಪ್ರಚುರಪಡಿಸಲು ಸೂಚಿಸಿದ್ದಾಗಿ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದರು.

ಯುದ್ಧ ನಿಲ್ಲಿಸಲು ಪಾಕಿಸ್ತಾನ ಮಧ್ಯಸ್ಥಿಕೆ ಬಗ್ಗೆ ಪ್ರತಿಕ್ರಿಯಿಸಿದ ಜೋಶಿ, ಕಾಂಗ್ರೆಸ್ ಮೋದಿ ವಿರೋಧಿಸುವ ಬರದಲ್ಲಿ ದೇಶವನ್ನೇ ವಿರೋಧಿಸುತ್ತಿದೆ. ಪಾಕಿಸ್ತಾನದ ಪಾತ್ರದ ಬಗ್ಗೆ ಎಲ್ಲರಿಗೂ ಗೊತ್ತಿರುವ ವಿಚಾರ. ಯುದ್ಧ ಆಗದಂತೆ ತಡೆಯಬೇಕಿದೆ. ಭಾರತದ ದಿಕ್ಕು ದೆಸೆ ನೇತೃತ್ವ ಸರಿ ಇದೆ ಎಂದ ಜೋಶಿ, ರಾಜಕಾರಣದ ಹಿನ್ನೆಲೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ಉತ್ತರಿಸಲಿದೆ ಎಂದರು.

ಕೇರಳದಲ್ಲಿ ಬಾಲಕಿ ಶ್ರೀನಂದಾ ಅಂತ್ಯಕ್ರಿಯೆ

ಚಿಕ್ಕಮಗಳೂರು: ಇಡೀ ಜಿಲ್ಲೆಯಲ್ಲಿ ಸಂಚಲನ ಉಂಟು ಮಾಡಿದ್ದ ಕೇರಳ ಬಾಲಕಿ ಶ್ರೀನಂದಾ ನಾಪತ್ತೆ ಹಾಗೂ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರಿಂದ ತನಿಖೆ ಮುಂದುವರಿದಿದೆ. ಶನಿವಾರ ಶ್ರೀನಂದಾ ಮೃತ ದೇಹವನ್ನು ಆಕೆಯ ಹುಟ್ಟೂರು ಕೇರಳದ ಪಾಲಕ್ಕಾಡ್‌ಗೆ ಕೊಂಡೊಯ್ಯಲಾಗಿದ್ದು, ಅಲ್ಲಿಯೇ ಅಂತ್ಯಕ್ರಿಯೆ ನಡೆಸಲಾಗಿದೆ.

ಚಂದ್ರದ್ರೋಣ ಪರ್ವತ ಸಾಲಿನ ಮಾಣಿಕ್ಯಧಾರದ ಬಳಿಯಿಂದ ಏ.7ರ ಸಂಜೆ 5.30ಕ್ಕೆ ಶ್ರೀನಂದಾ ನಾಪತ್ತೆಯಾಗಿ, ಏ.10ರಂದು ಶವವಾಗಿ ಪತ್ತೆಯಾಗಿದ್ದಳು. ಪ್ರವಾಸದ ಸಮಯದಲ್ಲಿ ಸದಾ ಮೊಬೈಲ್ ಫೋನ್ ಬಳಸುತ್ತಿದ್ದ ಮಗಳಿಗೆ ತಂದೆ ಬುದ್ಧಿ ಹೇಳಿ ಗದರಿಸಿದ್ದೇ ಆತ್ಮಹತ್ಯೆಗೆ ಪ್ರಚೋದನೆ ನೀಡಿರಬಹುದು ಎನ್ನುವ ಮಾತುಗಳು ಕೇಳಿಬರುತ್ತಿದೆ. ಆಕೆ ನಾಪತ್ತೆಯಾಗುವ ಮೊದಲು ತನ್ನ ಸ್ನೇಹಿತೆಯೊಂದಿಗೆ ಸುಮಾರು 15 ನಿಮಿಷಗಳ ಕಾಲ ದೂರವಾಣಿ ಕರೆಯಲ್ಲಿ ಮಾತನಾಡಿದ್ದಾಳೆ ಎನ್ನಲಾಗಿದ್ದು, ಪೊಲೀಸರು ಈ ಕುರಿತು ತಾಂತ್ರಿಕ ತನಿಖೆ ಕೈಗೊಂಡಿದ್ದಾರೆ.

ಆಕೆಯ ಸಾವಿನ ಬಗ್ಗೆ ಹಲವು ಅನುಮಾನ ವ್ಯಕ್ತವಾದ ಹಿನ್ನೆಲೆಯಲ್ಲಿ ಪ್ರಕರಣವನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಿದ್ದಾರೆ. ಇದೇ ಕಾರಣಕ್ಕೆ ಇಬ್ಬರು ತಜ್ಞ ವೈದ್ಯರ ತಂಡದಿಂದ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಸಂಪೂರ್ಣ ಪ್ರಕ್ರಿಯೆಯನ್ನು ವಿಡಿಯೋ ಚಿತ್ರೀಕರಣ ಮಾಡಲಾಗಿದೆ.

ಎಂಜಿನಿಯರ್ ಮನೆಯಲ್ಲಿ 6 ಕೆಜಿ ಚಿನ್ನ, 5 ಕೆಜಿ ಬೆಳ್ಳಿ ಪತ್ತೆ

ಬೆಳಗಾವಿ: ನಗರಾಭಿವೃದ್ಧಿ ಕೋಶದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅಜಯಸಿಂಗ್ ರಜಪೂತ್ ಮನೆ ಮೇಲೆ ನಡೆದಿದ್ದ ಲೋಕಾಯುಕ್ತ ಅಧಿಕಾರಿಗಳ ದಾಳಿ ಶನಿವಾರ ಅಂತ್ಯಗೊಂಡಿದೆ.



ದಾಳಿ ವೇಳೆ ಅಜಯ್ ಸಿಂಗ್ ರಜಪೂತ್ ನಿವಾಸ ಹಾಗೂ ಕಚೇರಿಗಳಲ್ಲಿ ಒಟ್ಟು 14 ಕೋಟಿ ರೂಪಾಯಿಗೂ ಅಧಿಕ ಮೊತ್ತದ ಅಕ್ರಮ ಆಸ್ತಿ ಪತ್ತೆಯಾಗಿದೆ.

ಇದು ಅವರ ಸಂಪಾದನೆಗಿಂತ ಎಷ್ಟೋ ಪಟ್ಟು ಹೆಚ್ಚಾಗಿದೆ ಎಂದು ಲೋಕಾ ಅಧಿಕಾರಿಗಳು ತಿಳಿಸಿದ್ದಾರೆ. ಬೆಳಗಾವಿಯ ಆಂಜನೇಯ ನಗರ ಸೇರಿದಂತೆ ಒಟ್ಟು ಏಳು ಕಡೆಗಳಲ್ಲಿ ಏಕಕಾಲಕ್ಕೆ ದಾಳಿ ನಡೆಸಲಾಗಿತ್ತು. ಈ ವೇಳೆ 6 ಕೆಜಿ ಚಿನ್ನ, 5 ಕೆಜಿ ಬೆಳ್ಳಿ ಆಭರಣಗಳು ಪತ್ತೆಯಾಗಿವೆ. ಅಲ್ಲದೇ 3.12 ಕೋಟಿ ರೂಪಾಯಿ ಬ್ಯಾಂಕ್ ಡೆಪಾಸಿಟ್ ಇಟ್ಟಿರುವುದು ಬೆಳಕಿಗೆ ಬಂದಿದೆ. 18 ಖಾಲಿ ನಿವೇಶನಗಳ ದಾಖಲೆ ವಶ: ಸವದತ್ತಿ, ಹುಕ್ಕೇರಿ ಹಾಗೂ ಹುಬ್ಬಳ್ಳಿಯ ವಿವಿಧೆಡೆ ಒಟ್ಟು 18 ನಿವೇಶನಗಳನ್ನು ಅಜಯಸಿಂಗ್ ಖರೀದಿಸಿರುವುದು ದಾಖಲೆಗಳಿಂದ ಸಾಬೀತಾಗಿದೆ. ಜೊತೆಗೆ ರಜಪೂತ ಐಷಾರಾಮಿ ಕಾರು ಮತ್ತು ಬೈಕ್‌ಗಳನ್ನು ಹೊಂದಿದ್ದರು ಎಂದು ದಾಳಿ ಮಾಡಿದ ಅಧಿಕಾರಿಗಳು ತಿಳಿಸಿದರು.

ತಲಾ ₹3 ಕೋಟಿ ಅನುದಾನ ಬಿಡುಗಡೆಯಾದರೂ ದಿನಾಂಕ ನಿಗದಿಯಾಗಿಲ್ಲ
ಆನೆಗೊಂದಿ, ಕನಕಗಿರಿ ಉತ್ಸವಕ್ಕೆ ನಿರಾಸಕ್ತಿ!

▸ **ಮಂಜುನಾಥ ಗಂಗಾವತಿ**

ಕೊಪ್ಪಳ: ಜಿಲ್ಲೆಯಲ್ಲಿ ಆನೆಗೊಂದಿ, ಕನಕಗಿರಿ ಉತ್ಸವಕ್ಕೆ ಜಿಲ್ಲಾ ಜನಪ್ರತಿನಿಧಿಗಳು ನಿರುತ್ಸಾಹ ತೋರಿದ್ದು, ಇನ್ನು ದಿನಾಂಕ ನಿಗದಿಯಾಗಿಲ್ಲ.

ದಿಗಂತ ವಿಶೇಷ



ಬೇಸಿಗೆ ಆರಂಭವಾಗಿದ್ದು, ರಾಜ್ಯದಲ್ಲಿ ಈಗಾಗಲೇ ಎಲ್ಲ ಉತ್ಸವಗಳು ನಡೆದಿವೆ. ಆದರೆ, ಆನೆಗೊಂದಿ, ಕನಕಗಿರಿ ಉತ್ಸವಕ್ಕೆ ಮಾತ್ರ ಮುಹೂರ್ತ ಕೂಡಿ ಬಂದಿಲ್ಲ. 2024ರಲ್ಲಿ ಆದ ಉತ್ಸವಗಳು 2025ರಲ್ಲಿ ಆಗಲೇ ಇಲ್ಲ. ಈ ಹಿಂದೆ ಇದ್ದ ಬರ, ಚುನಾವಣೆ ಸೇರಿ ಇನ್ನಿತರ ಯಾವುದೇ ಬಲವಾದ ಕಾರಣಗಳಿರಲಿಲ್ಲ. ಉತ್ಸವ ಮಾಡುತ್ತೇವೆ ಎನ್ನುತ್ತಲೇ ಸರ್ಕಾರ, ಜಿಲ್ಲಾಡಳಿತ ದಿನಗಳನ್ನು ದೂಡಿದ್ದುವಿಪರ್ಯಾಸವಾಗಿದೆ.

ಕನಕಗಿರಿ ಉತ್ಸವಕ್ಕೆ ಆಸಕ್ತಿ ತೋರಿದರೂ ಜಾತ್ರೆ ಮತ್ತು ಉತ್ಸವ ಆಯೋಜನೆ ಸಂಬಂಧ ಕೆಲವೇ ಜನರು ಆಡಿದ ಮಾತುಗಳಿಗೆ ಸಚಿವರು ಜಿಲ್ಲೆಯ ಜನರ ಆಶಯ ಬಲಿಕೊಟ್ಟಿದ್ದು ಖೇದಕರ. ಉತ್ಸವಗಳು ನಾಡು, ಜಿಲ್ಲೆ, ರಾಜ್ಯಭಾರ ನಡೆಸಿದ ರಾಜಮನೆತನ, ಜನಸಾಮಾನ್ಯರ ಕಾರ್ಯಕ್ರಮ. ಅವುಗಳನ್ನು ಕೇವಲ ಒಂದು ಊರು, ತಾಲೂಕು, ಕ್ಷೇತ್ರಕ್ಕೆ ಸೀಮಿತಗೊಳಿಸುತ್ತಿರುವುದು ಸಂಕುಚಿತತೆಯ ಸಂಕೇತವಾಗಿದೆ.

3 ಕೋಟಿ ರೂ.ಅನುದಾನ

ಜಿಲ್ಲೆಯ ಸಾಂಸ್ಕೃತಿಕ, ಐತಿಹಾಸಿಕ ಪ್ರತಿಬಿಂಬವಾಗಿರುವ ಕನಕಗಿರಿ, ಆನೆಗೊಂದಿ ಉತ್ಸವ ಆಚರಣೆಗೆ ಸರ್ಕಾರ ಅಷ್ಟಾಗಿ ಉತ್ಸಾಹ ತೋರುತ್ತಿಲ್ಲ. ಎರಡೂ ಉತ್ಸವಕ್ಕೆ ತಲಾ ಮೂರು ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ. ಆದರೆ, ಇನ್ನು ದಿನಾಂಕ ನಿಗದಿ ಆಗಿಲ್ಲ. ಇನ್ನು ಅನುದಾನ ಕಡಿಮೆ ಬಂದಿದ್ದರಿಂದ ಉತ್ಸವ ವಿಜೃಂಭಣೆಯಾಗಿ ನಡೆಯುವುದು ಕಷ್ಟಸಾಧ್ಯವಾಗಿದೆ.



> **ಮುಂದಿನ ವಾರ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ ಅವರು ಸಭೆ ನಡೆಸಲಿದ್ದಾರೆ. ಅಂದು ಉತ್ಸವದ ದಿನಾಂಕ ನಿಗದಿಯಾಗಲಿದೆ. ಸರ್ಕಾರದಿಂದ ತಲಾ 3 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಜಿಲ್ಲಾಡಳಿತ ದಿಂದ ಹೆಚ್ಚಿನ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.**
> ■ **ಡಾ.ಸುರೇಶ್ ಇಟ್ನಾಳ್, ಜಿಲ್ಲಾಧಿಕಾರಿ**

ಬಿಸಿಲಿನ ಬೇಗೆಯ ಸವಾಲು

ಬಿಸಿಲ ನಾಡಿನಲ್ಲಿ ಕೊಪ್ಪಳವೂ ಒಂದು. ಈ ಬಾರಿ ಬಿಸಿಲು ಹೆಚ್ಚಾಗಿದ್ದು, ಮೇನಲ್ಲಿ ಉತ್ಸವಗಳು ನಡೆದರೆ, ಬಿಸಿಲಿನಲ್ಲಿ ಜನರನ್ನು ಕರೆ ತರುವುದು ಸವಾಲಿನ ಪ್ರಶ್ನೆಯಾಗಿದೆ. ಜಿಲ್ಲಾಡಳಿತ ಬೇಸಿಗೆ ಮೊದಲೇ ಮಾಡಬೇಕಾದ ಉತ್ಸವಗಳನ್ನು ಬೇಸಿಗೆಯಲ್ಲಿ ಆಚರಿಸುವುದಕ್ಕೆ ಜನರು ವಿರೋಧ ವ್ಯಕ್ತಪಡಿಸಿದ್ದಾರೆ.

ಫೈರೋಜ್ ಪಠಾಣ್ ಹತ್ಯೆ | ಪೊಲೀಸರ ಜತೆ ಮಾತಿನ ಚಕಮಕಿ
ಹಂತಕರ ಬಂಧನಕ್ಕೆ ಕುಟುಂಬಸ್ಥರ ಆಗ್ರಹ

ಧಾರವಾಡ: ಯುವ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಮತ್ತು ಹಾಶ್ಮಿನಗರ ನಿವಾಸಿ ಫೈರೋಜ್ ಖಾನ್ ಪಠಾಣ್ ಹತ್ಯೆ ತೀವ್ರ ಸ್ವರೂಪ ಪಡೆದಿದ್ದು, ಶನಿವಾರ ಉಪನಗರ ಠಾಣೆ ಮುಂದೆ ಪ್ರತಿಭಟನೆಗೆ ಯತ್ನಿಸಿದ ವೇಳೆ ಪೊಲೀಸರು ಮತ್ತು ಕುಟುಂಬಸ್ಥರ ಮಧ್ಯೆ ಮಾತಿನ ಚಕಮಕಿ ನಡೆದಿದೆ.



ಶುಕ್ರವಾರ ತಡರಾತ್ರಿ ಫೈರೋಜ್ ಖಾನ್ ಪಠಾಣ್ (28) ಹತ್ಯೆ ಬಳಿಕ ಶವವನ್ನು ಮರಣೋತ್ತರ ಪರೀಕ್ಷೆಗೆ ಕಿಮ್ಸ್‌ಗೆ ರವಾನಿಸಿತ್ತು. ಶನಿವಾರ ಬೆಳಗ್ಗೆ ಮರಣೋತ್ತರ ಪರೀಕ್ಷೆ ಪ್ರಕ್ರಿಯೆ ಆರಂಭದ ವೇಳೆಗೆ ಕುಟುಂಬಸ್ಥರ ಮತ್ತು ಆತನ ಬೆಂಬಲಿಗರು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರು.

ಪೊಲೀಸರ ಜತೆ ವಾಗ್ವಾದ: ಮರಣೋತ್ತರ ಪರೀಕ್ಷೆ ನಂತರ ಶವವನ್ನು ಉಪನಗರ ಠಾಣೆಗೆ ತೆಗೆದುಕೊಂಡು ಹೋಗಿ ಪ್ರತಿಭಟನೆಗೆ ಯತ್ನಿಸಿದರು. ಈ ವೇಳೆ ಪೊಲೀಸರು ಮತ್ತು ಫೈರೋಜ್ ಖಾನ್ ಕುಟುಂಬಸ್ಥರು ಮಧ್ಯೆ ಮಾತಿನ ಚಕಮಕಿ ನಡೆಯಿತು. ಅಲ್ಲದೇ, ಸ್ಥಳದಲ್ಲಿ ಬಿಗುವಿನ ವಾತಾವರಣ ಕೂಡ ನಿರ್ಮಾಣವಾಗಿತ್ತು.

ರಾಜಕೀಯ ಸಂಚಿನ ಆರೋಪ: ಏ.24ಕ್ಕೆ ಫೈರೋಜ್ ಅವರ ಮದುವೆ ನಿಶ್ಚಯವಾಗಿತ್ತು. ಮದುವೆ ಸಂಭ್ರಮದ ಮನೆಯಲ್ಲಿ ಸೂತಕ ಆವರಿಸಿದೆ. ಹಿರಿಯ ಕಾಂಗ್ರೆಸ್ ಮುಖಂಡರೊಬ್ಬರ ಕುಮ್ಮಕ್ಕಿನಿಂದ ಫೈರೋಜ್ ಖಾನ್ ಅವರ ಹತ್ಯೆ ನಡೆದಿದೆ ಎಂದು ಕುಟುಂಬದ ಸದಸ್ಯರು ಗಂಭೀರವಾದ ಆರೋಪ ಮಾಡಿದರು.

> **ಕಾಂಗ್ರೆಸ್ ಯುವ ಧುರೀಣ ಫೈರೋಜ್ ಖಾನ್ ಪಠಾಣ ಹತ್ಯೆ ಪ್ರಕರಣ ಕುರಿತು ಈಗಾಗಲೇ ಆರು ಜನರನ್ನು ವಿಚಾರಣೆ ಮಾಡಿದೆ. ಆದರೆ, ಯಾರನ್ನೂ ಕೂಡ ಬಂಧಿಸಿಲ್ಲ.**
> ■ **ಎನ್.ಶಶಿಕುಮಾರ, ಹು-ಧಾ ಪೊಲೀಸ್ ಆಯುಕ್ತರು**

> **ಯುವ ನಾಯಕನ ಬರ್ಬರ ಹತ್ಯೆ ಖಂಡನೀಯ. ಆರೋಪಿಗಳನ್ನು ಶೀಘ್ರವೇ ಬಂಧಿಸಿ, ಕಠಿಣ ಶಿಕ್ಷೆಗೆ ಗುರಿಪಡಿಸಬೇಕು.**
> ■ **ಅಬ್ದುಲ್ ದೇಸಾಯಿ, ಫೈರೋಜ್ ಆಪ್ತ**

ಹತ್ಯೆಯ ಹಿನ್ನಲೆ: ಶುಕ್ರವಾರ ರಾತ್ರಿ ನಾಲ್ವರು ದುಷ್ಕರ್ಮಿಗಳು ದಾಳಿ ನಡೆಸಿದ್ದರು. ತಪ್ಪಿಸಿಕೊಳ್ಳಲು ಮನೆಯೊಳಗೆ ಓಡಿದರೂ, ಬಿಡದ ಹಂತಕರು ಒಳನುಗ್ಗಿ ಮಾರಕಾಸ್ತ್ರಗಳಿಂದ ಕೊಚ್ಚಿ ಹತ್ಯೆ ಮಾಡಿದ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ.

ಪೊಲೀಸ್ ಬಿಗಿ ಬಂದೋಬಸ್ತ್: ಘಟನೆಯ ನಂತರ ಧಾರವಾಡದ ಹಾಸ್ಮಿನಗರ ಮತ್ತು ಕಿಮ್ಸ್ ಆಸ್ಪತ್ರೆ ಸುತ್ತಮುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಹಂತಕರ ಪತ್ತೆಗಾಗಿ ಪೊಲೀಸರು ವಿಶೇಷ ತಂಡಗಳನ್ನು ರಚಿಸಿದ್ದು, ತನಿಖೆ ಚುರುಕುಗೊಳಿಸಿದ್ದಾರೆ.

ಪ್ರಶ್ನೋತ್ತರ ರತ್ನಮಾಲಿಕೆ



◆ ವಿದ್ವಾನ್ ನರಸಿಂಹ ಭಟ್

ವಿದ್ವಾಂಸರನ್ನು ಪೂಜಿಸಲು ಯೋಗ್ಯರಾದವರು ಯಾರು?

▸ ಉ. ಸ್ವಭಾವದಿಂದ ಯಾವಾಗಲೂ ವಿನಯವುಳ್ಳವನು.

ವಿದ್ವಾನ್ ಸರ್ವತ್ರ ಪೂಜ್ಯತೇ - ವಿದ್ವಾಂಸರಿಗೆ ಎಲ್ಲ ಕಡೆ, ಯಾವಾಗಲೂ ಗೌರವ ಇದೆ ಎಂದರ್ಥ. ವಿದ್ವಾಂಸನಿಗೆ ಗೌರವ ಬರಲು ಕಾರಣ, ಅವನು ಸಂಪಾದಿಸಿದ ವಿದ್ಯೆಯೇ ಆಗಿದೆ. ಈ ವಿದ್ಯೆ ಇರುವುದರಿಂದ ಅವನಿಗೆ ವಿದ್ವಾನ್ ಎಂಬುದಾಗಿ ಕರೆಯಲಾಗುತ್ತದೆ. ವಸ್ತುತಃ ವಿದ್ಯೆ ಯಾವುದು? ಎಂಬುದರ ಬಗ್ಗೆ ಇಂದು ಸ್ಪಷ್ಟವಾದ ಅರಿವು ಇಲ್ಲವಾಗಿದೆ. ಈ ವಿಷಯದಲ್ಲಿ ಶ್ರೀರಂಗ ಮಹಾಗುರುಗಳ ವಿದ್ಯೆಗೆ ಸಂಬಂಧಿಸಿದ ಮಾತು ನಿಜವಾದ ವಿದ್ಯೆ ಯಾವುದು? ಎಂಬುದನ್ನು ತಿಳಿಸುತ್ತದೆ. ವಿದ್ಯೆ ಎಂದರೆ ವಿದ್- ಜ್ಞಾನ, ಯಾ - ಪ್ರಾಪಣ. ಯಾವುದು ಜ್ಞಾನದ ಕಡೆ ನಮ್ಮನ್ನು ಕರೆದುಕೊಂಡು ಹೋಗುತ್ತದೆಯೋ ಅದಕ್ಕೆ ವಿದ್ಯೆ ಎಂಬುದಾಗಿ ಕರೆಯಬೇಕು ಎಂದು. ಇಂತಹ ವಿದ್ಯೆ ಉಳ್ಳವನು ವಿದ್ವಾಂಸ ಎಂಬುದಾಗಿ ಕರೆಸಿಕೊಳ್ಳುತ್ತಾನೆ. ಪ್ರಣವದಿಂದ ವಿಕಾಸವಾದ ಗಾಯತ್ರೀ, ವೇದಗಳು, ಶಾಸ್ತ್ರಗಳು, ಇತಿಹಾಸ ಪುರಾಣಗಳು ಮೊದಲಾದವುಗಳನ್ನು ಈ ನೇರದಲ್ಲಿ ವಿದ್ಯೆ ಎಂಬುದಾಗಿ ಕರೆಯಲಾಗುತ್ತದೆ. ಇವುಗಳ ತಾತ್ತ್ವಿಕಜ್ಞಾನ ಉಳ್ಳವನನ್ನು ವಿದ್ವಾನ್ ಎಂಬುದಾಗಿ ಕರೆಯಬಹುದು. ಇಂತಹ ವಿದ್ವಾಂಸನಿಗೆ ಮನ್ನಣೆ ಎಲ್ಲ ಕಾಲದಲ್ಲೂ, ಎಲ್ಲ ದೇಶದಲ್ಲೂ ಸಿಗುವುದು ಅತ್ಯಂತ ಸಹಜ. ಈ ಬಗೆಯ ವಿದ್ವಾಂಸನಿಗೆ ಮನ್ನಣೆ ಬರಬೇಕು ಎಂಬುದಾದರೆ ಏನು ಬೇಕು? ಎಂಬ ಪ್ರಶ್ನೆ ಇಲ್ಲಿದೆ. ಅಂದರೆ ಇಂತಹ ಗುಣವಿಶಿಷ್ಟನಾದ ಒಬ್ಬ ವ್ಯಕ್ತಿಗೆ ಶೋಭಿಸುವಂತೆ ಮಾಡುವ ಇನ್ನೊಂದು ಗುಣ ಬೇಕೆ? ಎಂಬುದಾಗಿ ಸಂಶಯ ಬರಬಹುದು. ಅದಕ್ಕೆ ಪರಿಹಾರವನ್ನು ಈ ಉತ್ತರದಲ್ಲಿ ಕಾಣಬಹುದು. ಇದನ್ನೇ ಸಾರುವ ಸುಭಾಷಿತ ಹೀಗಿದೆ - "ವಿದ್ಯಾ ವಿನಯೇನ ಶೋಭತೇ", "ವಿದ್ಯಾ ದದಾತಿ ವಿನಯಂ" ಎಂದು. ಅಂದರೆ ವಿದ್ಯೆ ಮತ್ತು ವಿನಯ ಈ ಎರಡು ಅನ್ಯೋನ್ಯವಾಗಿ ಇರುವಂಥವುಗಳು. ಒಂದನ್ನು ಬಿಟ್ಟು ಇನ್ನೊಂದಕ್ಕೆ ಅಸ್ತಿತ್ವವಿಲ್ಲ, ಮೌಲ್ಯವಿಲ್ಲ ಎಂಬುದು ಇದರ ತಾತ್ಪರ್ಯ. ಎಲ್ಲಿ ವಿದ್ಯೆ ಇದೆಯೋ ಅಲ್ಲಿ ವಿನಯ ಇರಬೇಕು ಎಂಬುದೇ ಅರ್ಥ. ಹಾಗಿಲ್ಲದಿದ್ದರೆ ಆ ವಿದ್ಯೆಯು ಅಪರಿಪೂರ್ಣ ಎಂದರ್ಥ. ಆಗ ಕೇವಲ ವಿದ್ಯೆ ಉಳ್ಳವರಿಗೆ ಗೌರವವೂ ಸಿಗದು. ಸಿಕ್ಕಿದ ಗೌರವೂ ಉಳಿಯದು. ಹಾಗಾಗಿ ವಿದ್ಯೆಯಿಂದ ಬರುವ ಗೌರವವು ಉಳಿಯಬೇಕಾದರೆ ವಿನಯ ಅತ್ಯಂತ ಮುಖ್ಯ ಎಂಬುದು ಸಾರಾಂಶ.

ಹಾಗಾದರೆ ವಿದ್ಯೆಯಿದ್ದವರಿಗೆ ವಿನಯ ಅಷ್ಟು ಮುಖ್ಯ ಏಕೆ? ಎಂದರೆ, ಸಾಮಾನ್ಯವಾಗಿ ವಿದ್ಯೆ ಇರುವವನು ಗರ್ವಕ್ಕೆ ಅಥವಾ ಮದಕ್ಕೆ ಈಡಾಗುತ್ತಾನೆ. ವಿದ್ಯೆಯು ಸರಿಯಾದ ಮಾರ್ಗದಲ್ಲಿ ಬರದಿದ್ದರೆ ಅದು ಅಹಂಕಾರಕ್ಕೆ ಕಾರಣವಾಗುತ್ತದೆ. ಹಾಗಾಗಿ ವಿದ್ಯೆಯ ಜೊತೆ ಎಲ್ಲಿ ವಿನಯ ಬಂದಿರುತ್ತದೆಯೋ, ಅಲ್ಲಿ ಬಂದ ವಿದ್ಯೆಯು ಸನ್ಮಾರ್ಗದಲ್ಲಿ ಬಂದಿದೆ ಎಂದರ್ಥ. ಆದ್ದರಿಂದ ವಿದ್ಯೆ ಮತ್ತು ವಿನಯಗಳಿಗೆ ಪರಸ್ಪರ ಸಂಬಂಧವಿರುವುದನ್ನು ಕಾಣಬಹುದು. ವಿದ್ಯೆಯಿಂದ ಬರುವ ವಿನಯವು ಪಾತ್ರತ್ವವನ್ನು ಅಂದರೆ ಮನ್ನಣೆಯನ್ನು ಕೊಡುತ್ತದೆ; ಆ ಮನ್ನಣೆಯು ಅವನಿಗೆ ಭದ್ರತೆಯನ್ನು ಉಂಟುಮಾಡುತ್ತದೆ. ಈ ಭದ್ರತೆಯು ಅವನಿಗೆ ಧರ್ಮ ಮತ್ತು ಶಾಶ್ವತವಾದ ಸುಖವನ್ನು ಕೊಡುತ್ತದೆ ಎಂಬುದಾಗಿ ಒಂದು ಸುಭಾಷಿತ ಸಾರುತ್ತದೆ. ಇವೆಲ್ಲವನ್ನು ಗಮನಿಸಿದಾಗ ವಿದ್ಯೆ ಮತ್ತು ವಿನಯಗಳಿಗೆ ಇರುವ ಸಂಬಂಧ ತಿಳಿಯುತ್ತದೆ. ಹಾಗಾಗಿ ವಿದ್ಯಾವಂತನಿಗೆ ಗೌರವ ಸಿಗಬೇಕಾದರೆ ಅವನು ವಿನಯ ಸ್ವಭಾವ ಉಳ್ಳವನಾಗಿರಬೇಕು ಎಂಬುದು ಪರಮ ಸತ್ಯವಾದ ವಿಷಯ.

ವ್ಯಾಸ ವೀಕ್ಷಿತ



◆ ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ



ಭೀಮ-ಜರಾಸಂಧ-ದ್ವಂದ್ವ-ಯುದ್ಧಾರಂಭ

ಸೈನ್ಯಸಮೇತನಾಗಿಯಾಗಲಿ, ಒಬ್ಬನೊಂದಿಗಾಗಲಿ, ಇಬ್ಬಿಬ್ಬರೊಂದಿಗಾಗಲಿ, ಮೂವ ರೊಂದಿಗೂ ಆಗಲಿ-ಯುದ್ಧ ಮಾಡಲು ತಾನು ಸಿದ್ಧನೆಂದು ಜರಾಸಂಧನು ಕೃಷ್ಣಭೀಮಾರ್ಜುನರ ಮುಂದೆ ಘೋಷಿಸಿಕೊಂಡನಷ್ಟೇ?

ಹಾಗೆ ಹೇಳಿದ್ದೇ ಅಲ್ಲದೆ, ಭಯಂಕರವಾದ ಕಾರ್ಯವನ್ನು ಮಾಡಹೊರಟಿದ್ದ ಈ ಮೂವರೊಂದಿಗೆ ಸೆಣಸಲು ಸಿದ್ಧನೂ ಆದನು. ನನ್ನ ಪುತ್ರನಾದ ಸಹದೇವನಿಗೆ ಪಟ್ಟಾಭಿಷೇಕವನ್ನು ನೆರವೇರಿಸಿ ಎಂಬುದಾಗಿ ತನ್ನ ಕಡೆಯವರಿಗೆ ಆಜ್ಞೆಯಿತ್ತನು. ಹಾಗೆ ಹೇಳಿದವನೇ ತನ್ನ ಹಿಂದಿನ ಸೇನಾಪತಿಗಳಾದ ಕೌಶಿಕ ಹಾಗೂ ಚಿತ್ರಸೇನ - ಇವರಿಬ್ಬರನ್ನೂ ಸ್ಮರಿಸಿಕೊಂಡನು. ಅವರಿಬ್ಬರೇ ಹಿಂದೆ ಹಂಸ-ಡಿಂಭಕ ಎಂದು ಹೆಸರಾಗಿದ್ದವರು. ಅವರಿಬ್ಬರೂ ಬದುಕಿದ್ದಾಗ ಪುರುಷರೆಲ್ಲರೂ ಅವರನ್ನು ಆದರಿಸುತ್ತಿದ್ದರು, ಕೊಂಡಾಡುತ್ತಿದ್ದರು.

ಜರಾಸಂಧನು ಬಲಶಾಲಿಗಳಲ್ಲಿ ಶ್ರೇಷ್ಠನಾದ ರಾಜನು. ಆತನ ಪರಾಕ್ರಮ ಭೀಕರವಾದದ್ದು. ಯದುವಂಶದವರಾರಿಂದಲೂ ಆತನು ನಾಶಹೊಂದಬಾರದು - ಎಂಬುದು ಬ್ರಹ್ಮನ ಆಜ್ಞೆಯಾಗಿತ್ತು. ಶ್ರೀಕೃಷ್ಣನಾದರೂ ಪುರುಷಶಾರ್ದೂಲ, ಎಂದರೆ ನರಶ್ರೇಷ್ಠ ಹಾಗೂ ಸತ್ಯಸಂಧ. ಎಂದೇ ತಾನೇ ಕೊಲ್ಲಲು ಸಮರ್ಥನಾಗಿದ್ದರೂ ಹಾಗೆ ಮಾಡಲಿಲ್ಲ. ಜರಾಸಂಧನಂತೂ ಯುದ್ಧ ಮಾಡುವುದೆಂದು ನಿಶ್ಚಯಿಸಿಕೊಂಡಿದ್ದನಷ್ಟೆ. ಆತನನ್ನು ಕುರಿತು ಯದುನಂದನನಾದ ಶ್ರೀಕೃಷ್ಣನು ಹೀಗೆ ಹೇಳಿದನು: ರಾಜನೇ, ನಮ್ಮೀ ಮೂವರಲ್ಲಿ ಯಾರೊಂದಿಗೆ ಯುದ್ಧಮಾಡಲು ನಿನಗೆ ಮನಸ್ಸಿದೆ? ನಮ್ಮಲ್ಲಿ ಯಾರು ನಿನ್ನೊಡನೆ ಯುದ್ಧ ಮಾಡಲು ಸಿದ್ಧರಾಗಬೇಕು? ಕೃಷ್ಣನು ಹೀಗೆ ಹೇಳಲಾಗಿ, ಆ ಮಹಾತೇಜಸ್ವಿಯಾದ ಜರಾಸಂಧನು ಭೀಮಸೇನನೊಡನೆ ಸೆಣಸಲು ಬಯಸಿದನು.

ಒಡನೆಯೇ ಜರಾಸಂಧನ ಪುರೋಹಿತನು ಹಲವು ಮಂಗಲಕಾರ್ಯಗಳನ್ನು ನೆರವೇರಿಸಿದನು: ಗೋರೋಚನ-ಮಾಲೆಗಳು, ಇನ್ನಿತರ ಮಂಗಲದ್ರವ್ಯಗಳು, ಹಾಗೂ ಕೆಲವು ಔಷಧಿಗಳು - ತುಂಬ ನೋವಾದಾಗ ಅದನ್ನು ನಿವಾರಿಸತಕ್ಕವು, ಹಾಗೂ ಮೂರ್ಛಿತನಾದಾಗ ಎಚ್ಚರವಾಗಿಸುವಂತಹವು - ಇವುಗಳನ್ನೂ ತಂದನು. ಯುಯುತ್ಸುರಾಜನ ಮುಂದೆ, ಎಂದರೆ ಯುದ್ಧ ಮಾಡಲು ಬಯಸಿರುವ ಜರಾಸಂಧನ ಮುಂದೆ, ಇವುಗಳೊಡನೆ ಉಪಸ್ಥಿತನಾದನು.

ಹೀಗೆ ಬ್ರಾಹ್ಮಣನಿಂದ ಸ್ವಸ್ತಿವಾಚನವಾದ ಬಳಿಕ, ಕ್ಷತ್ರಧರ್ಮವನ್ನು ಸ್ಮರಿಸಿದ ಜರಾಸಂಧನು ಯುದ್ಧಕ್ಕೆ ಸನ್ನದ್ಧನಾದನು. ಕಿರೀಟವನ್ನು ತೆಗೆದನು. ಕೇಶಗಳನ್ನು ಕಟ್ಟಿದನು. ಹಾಗೆ ಸಿದ್ಧನಾದ ಜರಾಸಂಧನು, ತನ್ನ ದಡವನ್ನೇ ಮೀರಿ ಬರುವ ಸಮುದ್ರದ ಹಾಗೆ ತೋರಿದನು! ಭಯಂಕರವಾದ ಪರಾಕ್ರಮವುಳ್ಳ ಆ ಧೀಮಂತ ಜರಾಸಂಧನು ಭೀಮನನ್ನು ಕುರಿತು, ಭೀಮನೇ, ನಿನ್ನೊಡನೆ ನಾನು ಯುದ್ಧಮಾಡುವೆ. ಏಕೆಂದರೆ ಶ್ರೇಷ್ಠರೊಡನೆ ಹೋರಾಡಿ ಸೋಲುವುದು ಸಹ ಶ್ರೇಷ್ಠವಾದದ್ದೇ! ಎಂದನು.

ಹೀಗೆ ಹೇಳಿ ಅವನು ಭೀಮಸೇನನನ್ನು ಎದುರ್ಗೊಂಡನು. ಬಲ ಎಂಬ ಅಸುರನು ಇಂದ್ರನನ್ನು ಹೇಗೆ ಎದುರ್ಗೊಂಡನೋ ಹಾಗೆಯೇ ಇದಿತ್ತು.

ಅಷ್ಟರಲ್ಲಿ ಶ್ರೀಕೃಷ್ಣನಿಂದ ಸ್ವಸ್ತ್ಯಯನವನ್ನು ಪಡೆದು, ಭೀಮಸೇನನೂ ಸಹ ಇತ್ತ ಸಿದ್ಧನಾದನು, ಜರಾಸಂಧನನ್ನು ಸಮೀಪಿಸಿದನು. ಆಗ ಇಬ್ಬರೂ ವೀರರು ಮಹಾ-ಹರ್ಷದಿಂದ ಕೂಡಿದವರಾಗಿ ಪರಸ್ಪರ-ಜಯಾಕಾಂಕ್ಷಿಗಳಾಗಿ, ತಮ್ಮ ಬಾಹುಗಳನ್ನೇ ಶಸ್ತ್ರಗಳನ್ನಾಗಿಸಿಕೊಂಡು ಸೆಣಸಿದರು. ಮೊದಲು ಕೈಕೈ ಹಿಡಿದರು. ಪರಸ್ಪರ ಪಾದಾಭಿವಂದನ ಮಾಡಿದರು. ಕಂಕುಳಿನಿಂದ ಕಂಕುಳನ್ನು ತಳ್ಳಿದರು. ಮಹಾಶಬ್ದಸಹಿತವಾಗಿ ತಮ್ಮ ತೋಳುಗಳನ್ನು ತಟ್ಟಿಕೊಂಡರು. ಒಬ್ಬರು ಮತ್ತೊಬ್ಬರ ಕತ್ತಿಗೆ ಇಕ್ಕಿದರು, ಮತ್ತೆ ಮತ್ತೆ ಹೊಡೆತವಿತ್ತರು. ಒಬ್ಬರ ಅಂಗವನ್ನು ಮತ್ತೊಬ್ಬರು ಅದುಮಿ ಹಿಡಿದರು. ಪರಸ್ಪರ ಆಸ್ಫಾಲನ ಮಾಡಿದರು, ಎಂದರೆ ಅಪ್ಪಳಿಸಿದರು. ಚಿತ್ರಹಸ್ತ, ಕಕ್ಷಾಬಂಧ ಮುಂತಾದ ಪಟ್ಟುಗಳನ್ನು ಹಾಕಿದರು. ಒಬ್ಬರ ಕತ್ತು-ತಲೆಗಳಿಗೊಬ್ಬರು ಇಡಿದರು: ಆ ಏಟುಗಳು ಎಷ್ಟು ತೀವ್ರವಾಗಿದ್ದವೆಂದರೆ ಕಿಡಿಗಳು ಬಂದಂತಾಯಿತು; ಸಿಡಿಲು ಬಡಿದಂತಾಯಿತು!

ಕದನವಿರಾಮದ ಮರ್ಮ

ಪಾಕಿಸ್ತಾನವು ಕೊಲ್ಲಿಯಲ್ಲಿ ಕದನವಿರಾಮ ಏರ್ಪಡಿಸಲು ಶಕ್ತವಾಯಿತು ಎಂಬುದೇ ಭಾರತದಲ್ಲಿನ 'ರಾಷ್ಟ್ರವಿರೋಧಿ'ಗಳಿಗೆ ಬಹುದೊಡ್ಡ ಸಂಭ್ರಮದ ಸುದ್ದಿಯಾಗಿದೆ. ಅದೇ ವಿಷಯವನ್ನು ಮೋದಿ ಸರಕಾರ ಹಳಿಯೂ ಅವರು ಬಳಸಿಕೊಳ್ಳುತ್ತಿದ್ದಾರೆ. ವಿಶ್ವಗುರು ಭಾರತವು ಕದನ ವಿರಾಮ ಏರ್ಪಡಿಸಲು ಶಕ್ತವಾಗಲಿಲ್ಲ ಎಂಬುದಾಗಿ ಕಾಂಗ್ರೆಸ್ ವ್ಯಂಗ್ಯವಾಡಿದೆ. ಭಾರತವಷ್ಟೇ ಅಲ್ಲ, ರಷ್ಯಾ, ಬ್ರಿಟನ್, ಜಪಾನ್,

ಪತ್ರ ಮಿತ್ರ

ಫ್ರಾನ್ಸ್, ಕೆನಡಾ ಮುಂತಾಗಿ ಯಾವುದೇ ಸಂಪನ್ನ ರಾಷ್ಟ್ರವೂ ಇರಾನ್ ಮತ್ತು ಅಮೆರಿಕ ನಡುವೆ ಸಂಧಾನ ಏರ್ಪಡಿಸಲು ಮುಂದಾಗಲಿಲ್ಲ. ಅದಕ್ಕೂ ಕಾರಣವಿದೆ. ರಾಷ್ಟ್ರ ನಾಯಕರನ್ನು ಬಹಿರಂಗವಾಗಿ ಹಳಿಯುವ, ಲೇವಡಿ ಮಾಡುವ ಟ್ರಂಪ್, ಕದನ ವಿರಾಮಕ್ಕೆ ಮುಂದಾದವರನ್ನು ಕೂಡಾ ಹೀಯಾಳಿಸದೆ ಬಿಡುವವರಲ್ಲ. ಹಾಗಾಗಿ ಟ್ರಂಪ್‌ರ ವಿಷಯದಲ್ಲಿ ಕದನವಿರಾಮಕ್ಕೆ ಮುಂದಾಗುವುದಕ್ಕಿಂತ ಸುಮ್ಮಗೆ ಉಳಿಯುವುದೇ ಲೇಸು ಎಂಬುದು ಎಲ್ಲರ ಅಭಿಪ್ರಾಯವಾಗಿದೆ. ಇನ್ನು ಕದನವಿರಾಮದಲ್ಲಿ 'ನಿಜವಾಗಿ' ಪಾಕಿಸ್ತಾನದ ಪಾತ್ರವೇನು ಎಂಬುದು ಅದರ ಹಿಂದಿನ ಮರ್ಮ ಅರಿತವರಿಗೆ ಅರ್ಥವಾದೀತು. ಈ ಕದನವಿರಾಮವನ್ನು ಪಾಕಿಸ್ತಾನ ಏರ್ಪಡಿಸಿದ್ದು ಎನ್ನುವುದಕ್ಕಿಂತಲೂ ಟ್ರಂಪ್ ಅವರೇ ತಮ್ಮ ಮುಖ ಉಳಿಸಿಕೊಳ್ಳಲು ನಡೆಸಿದ್ದು ಹಾಗೂ ಅದಕ್ಕೆ ಪಾಕ್ ಮೇಲೆ ಒತ್ತಡ ಹಾಕಿದರು ಎನ್ನುವುದು ತೆರೆಯ ಹಿಂದಿನ ಸತ್ಯಕತೆ.

-ಚಿದಂಬರ ರಾವ್, ಕುಂದಾಪುರ

ಬಲ್ಲವನೇ ಬಲ್ಲ ಭಾಷೆಯ ಸವಿಯ

ವಕ್ರದೃಷ್ಟಿ

◆ ಎನ್. ರಾಮನಾಥ್
anakuramanath@gmail.com



'ಮಹಾಪ್ರಾಣವನ್ನು ಕಿತ್ತೊಗೆಯಿರಿ ಎಂದೊಬ್ಬ ಫೇಸ್ಬುಕ್ ಪಂಡಿತ ಹೇಳಿದ್ದಾನೆ ಸೀನು' ಎಂದೆ.

"ಇಂಷೂರೆನ್ಸ್ ಮುಗಿಯುವವರೆಗೆ ಎಲ್ಲರ ಪ್ರಾಣವೂ ಮಹಾಪ್ರಾಣವೇ. ಇಂಷುರೆನ್ಸ್ ಲಿಮಿಟ್ ಮೀರಿದ ದಿನ ಅದು ಅಲ್ಪಪ್ರಾಣ" ಎಂದನೊಬ್ಬ 'ಪಲ್ಪಿ ಸ್ಪೆಷಾಲಿಟಿ' ವೈದ್ಯ. 'ಇಂಷುರೆನ್ಸ್ ಇದ್ರೆ ವಾರ್ಡ್ ಕಡೆ, ಇಲ್ಲವಾದ್ರೆ ಹೊರಗಡೆ' ಎನ್ನುವುದೇ ಆ ವೈದ್ಯನ ಪಾಲಿಸಿಯಂತೆ" ಎಂದ ಸೀನು.

"ಉಸಿರಾಟದ ಪ್ರಾಣದ ಬಗ್ಗೆ ಅಲ್ಲ, ಉಚ್ಚಾರದ ಪ್ರಾಣದ ಬಗ್ಗೆ" ಎಂದೆ.

"ನನ್ನ ಹೆಸರಿಗೇನೂ ಧಕ್ಕೆ ಆಗದು ಸದ್ಯ!" ಎಂದ ಸೀನು.

"ವೈಡ್ ಆಂಗಲ್ ಲೆನ್ಸ್ ಹಾಕಿಕೊಂಡು ವಿಷಯವನ್ನು ನೋಡೋ" ಎಂದು ಗೋಗರೆದೆ. ಸೀನು ತಲೆ ಕೆರೆದುಕೊಂಡ. ಕೆರೆದುಕೊಂಡ ಬೆರಳುಗಳನ್ನು ಸೂಕ್ಷ್ಮದರ್ಶಕ ಯಂತ್ರದಿಂದ ವೀಕ್ಷಿಸುವಂತೆ ಕೂಲಂಕಷವಾಗಿ ನೋಡಿಕೊಂಡ. ಆಗಷ್ಟೇ ಎಣ್ಣೆನೀರು ಹಾಕಿಕೊಂಡು ಬಂದಿದ್ದರಿಂದ ನೆತ್ತಿಯಲ್ಲಿ ಉಳಿದಿದ್ದ ಕೊಂಚ ಎಣ್ಣೆಯ ಹೊರತು ಇನ್ನಾವ ಕಲುಷಗಳೂ ಕಾಣದೆ 'ಸ್ವಚ್ಛ ಉಗುರು ಅಭಿಯಾನ್' ಯಶಸ್ವಿಯಾಗಿತ್ತು.

"ಗಂಗೆ ಮೇಲಿಂದ ಬಂದದ್ದು, ಕೆಳಗಿನಿಂದಲ್ಲ" ಸೀನು ನಖವೀಕ್ಷಣೆ ಮುಗಿಸಿ ತಲೆಯೆತ್ತಿ ನುಡಿದ. "ಮಹಾಪ್ರಾಣಕ್ಕೂ, ಗಂಗೆಗೂ..." ಮೂಗೆಳೆದೆ.

"ಗಂಗೆಯನ್ನು ಭೂಮಿಗೆ ತಂದವನು ಭಗೀರಥ. ಭ ಎಂದರೆ ಗಗನ, ಗ ಎಂದರೆ ಗಮನ; ಗಗನದಿಂದ ಗಮಿಸಲಿಕ್ಕೆ ತನ್ನ ತಪವನ್ನೇ ರಥವಾಗಿ ಬಳಸಿದವನೇ ಭಗೀರಥ. 'ಬಗೀರತ' ಎಂದರೆ ಬಗಿ ಅಥವಾ ಬಗೆ ಅರ್ಥಾತ್ ತೋಡುವುದರಲ್ಲಿ ನಿರತನಾದವನು ಎಂದು ಅರ್ಥವಾಗುತ್ತದೆ. ಬೋರ್ವೆಲ್ ಕೊರೆಯುವವನು 'ಬಗೀರತ' ಆದಾನು. ಗಗನದಿಂದ ಗಂಗೆಯನ್ನು ತಂದವನ ತಪೋನಿಷ್ಠೆಗಾದರೂ ಅವನು ಭಗೀರಥನೇ ಆಗಬೇಕು. ಆದ್ದರಿಂದ ಭ ಅಕ್ಷರವನ್ನು, ಥ ಅಕ್ಷರವನ್ನು ಬಿಡುವಂತಿಲ್ಲ" ಘೋಷಿಸಿದ ಸೀನು.

"ಭಘೀರಥ ಎನ್ನಬಹುದಲ್ಲ!" ಛೇಡಿಸಿದೆ.

"ಘೀಂಕೃತಿ ಘಂಟಾನಾದದ ಸದ್ದು. ಭಗೀರಥನ ದೇವಾಲಯವೊಂದಿದೆ. ಅಲ್ಲಿ ಘೀಕಾರ ಸರಿ ಹೊಂದುತ್ತದೆ. ಮಿಕ್ಕೆಡೆ ಅವನ ಹೆಸರಲ್ಲಿ ಗೀಗೀ ಪದ ಹಾಡುವುದು ಸರಿಯಾದೀತು."

ನನಗಂತೂ ಇನ್ನಾವುದೇ ಮಹಾಪ್ರಾಣವನ್ನು ಕಳೆದುಕೊಂಡಾಗ ಆಗಬಹುದಾದ ನೋವಿಗಿಂತ ಭಕಾರವನ್ನು ಕಳೆದುಕೊಂಡರೆ ಹೆಚ್ಚು ನೋವಾಗುತ್ತದೆ. ಭಕಾರವೇ ಇಲ್ಲದಿದ್ದರೆ ಭಕ್ಷ್ಯಗಳೂ ಇಲ್ಲ, ಭೋಜನವೂ ಇಲ್ಲವಾಗುವುದಲ್ಲ!

ಭಕಾರದ ಸೊಬಗು ಸಂಸ್ಕೃತದಲ್ಲಿ ಜನಿಸಿ ಕನ್ನಡದಲ್ಲಿ ಹರಿದು ಬಂದಿದೆ. ಇದೋ ಭಕಾರವನ್ನೊಳಗೊಂಡ ಒಂದು ಸುಂದರ ಪ್ರಸಂಗ:

ಬಿಲ್ಹಣನೆಂಬ ಕವಿಯು ರಾಜಕುವರಿಗೆ ಸಂಸ್ಕೃತವನ್ನು ಕಲಿಸುತ್ತಿದ್ದ. ರಾಜನಿಗೆ ತನ್ನ ಮಗಳನ್ನು ಕವಿಯು ಹಾರಿಸಿಕೊಂಡು ಹೋಗುವನೆಂಬ ಸುದ್ದಿ ತಲುಪಿತು. ತಾನೆಲ್ಲಿ, ಕವಿಯೆಲ್ಲಿ! ಆ ಕಾಲದ ರಾಜರಿಗೆ ತಿಳಿದ ಏಕೈಕ ಉಗ್ರಶಿಕ್ಷೆಯಾದ 'ತಲೆದಂಡ'ವನ್ನು ಕವಿಗೂ ವಿಧಿಸಲು ತೀರ್ಮಾನಿಸಿದ. ಇದನ್ನು ಅರಿತ ಕವಿಯು ರಾಜನಿಗೆ ಶ್ಲೋಕಸಂದೇಶವೊಂದನ್ನು ಕಳುಹಿಸಿದ:

ಭಟ್ಟಿರ್ನಷ್ಟೋ ಭಾರವಿಶ್ಚಾಪಿ ನಷ್ಟೋ
ಭಿಕ್ಷುರ್ನಷ್ಟೋ ಭೀಮಸೇನಾಪಿ ನಷ್ಟಃ ।
ಭುಕ್ಕುಂಡಃ ಅಹಂ ಭೂಪತಿಃ ತ್ವಂ ಚ ರಾಜನ್
ಭಬ್ಬಾವಲ್ಯಾಂ ಅಂತಕಃ ಸನ್ನಿವಿಷ್ಟಃ ॥

ಇದನ್ನೇ ಕನ್ನಡದಲ್ಲಿ ಬರೆದಾಗ:

ಭಟ್ಟಿಯು ಹೋದನು ಭಾರವಿಯೂ ಸಹ
ಭಿಕ್ಷುವೂ ಗತಿಸಿದ ಭೀಮಸೇನನೂ
ಭುಕ್ಕುಂಡನಾದ ನನ್ನ ಸರದಿಯಿಂದು
ಭೂಪತಿಯೇ ಸರದಿ ನಿನ್ನದು ಮುಂದು
ಭಭಾಭಿಭಿಯ ಹಿಂದೆ ಬಿದ್ದಿಹನು ಅಂತಕನೀಗ ॥

(ಅರಸ ಕೇಳ್, ಭಟ್ಟಿಯೆಂಬ ಕವಿಯನ್ನು ಯಮನು ಸೆಳೆದ; ಭಾರವಿಯೆಂಬ ಕವಿಯನ್ನೂ ತದನಂತರ. ಮುನ್ನಡೆದು ಅವನು ಭಿಕ್ಷುವೆಂಬ ಶ್ರೇಷ್ಠನನ್ನೂ, ಭೀಮಸೇನನನ್ನೂ ಸೆಳೆದೊಯ್ದ. ಈಗ ಭುಕ್ಕುಂಡನಾದ (ಬಿಲ್ಹಣನ ಮತ್ತೊಂದು ಹೆಸರು. ಕವಿಯಾದ್ದರಿಂದ ಈಗಿನ ಕಾಲದವರು ಬುಕ್ ಉಂಡ ಎಂದು ಕರೆದು ಅಲ್ಪಪ್ರಾಣಿಗೆ ಪ್ರಿಯವಾದಾರು!) ನನ್ನ ಸರದಿ. ಮುಂದೆ ಭೂಪತಿಯಾದ ನಿನ್ನ ಸರದಿ. ಯಮನು ಈಗ ಭಭಾಭಿಭೀ ಅಕ್ಷರಮಾಲೆಯನ್ನು ಅನುಸರಿಸಿ ಒಬ್ಬೊಬ್ಬರನ್ನೇ ಒಯ್ಯುತ್ತಿದ್ದಾನೆ.)

ಕವಿಯ ಚಮತ್ಕಾರಕ್ಕೆ ಮೊದಲು ಮಗಳು ಆಕರ್ಷಿತಳಾಗಿದ್ದಳು. ಈಗ ಅಪ್ಪನೂ ಆದ. ತಲೆ ಉಳಿಯಿತು. ಇಂತಹ ಭಕಾರಭರಿತ ಕವನಗಳು ಭಾಷೆಯ ಸಮೃದ್ಧಿಯನ್ನು ತೋರುತ್ತವೆ. ಹಾಸ್ಯೋತ್ಪಾದಕ ಎಮ್ಮೆಸ್ಸೆನ್ ಅಲ್ಲಲ್ಲಿ ಹೇಳುವ ವಿನೋದದ ಪ್ರಸಂಗವೊಂದು ಇಂತಿದೆ:

ಬರೆಹಗಾರನೊಬ್ಬನಿಗೆ "ಭಾಗೀರಥಿ"ಯಲ್ಲಿನ ಕೊನೆಯ ಅಕ್ಷರ 'ತಿ'ಯೋ, 'ಥಿ'ಯೋ ಎಂಬ ಸಂದೇಹ ಮೂಡಿ ಎಮ್ಮೆಸ್ಸೆನ್‌ಗೆ ಕರೆ ಮಾಡಿದ. ಇವರು ನಡೆದಾಡುವ ನಿಘಂಟೆಂದೇ ಖ್ಯಾತರಾದ ಜಿ. ವೆಂಕಟಸುಬ್ಬಯ್ಯನವರಿಗೆ ಫೋನಾಯಿಸಿ, "ಭಾಗೀರಥಿ ಎನ್ನಬೇಕೋ, ಭಾಗೀರತಿಯೋ" ಎಂದು ಕೇಳಿದರು. ಪ್ರೊಫೆಸರ್ ಜಿವಿಯವರು, "ಭಾಷೆಯ ದೃಷ್ಟಿಯಿಂದಾದರೆ ರಥಿ ಎನ್ನಿ, ಪ್ರೀತಿಯ ದೃಷ್ಟಿಯಿಂದಾದರೆ ರತಿ ಎನ್ನಿ. ನಿಮ್ಮ ಹೆಂಡತಿಯ ಹೆಸರು ಭಾಗೀರಥಿಯೇನು?" ಎಂದು ಕೇಳಿದರು.

"ಅಲ್ಲ."

"ಯಾರ್ಯಾರದೋ ಹೆಂಡತಿಯನ್ನು ರತಿ ಎಂದು ಕರೆದು ತೊಂದರೆಗೆ ಸಿಲುಕಬೇಡಿ. ಭಾಗೀರಥಿ ಎಂದೇ ಕೂಗಿ!"

ಸಂಸ್ಕೃತದಂತೆಯೇ ಕನ್ನಡದ ಸೊಬಗೂ ಇರುವುದು ಅದರ ಮಹಾಪ್ರಾಣ, ಒತ್ತಕ್ಷರಗಳಲ್ಲಿ. 'ತತ್ತ್ವಮಸಿ' ಪದವನ್ನು ಅಂತೆಯೇ ಬರೆದರೆ 'ಅದು ನೀನೇ ಆಗಿದ್ದೀಯೇ' ಎಂದಾಯಿತು. ಅದನ್ನೇ 'ತತ್ವಮಸಿ' ಎಂದು ಬರೆದರೆ ತತ್ವಕ್ಕೆ ಮಸಿ ಬಳಿದಂತೆ ಮರ್ಮಜ್ಞ!

ಕನ್ನಡದ ಪ್ರತಿ ಅಕ್ಷರಕ್ಕೂ ತನ್ನದೇ ಆದ ಉಚ್ಚಾರಚೆಲುವಿದೆ. 'ದನ'ವು ಹಾಲನ್ನು ನೀಡಿದರೆ 'ಧನ'ವು ನಮ್ಮ ಹಾಲತ್ತನ್ನು ನಿರ್ಧರಿಸುತ್ತದೆ. 'ಕರ'ವು ಹಿಡಿಯಲು ಅನುಕೂಲವಾದುದಾದರೆ 'ಖರ'ವು ಒದೆಯಲು ಅನುವಾದ ಪ್ರಾಣಿಯೆಂದಾಗುತ್ತದೆ. 'ತರ' ಎಂದರೆ ವಿಧ; 'ಥರ' ನಡುಗುವಿಕೆಯ ವಿಧ. 'ತಳ' ಕೆಳಭಾಗವನ್ನು ಸೂಚಿಸಿದರೆ 'ಥಳ' ಮೆರುಗನ್ನು ಸೂಚಿಸುತ್ತದೆ. ಬಾರಕ್ಕೂ ಭಾರಕ್ಕೂ ವ್ಯತ್ಯಾಸವನ್ನು ಹೆಣ್ಣಲ್ಲೇ ಕಾಣುವ ಗಂಡಸರೂ ಇದ್ದಾರೆ. ಪ್ರೀತಿಸುವ ಸಮಯದಲ್ಲಿ 'ಬಾ ಬಾರೆ ಚೆಲುವೆ, ಬಾರೇ ಒಲವೆ, ಬಾರಾ...' ಎನ್ನುವವರು, ಮದುವೆಯಾಗಿ ಲತೆಯು ವೃಕ್ಷವಾದಾಗ ಕಡೆಯ ಪದವನ್ನು 'ಭಾರಾ' ಎಂದೇ ನುಡಿಯುವರಂತೆ. 'ಮಟ'ವು ಮಟಮಟ ಮಧ್ಯಾಹ್ನದ ಬಿರುಬಿಸಿಲನ್ನು ನೆನಪಿಸಿದರೆ 'ಮಠ'ವು ಧರ್ಮ, ಭೋಜನಗಳ ತಂಪನ್ನು ಚಿತ್ರಕ್ಕೊಡ್ಡುತ್ತದೆ. 'ಮಠ'ದ ಊಟದ ನೆನಪಾದಾಗ ನನಗೆ ಆ ಪದದಲ್ಲಿನ 'ಠ' ಅಕ್ಷರದ 'ರ' ಆಕಾರವು ತಟ್ಟೆಯಂತೆಯೂ, ಮಧ್ಯದಲ್ಲಿನ ಚುಕ್ಕಿಯು ಬರಬರುತ್ತಾ ಬೆಳೆಯುವ ಅನ್ನದ ರಾಶಿಯ ಮೊದಲ ಅಗುಳಿನಂತೆಯೂ ಕಾಣುತ್ತದೆ. ಕನ್ನಡ ವರ್ಣಮಾಲೆಯಲ್ಲಿ 'ಠ' ಮೊದಲು ಬಂದು ನಂತರ 'ರ' ಬರುವುದರಿಂದ 'ಠ' ಹಿರಿಯಳೆಂದು, 'ರ' ಕಿರಿಯಳೆಂದು ಕವಿಗಳೊಬ್ಬರ ಅಂಬೋಣ. ಹಿರಿಯಳಾದ 'ಠ' ಅಕ್ಷರವು ರ ಅಕ್ಷರದ ಬಗ್ಗೆ ದೂರುತ್ತಾ, 'ಈಗಿನ ಹೆಣ್ಣುಮಕ್ಕಳಿಗೆ ಸಂಸ್ಕಾರವೇ ಇಲ್ಲ. ನನ್ನ ಹಾಗೆಯೇ ಅವಳೂ ಲಕ್ಷಣವಾಗಿ ಕುಂಕುಮ ಇಟ್ಟುಕೊಳ್ಳಬಾರದೇ?" ಎಂದು ಗೊಣಗಿದಳಂತೆ!

ಮಹಾಪ್ರಾಣಕ್ಕೆ ಒತ್ತುಕೊಡುವುದು ನಾಟಕಕಾರರ ಸತ್‌ಸಂಪ್ರದಾಯವಾಗಿತ್ತು. ಈಗ ಅದು ಸತ್ತ ಸಂಪ್ರದಾಯವಾಗಿದೆ. ಅಂದಿನ ಒಂದು ಸನ್ನಿವೇಶ. ಪ್ರಸಿದ್ಧ ನಾಟಕಕಾರರೊಬ್ಬರು ನಾಟಕವೊಂದರ ತಾಲೀಮು ನಡೆಸುತ್ತಿದ್ದರು. ಭೀಮನ ಪಾತ್ರಧಾರಿಯೊಬ್ಬನು "ನಿನ್ನ ಊರು ಭಂಗ ಮಾಡದಿದ್ದರೆ ನನ್ನ ಹೆಸರು ಭೀಮನೆ ಅಲ್ಲ" ಎಂದು ನುಡಿಯಬೇಕಾಗಿತ್ತು. ಎಷ್ಟೇ ಯತ್ನಿಸಿದರೂ ಅವನ ಬಾಯಲ್ಲಿ 'ಭೀ' ಹೊರಡುತ್ತಿರಲಿಲ್ಲ.

"ಸರಿ. ಇದು ನಿನ್ನ ಕೈಯಲ್ಲಾಗಲ್ಲ. ಸ್ಕ್ರಿಪ್ಟ್ ಚೇಂಜ್ ಮಾಡ್ತೀನಿ ಇರು" ಎನ್ನುತ್ತಾ 'ನಿನ್ನ ತೊಡೆಯನ್ನು ಮುರಿಯದಿದ್ದರೆ ನನ್ನ ಹೆಸರು ಭೀಮನೆ ಅಲ್ಲ' ಎಂದು ಬರೆದುಕೊಟ್ಟರು. 'ಊರುಭಂಗ'ದ ಭ ಹೇಳುವುದು ತಪ್ಪಿತಲ್ಲ!

'ಬೀಮನೆ ಅಲ್ಲ" ಎಂದನವ.

"ಅದಲ್ಲವೋ, ದೊಡ್ಡ ಬಿ ಹೇಳೋ" ಎಂದರು ನಿರ್ದೇಶಕರು.

ಮತ್ತೆ ಅವನು "ಭೀೕೕಮನೆ ಅಲ್ಲ" ಎಂದ.

"ಆ ಬೀ ಅಲ್ಲ ಕಣೋ. ಊರುಬಂಗದ ಬದಲು ಬೇರೆ ಬರೆದುಕೊಟ್ಟೆ. ಪಾಂಡವನನ್ನು ಹೇಗಪ್ಪಾ ಬದಲಿಸುವುದು! ಇಲ್ಲಿ ಯಾರಾದರೂ ಸರಿಯಾದ ಬೀಮನನ್ನು ಹೇಳುವವರು ಇದ್ದೀರೇನಪ್ಪಾ?" ಎಂದು ಕೇಳಿದರು.

ಇವನ್ನೆಲ್ಲ ವೀಕ್ಷಿಸುತ್ತಾ ಅಲ್ಲೇ ಕುಳಿತಿದ್ದ ಮಾಸ್ಟರ್ ಹಿರಣ್ಣಯ್ಯನವರು "ಭೀಮ" ಎಂದರು. "ಕರೆಕ್ಟ್. ಲೋ, ಹಿರಣ್ಣಯ್ಯನ ಬಾಯಲ್ಲಿ ಬಂದ ಬೀಮನನ್ನು ಹೇಳೋ, ನನ್ನ ಬಾಯಲ್ಲಿ ಬಂದದ್ದನ್ನಲ್ಲ ಕಣೋ" ಎಂದ ನಿರ್ದೇಶಕರು ಹಿರಣ್ಣಯ್ಯನವರತ್ತ ತಿರುಗಿ, 'ಹಿರಣ್ಣೀ, ನನ್ನ ಮನಸ್ಸಲ್ಲೂ ನಿನ್ನ ಬೀಮನೇ ಇದ್ದಾನೆ. ನನ್ನ ಬರವಣಿಗೆಯಲ್ಲಿಯೂ ನಿನ್ನ ಬೀಮನೇ ಇದ್ದಾನೆ. ಆದರೆ ಈ ನಾಲಿಗೆಗೆ ಮೊದಲಿನಿಂದಲು ಸಂಸ್ಕಾರ ನೀಡದೆ ಆ ಬೀಮ ಮಾತಿನಲ್ಲಿ ಕಳೆದುಹೋಗ್ತಾನೆ ಕಣೋ" ಎಂದು ಅಲವತ್ತುಕೊಂಡರು.

ಕಂಠ್ಯ, ತಾಲವ್ಯ, ಮೂರ್ಧನ್ಯ, ದಂತ್ಯ, ಓಷ್ಠ್ಯ ಉಚ್ಚಾರಗಳನ್ನು ಕಲಿಸುವ ಗುರುಗಳು ಇದ್ದರು. ಇಂದು ಅನೇಕ ಗುರುಗಳು 'ಕಂಠ್ಯ' ಎಂದರೆ 'can't ya' ಎನ್ನುವರು, 'ತಾಲವ್ಯ'ಕ್ಕೆ ತಾಳ ಸಿಗದು, ಮೂರ್ಧನ್ಯ ಎಂದರೆ ಮೂರು ಧ್ವನಿಗಳು ಎನ್ನುವರು, ದಂತ್ಯ ಎಂದರೆ ಕಾಡುಗಳ್ಳ ವೀರಪ್ಪನ್ ಭಾಷೆಯೆಂದೋ, ಡೆಂಟಿಸ್ಟ್ ಭಾಷೆಯೆಂದೋ ತಿಳಿಯುವರು, ಓಷ್ಠ್ಯವನ್ನು ಓಷ್ಟು (ರವಷ್ಟೂ-ರವೆಯಷ್ಟೂ ಎನ್ನುವುದರ ಅಪಭ್ರಂಶ) ಅರಿಯರು. ಇಂತಿರುವಾಗ ಮಹಾಪ್ರಾಣಕ್ಕೆ ಗೇಟ್ ಪಾಸ್ ಸಿಕ್ಕರೂ ಅಚ್ಚರಿಯಿಲ್ಲ. ◈

ತಂತ್ರಜ್ಞಾನ ಮತ್ತು ಭವಿಷ್ಯದ ಯುದ್ಧಗಳು!

▸ ದಿನಕರ

ಯುದ್ಧದ ಸ್ವರೂಪವೇ ಈಗ ಬದಲಾಗಿದೆ. ಯುದ್ಧವೆಂದ ಕೂಡಲೇ ಟ್ಯಾಂಕ್‌ಗಳು, ಸೈನಿಕರು ಬಂದೂಕು ಹಿಡಿದು ಕಾದಾಡುವ ದೃಶ್ಯ ಮರೆಯಾಗುತ್ತಿದೆ. ಯುದ್ಧ ವಿಮಾನಗಳ 'ಡಾಗ್ ಫೈಟ್' ಕೂಡಾ ಕಣ್ಮರೆಯಾಗುತ್ತಿದೆ. ಈಗೇನಿದ್ದರೂ ತಂತ್ರಜ್ಞಾನಾಧಾರಿತ ಸಮರ. ವಿವಿಧ ತಾಂತ್ರಿಕ ಉಪಕರಣಗಳೇ ಈಗ ದೇಶವೊಂದರ ಮೇಲುಗೈಯನ್ನು ನಿರ್ಧರಿಸುತ್ತವೆ. ಕತೆ, ಸಿನಿಮಾಗಳಲ್ಲಿದ್ದ 'ಭವಿಷ್ಯದ ಯುದ್ಧ'ದ ಪರಿಕಲ್ಪನೆಗಳು ಈಗ ನಿಜವಾಗುತ್ತಿವೆ....

ಇರಾನ್- ಇಸ್ರೇಲ್ -ಅಮೆರಿಕವನ್ನೊಳಗೊಂಡು ನಡೆಯುತ್ತಿದ್ದ ಸಮರಕ್ಕೆ ತಾತ್ಕಾಲಿಕ ವಿರಾಮ ಬಿದ್ದಿದೆ. ಆದರೆ ಒಂದೂವರೆ ತಿಂಗಳ ಕಾಲದ ಯುದ್ಧದ ನಡೆದ ಬೆಳವಣಿಗೆಗಳನ್ನು ಗಮನಿಸಿದರೆ ಯುದ್ಧದ ಸ್ವರೂಪ ಬದಲಾಗುತ್ತಿರುವುದು ನಿಚ್ಚಳವಾಗಿದೆ. ತಂತ್ರಜ್ಞಾನದ ಪ್ರಗತಿಯು ಯುದ್ಧದ ಗತಿಯನ್ನೇ ಬದಲಿಸಿದೆ.


ಇರಾನ್ ಕಳೆದ ನಾಲ್ಕು ದಶಕಗಳಿಂದ ಅತೀ ಹೆಚ್ಚು ನಿರ್ಬಂಧಗಳನ್ನು ಎದುರಿಸಿದ್ದರೂ ಅತೀ ಹೆಚ್ಚು ಸಾಕ್ಷರತೆ ಹೊಂದಿರುವ ಗಲ್ಫ್ ದೇಶವದು. ಅಲ್ಲಿ ಶೇ. 95ರಷ್ಟು ಸಾಕ್ಷರತೆ ಇದೆ. ಮಹಿಳಾ ಸಾಕ್ಷರತೆಯಂತೂ ಶೇ. 99ರಷ್ಟಿದೆ. ಹಾಗಾಗಿ ತಂತ್ರಜ್ಞಾನದಲ್ಲೂ ಇರಾನ್ ಹಿಂದೆ ಬಿದ್ದಿಲ್ಲ. ವೈಮಾನಿಕ ಕ್ಷೇತ್ರ, ರಕ್ಷಣೆ ಮತ್ತು ಪರಮಾಣು ತಂತ್ರಜ್ಞಾನದಲ್ಲಿ ಇರಾನ್‌ನ ಪ್ರಗತಿ ಗಮನಾರ್ಹವಾಗಿದೆ. ಅದುವೇ ಅದರ ವೈರಿ ರಾಷ್ಟ್ರಗಳಿಗೆ ಆತಂಕ ಸೃಷ್ಟಿಸಿದ್ದು.

ಇರಾನಿನ ಕ್ಷಿಪಣಿ ಮತ್ತು ಪರಮಾಣು ತಂತ್ರಜ್ಞಾನಕ್ಕೆ ಉ.ಕೊರಿಯಾ, ರಷ್ಯಾ ಮತ್ತು ಚೀನಾಗಳು ನೆರವು ನೀಡಿವೆಯೆಂದು ಹೇಳಲಾಗುತ್ತದೆ. ಅದೆಷ್ಟು ನಿಜವೋ ಗೊತ್ತಿಲ್ಲ. ಆದರೆ ಇರಾನಿನ ಪರಮಾಣು ತಂತ್ರಜ್ಞಾನವು ಇಸ್ರೇಲ್, ಅಮೆರಿಕಗಳಿಗೆ ಆಂತಕ ಸೃಷ್ಟಿಸಿದ್ದು ಸುಳ್ಳಲ್ಲ. ಈ ಬಗ್ಗೆ ಇಸ್ರೇಲ್ ಎಷ್ಟು ಕಳವಳಗೊಂಡಿತ್ತೆಂದರೆ ಕಳೆದ ಕೆಲವು ವರ್ಷಗಳಲ್ಲಿ ಇರಾನಿನ ಪರಮಾಣು ವಿಜ್ಞಾನಿಗಳನ್ನೇ ಗುರಿಯಾಗಿಸಿ ದಾಳಿ ನಡೆಸಿ ಅವರನ್ನು ಹತ್ಯೆಗೈಯಲಾರಂಭಿಸಿತ್ತು. 2025ರ ಜೂನ್‌ನಲ್ಲಿ ನಡೆಸಿದ ವೈಮಾನಿಕ ದಾಳಿಯಲ್ಲಿ 11 ವಿಜ್ಞಾನಿಗಳು ಸಾವಿಗೀಡಾಗಿದ್ದರು. ಒಟ್ಟಾರೆಯಾಗಿ 20 ವಿಜ್ಞಾನಿಗಳನ್ನು ಇಸ್ರೇಲ್ ಹತ್ಯೆಗೈದಿದೆ. ಇದಕ್ಕೆ ಸಡ್ಡು ಹೊಡೆದ ಇರಾನ್ "ಹುತಾತ್ಮರಾದ ವಿಜ್ಞಾನಿಗಳ ಜಾಗವನ್ನು ನೂರಾರು ಪರಮಾಣು ವಿಜ್ಞಾನಿಗಳು ತುಂಬುತ್ತಾರೆ" ಎಂದು ಹೇಳಿತ್ತು.

ಯುದ್ಧದಲ್ಲಿ ಎಐ ಪಾತ್ರ

ಈ ಬಾರಿಯ ಸಮರದ ಗಮನಾರ್ಹ ವಿಷಯವೆಂದರೆ ಕೃತಕ ಬುದ್ಧಿಮತ್ತೆ (ಎಐ) ವಹಿಸುತ್ತಿರುವ ಪಾತ್ರ. ಯುದ್ಧನಿರತ ಎಲ್ಲಾ ದೇಶಗಳೂ ಎಐ ತಂತ್ರಜ್ಞಾನ ಬಳಸಿದ್ದು ಕಂಡುಬರುತ್ತದೆ. ಅಮೆರಿಕವು 2017ರಲ್ಲಿ ಅನುಷ್ಠಾನಿಸಿದ 'ಸ್ಮಾರ್ಟ್ ಸಿಸ್ಟಮ್ ಯೋಜನೆ'ಯ ಮೂಲಕ ವೈಮಾನಿಕ ದಾಳಿ ನಡೆಸಿತು. ಎಐ ಅತ್ಯಂತ ಕ್ಷಿಪ್ರವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವುದರಿಂದ ದಾಳಿಯ ಪ್ರಮಾಣ ಮತ್ತು ನಿಖರತೆಯು ಹೆಚ್ಚಿದೆ. ಇರಾನ್‌ನಲ್ಲಿ ಹುಡುಗಿಯರ ಶಾಲೆಯ ಮೇಲೆ ನಡೆದ ಅಮೆರಿಕದಿಂದ ನಡೆದ ದಾಳಿಗೂ ಎಐ ಆಧಾರಿತ ತಂತ್ರಜ್ಞಾನ ಕಾರಣವೇ ಅಥವಾ ಅಮೆರಿಕದ ಉನ್ನತಾಧಿಕಾರಿಗಳು ತೆಗೆದುಕೊಂಡ ತಪ್ಪು ನಿರ್ಧಾರ ಕಾರಣವೇ ಎಂಬುದು ಸ್ಪಷ್ಟವಾಗಿಲ್ಲ.

ಇಸ್ರೇಲ್ 2021ರಲ್ಲಿ ಹಮಾಸ್ ವಿರುದ್ಧದ ಸಮರದ ಕಾಲದಿಂದಲೇ ಎಐಯನ್ನು ಬಳಸಿಕೊಳ್ಳುತ್ತಿದೆ. ತನ್ನ ದಾಳಿಯ ಗುರಿಯನ್ನು ಪಟ್ಟಿ ಮಾಡಲು



ಹಾಗೂ ಯಾವ ವ್ಯಕ್ತಿಗಳನ್ನು ಹತ್ಯೆಗೈಯ್ಯಬೇಕು ಎಂದು ನಿರ್ಧರಿಸಲು ಎಐ ನೆರವು ಪಡೆಯುತ್ತಿದೆ. ಹತ್ಯೆಯ ಪ್ರಮಾಣ ಹೆಚ್ಚಿಸಲು ಎಐ ತಂತ್ರಜ್ಞಾನವನ್ನು ಶಸ್ತ್ರಾಸ್ತ್ರ ವ್ಯವಸ್ಥೆಯೊಂದಿಗೆ ಜೋಡಿಸಿಕೊಂಡಿದೆ. 'ಲ್ಯಾವೆಂಡರ್' ಎಂಬ ವ್ಯವಸ್ಥೆಯು ಎಐಯನ್ನು ಆಧರಿಸಿ ಕ್ಷಿಪ್ರ ನಿರ್ಧಾರ ತಾಳುತ್ತದೆ. 'ಗೋಸ್ಪೆಲ್' ಎಂಬ ಎಐ ತಂತ್ರಜ್ಞಾನವು ಹತ್ಯೆ ಮಾಡಬೇಕಾದವರ ಪಟ್ಟಿ ತಯಾರಿಸುತ್ತದೆ. ಮತ್ತೊಂದು ತಂತ್ರಜ್ಞಾನವು ದಾಳಿಗೆ ಆಯ್ದುಕೊಂಡ ವ್ಯಕ್ತಿಯ ಚಲನವಲನಗಳ ಮೇಲೆ ನಿರಂತರ ನಿಗಾ ಇಡುತ್ತದೆ.

ಮಾಹಿತಿ ಸಮರ ಮತ್ತು ಸೈಬರ್ ಕಾರ್ಯಾಚರಣೆಯಲ್ಲಿ ಇರಾನ್ ಕೂಡ ಎಐ ಬಳಸಿಕೊಳ್ಳುತ್ತಿದೆ. ಆದರ ಶಹೀದ್ ಡ್ರೋನ್‌ಗಳು ನಿಖರ ಗುರಿ ಸಾಧಿಸುವಲ್ಲಿ ಸಫಲತೆ ಕಾಣಲು ಎಐ ತಂತ್ರಜ್ಞಾನ ಬಳಸಿದ್ದೂ ಕಾರಣವಾಗಿದೆ.

ಈ ಶಹೀದ್ ಡ್ರೋನ್‌ಗಳನ್ನು ಈ ಮೊದಲು ರಷ್ಯಾವು ಉಕ್ರೇನ್ ಸಮರದಲ್ಲೂ ಬಳಸಿತ್ತು. ಈಗ ಇರಾನ್ ಅದೇ ಡ್ರೋನ್‌ಗಳನ್ನು ಇಸ್ರೇಲ್ ಮತ್ತು ಅಮೆರಿಕದ ವಿರುದ್ಧ ಬಳಸಿದೆ. ಇವೆರಡು ದೇಶಗಳ ರಕ್ಷಣಾ ವ್ಯವಸ್ಥೆಯನ್ನು ಭೇದಿಸಿ ದಾಳಿ ಮಾಡಲೂ ಈ ಕ್ಷಿಪಣಿಗಳು ಸಫಲವಾಗಿವೆ. ಬಹುತೇಕವಾಗಿ ಈ ಡ್ರೋನ್‌ಗಳನ್ನು ಕ್ಷಿಪಣಿಯ ಜತೆಗೇ ಹಾರಿಸಲಾಗುತ್ತದೆ. ಆ ಮೂಲಕ ಅಮೆರಿಕ ಮತ್ತು ಇಸ್ರೇಲ್‌ನ ಕ್ಷಿಪಣಿ ನಿರೋಧಕ ವ್ಯವಸ್ಥೆಯನ್ನು ಭೇದಿಸಲು ಸಫಲವಾಗುತ್ತದೆಯಲ್ಲದೆ ಅವನ್ನು ಹೊಡೆದುರುಳಿಸಲು ಇವೆರಡು ದೇಶಗಳು ದುಬಾರಿ ಕ್ಷಿಪಣಿಗಳನ್ನು ಬಳಸಬೇಕಾಗುತ್ತದೆ.

ಇಸ್ರೇಲ್‌ನ ಬಳಿ ಉನ್ನತ ಶಕ್ತಿಯ ಲೇಸರ್ ಆಧಾರಿತ ಡ್ರೋನ್‌ನಾಶಕ ವ್ಯವಸ್ಥೆ ಇದೆ. ಅದನ್ನು ಕಳೆದ ವರ್ಷ ಯಶಸ್ವಿಯಾಗಿ ಪರೀಕ್ಷೆಗೊಳಪಡಿಸಲಾಗಿತ್ತು. ಆದರೆ ಪ್ರಸಕ್ತ ಸಮರದಲ್ಲಿ ಇಸ್ರೇಲ್ ಅದನ್ನು ಉಪಯೋಗಿಸುತ್ತಿಲ್ಲ. ಕಾರಣವೇನೆಂದು ತಿಳಿದಿಲ್ಲ.

ರಷ್ಯಾ ಉಕ್ರೇನ್‌ನ ಮೇಲೆ ಶಹೀದ್ ಡ್ರೋನ್‌ಗಳ ಹಿಂಡನ್ನೇ ಪ್ರಯೋಗಿಸಿದ್ದಲ್ಲದೇ ತನ್ನದೇ ಆದ ಗೇರನ್ ಡ್ರೋನ್‌ಗಳನ್ನೂ ಪ್ರಯೋಗಿಸಿತ್ತು. ಇವು ಶತ್ರು ರಾಷ್ಟ್ರದ ಜಾಮಿಂಗ್ ವ್ಯವಸ್ಥೆಯನ್ನು ವಿಫಲಗೊಳಿಸುವ ಸಾಮರ್ಥ್ಯವನ್ನು ಹೊಂದಿವೆ. ಕ್ಷಿಪಣಿಗಳ ಜತೆಗೇ ಹಲವಾರು ಡ್ರೋನ್‌ಗಳನ್ನೂ ಪ್ರಯೋಗಿಸುವುದರಿಂದ ಶತ್ರು ರಾಷ್ಟ್ರಕ್ಕೆ ಹೆಚ್ಚು ನಷ್ಟವಾಗುವುದು. ಏಕೆಂದರೆ ಇಂತಹ ಡ್ರೋನ್‌ಗಳನ್ನು ಹೊಡೆದು ಹಾಕಲು ಮಿಸೈಲ್ ನಾಶಕ ದುಬಾರಿ ಕ್ಷಿಪಣಿಗಳನ್ನೇ ಬಳಸಬೇಕಾಗುತ್ತದೆ.ಇರಾನ್‌ನ ಅಲ್ಪವೆಚ್ಚದ ಶಹೀದ್ ಡ್ರೋನ್‌ಗಳನ್ನು ಹೊಡೆದುರುಳಿಸಲು ಅಮೆರಿಕ ಮತ್ತು ಇಸ್ರೇಲ್ ದುಬಾರಿ ವೆಚ್ಚದ ಕ್ಷಿಪಣಿಗಳನ್ನು ಬಳಸಬೇಕಾಗಿತ್ತು. ಇದೇವೇಳೆ ಅಮೆರಿಕ ಕೂಡಾ ಶಹೀದ್ ಮಾದರಿಯ ಲೂಕಾಸ್ ಡ್ರೋನ್‌ಗಳನ್ನು ಇರಾನ್‌ನ ರೆವೆಲ್ಯೂಷನರಿ ಗಾರ್ಡ್‌ಗಳ ಮೇಲೆ ಪ್ರಯೋಗಿಸಿತ್ತು. ಸಣ್ಣ ಗಾತ್ರದ ಡ್ರೋನ್‌ಗಳನ್ನು ಪತ್ತೆ ಹಚ್ಚುವುದು ಕಷ್ಟ. ಇದಕ್ಕಾಗಿ ಉಕ್ರೇನ್ ಶಬ್ದಾಸ್ತ್ರ ವ್ಯವಸ್ಥೆಯೊಂದನ್ನು ಕಂಡುಹಿಡಿದಿತ್ತು. ಇದನ್ನು ಕ್ಷಿಪಣಿ ರಕ್ಷಣಾ ವ್ಯವಸ್ಥೆಯೊಂದಿಗೆ ಜೋಡಿಸಲಾಗಿದೆ. ಇದೀಗ ಕೊಲ್ಲಿ ರಾಷ್ಟ್ರಗಳೂ ತಮ್ಮ ಪ್ರಮುಖ ನೆಲೆಗಳ ಸುತ್ತ ಇದನ್ನು ಅಳವಡಿಸಿವೆ. ಇಸ್ರೇಲ್ ಕೂಡಾ ಉಕ್ರೇನ್‌ನಿಂದ ಇದನ್ನು ಪಡೆಯುವ ಕುರಿತಂತೆ ಮಾತುಕತೆ ನಡೆಸುತ್ತಿದೆ. ಇವು ಭವಿಷ್ಯದ ಡ್ರೋನ್ ವಿರೋಧಿ ವ್ಯವಸ್ಥೆಯಾಗಿ ರೂಪುಗೊಳ್ಳಬಹುದು. ಅಗ್ಗದ ಡ್ರೋನ್‌ಗಳನ್ನು ದುಬಾರಿ ಕ್ಷಿಪಣಿಗಳಿಂದ ಹೊಡೆದುರುಳಿಸಬೇಕಾದ ಅನಿವಾರ್ಯತೆಯನ್ನು ಇದು ತಪ್ಪಿಸಿ ಖರ್ಚು ನಿಯಂತ್ರಣಕ್ಕೆ ನೆರವಾಗಬಲ್ಲದು.

ಡ್ರೋನ್, ಕ್ಷಿಪಣಿಗಳ ಪಾತ್ರ

ಇನ್ನು ಮುಂದೆ ಯುದ್ಧದಲ್ಲಿ ಕ್ಷಿಪಣಿ ಮತ್ತು ಡ್ರೋನ್‌ಗಳ ಬಳಕೆಯ ಸಾಧ್ಯತೆ ಹೆಚ್ಚಲಿದೆ. ಇರಾನ್‌ನ ಕ್ಲಸ್ಟರ್ ಕ್ಷಿಪಣಿಗಳು ಮತ್ತು ಹೌತಿಗಳು ಪ್ರಯೋಗಿಸಿದ ಕ್ಷಿಪಣಿಗಳು ಇಸ್ರೇಲ್‌ನ ಅಯರ್ನ್ ಡೋಮ್ ಕವಚವನ್ನು ಭೇದಿಸಲು ಸಫಲವಾಗಿದ್ದವು. ಭವಿಷ್ಯದ ಸಮರಗಳಲ್ಲಿ ಡ್ರೋನ್‌ಗಳು ಮತ್ತು ಕ್ಷಿಪಣಿಗಳ ಪಾತ್ರ ಇನ್ನಷ್ಟು ವಿಸ್ತರಣೆಯಾಗಬಹುದು. ಹೌತಿಯಂತೆ ಇನ್ನಿತರ ಭಯೋತ್ಪಾದಕ ಸಂಘಟನೆಗಳೂ ಇಂತಹ ಡ್ರೋನ್‌ಗಳನ್ನು ಹೊಂದಲಾರಂಭಿಸಿದರೆ ಅದು ಸೃಷ್ಟಿಸುವ ಅಪಾಯ ಅನೂಹ್ಯವಾದೀತು.

ಈಗಿನ ಸಮರ ಬಾಹ್ಯಾಕಾಶಕ್ಕೂ ವ್ಯಾಪಿಸಿದೆ. ಅಮೆರಿಕದ ಬಾಹ್ಯಾಕಾಶದ ಉಪಗ್ರಹಗಳು ಮತ್ತು ಸೈಬರ್ ಕಮಾಂಡ್‌ಗಳು ಇರಾನಿನ ಉಪಗ್ರಹ ಜಾಲವನ್ನು ನಾಶಪಡಿಸಲು ಸಫಲವಾಗಿದ್ದವು.ಇರಾನ್‌ನ ಕ್ಷಿಪಣಿ ಲಾಂಚರ್‌ಗಳನ್ನು ಪತ್ತೆ ಹಚ್ಚುವಲ್ಲಿ ಅಮೆರಿಕದ ಉಪಗ್ರಹಗಳು ನೆರವು ನೀಡಿದ್ದವು. ವಾಣಿಜ್ಯಿಕ ಉಪಗ್ರಹಗಳ ಮಾಹಿತಿಗಳನ್ನು ಕೂಡಾ ಈ ಯುದ್ಧದಲ್ಲಿ ಬಳಸಲಾಗಿದೆ. ಇರಾನ್ ಮಾತ್ರ ಈ ವಿಷಯದಲ್ಲಿ ರಷ್ಯಾ ಮತ್ತು ಚೀನಾದ ಉಪಗ್ರಹ ಚಿತ್ರಗಳನ್ನು ಅವಲಂಬಿಸಬೇಕಾಗಿ ಬಂದಿತು. ಅಮೆರಿಕದ ನಿರ್ದಿಷ್ಟ ನೆಲೆಗಳ ಮೇಲೆ ದಾಳಿ ನಡೆಸಲು ಅದಕ್ಕೆ ಈ ಉಪಗ್ರಹ ಚಿತ್ರಗಳು ನೆರವಿಗೆ ಬಂತು. ಮುಂಬರುವ ಯುದ್ಧಗಳಲ್ಲಿ ಬಾಹ್ಯಾಕಾಶ ಕೂಡಾ ರಣಾಂಗಣವಾಗಿ ಪರಿವರ್ತಿಸಲ್ಪಡುವುದು ಸ್ಪಷ್ಟವಾಗಿದೆ.

ನರೇಟಿವ್ ಸಮರ

ಯುದ್ಧದ ಸಮಯದಲ್ಲಿ ಸರಿಯಾದ ಸಂಕಥನ(ನರೇಟಿವ್)ವನ್ನು ಪ್ರಸಾರಿಸುವುದು ಕೂಡಾ ಮುಖ್ಯವಾಗಿದೆ. ಇಂತಹ ಸಂಕಥನಗಳು ಜಾಗತಿಕ ಅಭಿಪ್ರಾಯವನ್ನು ರೂಪಿಸುತ್ತವೆ. ಬಹಳಷ್ಟು ಮಾಧ್ಯಮಗಳು ಪಾಶ್ಚಿಮಾತ್ಯರಿಂದ ನಿಯಂತ್ರಿಸಲ್ಪಡುತ್ತಿವೆ. ಆದರೆ ಸಾಮಾಜಿಕ ಮಾಧ್ಯಮ ಮುಕ್ತವಾಗಿದೆ. ಇರಾನ್‌ನಿಂದ ತಮಗಾದ ಹಾನಿಯು ಜಗತ್ತಿಗೆ ತಿಳಿಯದಂತೆ ಅಮೆರಿಕ ಮತ್ತು ಗಲ್ಫ್ ರಾಷ್ಟ್ರಗಳು ಮಾಧ್ಯಮಗಳ ಮೇಲೆ ನಿರ್ಬಂಧ ಹಾಕಿದರೂ ಇರಾನ್ ಸಾಮಾಜಿಕ ಮಾಧ್ಯಮಗಳ ಮೂಲಕ ಇದನ್ನು ಹರಡುವಲ್ಲಿ ಸಫಲವಾಯಿತು. ಸಾಮಾನ್ಯ ಜನರು ಯಾವಾಗಲೂ ದುರ್ಬಲರ ಪರವಾಗಿ ಅನುಕಂಪ ಹೊಂದಿರುತ್ತಾರೆ. ಉಕ್ರೇನ್ ಸಮರದಲ್ಲಿ ಜನರು ಉಕ್ರೇನ್‌ನ್ನು ಬೆಂಬಲಿಸುತ್ತಿದ್ದರು. ಇದೀಗ ಜನರ ಅನುಕಂಪ ಇರಾನ್‌ನ ಪರವಾಗಿದೆ. ಹಾಗಾಗಿ ನರೇಟಿವ್‌ಗಳ ಸಮರದಲ್ಲಿ ಅಮೆರಿಕಕ್ಕೆ ಹಿನ್ನಡೆಯಾಗಿರುವುದು ಸ್ಪಷ್ಟವಾಗಿದೆ. ಅದಕ್ಕೆ ಟ್ರಂಪ್‌ರ ಎಡಬಿಡಂಗಿ ವರ್ತನೆ ಮತ್ತು ಬಡಾಯಿ ಕೊಚ್ಚಿಕೊಳ್ಳುವಿಕೆ ಕೂಡಾ ಕಾರಣವಾಗಿದೆ. ಸ್ವತಹ ಅಮೆರಿಕದಲ್ಲೇ ಟ್ರಂಪ್‌ಗೆ ಬೆಂಬಲ ಕ್ಷೀಣಿಸುತ್ತಿದೆ.

ಈಗ ಏರ್ಪಟ್ಟಿರುವ ಕದನ ವಿರಾಮ ಮುರಿಯುವುದೇ ಮುಂದುವರಿಯುವುದೇ ಸ್ಪಷ್ಟವಾಗಿಲ್ಲ. ತಮ್ಮಲ್ಲಿ ಇನ್ನೂ ರಹಸ್ಯ ಹಾಗೂ ಮಾರಕ ಅಸ್ತ್ರಗಳಿವೆಯೆಂದು ಅತ್ತ ಅಮೆರಿಕವೂ ಇತ್ತ ಇರಾನ್ ಕೂಡಾ ಹೇಳಿಕೊಂಡಿವೆ. ಅವು ಎಂತಹ ಪರಿಣಾಮ ಬೀರಬಹುದೆಂಬುದು ನಮಗಂತೂ ತಿಳಿದಿಲ್ಲ. ಪರಮಾಣ ಬಾಂಬುಗಳನ್ನು ಪ್ರಯೋಗಿಸುವ ಬೆದರಿಕೆಯನ್ನು ಇನ್ನೂ ಯಾವುದೇ ದೇಶ ಒಡ್ಡಿಲ್ಲ. ಅದು ಸಮಾಧಾನಕರವಾದರೂ ಈಗಿನ ಸಾಂಪ್ರದಾಯಿಕ ಅಸ್ತ್ರಗಳೇ ತಂತ್ರಜ್ಞಾನವನ್ನು ಮೇಳೈಸಿಕೊಂಡು ಹೆಚ್ಚು ವಿನಾಶ ಸೃಷ್ಟಿಸುತ್ತಿರುವುದಂತೂ ಹೌದು.

ಭವಿಷ್ಯದಲ್ಲಿ ಯುದ್ಧವೆದುರಿಸಲು ಯಾವ ರೀತಿ ಸಿದ್ಧತೆ ನಡೆಸಬೇಕಾಗುತ್ತದೆ ಎಂಬುದನ್ನು ಈಗ ನಡೆಯುತ್ತಿರುವ ಸಮರ ತೋರಿಸಿ ಕೊಟ್ಟಿದೆ. ಭಾರತವು ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸುತ್ತಿರುವುದು, ಭವಿಷ್ಯದ ಯುದ್ಧವೆದುರಿಸಲು ಸೂಕ್ತ ಸಿದ್ಧತೆ ನಡೆಸಿಕೊಳ್ಳುವುದು ಸಹಜವೇ ಆಗಿದೆ.

ಸೈನಿಕನನ್ನು ಪತ್ತೆ ಹಚ್ಚಿದ 'ಘೋಸ್ಟ್ ಮರ್ಮರ್'

ಇತ್ತೀಚೆಗೆ ಅಮೆರಿಕದ ಯುದ್ಧ ವಿಮಾನವೊಂದು ಇರಾನಿನ ದಾಳಿಗೀಡಾಗಿ ಪತನಗೊಂಡಿತು. ಪೈಲಟ್‌ಗಳು ಸೀಟಿನ ಸಮೇತ ಎಜೆಕ್ಟ್ ಆದರು. ಒಬ್ಬ ಪೈಲಟ್ ಸುರಕ್ಷಿತವಾಗಿ ಅಮೆರಿಕದ ಕೈಗೆ ಸಿಕ್ಕಿದನಾದರೂ ಇನ್ನೊಬ್ಬ ಮಾತ್ರ ಶತ್ರುದೇಶದಲ್ಲಿ ಬಿದ್ದ. ಆತನನ್ನು ಪತ್ತೆ ಹಚ್ಚಿ ಕರೆತರಲು ಅಮೆರಿಕವು ಹರಸಾಹಸವನ್ನೆ ನಡೆಸಿತು. ಕೋಟ್ಯಂತರ ಡಾಲರ್ ವ್ಯಯಿಸಿತು. ದೊಡ್ಡ ಸೈನ್ಯದ ತಂಡವನ್ನು, ವಾಯುಪಡೆಯನ್ನು ಬಳಸಿಕೊಂಡಿತು.

ಆದರೆ ಇರಾನಿನ ಗುಡ್ಡ ಪ್ರದೇಶಗಳಲ್ಲಿ ಇರುವ ಅಮೆರಿಕನ್



ಸೈನಿಕನ ಇರವನ್ನು ನಿಖರವಾಗಿ ಪತ್ತೆ ಹಚ್ಚಲು ನೆರವಾದುದು ಅಮೆರಿಕದ ಗುಪ್ತಚರ ಸಂಸ್ಥೆ ಸಿಐಎ ಅಭಿವೃದ್ಧಿಪಡಿಸಿದ 'ಘೋಸ್ಟ್ ಮರ್ಮರ್' ಎಂಬ ತಂತ್ರಜ್ಞಾನ. ಇದು ಅಮೆರಿಕನ್ ಸೈನಿಕನ ಎದೆಬಡಿತವನ್ನು ಪತ್ತೆ ಹಚ್ಚಿ ಆತ ಇಂತಹುದೇ ಜಾಗದಲ್ಲಿ ಇದ್ದಾನೆಂದು ನಿಖರವಾಗಿ ಕಂಡುಹಿಡಿಯಿತು. ಮೈಲು ದೂರದಿಂದಲೇ ಮಾನವನ ಹೃದಯ ಬಡಿತವನ್ನು ಪತ್ತೆ ಹಚ್ಚಬಲ್ಲ ಅತ್ಯಾಧುನಿಕ ಸಾಧನವದು. ಮನುಷ್ಯನ ಎದೆಬಡಿತದ ಎಲೆಕ್ಟ್ರೋ ಮ್ಯಾಗ್ನೆಟಿಕ್ ಸಂದೇಶವನ್ನು ಪತ್ತೆ ಹಚ್ಚುತ್ತದೆ ಇದು.


ಈ ಸಾಧನವು ವಾತಾವರಣದ ಇತರ ಸದ್ದುಗಳನ್ನೆಲ್ಲ ಸ್ತಬ್ಧಗೊಳಿಸಿ, ಕೇವಲ ಮನುಷ್ಯನ ಎದೆಬಡಿತವನ್ನು ಮಾತ್ರ ಆಲಿಸುವ ಸಾಮರ್ಥ್ಯ ಪಡೆದಿದೆ. ಈ ಸಾಧನವನ್ನು ಅಮೆರಿಕದ ಲಾಕ್‌ಹೀಡ್ ಮಾರ್ಟಿನ್ಸ್ ಕಂಪೆನಿಯ ಅತ್ಯಂತ ರಹಸ್ಯ ಸಂಶೋಧನಾ ಘಟಕವಾದ 'ಸ್ಕಂಕ್ ವರ್ಕ್ಸ್' ಆವಿಷ್ಕರಿಸಿದ್ದು, ಅದರ ಬಳಕೆ ಇದೇ ಮೊದಲನೆಯದು.

ಎದೆಬಡಿತವನ್ನು 'ಮರ್ಮರ್' (ಗುನುಗು) ಎಂದು ಕರೆಯುತ್ತಾರೆ. ಘೋಸ್ಟ್ ಅಂದರೆ ಒಂದರ್ಥದಲ್ಲಿ ಎಲ್ಲರ ಕಣ್ಣಿಲ್ಲಿ ಮಾಯವಾದವನು ಎಂದರ್ಥ. ಅದಕ್ಕಾಗಿಯೇ ಇದಕ್ಕೆ ಈ ಹೆಸರನ್ನು ಇಡಲಾಗಿದೆಯಂತೆ.

'ಡ್ರೋನ್ ಹಿಂಡು'ಗಳೇ ದಾಳಿಗೆ ಬಂದರೆ...

ಕ್ಷಿಪಣಿಗಳು, ರಾಕೆಟ್‌ಗಳಿಗಿಂತಲೂ ಹೆಚ್ಚು ಈಗ ಡ್ರೋನ್‌ಗಳನ್ನು ವೈಮಾನಿಕ ದಾಳಿಗೆ ಬಳಸಲಾಗುತ್ತಿರುವುದು ಇತ್ತೀಚಿನ ಬೆಳವಣಿಗೆ. ಡ್ರೋನ್‌ಗಳನ್ನು ಹಿಂಡು ಹಿಂಡಾಗಿ (drone swarms) ದಾಳಿಗೆ ಬಳಸುವುದು ಈಗಿನ ಹೊಸ ತಂತ್ರ. ಕ್ಷಿಪಣಿ ದಾಳಿ ತಡೆಯಬಲ್ಲ ವಾಯು ರಕ್ಷಣಾ ಕವಚವನ್ನು ಭೇದಿಸಲು ಈ ತಂತ್ರ ಈಗ ಬಳಸಲಾಗುತ್ತಿದೆ.

ಸುಮಾರು 1000 ಡ್ರೋನ್‌ಗಳು ಅಥವಾ 10,000 ಡ್ರೋನ್‌ಗಳು ಏಕಕಾಲದಲ್ಲಿ ದಾಳಿಯೆಸಗಲು ಬಂದರೆ ಹೇಗಿರಬಹುದು ಯೋಚಿಸಿ.



ವಾಯು ರಕ್ಷಣಾ ಕವಚವು ಶೇ.90ರಷ್ಟು ಡ್ರೋನ್‌ಗಳನ್ನು ಹೊಡೆದು ಹಾಕಿದರೂ ಉಳಿದ ಶೇ.10ರಷ್ಟು ಡ್ರೋನ್‌ಗಳೇ ಸಾಕಷ್ಟು ಹಾನಿ ಮಾಡಬಲ್ಲವು. ಆದರಲ್ಲೂ ತಾವಾಗಿ ಸ್ಫೋಟಿಸಬಲ್ಲ ಕ್ಯಾಮಿಕಾಸಿ ಡ್ರೋನ್‌ಗಳಾದರೆ ಇನ್ನಷ್ಟು ಹೆಚ್ಚಿನ ಹಾನಿಯೆಸಗಬಲ್ಲವು.

ಈ ಡ್ರೋನ್ ನಿರ್ಮಾಣಕ್ಕಾಗುವ ವೆಚ್ಚವೂ ಕಡಿಮೆಯೆ. ಕಳೆದ ವರ್ಷ ಉಕ್ರೇನ್ ಇಂತಹ ಕಡಿಮೆ ವೆಚ್ಚದ 117 ಡ್ರೋನ್‌ಗಳನ್ನು ಕಳಿಸಿ ರಷ್ಯಾದ ಕೆಲವಾರು ವಾಯುನೆಲೆಗಳನ್ನು ನಾಶಪಡಿಸಿತ್ತು.

ಜಾಮಿಂಗ್ ವ್ಯವಸ್ಥೆಯ ಮೂಲಕ ಡ್ರೋನ್‌ಗಳು ಕಾರ್ಯವೆಸಗದಂತೆ ಮಾಡುವ ತಂತ್ರಜ್ಞಾನ ಅಭಿವೃದ್ಧಿ ಪಡಿಸಲಾಗುತ್ತಿದೆಯಾದರೂ ಇದೇವೇಳೆ, ಇಂತಹ ಸಂದರ್ಭದಲ್ಲಿ ಡ್ರೋನ್‌ಗಳು ಸ್ವಯಂ ದುರಸ್ತಿ ಮಾಡಿಕೊಂಡು ತಾವೇ ಕಾರ್ಯವೆಸಗುವಂತೆ ಮಾಡುವ ರೀತಿಯಲ್ಲಿ ಡ್ರೋನ್‌ಗಳಲ್ಲೂ ಸುಧಾರಣೆ ಮಾಡಲಾಗುತ್ತಿದೆ.

ಕಿರುಸುದ್ದಿ

ವೇ.ಮೂ.ವಿ.ಎಸ್.ಭಟ್ಟರಿಗೆ ಬಾರ್ಯ ನೂರಿತ್ತಾಯ ಪ್ರತಿಷ್ಠಾನದ ಪ್ರಶಸ್ತಿ

ಪುತ್ತೂರು: ಪುತ್ತೂರಿನ ದಿ. ಬಾರ್ಯ ವಿಷ್ಣುಮೂರ್ತಿ ನೂರಿತ್ತಾಯ ಪ್ರತಿಷ್ಠಾನವು ಕೊಡ ಮಾಡುವ ವಾರ್ಷಿಕ ಪ್ರಶಸ್ತಿಗೆ ಈ ಬಾರಿ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಪ್ರಧಾನ ಅರ್ಚಕ ವೇ.ಮೂ. ವಿ.ಎಸ್. ಭಟ್ಟರು ಆಯ್ಕೆಯಾಗಿದ್ದಾರೆ. ಏ.12ರಂದು ಭಾಸ್ಕರ ಬಾರ್ಯರ ಪರ್ಲಡ್ಕ ನಿವಾಸ 'ಆಗಸ್ತ್ಯ'ದಲ್ಲಿ ಸಂಜೆ ಗಂಟೆ 7ಕ್ಕೆ ಪ್ರಶಸ್ತಿ ಪ್ರದಾನ ನಡೆಯಲಿದೆ. ವೇ.ಮೂ. ಕುಂಟಾರು ಶ್ರೀಧರ ತಂತ್ರಿಗಳು ವಿ.ಎಸ್. ಭಟ್ಟರಿಗೆ ಪ್ರಶಸ್ತಿ ಪ್ರದಾನಿಸಲಿದ್ದಾರೆ. ಬಂಟ್ವಾಳ ತಾಲೂಕು ಕೆದಿಲದ ವೆಂಕಟೇಶ ಸುಬ್ರಹ್ಮಣ್ಯ ಭಟ್ಟರು (ವಿ.ಎಸ್ .ಭಟ್ಟ) 1988ರಿಂದ ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಅರ್ಚಕರಾಗಿ ನಿಯಕ್ತಿಯಾಗಿದ್ದು, 2013ರಿಂದ ಪ್ರಧಾನ ಅರ್ಚಕರಾಗಿದ್ದಾರೆ. ಅವರ ತಂದೆ ವೇ.ಮೂ. ಮೈಕೆ ಶಂಕರನಾರಾಯಣ ಭಟ್ಟರು ಶ್ರೇಷ್ಠ ವೈದಿಕ ವಿದ್ವಾಂಸರು. ವಿ.ಎಸ್. ಭಟ್ಟರು ಕೆದಿಲದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಹಾಗೂ ಬೋರ್ಡ್ ಹೈಸ್ಕೂಲಿನಲ್ಲಿ ಪ್ರೌಢ ಶಾಲಾ ಕಲಿಕೆಯನ್ನು ಪೂರೈಸಿದ್ದರು. ತಮ್ಮ ಸಾತ್ವಿಕ ವ್ಯಕ್ತಿತ್ವದಿಂದ ಅನೇಕ ಆಸ್ತಿಕರಿಗೆ ಇವರು ಪರಿಚಿತರು. ಹಿಮಾಲಯ, ನೇಪಾಳ, ಉಜ್ಜಯಿನಿ, ಕಾಶಿ, ಅಯೋಧ್ಯೆ, ಪ್ರಯಾಗ, ಕೇದಾರ, ವೈಷ್ಣೋದೇವಿ.. ಮೊದಲಾದ ಧಾರ್ಮಿಕ ಕ್ಷೇತ್ರಗಳಿಗೆ ಪ್ರವಾಸ ಮಾಡಿದ್ದರು.ಬಾರ್ಯ ಪ್ರತಿಷ್ಠಾನವು ಇದುವರೆಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಬ್ರಹ್ಮಶ್ರೀ ದಿ.ಕೆಮ್ಮಿಂಜೆ ಕೇಶವ ತಂತ್ರಿ, ದಿ.ಡಾ. ಶೇಣಿ ಗೋಪಾಲಕೃಷ್ಣ ಭಟ್, ದಿ.ರಾಮದಾಸ ಸಾಮಗ, ದಿ.ಬಾರ್ಯ ಜಯಕೀರ್ತಿ ಬುಣ್ಣು, ದಿ.ಚಂದು ಮೇಸ್ತ್ರಿ, ದಿ.ನಾಟಿವೈದ್ಯೆ ಅಕ್ಕು ಹೆಂಗ್ಲು, ಪಾಕಶಾಸ್ತ್ರಜ್ಞ ದಿ. ಶ್ರೀನಿವಾಸ ಭಟ್, ಸರಾಫ್ ರಾಮಚಂದ್ರ ಆಚಾರ್ಯ, ಸಂಗೀತ ಸಾಧಕ ಕುದ್ಮಾರು ವೆಂಕಟ್ರಮಣ ಭಟ್, ಅಧ್ಯಾಪಕ ದಿ. ವಾಸುದೇವ ಮಯ್ಯ, ವೈದ್ಯ ಡಾ.ಜೆ.ಸಿ.ಅಡಿಗ, ಬರೆಪ್ಪಾಡಿ ದಿ.ಅನಂತಕೃಷ್ಣ ಭಟ್, ಉಮೇಶ ಶೆಣೈ, ಸಹಕಾರಿ ದಿ.ನಿರಂಜನ ಕುಮಾರ್, ಪ್ರೊ.ವೇದವ್ಯಾಸ, ಕೆಯ್ಯರು ನಾರಾಯಣ ಭಟ್, ಫಿಲೋಮಿನಾ ಇ. ಬ್ರೆಗ್ಸ್, ವೇ.ಮೂ. ಹರೀಶ್ ಉಪಾಧ್ಯಾಯ, ಪೂಕಳ ಲಕ್ಷ್ಮೀನಾರಾಯಣ ಭಟ್, ರಾಮಕೃಷ್ಣ ಮಿತ್ತಾಂತ, ಮೂಡಾಯೂರು ಚಂದ್ರಶೇಖರ ದೇವಾಡಿಗ, ಕರಾಯ ಲಕ್ಷ್ಮಣ ಶೆಟ್ಟಿ ಹಾಗೂ ನಾರಾಯಣ ಹೊಳ್ಳ ಪಿಲಿಬೈಲು ಹಾಗೂ ಡಾ.ಸುಬ್ರಾಯ ಭಟ್ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ.

ಉಪ್ಪಿನಂಗಡಿ ಪ.ಪೂ. ಉತ್ತಮ ಸಾಧನೆ

ಉಪ್ಪಿನಂಗಡಿ: ಉಪ್ಪಿನಂಗಡಿಯ ಸರಕಾರಿ ಪದವಿ ಪೂರ್ವ ಕಾಲೇಜ್ 2025–26ನೇ ಸಾಲಿನ ಶೈಕ್ಷಣಿಕ ವರ್ಷದ ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶದಲ್ಲಿ ಅತ್ಯುತ್ತಮ ಸಾಧನೆಯನ್ನು ಮಾಡಿದೆ. ಕನ್ನಡ, ಭೌತಶಾಸ್ತ್ರ, ಆಟೋಮೊಬೈಲ್, ಜೀವಶಾಸ್ತ್ರ, ರಾಸಾಯನಶಾಸ್ತ್ರ ಹಾಗೂ ಲೆಕ್ಕಶಾಸ್ತ್ರ ವಿಷಯಗಳಲ್ಲಿ ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಶ್ರೇಣಿವಾರು ಫಲಿತಾಂಶದಲ್ಲಿ 67 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದಿದ್ದು, 187 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ, 57 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಹಾಗೂ 10 ವಿದ್ಯಾರ್ಥಿಗಳು ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಕಾಲೇಜಿನ ಕಲಾ ವಿಭಾಗದಲ್ಲಿ ಹೇಮಾವತಿ 556 ಅಂಕ, ವಾಣಿಜ್ಯ ವಿಭಾಗದಲ್ಲಿ ಮನಿಷಾ ಆರ್. 581 ಮತ್ತು ವಿಜ್ಞಾನ ವಿಭಾಗದಲ್ಲಿ ಫಾತಿಮತ್ ರಾಫಿಯ 569 ಅಂಕ ಗಳಿಸಿದ್ದಾರೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಮೋಹನದಾಸ್ ಮಾಣಾಯಿ, ಮಯೂರ್ ಪಾರ್ಕ್ ಅಪಾರ್ಟ್ಮೆಂಟ್, ಕದ್ರಿ ? ಕದ್ರಿ ಕ್ಷೇತ್ರದ ರಾಜಾಂಗಣದಲ್ಲಿ.
2. ಬಿ. ರವೀಂದ್ರರಾವ್ ಮತ್ತು ಮನೆಯವರು, 'ಸುಪ್ರಸಾದ', ಚೇಳಾರು– ಕಳವಾರು ಶ್ರೀ ಬೆಂಕಿನಾಥೇಶ್ವರ ದೇವಸ್ಥಾನ ವಠಾರ.
3. ದಿ। ಗಂಗಯ್ಯ ಪೂಜಾರಿ ಸ್ಮರಣಾರ್ಥ ಪತ್ನಿ ಉಮಾವತಿ ಮತ್ತು ಮಕ್ಕಳು, ಕುಕ್ಕೇಡಿಹೌಸ್, ಕುಕ್ಕಿಪಾಡಿ, ಮಾವಿನಕಟ್ಟೆ, ಬಂಟ್ವಾಳ (ತಾ).
4. ಮಹಾಬಲ ರೈ, ಪತ್ನಿ, ಮಕ್ಕಳು, ನಗ್ರಿಗುತ್ತು, ಸಜಿಪ ಮೂಡ, ಬಂಟ್ವಾಳ–ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
5. ಅನಿಲ್ ಕುಮಾರ್ ಆಳ್ವ, ಎಣ್ಮೂರು ಕಟ್ಟಬೀಡು, ಪಂಜ, ಸುಳ್ಯ (ತಾ)– ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
6. ಡಾ। ವಾಮನ ಸಾಲ್ಯಾನ್, ಶಿಬರೂರು, ದೇಲಂತಬೆಟ್ಟು.
7. ನಾಗೇಶ್, 'ನವದುರ್ಗ ನಿಲಯ', ಬಾಬು ಕೋಡಿಹೌಸ್, ಮಂಚಿ ಕುಕ್ಕಾಜೆ, ಬಂಟ್ವಾಳ (ತಾ).

ಶ್ರೀ ಧರ್ಮಸ್ಥಳ ಮೇಳ
ನಾಡ ಕೋಣೆವಕ್ಕಾಡಿಯಲ್ಲಿ
ಶ್ರೀಮತಿ ಮೀನಾಕ್ಷಿ ಶೆಡ್ತಿ ಮತ್ತು ಮನೆಯವರು, ಕೋಣ್ಕಿ ಮರಿಪಟೇಲರ ಮನೆ

ಶ್ರೀ ಸಾಲಿಗ್ರಾಮ ಮೇಳ
ಮೇಲ್ ಹೊಸೂರಿನಲ್ಲಿ ಬಯಲಾಟ
ಜ್ವಾಲಾ-ಪ್ರಮೀಳಾರ್ಜುನ-ಬಭ್ರುವಾಹನ

ಶ್ರೀ ಪೆರ್ಡೂರು ಮೇಳ
ಕುಳುಂಜೆ ಗ್ರಾಮದ ಚಟ್ರಿ- **ಚದುರಂಗ**

ಶ್ರೀ ಹನುಮಗಿರಿ ಮೇಳ
ಸೂರಾಲು ಕೊಕ್ಕರ್ಣೆ

ಶ್ರೀ ಪಾವಂಜೆ ಮೇಳ
ದುರ್ಗಾವನ, ಹಿರಣ್ಯ ಬಾಯಾರು
ಶ್ರೀ ದೇವಿ ಮಹಾತ್ಮೆ



ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ 597 ಅಂಕಗಳೊಂದಿಗೆ ರಾಜ್ಯಕ್ಕೆ ತೃತೀಯ ಸ್ಥಾನ ಪಡೆದ ಇಂದ್ರಪ್ರಸ್ಥ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಅನಘ ಕೆ. ಅವರ ಮನೆಗೆ ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಕಲ್ಲಡ್ಕ ಪ್ರಭಾಕರ ಭಟ್ ಭೇಟಿ ನೀಡಿ ಸನ್ಮಾನಿಸಿ ವಿದ್ಯಾರ್ಥಿನಿಯ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಇಂದ್ರಪ್ರಸ್ಥ ಸಮೂಹ ಸಂಸ್ಥೆಗಳ ಆಡಳಿತ ಮಂಡಳಿಯ ಅಧ್ಯಕ್ಷ ಕರುಣಾಕರ ಸುವರ್ಣ, ಸಂಚಾಲಕ ಸುಬ್ರಮಣ್ಯ ಭಟ್ ಕೆದಿಲ, ಸದಸ್ಯರಾದ ಸುಧಾಕರ್ ಶೆಟ್ಟಿ, ರವಿ ಇಳಂತಿಲ, ವಂದನ ಮುದ್ಲಾಜೆ ಹಾಗೂ ಪ್ರಾಂಶುಪಾಲ ಎಚ್.ಕೆ. ಪ್ರಕಾಶ್ ಈ ಸಂದರ್ಭ ಶುಭ ಹಾರೈಸಿದರು.

ಅಂತಾರಾಷ್ಟ್ರೀಯ ಮಟ್ಟದ ಯೂತ್ ಗೇಮ್ಸ್
ಎಸ್‌ಡಿಎಂ ಕಾಲೇಜಿನ ಮಾರುತಿಗೆ ಚಿನ್ನದ ಪದಕ

ಬೆಳ್ತಂಗಡಿ: ಯೂತ್ ಗೇಮ್ಸ್ ಫೌಂಡೇಶನ್ ಇಂಡಿಯಾ ನೇಪಾಳ ಪೋಖರಾ ನಗರದ ರಂಗಶಾಲಾ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಇಂಡೋ–ನೇಪಾಳ ಅಂತಾರಾಷ್ಟ್ರೀಯ ಮಟ್ಟದ ಯೂತ್ ಗೇಮ್ಸ್‌ನಲ್ಲಿ ಭಾಗವಹಿಸಿದ ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವಾಯತ್ತ ಕಾಲೇಜಿನ ಹಾಗೂ ಎಸ್.ಡಿ.ಎಂ ಕ್ರೀಡಾ ಸಂಘದ ವಿದ್ಯಾರ್ಥಿ ಮಾರುತಿ ಲಾಂಗ್ ಜಂಪ್ ಸ್ಪರ್ಧೆಯಲ್ಲಿ ಪಾಲ್ಗೊಂಡು ಚಿನ್ನದ ಪದಕ ಪಡೆದುಕೊಂಡಿದ್ದಾರೆ.



ಭಾರತ ದೇಶವನ್ನು ಪ್ರತಿನಿಧಿಸಿ ಪ್ರಥಮ ಸ್ಥಾನ ಪಡೆಯುವ ಮೂಲಕ ಚಾಂಪಿಯನ್ ಆಗಿರುವ ಪ್ರಥಮ ವರ್ಷದ ಬಿಎ ವಿದ್ಯಾರ್ಥಿ ಮಾರುತಿ, ಇತ್ತೀಚೆಗೆ ಯೂತ್ ಗೇಮ್ಸ್ ಕೌನ್ಸಿಲ್ ಆಫ್ ಇಂಡಿಯಾ ದೆಹಲಿಯ ರಾಜೀವ್ ಗಾಂಧಿ ಸ್ಟೇಡಿಯಂನಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಓಪನ್ ಯೂತ್ ಗೇಮ್ಸ್‌ನಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ಪ್ರಥಮ ಸ್ಥಾನ ಪಡೆಯುವ ಮೂಲಕ ಅಂತಾರಾಷ್ಟ್ರೀಯ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದರು. ಇವರಿಗೆ ಕಾಲೇಜಿನ ದೈಹಿಕ ಶಿಕ್ಷಣ ಉಪನ್ಯಾಸಕ ಸಂದೇಶ್ ಬಿ. ಪೂಂಜ ತರಬೇತಿ ನೀಡಿದ್ದಾರೆ.

ಈ ಕ್ರೀಡಾ ಕೂಟದಲ್ಲಿ ಒಟ್ಟು 7 ಮಂದಿ ಭಾರತದ ಕ್ರೀಡಾಪಟುಗಳು ಭಾಗವಹಿಸಿದ್ದು, ಮಾರುತಿ ಉತ್ತಮ ಪ್ರದರ್ಶನ ನೀಡಿ ಪ್ರಥಮ ಸ್ಥಾನ ಪಡೆದು ದೇಶಕ್ಕೆ ಹೆಮ್ಮೆ ತಂದಿದ್ದಾರೆ. ಬಹುಮಾನ ವಿತರಣಾ ಸಮಾರಂಭದಲ್ಲಿ ಯೂತ್ ಗೇಮ್ಸ್ ಫೌಂಡೇಶನ್ ಸಮಿತಿಯ ಕಾರ್ಯದರ್ಶಿ ಅಮರ್‌ಸಿಂಗ್ ಚಂದೇಲೆ ಹಾಗೂ ಭಾರತೀಯ ಸೇನೆಯ ಹರೇಂದ್ರಸಿಂಗ್ ಚೌಧರಿ ಪದಕಗಳನ್ನು ನೀಡಿ ಅಭಿನಂದಿಸಿದರು.

ಎಸ್.ಡಿ.ಎಂ ಆಡಳಿತ ಮಂಡಳಿ ಸೇರಿದಂತೆ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಡಾ. ಸತೀಶ್ಚಂದ್ರ ಎಸ್, ಐ ಟಿ ಮತ್ತು ಹಾಸ್ಟೆಲ್ ಆಡಳಿತ ವಿಭಾಗದ ಸಿಇಒ ಪೂರನ್ ವರ್ಮ, ಎಸ್.ಡಿ.ಎಂ ಸ್ವಾಯತ್ತ ಕಾಲೇಜಿನ ಪ್ರಾಂಶುಪಾಲ ಪ್ರೊ ವಿಶ್ವನಾಥ್ ಪಿ, ಎಸ್.ಡಿ.ಎಂ ಕ್ರೀಡಾ ಸಂಘದ ಕಾರ್ಯದರ್ಶಿ ರಮೇಶ್, ದೈಹಿಕ ಶಿಕ್ಷಣ ಉಪನ್ಯಾಸಕರಾದ ಶಾರದಾ, ಸಂದೇಶ್ ಬಿ ಪೂಂಜ, ಸುದೀನ್ ಪುಜಾರಿ, ಶಿಕ್ಷಕರು ಮಾರುತಿಯನ್ನು ಅಭಿನಂದಿಸಿದ್ದಾರೆ.

ಜಿಲ್ಲಾ ಅಂತರ್ಜಲ ಸಮಿತಿ ಸಭೆಯಲ್ಲಿ ಕೊಡಗು ಜಿಲ್ಲಾಧಿಕಾರಿ ಸೂಚನೆ
ಅಂತರ್ಜಲ ಸಂರಕ್ಷಣೆಗೆ ಅಗತ್ಯ ಕ್ರಮ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಅಂತರ್ಜಲವನ್ನು ಸಂರಕ್ಷಿಸುವಲ್ಲಿ ಕೆರೆ ಹಾಗೂ ಜಲಮೂಲವನ್ನು ಉಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಎಸ್. ಜೆ.ಸೋಮಶೇಖರ್ ಅವರು ಸೂಚಿಸಿದ್ದಾರೆ.

ನಗರದ ಜಿಲ್ಲಾಧಿಕಾರಿಯವರ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಅಂತರ್ಜಲ ಸಮಿತಿ ಸಭೆಯಲ್ಲಿ ಅಂತರ್ಜಲ ಅಭಿವೃದ್ಧಿ, ಸಂರಕ್ಷಣೆ ಮತ್ತಿತರ ಕುರಿತು ಸುದೀರ್ಘ ಚರ್ಚೆ ನಡೆಯಿತು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾಧಿಕಾರಿಯವರು, ಜಿಲ್ಲೆಯಲ್ಲಿ ಅಂತರ್ಜಲ ನಿರ್ದೇಶನಾಲಯ ಅಥವಾ ಕರ್ನಾಟಕ ಅಂತರ್ಜಲ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರ ಪಡೆದು ಕಾರ್ಯ ನಿರ್ವಹಿಸಲಾಗುತ್ತಿದೆಯೇ ಎಂಬ ಬಗ್ಗೆ ಖಾತರಿಪಡಿಸಿಕೊಳ್ಳಬೇಕು ಎಂದರು.

ಅಂತರ್ಜಲ ಇಲಾಖೆಯ ಹಿರಿಯ ಭೂ ವಿಜ್ಞಾನಿ ಎಸ್.ಸುಧಾ ಅವರು ಮಾತನಾಡಿ, ಗಾಳಿಬೀಡು, ಮಕ್ಕಂದೂರು, ಯವಕಪಾಡಿ, ಎಮ್ಮೆಮಾಡು, ಮೊಣ್ಣಂಗೇರಿ, ಕೂಡಿಗೆ, ಕುಮಾರಳ್ಳಿ, ಪೊನ್ನಂಪೇಟೆ ನಿರಾಕ್ಷೇಪಣಾ ಅರ್ಜಿಗಳನ್ನು ಪಡೆದುಕೊಂಡಿದ್ದು, ಹೊಸದಾಗಿ ಆನ್‌ಲೈನ್ ಮೂಲಕ ಮೂರು ಅರ್ಜಿಗಳು ಸ್ವೀಕೃತಿಗೊಂಡಿವೆ ಎಂದು ಮಾಹಿತಿ ನೀಡಿದರು.

ಕರ್ನಾಟಕ ಅಂತರ್ಜಲ ಪ್ರಾಧಿಕಾರದಲ್ಲಿ ನೋಂದಾಯಿಸದೆ ಜಿಲ್ಲೆಯಲ್ಲಿ ಕೊಳವೆಬಾವಿ ಕೊರೆಯುತ್ತಿರುವ ರಿಗ್ ಯಂತ್ರಗಳ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸುಧಾ ಅವರು ವಿವರಿಸಿದರು.



ಅಲ್ಲದೇ 2025–26ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಹೊಸದಾಗಿ ಕೊರೆದಿರುವ ಕೊಳವೆ ಬಾವಿಗಳ ಸಫಲತೆ, ವಿಫಲ ಕೊಳವೆ ಬಾವಿಗಳನ್ನು ಸುರಕ್ಷಿತವಾಗಿ ಮುಚ್ಚಿರುವ ಬಗ್ಗೆ ಮಾಹಿತಿ ನೀಡಿದರು.

ಕೊಡಗು ಜಿಲ್ಲೆಯಲ್ಲಿ 19 ತೋಡು ಬಾವಿ ಹಾಗೂ 26 ಕೊಳವೆಬಾವಿಗಳು ಸೇರಿ ಒಟ್ಟು 45 ನಿರೀಕ್ಷಣಾ ಬಾವಿಗಳಿಂದ ಪ್ರತಿ ಮಾಹೆಯಲ್ಲಿ ಸ್ಥಿರ ಜಲ ಮಟ್ಟ ದಾಖಲು ಮಾಡಲಾಗುತ್ತಿತ್ತು. ಪ್ರಸ್ತುತವಾಗಿ ಕುಶಾಲನಗರದ ಒಂದು ಕೊಳವೆ ಬಾವಿ ಇರುವ ಸ್ಥಳದಲ್ಲಿ ಕೋರ್ಟ್ ನಿರ್ಮಾಣ ಮತ್ತು ವೀರಾಜಪೇಟೆಯ ಒಂದು ಕೊಳವೆಬಾವಿ ಇರುವ ಸ್ಥಳದಲ್ಲಿ ಪ್ರವಾಸಿ ಮಂದಿರ ನಿರ್ಮಾಣ ಮಾಡಿರುವುದರಿಂದ ಮುಚ್ಚಲಾಗಿದೆ ಎಂದು ಸುಧಾ ಎಸ್. ತಿಳಿಸಿದರು.

ಸಣ್ಣ ನೀರಾವರಿ ಇಲಾಖೆಯ ಸಹಾಯಕ ಎಂಜಿನಿಯರ್ ಕುಮಾರಸ್ವಾಮಿ ಅವರು ಮಾತನಾಡಿ, 2025–26ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉಪ ಯೋಜನೆಯಡಿ 98 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ಎಂದು ಮಾಹಿತಿ ನೀಡಿದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಭೂ ವಿಜ್ಞಾನಿ ದೀಕ್ಷಿತ್ ಮಾತನಾಡಿ, ಜಿಲ್ಲೆಯ ವಿವಿಧೆಡೆ ನೀರಿನ ಮಾದರಿ ಪರೀಕ್ಷೆಗಳ ವಿವರಣೆ ನೀಡಿದರು. ಅಲ್ಲದೇ ನೀರಿನ ಮಾದರಿ ಪರೀಕ್ಷೆಯಲ್ಲಿ ಕಂಡು ಬಂದಿರುವ ರಾಸಾಯನಿಕ ವರದಿಗಳನ್ನು ವಿಸ್ತೃತವಾಗಿ ಮಂಡಿಸಿದರು.

- ಅಂತರ್ಜಲ ಪ್ರಾಧಿಕಾರದಲ್ಲಿ ನೋಂದಾಯಿಸದೆ ಜಿಲ್ಲೆಯಲ್ಲಿ ಕೊಳವೆಬಾವಿ ಕೊರೆಯುತ್ತಿರುವ ರಿಗ್ ಯಂತ್ರಗಳ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ
- ಕೊಡಗು ಜಿಲ್ಲೆಯಲ್ಲಿ 19 ತೋಡು ಬಾವಿ ಹಾಗೂ 26 ಕೊಳವೆಬಾವಿಗಳು ಸೇರಿ ಒಟ್ಟು 45 ನಿರೀಕ್ಷಣಾ ಬಾವಿಗಳಿಂದ ಪ್ರತಿ ಮಾಹೆಯಲ್ಲಿ ಸ್ಥಿರ ಜಲಮಟ್ಟ ದಾಖಲು ಮಾಡಲಾಗುತ್ತಿತ್ತು.
- 2025-26ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉಪ ಯೋಜನೆಯಡಿ 98 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಎಸ್. ಜೆ.ಸೋಮಶೇಖರ್ ಅವರು ಮಾತನಾಡಿ, ಜಿಲ್ಲೆಯಲ್ಲಿ ಕಾಲ ಕಾಲಕ್ಕೆ ನೀರಿನ ಮಾದರಿಯನ್ನು ಪರೀಕ್ಷಿಸಿ ಶುದ್ಧ ನೀರನ್ನು ಕುಡಿಯಲು ಪೂರೈಸಬೇಕು ಮತ್ತು ಕೆರೆಗಳ ಸರ್ವೆ ಕಾರ್ಯ ಶೀಘ್ರ ನಡೆಯಬೇಕು ಎಂದು ನಿರ್ದೇಶನ ನೀಡಿದರು. ವಿವಿಧ ಇಲಾಖೆ ಅಧಿಕಾರಿಗಳು ಇತರರು ಇದ್ದರು.

ಏ.13-25: ಕರಾಯದಲ್ಲಿ ಉಚಿತ ದ್ವಾದಶ ಜ್ಯೋತಿರ್ಲಿಂಗ ದರ್ಶನ

ಉಪ್ಪಿನಂಗಡಿ: ಕಾವಳಕಟ್ಟೆಯ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾನಿಲಯದ ಆಶ್ರಯದಲ್ಲಿ ಬೆಳ್ತಂಗಡಿ ತಾಲೂಕಿನ ಕರಾಯ ಶ್ರೀ ಮಹಾಲಿಂಗೇಶ್ವರ ದೇವಳದ ಬ್ರಹ್ಮಕಲಶೋತ್ಸದ ನಿಮಿತ್ತ ಏ.13 ರಿಂದ ಏ.25ರವರೆಗೆ ದ್ವಾದಶ ಜ್ಯೋತಿರ್ಲಿಂಗ ದರ್ಶನದ ಅವಕಾಶವನ್ನು ಕರಾಯದಲ್ಲಿ ಆಯೋಜಿಸಲಾಗಿದೆ ಎಂದು ಕಾವಳಕಟ್ಟೆಯ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾನಿಲಯದ ಸೇವಾರ್ಥಿ ಮಂಜುನಾಥ್ ತಿಳಿಸಿದರು.

ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿ, ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾನಿಲಯ ಅಸ್ತಿತ್ವಕ್ಕೆ ಬಂದು 90 ವರ್ಷಗಳನ್ನು ಪೂರ್ಣಗೊಳಿಸುತ್ತಿದೆ. ಈ ಸಂದರ್ಭದಲ್ಲಿ ಜನತೆಗೆ ಆಧ್ಯಾತ್ಮದ ಸವಿಯನ್ನು ಉಣಿಸಬೇಕೆಂಬ ಸಂಕಲ್ಪ ತೊಟ್ಟು ದ್ವಾದಶ ಜ್ಯೋತಿರ್ಲಿಂಗ ದರ್ಶನ ಅವಕಾಶವನ್ನು ಉಚಿತವಾಗಿ ಒದಗಿಸಲಾಗಿದೆ ಎಂದರು.

ದ್ವಾದಶ ಜ್ಯೋತಿರ್ಲಿಂಗ ದರ್ಶನದ ಉದ್ಘಾಟನೆಯನ್ನು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾನಿಲಯದ ಸಾಧಕಿಯರಾದ ಸರೋಜಾ ಹಾಗೂ ಭಾನುಮತಿಯವರು ನೆರವೇರಿಸಲಿದ್ದು, ಕರಾಯ ದೇವಳದ ಆಡಳಿತ ಮಂಡಳಿ ಹಾಗೂ ಬ್ರಹ್ಮಕಲಶೋತ್ಸವ ಸಮಿತಿಯ ಪ್ರಮುಖರು ಭಾಗವಹಿಸಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಸಹಾ ಸೇವಾರ್ಥಿ ವಿಶ್ವನಾಥ ಉಪಸ್ಥಿತರಿದ್ದರು.

ಪಿಯುಸಿ : ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ



ಪುತ್ತೂರು: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನಡೆಸಿದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ–1ರ ಫಲಿತಾಂಶ ಪ್ರಕಟಗೊಂಡಿದ್ದು, ವಿವೇಕಾನಂದ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ರಾಜ್ಯ ಮಟ್ಟದಲ್ಲಿ ಅತ್ಯಧಿಕ ರ್‍ಯಾಂಕ್‌ಗಳನ್ನು ಬಾಚಿಕೊಳ್ಳುವುದರ ಮೂಲಕ ಅಮೋಘ ಸಾಧನೆಯನ್ನು ಮೆರೆದಿದ್ದು, ಈ ಹಿನ್ನಲೆಯಲ್ಲಿ ಸಾಧಕ ವಿದ್ಯಾರ್ಥಿಗಳನ್ನು ವಿವೇಕಾನಂದ ಪ.ಪೂ. ಕಾಲೇಜಿನ ವತಿಯಿಂದ ಸನ್ಮಾನಿಸಲಾಯಿತು.

ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ. ಕೆ.ಎಂ. ಕೃಷ್ಣ ಭಟ್ ಸಾಧಕ ವಿದ್ಯಾರ್ಥಿಗಳಿಗೆ ಶುಭ ಹಾರೈಸಿ, ವಿವೇಕಾನಂದ ವಿದ್ಯಾ ಸಂಸ್ಥೆಯು ಕಳೆದ ಆರು ದಶಕಗಳಿಂದಲೂ ಸತತವಾಗಿ ಅತ್ಯುತ್ತಮ ಫಲಿತಾಂಶಗಳನ್ನು ದಾಖಲಿಸುತ್ತಾ ಬಂದಿದ್ದು, ಈ ವರ್ಷವೂ ವಿದ್ಯಾರ್ಥಿಗಳ ಅಪ್ರತಿಮ ಸಾಧನೆಯು ವಿದ್ಯಾ ಸಂಸ್ಥೆಯ ಗರಿಮೆಯನ್ನು ಮತ್ತಷ್ಟು ಉನ್ನತ ಮಟ್ಟಕ್ಕೆ ಕೊಂಡೊಯ್ದಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಸಾಧಕರಿಗೆ ಸನ್ಮಾನ

ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳಾದ ವಿಜ್ಞಾನ ವಿಭಾಗದ ಅಭಿರಾಮ್ ವಿ. ಭಟ್, ತೀರ್ಥ ಶೆಟ್ಟಿ, ಶ್ರೀಜಾ, ಪ್ರಾಪ್ತಿ ಆಳ್ವ, ಮಂಗಳಾಮೃತ ಕೆ.ಆರ್., ಪ್ರಸ್ತುತಿ ಪಿ. ಹಾಗೂ ಅದಿತಿ ಯು., ವಾಣಿಜ್ಯ ವಿಭಾಗದ ಮನ್ವಿತ ಹಾಗೂ ಬಿಂದು ಎಚ್.ಆರ್., ಪ್ರಮಥ ಎಂ. ಭಟ್, ಶ್ರೀವಿದ್ಯಾ ಜೆ., ಸುಶ್ಮಿತಾ ಬಿ. ಹಾಗೂ ಸಹನ ಮಳಿ, ಕಲಾ ವಿಭಾಗದ ರೂಪಶ್ರೀ ಅವರನ್ನು ಸನ್ಮಾನಿಸಲಾಯಿತು.

ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ರವೀಂದ್ರ ಪಿ. ಮಾತನಾಡಿ, ನಿರಂತರವಾದ ಶ್ರಮ, ಸಾಧನೆ ನಮ್ಮನ್ನು ಅತ್ಯುನ್ನತ ಶಿಖರಕ್ಕೆ ಕೊಂಡೊಯ್ದು ನಿಲ್ಲಿಸಬಲ್ಲದು ಎಂಬುದನ್ನು ನಮ್ಮ ವಿದ್ಯಾರ್ಥಿಗಳು ಇಂದು ಸಾಬೀತುಪಡಿಸಿದ್ದಾರೆ. ಈ ಸಾಧನೆಯ ಹಿಂದೆ ಅವಿರತವಾಗಿ ಶ್ರಮಿಸಿದ ಕಾಲೇಜಿನ ಗುರುವೃಂದ ಹಾಗೂ ವಿದ್ಯಾರ್ಥಿಗಳ ಪೋಷಕ ವೃಂದದವರಿಗೆ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಮಟ್ಟದಲ್ಲಿ ವಿವಿಧ ರ್‍ಯಾಂಕ್‌ಗಳನ್ನು ಗಳಿಸಿದ ಸಾಧಕ ವಿದ್ಯಾರ್ಥಿಗಳಿಗೆ ಶಾಲು ಹೊದಿಸಿ ಸನ್ಮಾನಗೈದು ಸಿಹಿತಿಂಡಿ ಹಂಚಲಾಯಿತು.

ಈಸಂದರ್ಭ ವಿವೇಕಾನಂದ ವಿದ್ಯಾವರ್ಧಕ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲಕ್ಷ್ಮೀ ಪ್ರಸಾದ್ ಬೊಟ್ಯಾಡಿ, ಸಹಾಯಕ ಕಾರ್ಯನಿರ್ವಹಣಾಧಿಕಾರಿ ವೆಂಕಟರಮಣ ರಾವ್ ಮಂಕುಡೆ, ಕಾಲೇಜಿನ ಆಡಳಿತ ಮಂಡಳಿ ಕೋಶಾಧಿಕಾರಿಸಚಿನ್ ಶೆಣೈ ಕೆ., ಕಾಲೇಜಿನವಸತಿ ನಿಲಯಗಳ ಆಡಳಿತ ಮಂಡಳಿ ಅಧ್ಯಕ್ಷ ರಮೇಶ್ ಪ್ರಭು, ಆಡಳಿತಾಧಿಕಾರಿ ಗೋವಿಂದರಾಜ ಶರ್ಮ, ಕಾಲೇಜಿನ ಪ್ರಾಂಶುಪಾಲ ದೇವಿಚರಣ್ ರೈ ಎಂ. ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಉಪನ್ಯಾಸಕಿ ದಯಾಮಣಿ ಟಿ.ಕೆ ಕಾರ್ಯಕ್ರಮ ನಿರ್ವಹಿಸಿದರು.

ಅದಮ್ಯ ಚೇತನಾ ಸಂಸ್ಥೆಯಲ್ಲಿ ಡಿಜಿಟಲ್ ಲ್ಯಾಬ್ ಉದ್ಘಾಟನೆ
ದಿವ್ಯಾಂಗ ಮಕ್ಕಳ ಸಾಮೂಹಿಕ ಹುಟ್ಟುಹಬ್ಬ

ಮಂಗಳೂರು: ಸೇವಾ ಭಾರತಿ ಮಂಗಳೂರು ಇದರ ಮಾಧವ ವನ ಮೊಂಟೆಪದವು ಇಲ್ಲಿನ ಅಂಕುರ ಕಟ್ಟಡದಲ್ಲಿ ಐ.ಸಿ.ಐ.ಸಿ.ಐ ಫೌಂಡೇಶನ್ ಸಹಕಾರದೊಂದಿಗೆ ವ್ಯವಸ್ಥೆಗೊಂಡಿರುವ ಡಿಜಿಟಲ್ ಲ್ಯಾಬ್ ಮತ್ತು ಮಲ್ಟಿ ಸ್ಕಿಲ್ಲಿಂಗ್ ಲ್ಯಾಬ್ ಉದ್ಘಾಟನಾ ಕಾರ್ಯಕ್ರಮ ಮತ್ತು ಅದಮ್ಯ ಚೇತನಾ ದಿವ್ಯಾಂಗ ಮಕ್ಕಳ ಸಾಮೂಹಿಕ ಹುಟ್ಟುಹಬ್ಬ ಆಚರಣೆ ನಡೆಯಿತು.



ಡಿಜಿಟಲ್ ಲ್ಯಾಬ್ ಕೋಣೆಯ ಉದ್ಘಾಟನೆಯನ್ನು ಐ.ಸಿ.ಐ.ಸಿ.ಐ ಬ್ಯಾಂಕಿನ ವಲಯ ಮುಖ್ಯಸ್ಥ, ಕರ್ನಾಟಕ ಸೆಂಟ್ರಲ್ ಅಧಿಕಾರಿ ಶಶಿಕುಮಾರ್ ಎನ್. ಮತ್ತು ಮಲ್ಟಿ ಸ್ಕಿಲ್ಲಿಂಗ್ ಲ್ಯಾಬ್ ಕೋಣೆಯ ಉದ್ಘಾಟನೆಯನ್ನು ಐ.ಸಿ.ಐ.ಸಿ.ಐ ಫೌಂಡೇಶನ್‌ನ ಪ್ರೊಜೆಕ್ಟ್ ಮ್ಯಾನೇಜರ್ ರಾಜಸಾಹಿಬ್ ಮತ್ತು ಇನ್ಸ್ಟಿಟ್ಯೂಷನಲ್ ಬ್ಯಾಂಕಿನ ಪ್ರಾದೇಶಿಕ ಮುಖ್ಯಸ್ಥ ಸಂತೋಷ ಮಳಲಿ ಕೊಪ್ಪ ನೆರವೇರಿಸಿದರು.

ಅದಮ್ಯ ಚೇತನಾ ದಿವ್ಯಾಂಗ ಮಕ್ಕಳ ಸಾಮೂಹಿಕ ಹುಟ್ಟುಹಬ್ಬವನ್ನು ಐ.ಸಿ.ಐ.ಸಿ.ಐ ಬ್ಯಾಂಕಿನ ಅಧಿಕಾರಿಗಳು ಮತ್ತು ಐ.ಸಿ.ಐ.ಸಿ.ಐ ಫೌಂಡೇಶನ್‌ನ ಸದಸ್ಯರೊಂದಿಗೆ ಸೇರಿ ಆರತಿ ಬೆಳಗುವುದರ ಮತ್ತು ಕೇಕ್ ಕತ್ತರಿಸುವಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.



ಸಂಸ್ಥೆಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಪೃಥ್ವಿಪಾಲ ಕೆ. ಪ್ರಾಸ್ತಾವಿಕವಾಗಿ ಮಾತನಾಡಿದರು. ಸೇವಾ ಭಾರತಿ ಸಂಸ್ಥೆಯ ಗೌರವ ಕಾರ್ಯದರ್ಶಿ ಎಚ್.ನಾಗರಾಜ ಭಟ್, ಕೋಶಾಧಿಕಾರಿ ವಿನೋದ್ ಶೆಣೈ, ಶಾಲಾ ಮುಖ್ಯ ಶಿಕ್ಷಕಿ ವರ್ಷ, ಸಂಸ್ಥೆಯ ವಿಶ್ವಸ್ಥರು, ಸ್ವಯಂಸೇವಕರು ,ಮಕ್ಕಳ ಪೋಷಕರು ಮತ್ತು ಶಾಲೆಯ ಎಲ್ಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಹುಟ್ಟುಹಬ್ಬದ ಪ್ರಯುಕ್ತ ಎಲ್ಲಾ ಮಕ್ಕಳಿಗೂ ಕ್ರೀಡಾ ಸಮವಸ್ತ್ರವನ್ನು ಉಡುಗೊರೆಯಾಗಿ ನೀಡಲಾಯಿತು.

ಸಭಾ ಕಾರ್ಯಕ್ರಮದ ನಂತರ ಮಕ್ಕಳಿಂದ ಮತ್ತು ಶಾಲೆಯ ಸಿಬ್ಬಂದಿ ವರ್ಗದವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿದುವು.

ಶಿಕ್ಷಕಿ ಡೈಸಿ ಸಾಂಡ್ರಾ ಪಿಂಟೊ ಸ್ವಾಗತಿಸಿದರು. ಉಷಾ ವಂದಿಸಿದರು. ಶಿಕ್ಷಕಿಯರಾದ ಉಷಾ, ಲಿಖಿತಾ ಹಾಗೂ ಫಿಸಿಯೋಥೆರಪಿಸ್ಟ್ ಕವಿತಾ ಕಾರ್ಯಕ್ರಮ ನಿರೂಪಿಸಿದರು.

ರಾಜ್ಯಕ್ಕೆ 9ನೇ ರ್‍ಯಾಂಕ್ ಪಡೆದ ಸ್ಪಂದನಾಗೆ ಸನ್ಮಾನ

ಕುಂದಾಪುರ : ಎಸೆಸ್ಸೆಲ್ಸಿಯಲ್ಲಿ ಶೇ. 84 ಅಂಕ ಗಳಿಸಿದ್ದರೂ ಕೂಡ ಸಂಸ್ಥೆಯ ಬೋಧಕ ಸಿಬ್ಬಂದಿಗಳ ನಿರಂತರ ಪ್ರಯತ್ನ ಮತ್ತು ವಿದ್ಯಾರ್ಥಿನಿಯ ಕಠಿಣ ಪರಿಶ್ರಮದ ಫಲವಾಗಿ ಸ್ಪಂದನಾ ಆರ್. ಶೆಟ್ಟಿ ಶೇ. 98.7 ಅಂಕ ಪಡೆದು ರಾಜ್ಯಕ್ಕೆ 9ನೇ ರ್‍ಯಾಂಕ್ ಪಡೆದಿರುವುದು ಎಲ್ಲಾ ವಿದ್ಯಾರ್ಥಿಗಳಿಗೆ ಸ್ಪೂರ್ತಿದಾಯಕವಾಗಿದೆ. ನಮ್ಮ ಸಂಸ್ಥೆಯ ಪ್ರಥಮ ಬ್ಯಾಚ್‌ನಲ್ಲಿ ಯಾವುದೇ ವಿದ್ಯಾರ್ಥಿ ರಾಜ್ಯಮಟ್ಟದ ರ್‍ಯಾಂಕ್ ಪಡೆದರೆ 50 ಸಾವಿರ ರೂ. ಬಹುಮಾನ ನೀಡುವುದಾಗಿ ತಿಳಿಸಿದಂತೆ ರ್‍ಯಾಂಕ್ ಗಳಿಸಿದ ಸ್ಪಂದನಾಗೆ 50 ಸಾವಿರ ರೂ. ನಗದು ನೀಡಿ ಗೌರವಿಸಲಾಗುತ್ತಿದೆ ಎಂದು ಸಂಸ್ಥೆಯ ಅಧ್ಯಕ್ಷ ಡಾ.ರಮೇಶ್ ಶೆಟ್ಟಿ ಹೇಳಿದರು.

ಯಡಾಡಿ ಮತ್ಯಾಡಿಯ ಸುಜ್ಞಾನ ಪಿಯು ಕಾಲೇಜಿನಲ್ಲಿ ರಾಜ್ಯಕ್ಕೆ 9ನೇ ರ್‍ಯಾಂಕ್ ಪಡೆದ ಸ್ಪಂದನಾ ಆರ್.ಶೆಟ್ಟಿ ಅವರನ್ನು ಗೌರವಿಸಿ ಅವರು ಮಾತನಾಡಿದರು.

ಅವಳ ಸಾಧನೆ ನಮ್ಮ ಮುಂದಿನ ವಿದ್ಯಾರ್ಥಿಗಳಿಗೆ ದಾರಿ ದೀಪವಾಗಲಿ ಮತ್ತು ಅವಳ ಭವಿಷ್ಯ ಉಜ್ವಲವಾಗಲಿ ಎಂದು ಶುಭ ಹಾರೈಸಿದರು.



ದ್ವಿತೀಯ ಪಿಯುಸಿಗೆ ಈ ಕಾಲೇಜಿಗೆ ದಾಖಲಾಗಿದ್ದು, ಇಲ್ಲಿನ ಉಪನ್ಯಾಸಕರ ಪ್ರೋತ್ಸಾಹ ಸಹಕಾರ ಮತ್ತು ಪೋಷಕರ ಬೆಂಬಲದೊಂದಿಗೆ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡುವಂತಾಯಿತು. ಉತ್ತಮ ಗುಣಮಟ್ಟದ ಶಿಕ್ಷಣದ ಜೊತೆಗೆ ಮನೋಸ್ಥೈರ್ಯವನ್ನು ತುಂಬಿದ ಪರಿಣಾಮ ಪಿಯುಸಿ ಪರೀಕ್ಷೆಯಲ್ಲಿ ರ್‍ಯಾಂಕ್ ಗಳಿಸಲು ಸಹಕಾರಿಯಾಯಿತು. ಪ್ರಥಮ ಬ್ಯಾಚ್‌ನ ವಿದ್ಯಾರ್ಥಿನಿಯಾಗಿ ರ್‍ಯಾಂಕ್ ಪಡೆದಿರುವುದು ಹೆಮ್ಮೆಯಾಗಿದೆ ಎಂದು ಸ್ಪಂದನಾ ಆರ್. ಶೆಟ್ಟಿ ಹೇಳಿದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಪ್ರತಾಪ್ ಚಂದ್ರ ಶೆಟ್ಟಿ, ಖಜಾಂಚಿ ಭರತ್ ಶೆಟ್ಟಿ, ಪ್ರಾಂಶುಪಾಲ ರಂಜನ್ ಬಿ. ಶೆಟ್ಟಿ, ಪೂಜಾ ಶೆಟ್ಟಿ, ಪ್ರಮತ್ ಶೆಟ್ಟಿ, ರಘುರಾಮ ಶೆಟ್ಟಿ, ಮಾಲತಿ ಆರ್. ಶೆಟ್ಟಿ ಉಪಸ್ಥಿತರಿದ್ದರು.

ವಿಧಾನ ಪರಿಷತ್ ಸದಸ್ಯ ಐವನ್ ಡಿ'ಸೋಜ ಹೇಳಿಕೆ
ಅಭಿವೃದ್ಧಿ ವಿಚಾರದಲ್ಲಿ ರಾಜಕಾರಣ ಬೇಡ

ಮಂಗಳೂರು: ಅಮೃತ್ ಯೋಜನೆ, ಜಲ್ ಹೀ ಅಮೃತ್, ಒಳಚರಂಡಿ ಸೇರಿದಂತೆ ಮಂಗಳೂರು ನಗರದಲ್ಲಿ 235.68 ಕೋಟಿ ರೂ.ಗಳ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ. ಹಾಗಾಗಿ ನಗರದ ಅಭಿವೃದ್ಧಿ ವಿಷಯದಲ್ಲಿ ರಾಜಕಾರಣ ಬೇಡ ಎಂದು ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ಹೇಳಿದರು.

ಸರಕಾರದಿಂದ ಅನುದಾನ ಬಂದ ಕಾರಣ ಇಷ್ಟೆಲ್ಲಾ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ– 2ರಡಿ 165 ಕೋಟಿ ರೂ.ಗಳ ಕಾಮಗಾರಿ ಆಗಿದ್ದು, ಅದರ ಉದ್ಘಾಟನೆ ಕಾರ್ಯಕ್ರಮವನ್ನು ನಮ್ಮನ್ನೆಲ್ಲಾಕರೆಯದೇನಡೆಸುವಶಾಸಕರು ಹಣ ಎಲ್ಲಿಂದ ಬಂತು ಎಂದು ಯಾಕೆ ಹೇಳುವುದಿಲ್ಲ. ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ –1ರಡಿ ಬಿಜೆಪಿಯ ಆಡಳಿತವಿದ್ದ ಕಾಲದಲ್ಲಿ ತ್ರಿಬಲ್ ಇಂಜಿನ್ ಸರಕಾರವಿದ್ದರೂ ಯೋಜನೆ ಯಾಕೆ ಪೂರ್ತಿಗೊಳಿಸಲಾಗಿಲ್ಲ.



ಚುನಾವಣೆಗೆ ಮೂರು ತಿಂಗಳು ಪೂರ್ವಭಾವಿಯಾಗಿ ಹಣಕಾಸು ಅನುಮೋದನೆ ಪಡೆಯದೇ, ಚಪ್ಪರ ಹಾಕಿ ಶಿಲಾನ್ಯಾಸ ಮಾಡಲಾಗಿತ್ತು. ಬಳಿಕ ಹಣ ಸಿಗದೆ ಗುತ್ತಿಗೆದಾರರು ನ್ಯಾಯಾಲಯಕ್ಕೆ ಹೋಗಿದ್ದು ಯಾಕೆ ಎಂಬುದನ್ನು ಸದಾ ರಾಜಕೀಯ ಮಾತನಾಡುವ ಶಾಸಕರು ಉತ್ತರಿಸಬೇಕು ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.

10 ಕೋಟಿ ರೂ. ವೆಚ್ಚದಲ್ಲಿ ರಾಜ ಕಾಲುವೆಗಳ ಹೂಳೆತ್ತುವ ಪ್ರಕ್ರಿಯೆಗೆ ಚಾಲನೆ ದೊರಕಿದೆ. ಶಾಸಕರಿಗೆ ಅಭಿವೃದ್ಧಿ ಯೋಜನೆಗಾಗಿ 25 ಕೋಟಿ ರೂ. ಬಿಡುಗಡೆಯಾಗಿದೆ. ಹಾಗಿದ್ದರೂ ಶಾಸಕರು ಅನುದಾನವೇ ಸಿಗುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಇಷ್ಟು ಹಣ ಸಾಕಾಗದು ಎಂಬುದು ನನಗೂ ಅರಿವಿದೆ. ಆದರೆ ವಿಶೇಷ ಯೋಜನೆ ಬರಬೇಕಾದರೆ ಪಕ್ಷಬೇಧ ಮರೆತು ಶಾಸಕರು ರಾಜ್ಯ ಸರಕಾರಕ್ಕೆ ಬೇಡಿಕೆ ಸಲ್ಲಿಸಬೇಕಿದೆ. ಇದೀಗ ನಗರದ ಒಳಚರಂಡಿ ಯೋಜನೆಯನ್ನು ಮೇಲ್ದರ್ಜೆಗೇರಿಸಲು 1250 ಕೋಟಿ ರೂ.ಗಳ ಪ್ರಸ್ತಾವನೆ ಸಲ್ಲಿಕೆಯಾಗಿದ್ದು, ಇದಕ್ಕೆ ಸರಕಾರದ ಗಮನ ಸೆಳೆಯುವ ಕೆಲಸ ಆಗಬೇಕಾಗಿದೆ. ನಗರದ ಅಭಿವೃದ್ಧಿಗೆ ನಾವು ಯಾವತ್ತೂ ಬದ್ಧವಾಗಿದ್ದು, ಅಭಿವೃದ್ಧಿ ವಿಚಾರದಲ್ಲಿ ರಾಜಕಾರಣ ಬೇಡ ಎಂದರು.

ವಿಧಾನ ಪರಿಷತ್ತಿನ 158ನೆ ಅಧಿವೇಶನದಲ್ಲಿ ಮಂಗಳೂರಿನ ಉರ್ವಾಸ್ಟೋರ್‌ನಲ್ಲಿ ನಿರ್ಮಾಣ ಹಂತದಲ್ಲಿರುವ ಕೊಂಕಣಿ ಭವನ ಕಾಮಗಾರಿ ಪೂರ್ಣಗೊಳಿಸಲು 3 ಕೋಟಿ ರೂ.ಗಳ ಬೇಡಿಕೆ ಇರಿಸಲಾಗಿತ್ತು. ಇದಕ್ಕೆ ಹಿಂದುಳಿದವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಅನುದಾನ ಒದಗಿಸುವ ಭರವಸೆ ನೀಡಿದ್ದಾರೆ. ಭರವಸೆ ಈಡೇರಿದ್ದರೆ ಆಶ್ವಾಸನಾ ಸಮಿತಿಯಲ್ಲಿ ಪ್ರಶ್ನಿಸಲಾಗುವುದು ಎಂದು ಅವರು ಹೇಳಿದರು.

ಮುಖಂಡರಾದ ಶಶಿಧರ ಹೆಗ್ಡೆ, ಮಮತಾ ಗಟ್ಟಿ, ಅಪ್ಪಿ, ನವೀನ್ ಡಿಸೋಜ, ಸ್ವ್ಯಾನಿ ಅಲ್ವಾರಿಸ್, ಇಮ್ರಾನ್, ಮನುರಾಜ್, ಕೇಶವ್, ನಾಗೇಂದ್ರ, ಭಾಸ್ಕರ್, ಅಶೋಕ್ ಡಿ.ಕೆ. ಉಪಸ್ಥಿತರಿದ್ದರು.

ಪರೀಕ್ಷೆ ಬರೆದ 484 ವಿದ್ಯಾರ್ಥಿಗಳಲ್ಲಿ 363 ವಿಶಿಷ್ಟ ಶ್ರೇಣಿ, 120 ಪ್ರಥಮ ಶ್ರೇಣಿ

ಅಂಬಿಕಾ ಪ.ಪೂ.ವಿದ್ಯಾಲಯದ ವಿಶಿಷ್ಟ ದಾಖಲೆ

ಪುತ್ತೂರು: ಈ ಬಾರಿಯ ದ್ವಿತೀಯ ಪಿಯು ಪರೀಕ್ಷೆಯ ಫಲಿತಾಂಶದಲ್ಲಿ ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ನೆಲ್ಲಿಕಟ್ಟೆ ಹಾಗೂ ಬಪ್ಪಳಿಗೆಯಲ್ಲಿನ ಎರಡೂ ಪದವಿ ಪೂರ್ವ ವಿದ್ಯಾಲಯಗಳು ಫಲಿತಾಂಶ ಪಡೆದು ದಾಖಲೆ ನಿರ್ಮಿಸಿವೆ.

ನೆಲ್ಲಿಕಟ್ಟೆ ಅಂಬಿಕಾ ಪ.ಪೂ. ವಿದ್ಯಾಲಯ ಹಾಗೂ ಬಪ್ಪಳಿಗೆಯ ಅಂಬಿಕಾ ವಸತಿಯುತ ಪ.ಪೂ. ವಿದ್ಯಾಲಯಗಳೆರಡೂ ಶೇ.100 ಉತ್ತೀರ್ಣತೆ ದಾಖಲಿಸಿವೆ. ನೆಲ್ಲಿಕಟ್ಟೆ ಅಂಬಿಕಾ ಪ.ಪೂ. ವಿದ್ಯಾಲಯ

ವಿಜ್ಞಾನ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ ಒಟ್ಟು 231 ವಿದ್ಯಾರ್ಥಿಗಳಲ್ಲಿ 173 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 58 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ ಒಟ್ಟು 37 ವಿದ್ಯಾರ್ಥಿಗಳಲ್ಲಿ 31 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 6 ಮಂದಿ ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಅದರಲ್ಲೂ ವಿಜ್ಞಾನ ವಿಭಾಗದಲ್ಲಿ ಪರೀಕ್ಷೆ ಬರೆದ 231 ವಿದ್ಯಾರ್ಥಿಗಳಲ್ಲಿ 52 ಮಂದಿ ವಿದ್ಯಾರ್ಥಿಗಳು ಹಾಗೂ ವಾಣಿಜ್ಯ ವಿಭಾಗದಲ್ಲಿ ಪರೀಕ್ಷೆ ಬರೆದ 31 ವಿದ್ಯಾರ್ಥಿಗಳಲ್ಲಿ 16 ಮಂದಿ ವಿದ್ಯಾರ್ಥಿಗಳು 570ಕ್ಕಿಂತಲೂ ಅಧಿಕ ಅಂಕ ಗಳಿಸಿರುವುದು ಉಲ್ಲೇಖನೀಯ.

ವಿಜ್ಞಾನ ವಿಭಾಗ: ಶಾರ್ವರಿ ಆರ್.ಎಸ್. (597), ತ್ರಿಶೂಲ್ ಎನ್.ಡಿ. (594), ಚಂದನ ಇ. (593), ಕವನ (590), ಪ್ರಕೃತಿ ಶೆಟ್ಟಿ (590), ಶ್ರೀನಿ (589), ನಿರೀಕ್ಷಾ ಕೆ.ಪಿ. (588), ಸಿಂಚನ ಹರೀಶ್ ಪನಂಬು (588), ಚಿನ್ಮಯಿ ಪುತ್ತಿಲ (588), ಅಭಿನವ್ ವಸಿಷ್ಠ (588), ಶ್ರೇಯ (588), ಎಂ. ಶ್ರೀಶೈಲ್(588), ಚಿತ್ರ ಕೆ.ಪಿ. (587), ಸಾನ್ವಿ ಜೆ.ಎಸ್. (586), ಪ್ರಜ್ವಲ್ ಎಚ್. (586), ಆಯುಷ್ ರಾವ್ ಕೆ. (586), ಶಿಫಾಲಿ ರೈ (584), ಜಶ್ಮಿ ಡಿ.ಎಸ್. (584), ಹಂಸಿಕಾ ಡಿ.ಟಿ. (583), ಸಾನ್ವಿ ಎಸ್.ಪಿ. (583), ಶ್ರೀಲಕ್ಷ್ಮಿ ಎಸ್.ಸಿ. (583), ಪುಣ್ಯ ಎನ್.ವಿ. (583), ಪಿ.ಕೆ. ರಕ್ಷಿತ್ (583), ಎನ್. ತನ್ವಿ ಗೌರಿ (582), ಚೈತನ್ಯ ವಿ. (581), ಪ್ರಖ್ಯಾತ್ ರಾಜ್ ರೈ(581), ಸಂಹಿತಾ ಎನ್.(580), ಇಶಾ ಜಾರ್ಜ್(580), ಚಿನ್ಮಯಿ ಕಂಬಾರ್ (579), ಧರಣಿ ಎಸ್. (579), ಶ್ರೇಯಸ್ ಎಂ. (578), ಪ್ರಣಮ್ಯ ಎನ್. (578), ಶಮಾ ವಿ.ಎಂ. (578), ಚೈತ್ರಾ ಕೆ.ಪಿ. (577), ಎ. ಸಾನಿಕಾ ರೈ (577), ಜಸ್ವಿತ್ (577), ರಿತೀಶ್ ಬಿ.(576), ಮೋಕ್ಷ(576), ವೃದ್ಧಿ ರೈ (576), ರಿಯಾ ಜೆ. ರೈ (575), ಆರಾಧ್ಯ (574), ಹಿತಾ ಶೆಟ್ಟಿ (574), ಜೀವಿತಾ ಕೆ. (574), ಯಶಸ್ (573), ವೃದ್ಧಿ ಎ. ಕೊಂಡೆ (573), ಪೂರ್ವಿ ಆಳ್ವ ಕೆ. (572), ವೈಶಾಲಿ ಎಸ್. (572), ದೀಪಾಲಿ ಜೆ.ಕೆ. (572), ಸ್ವಸ್ತಿಕ್ ಎಸ್. (572), ಪ್ರಣಾಮ್ ಕೆ.ಟಿ. (572), ಬಬಿನ್ ಎನ್. (570).

ವಾಣಿಜ್ಯ ವಿಭಾಗ: ಪ್ರತೀಕ್ಷಾ ಎನ್. ಶೆಣೈ (594), ಅನನ್ಯ ವಿ. (593), ಕೆ. ಪ್ರತೀಕ್ ಪಡಿಯಾರ್ (591), ಶ್ರೀದೇವಿ (590), ಕೆ. ಅಭಯ್ ನಾಯಕ್ (587), ಪ್ರತ್ಯುಷ್ ಹೆಬ್ಬಾರ್ (587), ಅನನ್ಯ ಜೆ. ಶೆಟ್ಟಿ (585), ಜಿ. ಸುನಿ ಪ್ರಭು (582), ಗೌತಮ್ ನಾಯಕ್ ಎನ್. (581), ನರೇಶ್ ಕೆ.ಎನ್. (581), ಹಿತಾಶ್ರೀ (580), ಅಮೃತ್ ಪಿ. (579), ಆರ್. ರುಚಿತಾ (578), ಕೃಪಾಲಿ ಕೆ.ಜಿ. (576), ಅನ್ವಿಕಾ ಎನ್. ಶೆಟ್ಟಿ (572), ಸಮನ್ವಿಕಾ ವಿ.ಎನ್. (572).

ಪರೀಕ್ಷೆಗೆ ಹಾಜರಾದ ವಿಜ್ಞಾನ ವಿಭಾಗದ ಒಟ್ಟು 216 ವಿದ್ಯಾರ್ಥಿಗಳಲ್ಲಿ 159 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 56 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿರುತ್ತಾರೆ. 48 ಮಂದಿ ವಿದ್ಯಾರ್ಥಿಗಳು 570ಕ್ಕಿಂತಲೂ ಆಧಿಕ ಅಂಕ ಗಳಿಸಿ ದಾಖಲೆ ಬರೆದಿದ್ದಾರೆ.

ಗಗನ್ ಕೆ.ಆರ್. (594), ಅಖಿಲೇಶ್ ಅನಂತ ಶರ್ಮ, ಸನ್ನಿಧಿ ಎನ್. (591), ಅಸೀಮ ಅಗ್ನಿಹೋತ್ರಿ, ಎಸ್. ಚಿನ್ಮಯ್, ಸಾಕ್ಷಿ ಕೃಷ್ಣ ಶ್ರೀಲಕ್ಷ್ಮಿ ಸುರೇಶ್ (589), ಪ್ರತೀಕ್ ಶಿವರುದ್ರಯ್ಯ ಹಿರೇಮಠ್ (588), ಪ್ರಿಯದರ್ಶಿನಿ ಎನ್.ಟಿ. (588), ಶ್ರೀಶ ರೈ (586), ಶ್ರೀಶ ಎಂ. (585), ಧೃತಿ ಭಟ್ ಕೆ. (584), ಆದ್ಯತಾ ವಿ. ರಾವ್, ಇಂಚರ, ಕೆ.ಎಲ್. ಶಶಾಂಕ್, ಸಂದೀಪ್ ಶರ್ಮಾ ಸಿ.ಎಸ್., ಸಾತ್ವಿಕ್ ರಾಮನ್ ಕೆ.ಸಿ. (583), ಚಿಂತನ್ ಎ.ಜೆ., ಸೃಜನ್ (582), ನಿರೀಕ್ಷ ತೇಜ್ವಲ್ ಆರ್. (581), ಅಶ್ವಿನಿ ಎನ್., ಶ್ರಾವಣಿ ಸಿ.ಸಿ., ವೃದ್ಧಿ ರೈ (580), ನೀಕ್ಷಿತ್ ಸಿ., ತೇಜಸ್ವಿ ಕೆ. (579), ಅನನ್ಯ ಎ.ಎಸ್., ಓಂಕಾರ್ ಶಾಸ್ತ್ರಿ, ರಾಹುಲ್ ಬಿ. (578), ಅಮೋಘ್ ಪಿ. ನಾಯಕ್, ಮನ್ವಿತಾ ಐ.ಎಂ., ಮೋಹಿತ್ ಕೆ.ಎನ್., ನಿ ಕೆ., ಶ್ರೀಲಕ್ಷ್ಮಿ ಸಿ.ವಿ. (576), ಕೆ.ವಿ. ರಿಷಿತಾ (575), ಅನಿಶಾ ಆರ್., ಕೀರ್ತನ, ಶ್ರೇಯಸ್ ಜೆ. ಶೆಟ್ಟಿ, ಸುಧನ್ವಾ ಮಲ್ಲಿ ಭಟ್ (574), ಪ್ರಸ್ತುತ ಗೌಡ ಎಸ್.ಎ., ಶ್ರೀಜಲ್ (573), ರಚನಾ ಪಿ.ಆರ್. (572), ಭವಿಷ್ಯ ಕೆ.ಕೆ., ಗಣಶ್ರೀ ಎನ್., ಪ್ರಮೋದ್ ಗಣಪತಿ ಭಟ್ (571), ಅನಘ ಕೆ.ಸಿ., ಹಿತೈಷಿ ಎಸ್.ಆರ್., ಕೆ. ಅಭಿನವ್ (570).

ಅಜೆಕಾರು: ಇಂದು ಶ್ರೀ ಮಹಾ ಗಣಪತಿ ದೇವರ ಪ್ರತಿಷ್ಠಾ ಬ್ರಹ್ಮಕಲಶೋತ್ಸವ



ಕಾರ್ಕಳ: ಅಜೆಕಾರು ಮಹಾಗಣಪತಿ ದೇವಸ್ಥಾನದ ಬ್ರಹ್ಮಕಲಶೋತ್ಸವದ ಅಂಗವಾಗಿ ಪೂರ್ವಭಾವಿಯಾಗಿ ನಡೆದ ಹೊರೆಕಾಣಿಕೆ ಮೆರವಣಿಗೆ ಹಾಗೂ ಗಣಪತಿ ದೇವರ ಮೆರವಣಿಗೆ ಭಕ್ತಿಭಾವದಿಂದ ಯಶಸ್ವಿಯಾಗಿ ನೆರವೇರಿತು. ಈ ಮೆರವಣಿಗೆಗೆ ಊರಿನ ಜನರಿಂದ ಭಾರೀ ಸ್ಪಂದನೆ ವ್ಯಕ್ತವಾಗಿದ್ದು, ಧಾರ್ಮಿಕ ಸಂಭ್ರಮ ಎಲ್ಲೆಡೆ ಕಂಡುಬಂತು. ಮೆರವಣಿಗೆಗೆ ಉದ್ಯಮಿ ಅಜೆಕಾರು ಶಿವರಾಂ ಜಿ ಶೆಟ್ಟಿ,ಚಾಲನೆ ನೀಡಿದರು.

ಕಾರ್ಕಳ ಶಾಸಕ ವಿ. ಸುನೀಲ್ ಕುಮಾರ್ ಹಾಗೂ ಅಜೆಕಾರು ಪದ್ಮಗೋಪಾಲ್ ಟ್ರಸ್ಟ್ ಸಂಸ್ಥಾಪಕ ಸುಧಾಕರ್ ಶೆಟ್ಟಿ, ಅರುಣ್ ಭಟ್ ಎಣ್ಣೆಹೊಳೆ ಸಾಥ್ ನೀಡಿದರು.

ಅಜೆಕಾರು ರಾಮಮಂದಿರದಿಂದ ಆರಂಭವಾದ ಮೆರವಣಿಗೆ ಪೇಟೆಯ ಮುಖ್ಯರಸ್ತೆಗಳ ಮೂಲಕ ಸಾಗುತ್ತ ಹೆಬ್ರಿ ರಸ್ತೆಯಿಂದ ಪದ್ಮನಗರದತ್ತ ಮುಂದುವರಿಯಿತು. ಮಾರ್ಗಮಧ್ಯೆ ಭಕ್ತರು ಪೂಜೆ ಸಲ್ಲಿಸಿ ದೇವರ ದರ್ಶನ ಪಡೆದರು. ವಿಶೇಷವಾಗಿ ಗ್ರಾಮಸ್ಥರು ತಮ್ಮ ಮನೆಗಳ ಮುಂದೆ ನಿಂತು ಹಸಿರು ವಾಣಿ ಮತ್ತು ಹೊರೆಕಾಣಿಕೆ ವಸ್ತುಗಳನ್ನು ವಾಹನಗಳಿಗೆ ಸಮರ್ಪಿಸುವ ಮೂಲಕ ಭಕ್ತಿ ತೋರಿದರು. ಮೆರವಣಿಗೆಯಲ್ಲಿ ಕೇರಳದ ಚೆಂಡೆ ವಾದ್ಯಗಳು ವಿಶೇಷ ಆಕರ್ಷಣೆಯಾಗಿದ್ದವು. ಭಜನಾ ಮಂಡಳಿಗಳ ಭಕ್ತಿಗೀತೆಗಳು ಹಾಗೂ ಸಾಂಪ್ರದಾಯಿಕ ನೃತ್ಯಗಳು ಮೆರವಣಿಗೆಯ ಸೊಬಗು ಹೆಚ್ಚಿಸಿತು. ಕಾಲೇಜು ವಿದ್ಯಾರ್ಥಿಗಳು, ಎನ್‌ಸಿಸಿ ವಿದ್ಯಾರ್ಥಿಗಳು ಮತ್ತು ಊರಿನ ಪ್ರಮುಖರು ಮೆರವಣಿಗೆಗೆ ಸಾಥ್ ನೀಡಿ ಕಾರ್ಯಕ್ರಮವನ್ನು ಮತ್ತಷ್ಟು ವೈಭವಮಯಗೊಳಿಸಿದರು.

ಇಂದು ಶ್ರೀ ಮಹಾಗಣಪತಿ ದೇವರ ಪ್ರತಿಷ್ಠಾ ಬ್ರಹ್ಮಕಲಶೋತ್ಸವ

ತಾಲೂಕಿನ ಅಜೆಕಾರು ಪದ್ಮ ನಗರದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಜ್ಞಾನಸುಧಾ ಆಂಗ್ಲಮಾಧ್ಯಮ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜಿನ ಉದ್ಘಾಟನೆ ಹಾಗೂ ಪದ್ಮನಗರದಲ್ಲಿ ನಿರ್ಮಾಣಗೊಂಡ ಸಂಪೂರ್ಣ ಶಿಲಾಮಯ ದೇವಸ್ಥಾನದಲ್ಲಿ ಶ್ರೀ ಮಹಾಗಣಪತಿ ದೇವರ ಪ್ರತಿಷ್ಠಾ ಬ್ರಹ್ಮಕಲಶೋತ್ಸವವು ಏ.12 ನಡೆಯಲಿದೆ. ಹೋಮ ಶಿಖರಪ್ರತಿಷ್ಠೆ ಬ್ರಹ್ಮಕಲಶಾಭಿಷೇಕ, ಕಲ್ಲೋಕ್ತ ಪೂಜೆ, ಮಹಾಪೂಜೆ, ಬ್ರಾಹ್ಮಣ ಸುವಾಸಿನಿ ಆರಾಧನೆ ನಡೆಯಲಿದೆ. ಬೆಳಗ್ಗೆ 11 ರಿಂದ ಶ್ರೀ ವಿಷ್ಣುಸಹಸ್ರನಾಮ ಪಠಣ ಮಧ್ಯಾಹ್ನ 1ಕ್ಕೆ ಅನ್ನಸಂತರ್ಪಣೆ ನಡೆಯಲಿದೆ. ಧಾರ್ಮಿಕ ಸಭೆಯಲ್ಲಿ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ. ಫಲಪುಷ್ಪ ಸಮರ್ಪಣೆಯನ್ನು ಆಳ್ವಾಸ್ ಶಿಕ್ಷಣ ಸಂಸ್ಥೆಗಳ ಮೋಹನ್ ಆಳ್ವ ನೆರವೇರಿಸಲಿದ್ದಾರೆ. ಮಾಜಿ ಸಚಿವ ಶಾಸಕ ವಿ.ಸುನೀಲ್ ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಅಜೆಕಾರು ಪದ್ಮಗೋಪಾಲ್ ಟ್ರಸ್ಟ್ ಸಂಸ್ಥಾಪಕ ಸುಧಾಕರ್ ಶೆಟ್ಟಿ ಉಪಸ್ಥಿತರಿರುವರು.

ಉಡುಪಿ ಜಿಲ್ಲೆಯಲ್ಲಿ ಪಿಎಂ ಸೂರ್ಯಘರ್ ಯೋಜನೆ

ಗುರಿ ಮೀರಿದ ಸಾಧನೆ : ಸಂಸದ ಕೋಟ ಸಂತಸ

ಉಡುಪಿ: ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಪಿಎಂ ಸೂರ್ಯಘರ್ ಯೋಜನೆಯಡಿ ಉಡುಪಿ ಜಿಲ್ಲೆಯಲ್ಲಿ ನಿಗದಿತ ಗುರಿಗಿಂತಲೂ ಹೆಚ್ಚಿನ ಸಾಧನೆಯಾಗಿದೆ ಎಂದು ಉಡುಪಿ ಚಿಕ್ಕಮಗಳೂರು ಕ್ಷೇತ್ರದ ಲೋಕಸಭಾ ಸದಸ್ಯ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ. ಮಣಿಪಾಲದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.



ಜಿಲ್ಲೆಯಲ್ಲಿ 2024–25ನೇ ಸಾಲಿನಲ್ಲಿ 302 ಫಲಾನುಭವಿಗಳ ಗುರಿ ನಿಗದಿಪಡಿಸಲಾಗಿತ್ತು, ಆದರೆ ಈಗಾಗಲೇ 490 ಗೃಹ ಬಳಕೆ ಫಲಾನುಭವಿಗಳು ಈ ಯೋಜನೆಯ ಸೌಲಭ್ಯ ಪಡೆದಿದ್ದಾರೆ. ಅದೇ ರೀತಿ 2025–26ನೇ ಸಾಲಿನಲ್ಲಿ 240 ಮನೆಗಳ ಗುರಿಗೆ ಪ್ರತಿಯಾಗಿ 868 ಮನೆಗಳಿಗೆ ಸೋಲಾರ್ ಅಳವಡಿಸಲಾಗಿದೆ. ಯೋಜನೆಯ ಯಶಸ್ಸನ್ನು ಗಮನಿಸಿ ಮುಂದಿನ ದಿನಗಳಲ್ಲಿ ಜಿಲ್ಲೆಯ ಮತ್ತಷ್ಟು ಮನೆಗಳ ಮೇಲ್ಛಾವಣಿಯ ಮೇಲೆ ಸೌರ ವಿದ್ಯುತ್ ಅಳವಡಿಸುವಂತೆ ಸಂಸದರು ಮೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು.

ಸಬ್ಸಿಡಿ ವಿತರಣೆಯ ಕುರಿತು ಮಾಹಿತಿ ನೀಡಿದ ಸಂಸದರು, ಜಿಲ್ಲೆಯಲ್ಲಿ ಒಟ್ಟು 4,546 ಅರ್ಜಿಗಳು ಸಲ್ಲಿಕೆಯಾಗಿದ್ದು, ಈ ಪೈಕಿ 1,258 ಮನೆಗಳಿಗೆ ಸಬ್ಸಿಡಿ ಮಂಜೂರಾತಿ ನೀಡಲಾಗಿದೆ. ಈಗಾಗಲೇ 1,280 ಕುಟುಂಬಗಳಿಗೆ ತಲಾ 78,000 ರೂ.ಗಳಂತೆ ಒಟ್ಟು 9.98 ಕೋಟಿ ರೂ. ಹಣವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲಾಗಿದೆ ಎಂದು ವಿವರಿಸಿದರು. ಇದಲ್ಲದೆ, ಕುಸುಮ್–ಸಿ ಯೋಜನೆಯಡಿ ಬೈಂದೂರಿನ ಕಿರಿಮಂಜೇಶ್ವರ, ಬ್ರಹ್ಮಾವರದ ಕಾವಡಿ ಮತ್ತು ಕಾಪುವಿನ ಬೆಳ್ಳೆ ಎಂಬಲ್ಲಿ ಸೋಲಾರ್ ಪ್ಲಾಂಟ್ ಸ್ಥಾಪಿಸಲು ಕೇಂದ್ರ ಸರ್ಕಾರ 40 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ ಎಂದರು.

ಕುಸುಮ್–ಸಿ ಯೋಜನೆಯ ಅನುಷ್ಠಾನಕ್ಕೆ ಅರಣ್ಯ ಇಲಾಖೆ ಅಡ್ಡಿಪಡಿಸುತ್ತಿರುವ ಬಗ್ಗೆ ಮೆಸ್ಕಾಂ ಅಧಿಕಾರಿಗಳು ದೂರು ನೀಡಿದರು. ತಕ್ಷಣವೇ ಸ್ಪಂದಿಸಿದ ಸಂಸದರು, ರಣ್ಯ ಮತ್ತು ಕಂದಾಯ ಇಲಾಖೆಯ ಮುಖ್ಯಸ್ಥರಿಗೆ ಸಭೆಯ ಮಧ್ಯೆಯೇ ದೂರವಾಣಿ ಕರೆ ಮಾಡಿ ಮಾತುಕತೆ ನಡೆಸಿದರು. ಈ ಯೋಜನೆಯ ಅನುಷ್ಠಾನದ ಗಡುವನ್ನು 2026ರ ಮೇ ತಿಂಗಳವರೆಗೆ ವಿಸ್ತರಿಸಲಾಗಿದ್ದು, ಅಡೆತಡೆಗಳನ್ನು ನಿವಾರಿಸಿ ಶೀಘ್ರವಾಗಿ ಕಾರ್ಯಗತಗೊಳಿಸಲು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸಭೆಯಲ್ಲಿ ಜಿ.ಪಂ. ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್, ಯೋಜನಾ ಅಧಿಕಾರಿ ಉದಯ್‌ಕುಮಾರ್ ಶೆಟ್ಟಿ, ಮೆಸ್ಕಾಂ ಅಧೀಕ್ಷಕ ರಾಕೇಶ್, ಮೆಸ್ಕಾಂ ಸಹಾಯಕ ಕಾರ್ಯಪಾಲಕ ಅಭಿಯಂತರ ಯಶವಂತ್ ಹಾಗೂ ಯೋಜನಾ ಅನುಷ್ಠಾನದ ಸದಸ್ಯ ಶೇಖರ್ ಉಪಸ್ಥಿತರಿದ್ದರು.

ಸಂಭ್ರಮದ ವೇದಿಕೆಯಲ್ಲೇ ಸದ್ದಿಲ್ಲದೆ ಬಂದ ಸಾವು !

ಬಂಟ್ವಾಳ: ಮದುವೆಯ ಮೆಹಂದಿ ಕಾರ್ಯಕ್ರಮದಲ್ಲಿ ಕೈಯಲ್ಲಿ ಮೈಕ್ ಹಿಡಿದು, ನಗುಮುಖದಿಂದ ಮಾತುಗಳ ಮಳೆ ಸುರಿಸುತ್ತಾ ಇಡೀ ಸಭಾಂಗಣವನ್ನು ಸಂಭ್ರಮದಲ್ಲಿ ತೇಲಿಸುತ್ತಿದ್ದ ಆ ಯುವ ಧ್ವನಿಯೊಂದು ವೇದಿಕೆಯಲ್ಲೇ ಕ್ಷಣಾರ್ಧದಲ್ಲಿ ಮೌನಕ್ಕೆ ಜಾರಿದ ಘಟನೆ ಸಂಭವಿಸಿದೆ. ಪರಂಗಿಪೇಟೆ ಸಮೀಪದ ಅಬ್ಬೆಟ್ಟು ನಿವಾಸಿ, ಪ್ರತಿಭಾನ್ವಿತ ಯುವ ನಿರೂಪಕ ಆಶ್ವಿತ್ (24) ಅಸುನೀಗಿದ ನತದೃಷ್ಟ ಯುವಕ. ಬಂಟ್ವಾಳ ತಾಲೂಕಿನ ನರಿಕೊಂಬುಗ್ರಾಮದ ನಾಯಿಲ ಎಂಬಲ್ಲಿ ತನ್ನ ಸಂಬಂಧಿಯ ಮದುವೆಯಪ್ರಯುಕ್ತಶುಕ್ರವಾರರಾತ್ರಿ ನಡೆದ ಮೆಹಂದಿ ಕಾರ್ಯಕ್ರಮದಲ್ಲಿ



ಮೈಕ್ ಹಿಡಿದು ನಿರೂಪಣೆಯಲ್ಲಿ ನಿರತರಾಗಿದ್ದಾಗಲೇ ವೇದಿಕೆಯ ಮೇಲೆ ಆಶ್ವಿತ್ ಕುಸಿದು ಬಿದ್ದಿದ್ದಾರೆ. ಕಾರ್ಯಕ್ರಮದಲ್ಲಿ ನೆರೆದಿದ್ದವರಲ್ಲಿ ಒಂದು ಕ್ಷಣ ಗೊಂದಲ ಉಂಟಾಯಿತು. ತಕ್ಷಣ ಅವರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಅಲ್ಲಿ ಇವರನ್ನು ಪರೀಕ್ಷಿಸಿದ ವೈದ್ಯರು ಆಶ್ವಿತ್ ಕೊನೆಯುಸಿರೆಳೆದಿರುವುದನ್ನು ಖಚಿತಪಡಿಸಿದ್ದಾರೆ.

ಕಟೀಲು ಪದವಿ ಕಾಲೇಜಿನಲ್ಲಿ ಪ್ರಶಸ್ತಿ ಪ್ರದಾನ

ಕಟೀಲು: ಶ್ರೀ ದುರ್ಗಾ ಪರಮೇಶ್ವರೀ ದೇವಳ ಪ್ರಥಮ ದರ್ಜೆ ಕಾಲೇಜಿನಲ್ಲಿ ವಾರ್ಷಿಕೋತ್ಸವದ ಅಂಗವಾಗಿ ಪ್ರಶಸ್ತಿ ಪ್ರದಾನ ನಡೆಯಿತು.



ಕಾವೂರುಸರಕಾರಿಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಗೀತಾ ಎಂ.ಎಲ್. ಮಾತನಾಡಿ, ವಿದ್ಯಾರ್ಥಿಗಳು ವಿದ್ಯಾರ್ಜನೆ ಮತ್ತು ಪ್ರಶಸ್ತಿಗಳನ್ನು ಗಳಿಸುವುದರ ಜೊತೆಗೆ ಜೀವನದಲ್ಲಿ ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕೆಂದು ಹೇಳಿದರು.

ಸಂಸ್ಥೆಯ ನಿವೃತ್ತ ಹಿಂದಿ ಉಪನ್ಯಾಸಕಿ ಡಾ. ಸುನೀತಾ ಎಚ್.ಬಿ. ಮತ್ತು ನಿವೃತ್ತ ಗ್ರಂಥಪಾಲಕ ಗಣೇಶ್ ದೇವಾಡಿಗ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಸಂಸ್ಥೆಯ ನಿವೃತ್ತ ಕಚೇರಿ ಅಧೀಕ್ಷಕಿ ಮಲ್ಲಿಕಾ ಮಣಿ ಮತ್ತು ಸಾಧನೆ ಮಾಡಿದ ವಿದ್ಯಾರ್ಥಿನಿಯರಾದ ವಿಶ್ರುತಾ, ಪೃಥ್ವಿ ಹೆಚ್. ಪೂಜಾರಿ, ಶ್ರಾವ್ಯಾ ಕೆ., ಶ್ರೇಯಾ, ಶಮಿತಾ ಮತ್ತು ಪ್ರೀತಿ ಅವರನ್ನು ಸನ್ಮಾನಿಸಲಾಯಿತು.

ದೇವಳದ ಅನುವಂಶಿಕ ಅರ್ಚಕರಾದ ಸದಾನಂದ ಆಸ್ರಣ್ಣ, ಕಾಲೇಜಿನ ರಕ್ಷಕ–ಶಿಕ್ಷಕ ಸಂಘದ ಉಪಾಧ್ಯಕ್ಷರಾದ ಭಾರತಿ ಭಟ್, ಕಾಲೇಜಿನ ಪ್ರಾಂಶುಪಾಲ ಡಾ. ವಿಜಯ್ ವಿ., ವಿದ್ಯಾರ್ಥಿ ಸಂಘದ ಅಧ್ಯಕ್ಷ ಕಾರ್ತಿಕ್ ಎಸ್. ನಾಯ್ಕ್, ಉಪಾಧ್ಯಕ್ಷ ತರುಣ್ ದೇವಾಡಿಗ, ಕಾರ್ಯದರ್ಶಿ ಕೃಪಾ ಟಿ. ಶೆಟ್ಟಿ ಮತ್ತು ಜತೆ ಕಾರ್ಯದರ್ಶಿ ಪ್ರಾರ್ಥನಾ ಉಪಸ್ಥಿತರಿದ್ದರು.

ಉಪನ್ಯಾಸಕರಾದ ಕುಮಾರಿ ಗ್ರೀಷ್ಮಾ ರೈ ಸ್ವಾಗತಿಸಿದರು. ಕುಮಾರಿ ಹರಿಣಾಕ್ಷಿ ವಂದಿಸಿದರು. ನವ್ಯಶ್ರೀ ಮತ್ತು ಚಿತ್ರಾಂಸಿ ಕಾರ್ಯಕ್ರಮ ನಿರೂಪಿಸಿದರು.

ಅಪ್ರಾಪ್ತ ವಯಸ್ಸಿನ ಬಾಲಕಿಯ ಅಪಹರಿಸಿ, ಲೈಂಗಿಕ ದೌರ್ಜನ್ಯ

ಆರೋಪಿಗೆ 20 ವರ್ಷಗಳ ಕಠಿಣ ಶಿಕ್ಷೆ

ಮಂಗಳೂರು: ಪ್ರೀತಿಸುವನೆಪದಲ್ಲಿಅಪ್ರಾಪ್ತವಯಸ್ಸಿನ ಬಾಲಕಿಯನ್ನು ಅಪಹರಿಸಿ, ಲೈಂಗಿಕ ದೌರ್ಜನ್ಯ ನಡೆಸಿದ ಪ್ರಕರಣ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಎಫ್ ಟಿಎಸ್ ಸಿ –2(ಪೋಕ್ಸೋ) ನ್ಯಾಯಾಲಯದಲ್ಲಿ ಸಾಬೀತಾಗಿದೆ. ಅಪರಾಧಿಗೆ ನ್ಯಾಯಾಧೀಶರು 20 ವರ್ಷಗಳ ಕಠಿಣ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ಗದಗ ಜಿಲ್ಲೆ ರೋಣ ತಾಲೂಕಿನ ಹೊಳೆ ಮುನ್ನೂರು ನಿವಾಸಿ ಮಹೇಶ ಮಾದರ (20) ಶಿಕ್ಷೆಗೊಳಗಾದಾತ.

ಸಂತ್ರಸ್ತ ಅಪ್ರಾಪ್ತ ವಯಸ್ಸಿನ ಬಾಲಕಿ ನಗರದ ಹೊರವಲಯದಲ್ಲಿ ಬಾಡಿಗೆ ಮನೆಯಲ್ಲಿ ತಂದೆ–ತಾಯಿಯೊಂದಿಗೆ ವಾಸವಾಗಿ, ಹೋಮ್ ನರ್ಸ್ ಕೆಲಸ ಮಾಡಿಕೊಂಡಿದ್ದಳು. ಮಹೇಶ ಮಾದರ ಕೂಡಾ ಪಕ್ಕದ ಮನೆಯಲ್ಲಿ ವಾಸವಾಗಿದ್ದ. ಇದರಿಂದ ಪರಿಚಯವಾಗಿ ಇಬ್ಬರೂ ಪ್ರೀತಿಸುತ್ತಿದ್ದರು. ಈ ವಿಚಾರ ತಿಳಿದು ಹೆತ್ತವರು ಆಕೆಗೆ ಬುದ್ಧಿಮಾತು ಹೇಳಿದ್ದು, ಆತನ ಸಂಪರ್ಕದಿಂದ ದೂರಮಾಡಿ, ಕೆಲಸದಿಂದ ಬಿಡಿಸಿದ್ದರು. ತಾನು ಕೆಲಸಕ್ಕೆ ಹೋಗಬೇಕು ಎಂದು ಹಠಮಾಡಿ 2015ರ ಮೇ 14ರಂದು ಮತ್ತೆ ಕೆಲಸಕ್ಕೆ ಸೇರಿಕೊಂಡಿದ್ದಳು. ಮೇ 19ರಂದು ಮನೆಯೊಂದರಲ್ಲಿ ಆಕೆ ಕೆಲಸ ಮಾಡುತ್ತಿದ್ದ ವೇಳೆ ಕರೆ ಮಾಡಿದ ಮಹೇಶ, 'ನೀನು ಕೂಡಲೇ ಹೊರಟು ಬಾ. ನಾವಿಬ್ಬರೂ ಬೇರೆ ಕಡೆ ಹೋಗೋಣ. ಬಾರದೇ ಇದ್ದರೆ, ತಂದೆ–ತಾಯಿಯನ್ನು ಕೊಂದು, ತಾನೂ ಸಾಯುತ್ತೇನ್' ಬೆದರಿಕೆ ಹಾಕಿದ್ದಾನೆ. ಬಳಿಕ ಆಕೆಯನ್ನು ಬಲ್ಲಾಳ್ ಬಾಗ್‌ಗೆ ಕರೆಸಿ ಅಲ್ಲಿಂದ ಆಟೋದಲ್ಲಿ ಕಾವೂರು ಬಳಿಯ ಶೆಡ್‌ಗೆ ಕರೆದುಕೊಂಡು ಹೋಗಿದ್ದು, ಇಬ್ಬರೂ ಅಲ್ಲಿ ಉಳಿದು ಕೊಂಡಿದ್ದರು. ಅಂದು ರಾತ್ರಿ ಆಕೆಯ ಇಚ್ಛೆಗೆ ವಿರುದ್ಧವಾಗಿ ಲೈಂಗಿಕ ದೌರ್ಜನ್ಯ ಎಸಗಿದ್ದ. 20ರಂದು ಬೆಳಗ್ಗೆ 11 ಗಂಟೆಗೆ ಕೆಎಸ್‌ಆರ್ ಟಿಸಿ ಬಸ್ಸಿನಲ್ಲಿ ಬಳ್ಳಾರಿ ನಗರಕ್ಕೆ ಹೋಗಿ, ಬಾಡಿಗೆ ಮನೆಗಾಗಿ ಹುಡುಕಾಟ ನಡೆಸಿ ಸಿಗದಿದ್ದಾಗ, ನಾಗಲಕೇರೆ ಎಂಬಲ್ಲಿ ಜನ ವಸತಿ ಇಲ್ಲದ ಪಾಳು ಬಿದ್ದ ಮನೆಯಲ್ಲಿ ಉಳಿಸಿಕೊಂಡಿದ್ದರು. ಅಲ್ಲಿ ಮೇ 22ರಂದು ಹಲವು ಬಾರಿ ಲೈಂಗಿಕ ದೌರ್ಜನ್ಯ ಎಸಗಿದ್ದ. ಆಕೆ ಕೆಲಸ ಮಾಡುತ್ತಿದ್ದ ಸಂಸ್ಥೆಯವರು ನೀಡಿದ ದೂರಿನಂತೆ ಪಾಂಡೇಶ್ವರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಇಬ್ಬರನ್ನು ಪತ್ತೆ ಹಚ್ಚಿದ ಪೊಲೀಸರು ಆತನ ವಿರುದ್ಧ ಪ್ರಕರಣ ದಾಖಲಿಸಿದ್ದರು. ಠಾಣೆಯ ಆಗಿನ ಪಿಎಸ್‌ಐ ರೇಖಾ ಆರ್. ಅವರು ತನಿಖೆ ಪೂರ್ಣಗೊಳಿಸಿದ್ದು, ಪೊಲೀಸ್ ನಿರೀಕ್ಷಕ ಗುರುರಾಜ್ ಅವರು ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಎಫ್ ಟಿಎಸ್ ಸಿ –2(ಪೋಕ್ಸೋ) ನ್ಯಾಯಾಲದ ನ್ಯಾಯಾಧೀಶರಾದ ಮಾನು ಕೆ.ಎಸ್. ಅವರು, ಮಹೇಶ ಮಾದರನ ಮೇಲಿನ ಅಪರಾಧ ಸಾಬೀತಾದ ಹಿನ್ನೆಲೆಯಲ್ಲಿ, 20 ವರ್ಷ ಕಠಿಣ ಶಿಕ್ಷೆ ಮತ್ತು 30 ಸಾವಿರ ರೂ. ದಂಡ ವಿಧಿಸಿದ್ದಾರೆ. ಆಕೆಯನ್ನು ಅಪಹರಣ ಮಾಡಿರುವ ಹಿನ್ನೆಲೆಯಲ್ಲಿ 3 ವರ್ಷ ಕಠಿಣ ಶಿಕ್ಷೆ, 5 ಸಾವಿರ ರೂ.ದಂಡ ವಿಧಿಸಿದ್ದು, ದಂಡ ಮೊತ್ತ 35 ಸಾವಿರ ರೂ.ವನ್ನು ಸಂತ್ರಸ್ತೆಗೆ ನೀಡಬೇಕು. ಜತೆಗೆ ಕಾನೂನು ಸೇವಾ ಪ್ರಾಧಿಕಾರದಿಂದ ಪರಿಹಾರವಾಗಿ 3.65 ಲಕ್ಷ ರೂ. ಸಂತ್ರಸ್ತೆಗೆ ಪಾವತಿಸಬೇಕು ಎಂದು ನಿರ್ದೇಶಿಸಿದ್ದಾರೆ.

ಪೋಕ್ಸೋ ವಿಶೇಷಸರಕಾರಿ ಅಭಿಯೋಜಕಿ ಸಹನಾದೇವಿ ಬೋಳೂರು ಸಾಕ್ಷಿ ವಿಚಾರಣೆ ನಡೆಸಿ, ವಾದ ಮಂಡಿಸಿದ್ದರು.

IN THE COURT OF THE PRINCIPAL SENIOR CIVIL JUDGE AND A.C.JM AT PUTTUR D.K.

Crl, Misc No: 115/2025

Between,
Smt Parvathi Aged 40 years
W/o, Chenna
Mundagole, Ballya village
Ballya Post
Kadaba Tq. DK. 574221
...Petitioner

And

The Registrar of Births and death
The thashildar, kadaba taluk
Kadaba DK. District
...Respondent

PUBLIC NOTICE

Take notice that the petitioner has filed the above case to obtain death certificate of her Father in law **Poova Ajila** he is died on **14.02.2024** at Ballya Village, Kadaba Tq D.K. District.

Whoever having any objection to the above petition may appear before this Hon'ble court in person or through their **21.05.2026 at 11.00 am** failing which the case will be disposed of as per law.

Given under my hands and seal of the court, this 09th day of April 2026.

(By Order Of the Court)
Sd/-Sheristedar
Senior Civil Judge And ACJM, Puttur, D.K.
Sd/- Ashwith K.
Advocate for Petitioner

IN THE COURT OF IV ADDL. DISTRICT JUDGE AND COMMERCIAL COURT, AT MANGALORE, D.K.

In Com O.S. 26/2026
Hg.Date : 05.06.2026

Between:
Canara Bank, Lalbagh Branch
...Plaintiff

And

M/s Kaveri Swasahaya Sangha and others
...Defendants

NOTICE

To Defendant No.4 and 5

1. Mrs. Halimath Safreena
Aged about 27 years,
W/o Madani K.M
R/at:9-11-1544/1(2),
Ansari Cross Road,
Near Boobukhan Masjid,
Bunder Mangaluru,
D.K.- 575001.

2. Ms. Nasreena
Aged about 25 years,
D/o Abdul Razak
R/at: 2-10(1),
Pithlagudde House,
Narikombu Post,
Bantwal, D.K. - 574231.

Please take notice that the plaintiff named above has filed the above suit against you. You are not available for service of suit notice so far. Hence, the Honourable court has ordered the plaintiff to cause suit notice through paper publication against you. Therefore you are hereby called upon to appear in person or through pleader before the above said Honourable Court at **11.00 A.M. on 05-06-2026.** If you fail to appear the matter will be decided in your absence according the merits of the suit treating you ex-parte by the court.

Given under my hand and the seal of the court on this 10th day of April, 2026.

Sd/- Chief Administrative Officer
District Court, D.K. Mangaluru
Sd/- (Ravichandra P.M.)
Advocate for plaintiff
Mangalore, D.K.
Date: 09-04-2026

ಪುತ್ತೂರು ಮಾರುಕಟ್ಟೆ ಧಾರಣೆ

11-04-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	455 - 495	ಹಳೆ ಕರಿಗೋಟು	235 - 265
ಚೋಲ್ ಅಡಿಕೆ	530 - 555	ಹಸಿ ಕೊಕ್ಕೋ	70 - 100
ಡಬಲ್ ಚೋಲ್	530 - 555	ಒಣ ಕೊಕ್ಕೋ	270 - 300
ಹೊಸ ಪಟೋರ	350 - 400	**ಕಾಳುಮೆಣಸು ಧಾರಣೆ**	
ಹಳೆ ಪಟೋರ	380 - 410	ಕಾಳುಮೆಣಸು	450 - 680
ಹೊಸ ಉಳ್ಳಿ	120 - 290	**ರಬ್ಬರ್ ಧಾರಣೆ : ಗ್ರೇಡ್**	
ಹಳೆ ಉಳ್ಳಿ	110 - 290	ಆರ್‌ಎಸ್‌ಎಸ್ 1	226.00
ಹೊಸ ಕೋಕಾ	325 - 345	ಆರ್‌ಎಸ್‌ಎಸ್ 2	196.00
ಹಳೆ ಕೋಕಾ	325 - 345	ಸ್ಕ್ರಾಪ್ 1	137.50
ಹೊಸ ಕರಿಗೋಟು	235 - 265	ಸ್ಕ್ರಾಪ್ 2	125.00

ಲಕ್ಕಿಡಿಪ್ ಫಲಿತಾಂಶ

ಶ್ರೀ ಚಾಮುಂಡೇಶ್ವರೀ ಸೇವಾ ಸಂಘದ ವತಿಯಿಂದ ನಡೆದ 8ನೇ ವರ್ಷದ ಯಕ್ಷಗಾನ ಬಯಲಾಟದ ಪ್ರಯುಕ್ತ ಜರಗಿದ ಲಕ್ಕಿಡಿಪ್ ಫಲಿತಾಂಶದ ವಿವರ
ಪ್ರಥಮ ಬಹುಮಾನ – 1043
ದ್ವಿತೀಯ ಬಹುಮಾನ – 2760
ತೃತೀಯ ಬಹುಮಾನ – 3241
ವಿಜೇತರು 15 ದಿನಗಳಲ್ಲಿ ಬಂದು ಕೊಂಡು ಹೋಗಬೇಕಾಗಿ ವಿನಂತಿ

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ (ನಂ.KR-749) ಡ್ರಾ ಏಪ್ರಿಲ್ 11ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
KO 665447 (KARUNAGAPPALLY)

Consolation Prize Rs.5,000/-
KN 665447 KP 665447 KR 665447 KS 665447
KT 665447 KU 665447 KV 665447 KW 665447
KX 665447 KY 665447 KZ 665447

2nd Prize Rs.25,00,000/- [25 Lakhs]
KR 725469 (PALAKKAD)

3rd Prize Rs.10,00,000/- [10 Lakhs]
KZ 246772 (THRISSUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0027 0048 0555 0984 3484 3895 3941 4804 5241 5309
5356 5718 6458 6553 7392 8976 9188 9247 9736

5th Prize Rs.2,000/-
1909 3559 3839 4325 8495 9957

6th Prize Rs.1,000/-
0282 0373 0723 0829 1124 1146 2053 2355 2611 2937
3208 3429 3457 3896 4386 4688 6005 7607 7748 7832
8373 8723 9211 9348 9679

7th Prize Rs.500/-
0077 0192 0348 0554 0614 0852 1087 1210 1224 1413
1670 1826 1827 2233 2249 2312 2467 2749 3102 3169
3337 3683 3757 3780 3853 3967 4011 4048 4283 4464
4544 4652 4665 4701 4795 4813 5271 5775 5863 5918
5936 6001 6073 6261 6265 6332 6384 6432 6758 6872
7241 7258 7274 7339 7422 7433 7440 7538 7640 7885
7921 8202 8423 8719 8991 9031 9426 9490 9513 9607
9609 9650 9668 9881 9890 9900

8th Prize Rs.200/-
0180 0239 0242 0349 0525 0539 0655 0725 1060 1119
1180 1248 1593 1796 1875 1890 1965 1987 2056 2473
2880 2977 3230 3232 3235 3273 3443 3523 3529 3543
3816 4041 4220 4297 4305 4360 4628 4768 4787 5014
5256 5393 5466 5470 5512 5550 5616 5644 5653 5910
6000 6087 6130 6412 6586 6631 6681 6849 6877 7028
7097 7103 7144 7154 7166 7180 7282 7299 7418 7490
7693 7709 7769 7892 8133 8220 8253 8265 8527 8648
8681 8810 9103 9140 9437 9443 9552 9595 9652 9700
9722 9840

9th Prize Rs.100/-
0056 0169 0208 0327 0481 0503 0691 0720 0747 0817
0823 0833 0965 1037 1088 1153 1162 1292 1341 1442
1453 1591 1959 1995 2076 2146 2218 2240 2250 2293
2317 2320 2487 2505 2521 2553 2634 2653 2690 2746
2757 2864 2885 2918 2987 3078 3097 3142 3172 3209
3374 3376 3383 3473 3621 3643 3682 3804 4107 4122
4157 4167 4174 4204 4228 4238 4309 4332 4352 4396
4576 4801 4900 5000 5037 5384 5385 5395 5463 5488
5562 5570 5687 5761 5815 5869 5897 5914 6081 6187
6203 6219 6229 6448 6467 6484 6559 6641 6686 6864
6881 6896 7238 7264 7378 7613 7668 7675 7751 7801
7822 7869 7998 8012 8049 8053 8063 8157 8216 8246
8288 8413 8432 8433 8498 8766 8767 8846 8878 8963
9081 9107 9118 9126 9208 9257 9472 9564 9582 9592
9701 9727 9854 9947

ಕಿರುಸುದ್ದಿ

ಹನುಮಗಿರಿ ಕ್ಷೇತ್ರದಲ್ಲಿ ಧಾರ್ಮಿಕ ಕಾರ್ಯಕ್ರಮಗಳು

ಪುತ್ತೂರು: ಹನುಮಗಿರಿ ಶ್ರೀ ಕೋದಂಡರಾಮ, ಪಂಚಮುಖಿ ಆಂಜನೇಯ ಕ್ಷೇತ್ರದಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವ ಪ್ರಯುಕ್ತ ಶನಿವಾರ ಬೆಳಗ್ಗೆ ಗಂಟೆ 5 ರಿಂದ ಗಣಪತಿ ಹೋಮ, ಪ್ರಾಯಶ್ಚಿತ್ತ ಹೋಮ, ಶಾಂತಿ ಹೋಮ, ತತ್ವಹೋಮ, ತತ್ವ



ಕಲಶ ಪೂಜೆ, ಕುಂಬೇಶಕರ್ಕರಿ ಪೂಜೆ, ಶಯ್ಯಾಪೂಜೆ, ತತ್ವಕಲಶಾಭಿಷೇಕ, ಜೀವೋದ್ದಾಸನೆ, ಜೀವಕಲಶ, ಶಯ್ಯೋನ್ನಯನ, ಮಹಾಪೂಜೆ, ಪ್ರಾರ್ಥನೆ, ಪುಣ್ಯಾಹ ನಡೆಯಿತು.

ಶ್ರೀರಾಮ ತಾರಕ ಯಾಗ

ಬೆಳಗ್ಗೆ 7 ಗಂಟೆಯಿಂದ ಆರಣೀಮಥನ, ಪ್ರಧಾನ ಕುಂಡದಲ್ಲಿ ಅಗ್ನಿ ಸ್ಥಾಪನೆ, ಅಗ್ನಿವಿಹರಣದೊಂದಿಗೆ ಶ್ರೀರಾಮ ತಾರಕ ಯಾಗ ಆರಂಭಗೊಂಡಿತು. ಕದಿರದ ಮರದಿಂದ ಆರಣೀಮಥನ ಮಾಡಲಾಯಿತು. ಯಾಗ ಶಾಲೆಯಲ್ಲಿ 110 ಮಂದಿ ವೈದಿಕರು ಏಕಕಾಲದಲ್ಲಿ ರಾಮತಾರಕ ಮಂತ್ರ ಪಠಿಸಿದರು. 10 ಕುಂಡಗಳಲ್ಲಿ ಶ್ರೀರಾಮ ತಾರಕ ಯಾಗ ನಡೆಯಿತು. ಸಾವಿರಾರು ಮಂದಿ ಶ್ರೀರಾಮ ಜಪದೀಕ್ಷೆ ಪಡೆದವರು ಯಾಗಶಾಲೆಯ ಮುಂಭಾಗದಲ್ಲಿ ಕುಳಿತು ಪ್ರಾರ್ಥನೆ ಸಲ್ಲಿಸಿದರು. ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿ ಮಾರ್ಗದರ್ಶನದಲ್ಲಿ ಕಶೆಕೋಡಿ ಸೂರ್ಯನಾರಾಯಣ ಭಟ್ ನೇತೃತ್ವದಲ್ಲಿ ಯಾಗ ನಡೆಯಿತು. ಕಂಚಿ ಕಾಮಕೋಟಿ ಪೀಠಾಧಿಪತಿ ಜಗದ್ಗುರು ಪರಮಪೂಜ್ಯ ಶ್ರೀ ಶಂಕರ ವಿಜೇಯೇಂದ್ರ ಸರಸ್ವತಿ ಸ್ವಾಮೀಜಿ, ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮೀಜಿ, ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಸ್ವಾಮೀಜಿ ಉಪಸ್ಥಿತಿಯಲ್ಲಿ ಮಧ್ಯಾಹ್ನ ಮಹಾಪೂರ್ಣಾಹುತಿ ನಡೆದು ಮಹಾಪೂಜೆ, ಮಂತ್ರಾಕ್ಷತೆ, ಪ್ರಸಾದ ವಿತರಣೆ ನಡೆಯಿತು. ಸಂಜೆ ಧಾನ್ಯಾಧಿವಾಸ, ಅಧಿವಾಸ ಹೋಮ, ಕುಂಬೇಶಕರ್ಕರಿ ಪೂಜೆ, ಪರಿಕಲಶ ಪೂಜೆ, ಬ್ರಹ್ಮಕಲಶ ಪೂಜೆ, ಮಹಾಪೂಜೆ ನಡೆಯಿತು.

ಏ.14ರಿಂದ ಕಲ್ಬಾವಿ ವಾರ್ಷಿಕ ಜಾತ್ರೆ

ಮಂಗಳೂರು : ನಗರದ ಕೋಡಿಕಲ್‌ನ ಶ್ರೀ ಕುರುಅಂಬಾ ರಾಜರಾಜೇಶ್ವರೀ ಸುಬ್ರಹ್ಮಣ್ಯ ದೇವಸ್ಥಾನದ ವಾರ್ಷಿಕ ಜಾತ್ರಾ ಮಹೋತ್ಸವ ಏ.14ರಿಂದ 26ರವರೆಗೆ ಬ್ರಹ್ಮಶ್ರೀ ದೇರೆಬೈಲು ವಿಠಲದಾಸ ತಂತ್ರಿವರ್ಯರ ನೇತೃತ್ವದಲ್ಲಿ ನಡೆಯಲಿದೆ. ಏ.13ರಂದು ರಾತ್ರಿ 8ಕ್ಕೆ ಸಾಮೂಹಿಕ ಶ್ರೀ ದೇವತಾ ಪ್ರಾರ್ಥನೆ, ತೋರಣ ಮುಹೂರ್ತ, ವಾಸ್ತುಪೂಜೆ, ರಾಕ್ಷೋಘ್ನ ಹೋಮ, ದಿಕ್ಪಾಲ ಬಲಿ ನೆರವೇರಲಿದೆ. ಏ.14ರಂದು ಬೆಳಗ್ಗೆ 9ರಿಂದ ನವಕ ಕಲಶ, ಪ್ರಧಾನ ಹೋಮ, ಶ್ರೀದೇವಿಗೆ ಹಾಗೂ ಸುಬ್ರಹ್ಮಣ್ಯ ದೇವರಿಗೆ ಕಲಶಾಭಿಷೇಕ, ಸುಬ್ರಹ್ಮಣ್ಯ ದೇವರಿಗೆ ಹೂವಿನ ಪೂಜೆ, ಮಧ್ಯಾಹ್ನ 12ಕ್ಕೆ ಧ್ವಜಾರೋಹಣ, 1.30ಕ್ಕೆ-ಮಹಾಪೂಜೆ, ಅನ್ನ ಸಂತರ್ಪಣೆ, ಸಾಯಂಕಾಲ 6ಕ್ಕೆ ಶ್ರೀ ರಾಜರಾಜೇಶ್ವರೀ ದೇವರಿಗೆ ಹೂವಿನ ಪೂಜೆ, ಉತ್ಸವ ಬಲಿ, ರಾತ್ರಿ ಪೂಜೆ, ಭೂತಬಲಿ, ಏ.15ರಂದು ಪ್ರಾತಃಕಾಲ 4.30ಕ್ಕೆ ಶ್ರೀ ರಾಜರಾಜೇಶ್ವರೀ ದೇವರಿಗೆ ದೀಪದ ಬಲಿ , ಬೆಳಗ್ಗೆ 9ಕ್ಕೆ ನವಕ ಪ್ರಧಾನ ಹೋಮ, ಕಲಶಾಭೀಷೇಕ, 10ಕ್ಕೆ ಸಾರ್ವಜನಿಕ ಸತ್ಯನಾರಾಯಣ ಪೂಜೆ, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಅನ್ನಸಂತರ್ಪಣೆ, ಸಾಯಂಕಾಲ 6ಕ್ಕೆಉತ್ಸವ ಬಲಿ, ಪೇಟೆ ಸವಾರಿ, ಕಟ್ಟೆಪೂಜೆ, ರಾತ್ರಿ ಪೂಜೆ, ಶ್ರೀಭೂತ ಬಲಿ, ಕವಾಟಬಂಧನ, ಶಯನೋತ್ಸವ, ಏ.16ರಂದು ಬೆಳಗ್ಗೆ 7ಕ್ಕೆ ಕವಾಟೋದ್ಘಾಟನೆ, ವಿವಿಧ ಅಭಿಷೇಕಗಳು, ನವಕ ಪ್ರಧಾನ ಹೋಮ, ಅಭಿಷೇಕ, 9ಕ್ಕೆ ತುಲಾಭಾರ ಸೇವೆ, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಅನ್ನಸಂತರ್ಪಣೆ, ಸಾಯಂಕಾಲ 6ಕ್ಕೆ ಜಳಕದ ಬಲಿ, ಓಕುಳಿ ಬಲಿ, ಸಾಗರ ಕೋಟ್ಸ್-ಕಲ್ಯಾವಿ ಕೆರೆಯಲ್ಲಿ, ಅವಭೃತ ಸ್ನಾನ, ಚಾಮುಂಡಿ ದೈವದ ಭೇಟಿ, ತೂಟೆದಾರ, ದರ್ಶನ ಬಲಿ, ಧ್ವಜಾವರೋಹಣ, ಬಟ್ಟಲು ಕಾಣಿಕೆ ನೆರವೇರಲಿದೆ ಎಂದು ದೇವಸ್ಥಾನದ ಆಡಳಿತ ಮೊಕ್ತೇಸರ ಕೆ.ಮೋಹನ್ ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೈಕ್ ಅಪಘಾತ: ಸವಾರ ಸಾವು

ಕುಂದಾಪುರ: ಬೈಕ್ ನಿಯಂತ್ರಣ ತಪ್ಪಿ ರಸ್ತೆಯ ಬದಿ ಡಿವೈಡರ್‌ಗಳಿಗೆ ಹಾಗೂ ಕಬ್ಬಿಣದ ಗ್ರಿಲ್ಸ್‌ಗಳಿಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಅರುಣ್ (17) ಸಾವನ್ನಪ್ಪಿದ್ದಾರೆ. ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ಉಡುಪಿ-ಬೈಂದೂರು ಏಕಮುಖ ರಸ್ತೆಯಲ್ಲಿ ಅರುಣ್ ಎಂಬವರು ಅತೀ ವೇಗ ಮತ್ತು ಅಜಾಗರುಕತೆಯಿಂದ ಬೈಕ್ ಚಲಾಯಿಸಿ ಕುಂದಾಪುರ ಶಾಸ್ತ್ರಿ ಪಾರ್ಕ್ ಫ್ಲೈಓವರ್ ಕೊನೆಗೊಳ್ಳುವ ಸ್ಥಳದಲ್ಲಿ ಬೈಕ್ ನಿಯಂತ್ರಣ ತಪ್ಪಿ ರಸ್ತೆಯ ಬದಿ ಡಿವೈಡರ್‌ಗಳಿಗೆ ಹಾಗೂ ಕಬ್ಬಿಣದ ಗ್ರಿಲ್ಸ್‌ಗಳಿಗೆ ಡಿಕ್ಕಿ ಹೊಡೆದ ಪರಿಣಾಮ ಅರುಣ್ ಗಂಭೀರವಾಗಿ ಗಾಯಗೊಂಡಿದ್ದರು. ಕೂಡಲೇ ಅವರನ್ನು ಕುಂದಾಪುರದ ಖಾಸಗಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿ ಹೆಚ್ಚಿನ ಚಿಕಿತ್ಸೆ ಬಗ್ಗೆ ಮಣಿಪಾಲ ಕೆಎಂಸಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿಂದ ಹೆಚ್ಚಿನ ಚಿಕಿತ್ಸೆ ಬಗ್ಗೆ ಉಡುಪಿ ಜಿಲ್ಲಾ ಆಸ್ಪತ್ರೆ ಅಜ್ಜರಕಾಡು ಆಸ್ಪತ್ರೆಗೆ ಕರೆದುಕೊಂಡು ಹೋದಾಗ ವೈದ್ಯರು ಪರೀಕ್ಷಿಸಿ ಅರುಣ್ ಮೃತಪಟ್ಟಿರುವುದಾಗಿ ತಿಳಿಸಿದ್ದಾರೆ. ಕುಂದಾಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಏ. 26 ರಂದು ಸಾಲಿಗ್ರಾಮದ ಟೀಮ್ ಸಂಕೀರ್ತನಾದ ನೇತೃತ್ವದಲ್ಲಿ ಶ್ರೀ ಸಾಲಿಗ್ರಾಮ ಗುರು ನರಸಿಂಹ ದೇವಸ್ಥಾನದ ಆಡಳಿತ ಮಂಡಳಿಯ ಸಹಕಾರದೊಂದಿಗೆ ಕುಣಿತ ಭಜನಾ ಸ್ಪರ್ಧೆಯನ್ನು ಏರ್ಪಡಿಸಿದೆ. ಈ ಕಾರ್ಯಕ್ರಮದ ಮೂಲಕ ಸಂಗ್ರಹವಾಗುವ ನಿಧಿಯ ಒಂದು ಭಾಗವನ್ನು ಸ್ಥಳೀಯ ನಿರಾಶ್ರಿತರ ಆಶ್ರಮಕ್ಕೆ ಸಹಾಯ ಹಸ್ತವಾಗಿ ನೀಡಲಿದೆ. ಸ್ಪರ್ಧೆಯ ಪೋಸ್ಟರ್ ಬಿಡುಗಡೆ ಕಾರ್ಯಕ್ರಮ ತೆಕ್ಕಟ್ಟೆ ಶ್ರೀ ಗುರುರಾಘವೇಂದ್ರ ಮಂದಿರದಲ್ಲಿ ಜರಗಿತು.

ದ್ವಿತೀಯ ಪಿಯುಸಿಯಲ್ಲಿ ಉಡುಪಿ ಜಿಲ್ಲೆ ಪ್ರಥಮ: ಯಶ್‌ಪಾಲ್ ಅಭಿನಂದನೆ

ಉಡುಪಿ: ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶದಲ್ಲಿ ಉಡುಪಿ ಜಿಲ್ಲೆ ಶೇ. 96.39 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನವನ್ನು ಪಡೆಯುವ ಮೂಲಕ ಶೈಕ್ಷಣಿಕವಾಗಿ ಅತ್ಯುತ್ತಮ ಸಾಧನೆ ಮಾಡಿರುವ ವಿದ್ಯಾರ್ಥಿಗಳು ಹಾಗೂ ಶಿಕ್ಷಣ ಇಲಾಖೆಗೆ ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಅಭಿನಂದನೆ ಸಲ್ಲಿಸಿದ್ದಾರೆ.



ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆಯುವ ಮೂಲಕ ಕರಾವಳಿ ಜಿಲ್ಲೆಯ ಶಿಕ್ಷಣದ ಗುಣಮಟ್ಟವನ್ನು ಮತ್ತೊಮ್ಮೆ ರಾಜ್ಯಮಟ್ಟದಲ್ಲಿ ಸಾಬೀತು ಮಾಡಿದೆ.

ಮಾನ್ಯ ಮುಖ್ಯಮಂತ್ರಿಗಳು ಹಾಗೂ ಶಿಕ್ಷಣ ಸಚಿವರು ಉಡುಪಿ ಜಿಲ್ಲೆಯ ನಿರಂತರ ಶೈಕ್ಷಣಿಕ ಸಾಧನೆ ಹಾಗೂ ಗುಣಮಟ್ಟದ ಶಿಕ್ಷಣ ವ್ಯವಸ್ಥೆಗೆ ಇನ್ನೂ ಹೆಚ್ಚಿನ ಶಕ್ತಿ ತುಂಬುವ ನಿಟ್ಟಿನಲ್ಲಿ ಉಡುಪಿ ಜಿಲ್ಲೆಯ ಶಾಲಾ ಕಾಲೇಜುಗಳ ಕಟ್ಟಡ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಗೆ 25 ಕೋಟಿ ಹಾಗೂ ಪ್ರತಿ ವರ್ಷ ಹೊರ ಜಿಲ್ಲೆಯಿಂದ ಶಿಕ್ಷಣಕ್ಕಾಗಿ ಉಡುಪಿಗೆ ಆಗಮಿಸುವ ಸಾವಿರಾರು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿದ್ಯಾರ್ಥಿ ನಿಲಯಗಳ ನಿರ್ಮಾಣಕ್ಕೆ 25 ಕೋಟಿ ವಿಶೇಷ ಅನುದಾನವನ್ನು ಜಿಲ್ಲೆಗೆ ಮಂಜೂರು ಮಾಡಬೇಕು.

ಜಿಲ್ಲೆಯ ಸರಕಾರಿ ಶಾಲಾ ಕಾಲೇಜುಗಳಲ್ಲಿ ಗಣನೀಯ ಪ್ರಮಾಣದಲ್ಲಿ ಶಿಕ್ಷಕರ ಕೊರತೆಯಿದ್ದರೂ ಉಡುಪಿ ಜಿಲ್ಲೆಯ ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ಅವಿರತ ಶ್ರಮದ ಮೂಲಕ ಉತ್ತಮ ಫಲಿತಾಂಶ ಬಂದಿದ್ದು, ರಾಜ್ಯ ಸರ್ಕಾರ ತಕ್ಷಣ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ಜಿಲ್ಲೆಯ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಲು ಆದ್ಯತೆ ನೀಡಬೇಕು.

ಉಡುಪಿ ಜಿಲ್ಲೆ ಪ್ರಥಮ ಸ್ಥಾನ ಪಡೆಯುವ ಮೂಲಕ ಜಿಲ್ಲೆಗೆ ಕೀರ್ತಿ ತಂದ ವಿದ್ಯಾರ್ಥಿಗಳಿಗೆ, ಶಿಕ್ಷಕ ವೃಂದ, ಶಾಲಾಡಳಿತ ಮಂಡಳಿ, ಪೋಷಕರು ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಉಡುಪಿ ಜನತೆಯ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದ್ದಾರೆ.

ಮಳೆಗಾಲ ಆರಂಭಕ್ಕೂ ಮುನ್ನವೇ ಘಾಟಿ ಸಂಚಾರಕ್ಕೆ ವಿಘ್ನ | ಆತಂಕದಲ್ಲಿ ವಾಹನ ಚಾಲಕರು

ಹುಲಿಕಲ್ ಘಾಟಿ 3 ತಿಂಗಳು ಬಂದ್?

ಉಡುಪಿ: ಕರಾವಳಿ ಮತ್ತು ಮಲೆನಾಡಿನ ಪ್ರಮುಖ ಕೊಂಡಿಯಾಗಿರುವ ಕುಂದಾಪುರ-ಶಿವಮೊಗ್ಗ ರಾಜ್ಯ ಹೆದ್ದಾರಿಯ ಹುಲಿಕಲ್ ಘಾಟಿಯಲ್ಲಿ (ಬಾಳೆಬರೆ ಘಾಟಿ) ಗುರುವಾರ ರಾತ್ರಿ ಸಂಭವಿಸಿದ ಭೀಕರ ಭೂಕುಸಿತವು ಮಳೆಗಾಲ ಆರಂಭಕ್ಕೂ ಮುನ್ನವೇ ವಾಹನ ಸಂಚಾರಕ್ಕೆ ದೊಡ್ಡ ವಿಘ್ನ ತಂದೊಡ್ಡಿದೆ. ಕಾಮಗಾರಿ ನಡೆಯುತ್ತಿದ್ದ ವೇಳೆ ಮಣ್ಣು ಕುಸಿದು ಮೂವರು ಕಾರ್ಮಿಕರು ಮೃತಪಟ್ಟ ದುರಂತದ ಬೆನ್ನಲ್ಲೇ, ಮುನ್ನೆಚ್ಚರಿಕಾ ಕ್ರಮವಾಗಿ ಈ ಮಾರ್ಗದಲ್ಲಿ ಸಂಚಾರವನ್ನು ಸಂಪೂರ್ಣ ನಿರ್ಬಂಧಿಸಲಾಗಿದೆ.

ದುರಂತದ ಹಿನ್ನೆಲೆ

ಹೊಸನಗರ ತಾಲೂಕಿನ ಶ್ರೀ ಚಂಡಿಕಾಂಬಾ ದೇವಸ್ಥಾನದ ಸಮೀಪದ ತಿರುವಿನಲ್ಲಿ ಕಳೆದ ಮಳೆಗಾಲದಲ್ಲಿ ಕುಸಿತ ಉಂಟಾಗಿತ್ತು. ಇದನ್ನು ಸರಿಪಡಿಸಲು ತಡೆಗೋಡೆ ನಿರ್ಮಾಣ ಮತ್ತು ರಸ್ತೆ ಅಗಲೀಕರಣ ಕಾಮಗಾರಿ ಪ್ರಗತಿಯಲ್ಲಿತ್ತು. ಆದರೆ, ಗುರುವಾರ ರಾತ್ರಿ ತಳಪಾಯದ ಕೆಲಸ ನಿರ್ವಹಿಸುತ್ತಿದ್ದಾಗ ಸುಮಾರು 12 ಮೀಟರ್ ಎತ್ತರದ ಕಾಂಕ್ರೀಟ್ ರಸ್ತೆಯ ಕೆಳಭಾಗದಲ್ಲಿ ಹಠಾತ್ ಭೂಕುಸಿತ ಸಂಭವಿಸಿದೆ. ಇದರಿಂದ ರಸ್ತೆಯಲ್ಲಿ ದೈತ್ಯ ಬಿರುಕುಗಳು ಕಾಣಿಸಿಕೊಂಡಿದ್ದು, ವಾಹನ ಸಂಚಾರಕ್ಕೆ ಅತ್ಯಂತ ಅಪಾಯಕಾರಿಯಾದ ಹಿನ್ನೆಲೆಯಲ್ಲಿ ಶಿವಮೊಗ್ಗ ಜಿಲ್ಲಾಡಳಿತ ತಕ್ಷಣದಿಂದ ಜಾರಿಗೆ ಬರುವಂತೆ ವಾಹನ ನಿಷೇಧಿಸಿ ಆದೇಶ ಹೊರಡಿಸಿದೆ.

ಮಳೆಗಾಲ ಆರಂಭವಾಗುವ ಮೊದಲೇ ಘಾಟಿಯಲ್ಲಿ ಈ ಬಿರುಕು ಕಾಣಿಸಿಕೊಂಡಿರುವುದು ಆತಂಕ ಮೂಡಿಸಿದೆ. ಆಗುಂಬೆ ಘಾಟಿಯಲ್ಲೂ ಒತ್ತಡ ಹೆಚ್ಚಾಗುವ ಸಾಧ್ಯತೆ ಇರುವುದರಿಂದ, ವಾಹನ ಸವಾರರು ಅನಿವಾರ್ಯವಾಗಿ ಕೊಲ್ಲೂರು ಅಥವಾ ಹೊನ್ನಾವರ ಮಾರ್ಗವನ್ನೇ ಅವಲಂಬಿಸಬೇಕಾಗಿದೆ.



ಸ್ಥಳ ಪರಿಶೀಲನೆ

ಶುಕ್ರವಾರ ತೀರ್ಥಹಳ್ಳಿ-ಹೊಸನಗರ ಕ್ಷೇತ್ರದ ಶಾಸಕರು, ಶಿವಮೊಗ್ಗ ಜಿಲ್ಲಾಧಿಕಾರಿಗಳು, ಅಪರ ಜಿಲ್ಲಾಧಿಕಾರಿಗಳು ಹಾಗೂ ಲೋಕೋಪಯೋಗಿ ಇಲಾಖೆಯ ಉನ್ನತ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ರಸ್ತೆಯ ಸ್ಥಿತಿಗತಿ ಅವಲೋಕಿಸಿದ ಅಧಿಕಾರಿಗಳು, ರಕ್ಷಣಾತ್ಮಕ ಕಾಮಗಾರಿ ಪೂರ್ಣಗೊಳ್ಳಲು ಕನಿಷ್ಠ 3 ತಿಂಗಳು ಬೇಕಾಗಬಹುದು ಎಂದು ಅಂದಾಜಿಸಿದ್ದಾರೆ. ಅಲ್ಲಿಯವರೆಗೆ ಘಾಟಿ ಮಾರ್ಗದಲ್ಲಿ ಸಂಚಾರ ಸ್ಥಗಿತಗೊಳ್ಳುವ ಸಾಧ್ಯತೆಯಿದೆ.

ಕುಂದಾಪುರದಿಂದ ಶಿವಮೊಗ್ಗಕ್ಕೆ ಪರ್ಯಾಯ ಮಾರ್ಗ

ಹುಲಿಕಲ್ ಘಾಟಿ ಬಂದ್ ಆಗಿರುವುದರಿಂದ ಕುಂದಾಪುರದಿಂದ ಶಿವಮೊಗ್ಗ ಕಡೆಗೆ ತೆರಳುವ ಪ್ರಯಾಣಿಕರು ಮತ್ತು ವಾಹನ ಸವಾರರು ಈ ಕೆಳಗಿನ ಪರ್ಯಾಯ ಮಾರ್ಗಗಳನ್ನು ಬಳಸಲು ಸೂಚಿಸಲಾಗಿದೆ.

ಲಘು ವಾಹನಗಳಿಗೆ (ಕಾರು, ಜೀಪು, ವ್ಯಾನ್)

ಕುಂದಾಪುರದಿಂದ ಬರುವವರು ಕೊಲ್ಲೂರು - ನಗರ - ಕಾನುಗೋಡು - ರಾವೆ - ತೀರ್ಥಹಳ್ಳಿ ಮಾರ್ಗವಾಗಿ ಶಿವಮೊಗ್ಗ ತಲುಪಬಹುದು. ಅಥವಾ ಯಡೂರು - ಮಾಸ್ತಿಕಟ್ಟೆ ಮಾರ್ಗವನ್ನೂ ಬಳಸಬಹುದು.

ಭಾರಿ ವಾಹನಗಳಿಗೆ (ಬಸ್, ಲಾರಿ):

ಕುಂದಾಪುರದಿಂದ ಬೈಂದೂರು - ಭಟ್ಕಳ ಮಾರ್ಗವಾಗಿ ಹೊನ್ನಾವರಕ್ಕೆ ತೆರಳಿ, ಅಲ್ಲಿಂದ ರಾಷ್ಟ್ರೀಯ ಹೆದ್ದಾರಿ ಮೂಲಕ ಶಿವಮೊಗ್ಗ/ಸಾಗರ ತಲುಪಲು ಅವಕಾಶ ಕಲ್ಪಿಸಲಾಗಿದೆ.

ಸುದೀಪ್ ಶೆಟ್ಟಿ ಆತ್ಮಹತ್ಯೆ ಪ್ರಕರಣ: ಪತ್ನಿ ಪೊಲೀಸ್ ವಶಕ್ಕೆ

ಕಾರ್ಕಳ : ಸುದೀಪ್ ಶೆಟ್ಟಿ ಆತ್ಮಹತ್ಯೆ ಸಂಬಂಧ ಆತನ ಪತ್ನಿ ಸೌಮ್ಯ ಶೆಟ್ಟಿಯನ್ನು ಎ. 11ರಂದು ಪೊಲೀಸರು ಉಡುಪಿಯಲ್ಲಿ ವಶಕ್ಕೆ ಪಡೆದಿದ್ದಾರೆ. ಬೆಳ್ತಂಗಡಿ ತಾಲೂಕು ನೆಲ್ಯಾಡಿ ನಿವಾಸಿ ಸುದೀಪ್ ಶೆಟ್ಟಿ ಮತ್ತು ಕಾರ್ಕಳದ ನಾಟಕ ಕಲಾವಿದೆ ಸೌಮ್ಯ ಶೆಟ್ಟಿ ಕಳೆದ ಫೆಬ್ರವರಿ 17ರಂದು ಪುತ್ತೂರಿನಲ್ಲಿ ನೋಂದಾಯಿತ ವಿವಾಹವಾಗಿದ್ದರು.

ಅನಂತರ ಮಾರ್ಚ್ 19ರಂದು ಕುಕ್ಕುಂದೂರು ದೇವಸ್ಥಾನದಲ್ಲಿ ವೈದಿಕ ವಿಧಿವಿಧಾನಗಳ ಮೂಲಕ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದರು. ಮದುವೆಯಾಗಿ ತಿಂಗಳೊಳಗೆ ಅಂದರೆ ಮಾ. 22ರಂದು ಸುದೀಪ್ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದು, ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೇ ಮಾ. 29ರಂದು ಸುದೀಪ್ ಸಾವನ್ನಪ್ಪಿದ್ದರು. ಈ ಘಟನೆ ಕರಾವಳಿ ಭಾಗದಲ್ಲಿ ತೀವ್ರ ಸಂಚಲನ ಮೂಡಿಸಿತ್ತು.



ತಂದೆಯಿಂದ ದೂರು ನಂತರದ ಬೆಳವಣಿಗೆಯಲ್ಲಿ ಸುದೀಪ್ ಶೆಟ್ಟಿ ಅವರ ತಂದೆ ದಾಮೋದರ್ ಅವರು ತಮ್ಮ ಸೊಸೆ ಸೌಮ್ಯ ಶೆಟ್ಟಿ ವಿರುದ್ಧವೇ ಗಂಭೀರ ಆರೋಪಗಳನ್ನು ಹೊರಿಸಿ ಕಾರ್ಕಳ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಸೌಮ್ಯ ತನ್ನ ಮಗನಿಗೆ ವಿಷಹಾಕಿ ಕೊಂದಿದ್ದಾಳೆ ಮತ್ತು ಆತ ವಿಷ ಸೇವಿಸಿದ ವಿಷಯವನ್ನು ಏಳು ದಿನಗಳ ಕಾಲ ಮುಚ್ಚಿಟ್ಟು ಸರಿಯಾದ ಚಿಕಿತ್ಸೆ ಸಿಗದಂತೆ ಮಾಡಿದ್ದಾಳೆ ಎಂದು ದೂರಿನಲ್ಲಿ ದಾಮೋದರ್ ಉಲ್ಲೇಖಿಸಿದ್ದರು.

» ಸುದೀಪ್ ಶೆಟ್ಟಿ ಮತ್ತು ಕಾರ್ಕಳದ ನಾಟಕ ಕಲಾವಿದೆ ಸೌಮ್ಯ ಶೆಟ್ಟಿ ಕಳೆದ ಫೆಬ್ರವರಿ 17ರಂದು ಪುತ್ತೂರಿನಲ್ಲಿ ನೋಂದಾಯಿತ ವಿವಾಹವಾಗಿದ್ದರು.

» ಸೌಮ್ಯ ಮಾನಸಿಕ ಕಿರುಕುಳ ನೀಡಿ ಸುದೀಪ್ ಆತ್ಮಹತ್ಯೆಗೆ ಪ್ರಚೋದನೆ ನೀಡಿದ್ದಾಳೆ ಎಂದು ದೂರಿನಲ್ಲಿ ದಾಖಲಾಗಿತ್ತು.

ಅಲ್ಲದೆ, ಸೌಮ್ಯ ಈ ಹಿಂದೆಯೂ ಹಲವರಿಗೆ ವಂಚಿಸಿರುವ ಕುರಿತು ಪೊಲೀಸರಿಗೆ ತಿಳಿಸಿದ್ದರು. ಸೌಮ್ಯ ಮಾನಸಿಕ ಕಿರುಕುಳ ನೀಡಿ ಸುದೀಪ್ ಆತ್ಮಹತ್ಯೆಗೆ ಪ್ರಚೋದನೆ ನೀಡಿದ್ದಾಳೆ ಎಂದು ದೂರಿನಲ್ಲಿ ದಾಖಲಾಗಿತ್ತು.

ತನಿಖೆ ಚುರುಕು ಈ ಹಿನ್ನೆಲೆಯಲ್ಲಿ ತನಿಖೆ ಕೈಗೊಂಡ ಕಾರ್ಕಳ ನಗರ ಠಾಣೆ ಪೊಲೀಸರು ಪ್ರಕರಣಕ್ಕೆ ಸಂಬಂಧಿಸಿದ ಸಾಕ್ಷ್ಯಾಧಾರಗಳನ್ನು ಕಲೆಹಾಕಿದ್ದರು. ವಾರದ ಹಿಂದಷ್ಟೇ ನಡೆದ ಈ ಘಟನೆಯ ತನಿಖೆ ಮುಂದುವರಿದಿದ್ದು, ಇದೀಗ ಪೊಲೀಸರು ಸೌಮ್ಯ ಶೆಟ್ಟಿ ಅವರನ್ನು ಉಡುಪಿಯಲ್ಲಿ ಬಂಧಿಸಿದ್ದಾರೆ. ಸುದೀಪ್ ಶೆಟ್ಟಿ ಅವರ ಸಾವಿಗೆ ನಿಖರ ಕಾರಣವೇನು? ಸೌಮ್ಯ ಅವರ ಪಾತ್ರವೇನಿದೆ? ವಿಷ ಸೇವನೆಯ ಹಿಂದಿನ ಸತ್ಯಾಸತ್ಯತೆಗಳನ್ನು ಪತ್ತೆಹಚ್ಚಲು ಪೊಲೀಸರು ಸೌಮ್ಯ ಅವರನ್ನು ತೀವ್ರ ವಿಚಾರಣೆಗೆ ಒಳಪಡಿಸಲಿದ್ದಾರೆ. ಈ ಬಂಧನದೊಂದಿಗೆ ಪ್ರಕರಣಕ್ಕೆ ಹೊಸ ತಿರುವು ಲಭಿಸಿದಂತಾಗಿದೆ.

ನಾಳೆ ಡಿಸಿ ಕಚೇರಿಯೆದುರು ರಿಕ್ಷಾ ಚಾಲಕರ ಪ್ರತಿಭಟನೆ

ಉಳ್ಳಾಲ: ಜಿಲ್ಲೆಯ ಆಟೋ ರಿಕ್ಷಾ ಚಾಲಕರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಏ.13ರಂದು ದಕ್ಷಿಣ ಕನ್ನಡ ಜಿಲ್ಲಾಕಾರಿಗಳ ಕಚೇರಿ ಮುಂಭಾಗ ಬೃಹತ್ ಪ್ರತಿಭಟನೆ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ದಕ್ಷಿಣ ಕನ್ನಡ ಆಟೋ ರಾಜಾಕನ್ಮಾರ್ ಯೂನಿಯನ್ ಅಧ್ಯಕ್ಷ ಅಬ್ದುಲ್ ಜಲೀಲ್ ಕೆ. ತಿಳಿಸಿದರು.

ತೊಕ್ಕೊಟ್ಟಿನ ಉಳ್ಳಾಲ ಪ್ರೆಸ್ ಕ್ಲಬ್‌ನಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಜಿಲ್ಲಾದ್ಯಂತ ಏಕರೂಪದ ಸಂಚಾರ ಪರವಾನಗಿ ಹಾಗೂ ದರ ಪರಿಷ್ಕರಣೆ ಸೇರಿದಂತೆ ಹಲವು ಪ್ರಮುಖ ಬೇಡಿಕೆಗಳನ್ನು ಮುಂದಿರಿಸಿ ಈ ಪ್ರತಿಭಟನೆ ನಡೆಯಲಿದ್ದು ಏ.13ರಂದು ಬೆಳಗ್ಗೆ ಜಿಲ್ಲೆಯ ವಿವಿಧ ಭಾಗಗಳ ಆಟೋ ಚಾಲಕರು ದೇರಳಕಟ್ಟೆಯಿಂದ ಜಿಲ್ಲಾಧಿಕಾರಿ ಕಚೇರಿಯವರೆಗೆ ಆಟೋ ರಿಕ್ಷಾಗಳಲ್ಲಿ ರ್‍ಯಾಲಿ ನಡೆಸಿ, ಜಿಲ್ಲಾಧಿಕಾರಿ ಕಚೇರಿ ಮುಂದೆ 9 ಗಂಟೆಗೆ ನಡೆಯುವ ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ. ಸರ್ಕಾರ ತಕ್ಷಣವೇ ಆಟೋ ಚಾಲಕರ ಸಮಸ್ಯೆಗಳತ್ತ ಗಮನ ಹರಿಸಬೇಕು. ಒಂದು ಜಿಲ್ಲೆ ಒಂದು ಪರವಾನಗಿ ಜಾರಿಗೊಳಿಸಿ ಜಿಲ್ಲಾದ್ಯಂತ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಿಸಲು ಅವಕಾಶ ನೀಡಬೇಕು ಎಂದರು. ದರ ಪರಿಷ್ಕರಣೆ ಮಾಡಿ ಇಂಧನ ದರ ಏರಿಕೆಗೆ ಅನುಗುಣ ವಾಗಿ ಪ್ರಯಾಣ ದರ ನಿಗದಿ ಮಾಡಬೇಕು, ಚಾಲಕರಿಗೆ ಕಲ್ಯಾಣ ಯೋಜನೆಗಳನ್ನು ಜಾರಿಗೊಳಿಸಿ ಸಾಮಾಜಿಕ ಭದ್ರತೆ ಒದಗಿಸಬೇಕು.ಸರ್ಕಾರ ಶೀಘ್ರ ಕ್ರಮ ಕೈಗೊಳ್ಳ ದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸು ವುದಾಗಿ ಎಚ್ಚರಿಕೆ ನೀಡಿದರು.

ನಗರ ವ್ಯಾಪ್ತಿಯಲ್ಲಿ ಗ್ರಾಮಾಂತರ ಭಾಗದ ಆಟೋಗಳಿಗೆ ದುಡಿಯಲು ಅವಕಾಶ ನೀಡುವುದು ಬೇಡ, ಗ್ರಾಮಾಂತರ ಭಾಗದ ಆಟೋಗಳು ನಗರಕ್ಕೆ ಬಂದು ದುಡಿದರೆ ನಿಯಮಾ ನುಸಾರ ದಂಡ ವಿಧಿಸಲಿ. ಆದರೆ ನಮ್ಮ ಮನೆಯವರನ್ನು ನಮ್ಮ ಆಟೋದಲ್ಲಿ ಕರೆದುಕೊಂಡು ಹೋದರೆ ಅಥವಾ ತುರ್ತು ಸಂದರ್ಭದಲ್ಲಿ ಆಸ್ಪತ್ರೆಗೆ ರೋಗಿಗಳನ್ನು ಕರೆದುಕೊಂಡು ಹೋಗುವ ಸಂದರ್ಭದಲ್ಲಿ ಪೊಲೀ ಸರು ಆಟೋವನ್ನು ತಡೆ ಹಿಡಿದು 10ಸಾವಿರ ರೂ. ಗಳಷ್ಟು ದಂಡ ವಿಧಿಸುವುದು ನ್ಯಾಯಸಮ್ಮತವೇ ಎಂದು ಪ್ರಶ್ನಿಸಿದರು.

ಗ್ರಾಮಾಂತರ ಪಾಸ್ ಹೊಂದಿರುವ ವಾಹನಗಳಿಗೆ ಅಪಘಾತವಾದರೆ ವಿಮೆ ಸಮಸ್ಯೆ ಉಂಟಾಗಬಹುದು. ನಾವು ನಿಯಮಿತವಾಗಿ ತೆರಿಗೆ ಕಟ್ಟುತ್ತಿದ್ದೇವೆ. ಈ ಕುರಿತು ಈಗಾಗಲೇ ಜಿಲ್ಲಾಧಿಕಾರಿ ಹಾಗೂ ಎಸ್.ಪಿ. ಅವರಿಗೆ ನೇರವಾಗಿ ಮನವಿ ಸಲ್ಲಿಸಿದ್ದೇವೆ. ನಮ್ಮ ಸಮಸ್ಯೆಗೆ ಅವರು ಸ್ಪಂದಿಸುವರೆಂಬ ವಿಶ್ವಾಸ ನಮ್ಮಲ್ಲಿದೆ. ಗ್ಯಾಸ್ ಭರ್ತಿ ಮಾಡುವ ವಿಚಾರದಲ್ಲಿಯೂ ಚಾಲಕರು ಸಂಕಷ್ಟ ಅನುಭವಿಸುತ್ತಿದ್ದಾರೆ. ಕೆಲವು ಗ್ಯಾಸ್ ಪಂಪ್ ಗಳಲ್ಲಿ ಗ್ಯಾಸ್ ಇದೆ ಆದರೆ ಕೆಲ ಆಟೋಗಳಿಗೆ ನೀಡಲಾಗುತ್ತಿಲ್ಲ ಎಂಬ ಆರೋಪ ಇದೆ. ಪಂಪ್ ಮಾಲೀಕರು ಸಾರ್ವಜನಿಕರಿಗೆ ತೊಂದರೆ ಆಗುವ ರೀತಿಯಲ್ಲಿ ನಡೆದುಕೊಳ್ಳ ಬಾರದೆಂದರು.

ಆಟೋ ರಾಜಾಕನ್ಮಾರ್ ಯೂನಿಯನ್ ಪ್ರಧಾನ ಕಾರ್ಯದರ್ಶಿ ಶಫೀಕ್ ಬೋಳಿಯಾರ್ ಮಾತನಾಡಿ, ಮಂಗಳೂರು ಗ್ರಾಮಾಂತರ ವಾಹನಗಳಿಗೆ ನಗರಕ್ಕೆ ಬರಲು ಅವಕಾಶ ಇಲ್ಲ ಎಂದು ಹೇಳಲಾಗುತ್ತಿದೆ. ತುರ್ತು ಸಂದರ್ಭದಲ್ಲಿ ಆಸ್ಪತ್ರೆಗೆ ಹೋಗಬೇಕಾದರೂ ಸಾಕ್ಷ್ಯವಾಗಿ ಫೋಟೋ ಅಥವಾ ಇತರೆ ದಾಖಲೆ ತೋರಿಸುವಂತೆ ಸೂಚಿಸಲಾಗುತ್ತಿದೆ. ಇದೇ ವೇಳೆ ನಗರದಿಂದ ಗ್ರಾಮಾಂತರ ಭಾಗಗಳಿಗೆ ವಾಹನಗಳು ನೇರವಾಗಿ ಸಂಚರಿಸಿದರೂ ಅವರಿಗೆ ದಂಡ ವಿಧಿಸಲಾಗುತ್ತಿಲ್ಲ ಎಂಬ ಅಸಮಾಧಾನ ವ್ಯಕ್ತವಾಗಿದೆ. ಮಂಗಳೂರು ಗ್ರಾಮಾಂತರ, ಬಂಟ್ವಾಳ, ಪುತ್ತೂರು ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಕೆಎ-19 ನೋಂದಣಿ ಹೊಂದಿರುವ ಆಟೋ ಚಾಲಕರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದರು.

ಹೋರಾಟ ಸಮಿತಿ ಸಂಚಾಲಕ ಸಿದ್ದೀಕ್ ಕೊಡಕ್ಕಲ್, ಕರಾವಳಿ ಆಟೋ ಪಾರ್ಕ್ ಮುಡಿಪು ಅಧ್ಯಕ್ಷ ಹರೀಶ್ ಗಿಂಡೆಪೇರ್, ಆಟೋ ರಾಜಾಕನ್ಮಾರ್ ಯೂನಿಯನ್ ಉಪಾಧ್ಯಕ್ಷಮನ್ಸೂರ್ ಮಲಾರ್, ಜೊತೆಕಾರ್ಯದರ್ಶಿ ಶಫೀಕ್ ಸಾಲೆತ್ತೂರು, ಸದಸ್ಯರಾದ ಶರೀಫ್ ಮಂಚಿ, ನಿಸಾರ್ ದೇರಳಕಟ್ಟೆ, ತಸ್ಲೀನ್ ತೊಕ್ಕೊಟ್ಟು, ಇಮ್ರಾನ್ ಉಳ್ಳಾಲ, ರಿಜ್ವಾನ್ ಕಣಚೂರ್ ಹಾಗೂ ಉಸ್ಮಾನ್ ಸಜಿಪ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ರೋಬೊಟಿಕ್ ಕುರಿತು ರಾಷ್ಟ್ರೀಯ ಸಮ್ಮೇಳನ

ಮಂಗಳೂರು: ಗ್ಲೋಬಲ್ ಎಸ್‌ಎಸ್‌ಐ ಮಲ್ಟಿ-ಸ್ಪೆಷಾಲಿಟಿ ರೋಬೋಟಿಕ್ ಸರ್ಜರಿ ಸಮ್ಮೇಳನ ಇತ್ತೀಚೆಗೆ ನಡೆದಿದ್ದು, ಇದೊಂದು ಮಹತ್ವದ ಮೈಲಿಗಲ್ಲಾಗಿದೆ.

ಈ ಸಮ್ಮೇಳನದಲ್ಲಿ ವಿಶ್ವದಾದ್ಯಂತ 1500ಕ್ಕೂ ಹೆಚ್ಚು ವೈದ್ಯರು ಮತ್ತು 250ಕ್ಕೂ ಹೆಚ್ಚು ತಜ್ಞರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಎಸ್‌ಎಸ್ ಇನ್ನೋವೇಶನ್ಸ್ ಇಂಟರ್‌ನ್ಯಾಷನಲ್ ಎರಡು ಕ್ರಾಂತಿಕಾರಿ ತಂತ್ರಜ್ಞಾನಗಳನ್ನು ಪ್ರಾಜೆಕ್ಟ್ ವಿಮಾನ ಪ್ರಾಜೆಕ್ಟ್ ಅಪೆರಿಯನ್ ಅನಾವರಣಗೊಳಿಸಿತು. ಇವು ಭವಿಷ್ಯದ ಶಸ್ತ್ರಚಿಕಿತ್ಸೆ ಮತ್ತು ತುರ್ತು ವೈದ್ಯಕೀಯ ವ್ಯವಸ್ಥೆಗೆ ಹೊಸ ದಿಕ್ಕನ್ನು ನೀಡಲಿವೆ. ಸಮ್ಮೇಳನದಲ್ಲಿ ರೋಬೋಟಿಕ್ ಶಸ್ತ್ರಚಿಕಿತ್ಸೆ, ಕೃತಕ ಬುದ್ಧಿಮತ್ತೆ ಟೆಲಿ-ಸರ್ಜರಿ ಮತ್ತು ಮೊಬೈಲ್ ಆಪರೇಟಿಂಗ್ ಪ್ಲಾಟ್‌ಫಾರ್ಮ್‌ಗಳಂತಹ ಅತ್ಯಾಧುನಿಕ ತಂತ್ರಜ್ಞಾನಗಳ ಕುರಿತು ಚರ್ಚೆ ನಡೆಯಿತು ಎಂದು ಎಸ್‌ಎಸ್ ಇನ್ನೋವೇಶನ್ ಸಂಸ್ಥೆಯ ಸಿಇಒ ಡಾ.ಸುಧೀರ್ ಶ್ರೀವಾಸ್ತವ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಟಿ.ಎಂ.ಎ. ಪೈ ಸಭಾಂಗಣದಲ್ಲಿ 'ಮಂಗಳೂರು ಫಿಸಿಯೋಕಾನ್' ಅಂತರಾಷ್ಟ್ರೀಯ ಫಿಸಿಯೋಥೆರಪಿ ಸಮ್ಮೇಳನ

ವೃತ್ತಿಯಲ್ಲಿ ನೈತಿಕ ಮೌಲ್ಯ ಜೀವಂತವಿರಲಿ: ಡಾ. ಪಾಟೀಲ್

ಮಂಗಳೂರು: ಆಧುನಿಕ ಆರೋಗ್ಯ ರಕ್ಷಣಾ ವ್ಯವಸ್ಥೆಯು ಕೃತಕ ಬುದ್ಧಿಮತ್ತೆ (ಎಐ), ದತ್ತಾಂಶ ವಿಶ್ಲೇಷಣೆ ಮತ್ತು ನಿಖರ ವೈದ್ಯಕೀಯ ತಂತ್ರಜ್ಞಾನಗಳೊಂದಿಗೆ ವೇಗವಾಗಿ ಬದಲಾಗುತ್ತಿದೆ. ಆದರೆ, ಈ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವಾಗ ವೈದ್ಯಕೀಯ ವೃತ್ತಿಪರರು ಸಹಾನುಭೂತಿ, ನೈತಿಕ ಮೌಲ್ಯಗಳು ಮತ್ತು ರೋಗಿ ಕೇಂದ್ರಿತ ಕಾಳಜಿಯನ್ನು ಮರೆಯಬಾರದು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಆರ್. ಪಾಟೀಲ್ ಹೇಳಿದರು.

ಸೌತ್ ಕೆನರಾ ಫಿಸಿಯೋಥೆರಫಿ ಟೀಚರ್ಸ್ ಅಸೋಸಿಯೇಶನ್ ವತಿಯಿಂದ ನಗರದ ಟಿ.ಎಂ.ಎ. ಪೈ ಸಭಾಂಗಣದಲ್ಲಿ ಅಂತರಾಷ್ಟ್ರೀಯ ಫಿಸಿಯೋಥೆರಫಿ ಸಮ್ಮೇಳನ 'ಮಂಗಳೂರು ಫಿಸಿಯೋಕಾನ್ 2026' ಅನ್ನು ಉದ್ಘಾಟಿಸಿ ಶುಕ್ರವಾರ ಅವರು ಮಾತನಾಡಿದರು.

ಫಿಸಿಯೋಥೆರಪಿಯು ವೈಜ್ಞಾನಿಕ ಜ್ಞಾನ ಮತ್ತು ಮಾನವ ಅಗತ್ಯಗಳ ನಡುವಿನ ಕೊಂಡಿಯಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ವಿಶಿಷ್ಟವಾಗಿದ್ದು, ಈ



ವಿಶಿಷ್ಟತೆಯನ್ನು ಗುರುತಿಸುವುದು ಪರಿಣಾಮಕಾರಿ ಚಿಕಿತ್ಸೆ ನೀಡಲು ಅತ್ಯಗತ್ಯ ಎಂದು ಸಚಿವರು ಹೇಳಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಅವರು ಮಾತನಾಡಿ, ಫಿಸಿಯೋಥೆರಪಿ ಕ್ಷೇತ್ರದಲ್ಲಿ ಅಪಾರ ಅವಕಾಶಗಳಿವೆ. ವಿಶ್ವದ ಹಲವು ದೇಶಗಳಲ್ಲಿ ವಯಸ್ಸಾದವರ ಸಂಖ್ಯೆ ಹೆಚ್ಚುತ್ತಿರುವುದರಿಂದ ಮುಂಬರುವ ದಿನಗಳಲ್ಲಿ ಫಿಸಿಯೋಥೆರಪಿಸ್ಟ್‌ಗಳ ಬೇಡಿಕೆ ಗಣನೀಯವಾಗಿ ಹೆಚ್ಚಾಗಲಿದೆ. ಅಲ್ಲದೆ ಸಾಂಕ್ರಾಮಿಕವಲ್ಲದ ರೋಗಗಳ ಹೆಚ್ಚಳದಿಂದಲೂ ಫಿಸಿಯೋತೆರಪಿ ಪ್ರಾಮುಖ್ಯತೆ ಪಡೆದುಕೊಳ್ಳುತ್ತಿದೆ ಎಂದು ಹೇಳಿದರು.

ಅಲೈಡ್ ಮತ್ತು ಹೆಲ್ತ್ ಕೇರ್ ಪ್ರೊಫೆಷನ್‌ನ ರಾಷ್ಟ್ರೀಯ ಆಯೋಗದ (ಎನ್ ಸಿ ಎ ಎಚ್ ಪಿ) ಅಧ್ಯಕ್ಷೆ ಡಾ. ಯಜ್ಞ ಉನ್ಮೇಶ್ ಶುಕ್ಲಾ ಮಾತನಾಡಿ, ಆಯೋಗವು 17 ಪಠ್ಯಕ್ರಮಗಳನ್ನು ಪರಿಚಯಿಸಿದ್ದು, ಇವು 2026ರ ಶೈಕ್ಷಣಿಕ ವರ್ಷದಿಂದ ಕಡ್ಡಾಯವಾಗಲಿವೆ . ಸಂಯೋಜಿತ ಮತ್ತು ಆರೋಗ್ಯ ರಕ್ಷಣಾ ವೃತ್ತಿಪರರ ನೋಂದಣಿ ಪ್ರಕ್ರಿಯೆಯು ಶೀಘ್ರದಲ್ಲೇ ಪ್ರಾರಂಭವಾಗಲಿದೆ. ಈ ವಲಯದಲ್ಲಿ ಪ್ರಮುಖ ಸುಧಾರಣೆಯ ಭಾಗವಾಗಿ, ಸಂಸ್ಥೆಗಳನ್ನು ನಿಯಂತ್ರಿಸುವ ನಿಯಮಗಳು ಮತ್ತು ನಿಗದಿತ ಕನಿಷ್ಠ ಮಾನದಂಡಗಳನ್ನು ಸಹ ಶೀಘ್ರದಲ್ಲೇ ಹೊರಡಿಸಲಾಗುವುದು ಎಂದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ಭಗವಾನ್ ಬಿ.ಸಿ., ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಸಹಕುಲಪತಿ ಡಾ. ದಿಲೀಪ್ ನಾಯಕ್, ಇಂಡಿಯನ್ ಅಸೋಸಿಯೇಶನ್ ಆಫ್ ಫಿಸಿಯೋಥೆರಪಿಸ್ಟ್‌ನ ಅಂತಾರಾಷ್ಟ್ರೀಯ ವ್ಯವಹಾರಗಳ ಚೇರ್‌ಮೆನ್ ಡಾ. ಅಲಿ ಇರಾನಿ, ಇಂಡಿಯನ್ ಅಸೋಸಿಯೇಷನ್ ಆಫ್ ಫಿಸಿಯೋಥೆರಪಿಸ್ಟ್ಸ್‌ನ ಅಧ್ಯಕ್ಷ ಡಾ.ಸಂಜೀವ್ ಕೆ. ಝಾ, ದಿ ಇಂಡಿಯನ್ ಅಸೋಸಿಯೇಶನ್ ಆಫ್ ಫಿಸಿಯೋಥೆರಪಿಸ್ಟ್ಸ್ ರಾಷ್ಟ್ರೀಯ ಮಹಿಳಾ ವಿಭಾಗದ ಮುಖ್ಯಸ್ಥೆ ಡಾ. ರುಚಿ ವರ್ಷ್ನೇಯಿ, ಯೆನೆಪೋಯ ವಿಶ್ವವಿದ್ಯಾನಿಲಯದ ಕುಲಾಧಿಪತಿ ಡಾ. ಯೆನೆಪೊಯ ಅಬ್ದುಲ್ಲಾ ಕುಂಞ ಉಪಸ್ಥಿತರಿದ್ದರು.

ಏ.15ರಿಂದ 18ರವರೆಗೆ ಮಕ್ಕಳ ಬೇಸಿಗೆ ಶಿಬಿರ

ಮಂಗಳೂರು: ರಂಗ ಸ್ವರೂಪ ಕುಂಜತ್ತಬೈಲ್ ಮಂಗಳೂರು ಇದರ ಆಶ್ರಯದಲ್ಲಿ ಏ. 15 ರಿಂದ 18ರವರೆಗೆ 'ರಂಗೋತ್ಸವ-2026' ಮಕ್ಕಳ ಬೇಸಿಗೆ ಶಿಬಿರವು ಮರಕಡ ದ.ಕ. ಜಿ.ಪಂ. ಮಾ. ಹಿ. ಪ್ರಾ. ಶಾಲೆಯಲ್ಲಿ ನಡೆಯಲಿದೆ.

ಶಿಕ್ಷಕ ಚೇತನ್ ಕೊಪ್ಪ ಶಿಬಿರ ಉದ್ಘಾಟಿಸಲಿರುವರು. ಈ ವಿಶಿಷ್ಟ ಶಿಬಿರದಲ್ಲಿ ಮಕ್ಕಳಿಗಾಗಿ ಗೋಡೆ ಪತ್ರಿಕೆ, ಕ್ರಿಯಾತ್ಮಕ ಚಿತ್ರಕಲೆ, ಹಾಡು, ರೇಖಾ ಚಿತ್ರ, ಮುಖವಾಡ ತಯಾರಿ, ನಾಟಕ, ಗೂಡುದೀಪ, ಗಾಳಿಪಟ, ಕ್ರಿಯಾತ್ಮಕ ಬರವಣಿಗೆ, ಕೊಲಾಜ್, ಮಿಮಿಕ್ರಿ, ಮೂಕಾಭಿನಯ, ಗಾಳಿಪಟ, ವ್ಯಕ್ತಿತ್ವ ವಿಕಸನ, ಜನಪದ ನೃತ್ಯ, ಆರೋಗ್ಯದ ಮಾಹಿತಿ, ರಸ್ತೆ ಸುರಕ್ಷತೆ, ಯೋಗಾಸನ ಮುಂತಾದ ವಿಷಯದಲ್ಲಿ ಕಾರ್ಯಾಗಾರ ನಡೆಯಲಿದೆ.

ಸುಬ್ರಹ್ಮಣ್ಯ ಕಾಸರಗೋಡು, ಝುಬೇರ್ ಖಾನ್ ಕುಡ್ಲ ಅವರ ನಿರ್ದೇಶನದಲ್ಲಿ ಖ್ಯಾತ ಕಲಾವಿದ ಗೋಪಾಡ್ಕರ್, ದಿನೇಶ್ ಹೊಳ್ಳ, ಪ್ರೇಮ್ ನಾಥ್ ಮರ್ಣೆ, ತಾರಾನಾಥ್ ಕೈರಂಗಳ, ಅರವಿಂದ ಕುಡ್ಲ ನವೀನ್ ಸ್ವರೂಪ, ಅಕ್ಷತಾ ಕುಡ್ಲ , ಹುಸೈನ್ ರಿಯಾರುಝ್ ತಸ್ಲಿಮಾ, ಅನೀಸಾ, ಸುಮನಾ ರೆಬೆಲ್ಲೊ,ಜ್ಯೋತಿ ಸುಬ್ರಹ್ಮಣ್ಯ, ಶಿಲ್ಪಾ, ಸುನೀತಾ ಲೂಯಿಸ್, ಮಮತಾ ಕೆದಿಲಾಯ, ಅದಿ ಸ್ವರೂಪ, ವೈಷ್ಣವಿ ರಾಜೇಶ್ ರೈಹಾನ್,ಜೆನಿಫರ್, ಸ್ನೇಹ, ರಿಫಾ ಮುಂತಾದವರು ಮಾರ್ಗದರ್ಶನ ನೀಡಲಿದ್ದಾರೆ. ಏ.18ರಂದು ಸಂಜೆ 6ಕ್ಕೆ ಸಮಾರೋಪ ನಡೆಯಲಿದೆ. ಆಸಕ್ತರು ಶಿಬಿರದ ಸಂಯೋಜಕ ರೆಹಮಾನ್ ಖಾನ್ ಕುಂಜತ್ತಬೈಲ್ (9880835659) ರವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
೧೦
ಪ್ರಾದೇಶಿಕ
ಭಾನುವಾರ
12 ಏಪ್ರಿಲ್ 2026
ಮಂಗಳೂರು

ಮೌಲ್ಯಮಾಪನ: ನಿಷೇಧಾಜ್ಞೆ

ಮಡಿಕೇರಿ: ನಗರದ ಸಂತ ಮೈಕಲರ ಪ್ರೌಢಶಾಲೆಯಲ್ಲಿ ಏ. 15ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1 ರ ಮೌಲ್ಯಮಾಪನ ನಡೆಯಲಿದೆ. ಸುಗಮವಾಗಿ ಮೌಲ್ಯಮಾಪನ ಕಾರ್ಯ ನಡೆಸುವ ಸಲುವಾಗಿ ಕೇಂದ್ರದ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿನ ಪ್ರದೇಶವನ್ನು ನಿರ್ಬಂಧಿತ ಸ್ಥಳ ಎಂದು ಘೋಷಿಸಿ ಜಿಲ್ಲಾಧಿಕಾರಿ ಎಸ್. ಜೆ.ಸೋಮಶೇಖರ್ ಅವರು ಆದೇಶಿಸಿದ್ದಾರೆ. ಈ ಆದೇಶವು ಮೌಲ್ಯಮಾಪನ ನಡೆಸುವ ದಿನಗಳಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಮಾತ್ರ ಚಾಲ್ತಿಯಲ್ಲಿರುತ್ತದೆ.

ನಿಧನ ಸುದ್ದಿ

ಶ್ರಾವಣ್ ಉಳ್ಳಾಲ್



ಉಳ್ಳಾಲ: ಭರತನಾಟ್ಯವನ್ನು ಉಳಿಸಿ ಬೆಳೆಸಲು ಅಪಾರ ಸೇವೆ ಸಲ್ಲಿಸಿದ್ದ ಉಳ್ಳಾಲದ ಮಂತ್ರ ನಾಟ್ಯಕಲಾ ಗುರುಕುಲದ ನಿರ್ದೇಶಕ, ಉಳ್ಳಾಲ ಬಂಡಿಕೊಟ್ಯ ನಿವಾಸಿ ವಿದ್ವಾನ್ ಶ್ರಾವಣ್ ಉಳ್ಳಾಲ ಅವರು ಶುಕ್ರವಾರದಂದು ಸಂಜೆ ಅಲ್ಪ ಕಾಲದ ಅನಾರೋಗ್ಯದಿಂದ ಮಂಗಳೂರಿನ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ಶಾಂತಲಾ ಪ್ರಶಸ್ತಿ ಪುರಸ್ಕೃತ ನಾಟ್ಯಾಚಾರ್ಯ ಉಳ್ಳಾಲ ಮೋಹನ್ ಕುಮಾರ್ ಹಾಗೂ ಸಂಸ್ಥೆಯ ಗೌರವಾಧ್ಯಕ್ಷೆ ಶಕೀಲಾ ಜನಾರ್ದನ ಅವರ ಮಾರ್ಗದರ್ಶನದಲ್ಲಿ ಸ್ಥಾಪಿತವಾದ ಮಂತ್ರ ನಾಟ್ಯಕಲಾ ಗುರುಕುಲವನ್ನು ಶ್ರಾವಣ್ ಉಳ್ಳಾಲ್ ಅವರು ಸಮರ್ಥವಾಗಿ ಮುನ್ನಡೆಸಿ ಅನೇಕ ವಿದ್ಯಾರ್ಥಿಗಳಿಗೆ ಭರತನಾಟ್ಯ ಶಿಕ್ಷಣವನ್ನು ಕಲಿಸಿದ್ದರು. ನೃತ್ಯದ ಜೊತೆಗೆ ಶಾರೀರಿಕ, ಬೌದ್ಧಿಕ, ಮಾನಸಿಕ, ನೈತಿಕ ಹಾಗೂ ಶೈಕ್ಷಣಿಕ ಮೌಲ್ಯಗಳ ಅರಿವು ಮೂಡಿಸುವ ಕಾರ್ಯದಲ್ಲಿ ಗುರುಕುಲವನ್ನು ಮುಂಚೂಣಿಗೆ ತಂದಿದ್ದರು. ಪಂದನಲ್ಲೂರು ಶೈಲಿಯ ಭರತನಾಟ್ಯವನ್ನು ದೇಶದ ವಿವಿಧ ರಾಜ್ಯಗಳಲ್ಲಿ ಪರಿಚಯಿಸಿ ಒರಿಸ್ಸಾ,ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು, ಮಹಾರಾಷ್ಟ್ರ, ಆಂಧ್ರ ಪ್ರದೇಶ, ತೆಲಂಗಾಣ, ಗುಜರಾತ್ ಸೇರಿದಂತೆ ಅನೇಕ ರಾಜ್ಯಗಳ ಧಾರ್ಮಿಕ ಹಾಗೂ ಸಾಂಸ್ಕೃತಿಕ ವೇದಿಕೆಗಳಲ್ಲಿ ನೃತ್ಯ ಪ್ರದರ್ಶನ ನೀಡಿದ್ದರು. ದುಬೈ ಸೇರಿದಂತೆ ವಿದೇಶಗಳಲ್ಲಿ ಭರತನಾಟ್ಯ, ಕೂಚುಪುಡಿ, ಕಥಕ್, ಒಡಿಸ್ಸಿ ಹಾಗೂ ಯಕ್ಷಗಾನಗಳ ಸಮ್ಮಿಲನ ಪ್ರದರ್ಶನ ನೀಡಿ ಭಾರತವನ್ನು ಅವರು ಪ್ರತಿನಿಧಿಸಿದ್ದರು. 'ಮೋಕ್ಷಂ', 'ರುದ್ರ ವೀರಭದ್ರ', 'ಶ್ರೀಕೃಷ್ಣ ಲೀಲಾಮೃತಂ', 'ತ್ರಿಶಕ್ತಿ', 'ನೃಸಿಂಹ ಚಲತಂ', 'ದಶ ಹಲರೂಪಂ', 'ಶಕ್ತಿ' ಮೊದಲಾದ ನೃತ್ಯ ರೂಪಕಗಳ ಮೂಲಕ ಅಪಾರ ಜನಮನ್ನಣೆ ಪಡೆದಿದ್ದರು. ದೂರದರ್ಶನ ಗ್ರೇಡೆಡ್ ಕಲಾವಿದರಾಗಿದ್ದ ಶ್ರಾವಣ್ ಉಳ್ಳಾಲರು ಭರತನಾಟ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದು, ವೀಣಾ ವಾದನದಲ್ಲೂ ಪರಿಣತಿ ಹೊಂದಿದ್ದರು. ಗುರುಕುಲ ಉತ್ಸವಗಳ ಮೂಲಕ ದೇಶ-ವಿದೇಶಗಳ ಕಲಾವಿದರನ್ನು ಒಟ್ಟುಗೂಡಿಸಿ ನೃತ್ಯ ಪರಂಪರೆಯನ್ನು ಉಳಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ನಾಟ್ಯ ಪ್ರವೀಣ ಪ್ರಶಸ್ತಿ, ಜನಪದ ಬಂಧು ಪ್ರಶಸ್ತಿ, ನೃತ್ಯ ಶಿರೋಮಣಿ ಪ್ರಶಸ್ತಿ, ನೃತ್ಯ ಪ್ರಿಯ ಪ್ರಶಸ್ತಿ, ದುರ್ಗಾ ರತ್ನ ಪುರಸ್ಕಾರ, ಗಿರ್ನಾರ್ ರತ್ನ ಪುರಸ್ಕಾರ, ಲಾಸ್ಯ ನೃತ್ಯ ನಟೇಶ ಪುರಸ್ಕಾರ (ಪದ್ಮಭೂಷಣ ನಾಟ್ಯಾಚಾರ್ಯ ಧನಂಜಯ್ ಅವರಿಂದ), ದಕ್ಷಿಣ ಕನ್ನಡ ಜಿಲ್ಲಾಡಳಿತದ 2018ರ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ,ಅಂತಾರಾಷ್ಟ್ರೀಯ ಆರ್ಯಭಟ ಪ್ರಶಸ್ತಿ ಅವರಿಗೆ ಲಭಿಸಿದ ಪ್ರಮುಖ ಪ್ರಶಸ್ತಿಗಳಾಗಿವೆ.

ಶ್ರಾವಣ್ ಉಳ್ಳಾಲರ ಅಕಾಲಿಕ ನಿಧನಕ್ಕೆ ಕಲಾವಿದರು, ಶಿಷ್ಯರು ಹಾಗೂ ನೃತ್ಯಾಭಿಮಾನಿಗಳು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಮೃತ ಶ್ರಾವಣ್ ಅವರು ಪತ್ನಿ ಶೈನಾ ಶ್ರಾವಣ್ ಮತ್ತು ಪುಟ್ಟ ಹೆಣ್ಣು ಮಗಳು ಮಂತ್ರ ಎಸ್ ಉಳ್ಳಾಲ್ ಅವರನ್ನು ಅಗಲಿದ್ದಾರೆ.


ಕೊರಗಪ್ಪ ಶೆಟ್ಟಿ ಉಳಿದೊಟ್ಟು



ಕೊಣಾಜೆ: ಹರೇಕಳ ಗ್ರಾಮದ ಉಳಿದೊಟ್ಟು ನಿವಾಸಿ, ಉಳಿದೊಟ್ಟು ಕೊರಗಪ್ಪ ಶೆಟ್ಟಿ(84) ಅವರು ಅಲ್ಪ ಕಾಲದ ಅನಾರೋಗ್ಯದಿಂದ ಶನಿವಾರ ನಿಧನರಾದರು. ಅವರು ಪತ್ನಿ, ವಿದ್ಯಾರತ್ನ ಆಂಗ್ಲಮಾಧ್ಯಮ ಶಾಲೆಯ ಸ್ಥಾಪಕಾಧ್ಯಕ್ಷ , ಬಿಜೆಪಿ ಮುಖಂಡರಾದ ಉಳಿದೊಟ್ಟು ರವೀಂದ್ರ ಶೆಟ್ಟಿ ಸಹಿತ ಇಬ್ಬರು ಪುತ್ರರನ್ನು ಅಗಲಿದ್ದಾರೆ.

ಕೃಷಿಕರಾಗಿದ್ದ ಅವರು ಸಾಮಾಜಿಕವಾಗಿ ಕೆಲಸ ಕಾರ್ಯದೊಂದಿಗೆ ಅನೇಕ ಸಂಘ ಸಂಸ್ಥೆಗಳಲ್ಲಿ ತೊಡಗಿಸಿಕೊಂಡಿದ್ದರು. ಇವರ ನಿಧನಕ್ಕೆ ವಿಧಾನಸಭಾ ಅಧ್ಯಕ್ಷರಾದ ಯು.ಟಿ.ಖಾದರ್, ಸಂಸದಾದ ಕ್ಯಾ.ಬ್ರಿಜೇಶ್ ಚೌಟ,ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಸದಾಶಿವ ಉಳ್ಳಾಲ, ಜಗದೀಶ್ ಆಳ್ವ ಕುವೆತ್ತಬೈಲ್, ಸಂತೋಷ್ ಕುಮಾರ್ ಬೋಳಿಯಾರ್ ಸೇರಿದಂತೆ ಅನೇಕ ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ

ಸುನಂದ ಆಚಾರ್ಯ



ಉಡುಪಿ: ಇಲ್ಲಿನ ಕಾಡುಬೆಟ್ಟು ವಿದ್ಯಾರಣ್ಯ ರಸ್ತೆ ನಿವಾಸಿ ಸುನಂದ ಆಚಾರ್ಯ (83) ಅಲ್ಪ ಕಾಲದ ಅಸೌಖ್ಯದಿಂದಾಗಿ ಶುಕ್ರವಾರ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಉಡುಪಿಯಲ್ಲಿ ದಶಕಗಳ ಕಾಲದಿಂದ ಪ್ರಸಿದ್ಧಿ ಹೊಂದಿರುವ ಭಾಸ್ಕರ್ ಗ್ಯಾರೇಜ್‌ನ ಮಾಲಕರಾದ ದಿ. ಭಾಸ್ಕರ್ ಆಚಾರ್ಯರ ಪತ್ನಿ ಯಾಗಿದ್ದ ಇವರು ಐವರು ಪುತ್ರರು, 5 ಪುತ್ರಿಯರು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.



ದಕ್ಷಿಣ ಕನ್ನಡ ಜಿಲ್ಲಾ ಆರ್ಮ್ ಕುಸ್ತಿ ಸಂಘದ ಆತಿಥ್ಯದಲ್ಲಿ ರಾಜ್ಯ ಮಟ್ಟದ ರಾಜ್ಯ ಮಟ್ಟದ ಆರ್ಮ್ ಕುಸ್ತಿ ಹಾಗೂ ಪ್ಯಾರಾ ಆರ್ಮ್ ಕುಸ್ತಿ ಚಾಂಪಿಯನ್‌ಶಿಪ್ ನಗರದ ಪುರಭವನದಲ್ಲಿ ಶನಿವಾರ ಆರಂಭಗೊಂಡಿದೆ. ಉದ್ಘಾಟನಾ ಕಾರ್ಯಕ್ರಮದಲ್ಲಿ ಜಿಲ್ಲಾ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಉಪನಿರ್ದೇಶಕ ಪ್ರದೀಪ್ ಡಿಸೋಜ, ಎಂಸಿಸಿ ಬ್ಯಾಂಕ್ ಅಧ್ಯಕ್ಷ ಅನಿಲ್ ಲೋಬೊ, ನಿವೃತ್ತ ಡಿವೈಎಸ್‌ಪಿ ವೆಲಂಟೈನ್ ಡಿಸೋಜ, ಕುಸ್ತಿ ಸಂಘದ ಅಧ್ಯಕ್ಷ ಸುನಿಲ್ ಕ್ಸೇವಿಯರ್, ಕಾರ್ಯದರ್ಶಿ ರೇಮಂಡ್ ಡಿಸೋಜ, ಉಪ ಕಾರ್ಯದರ್ಶಿಗಳಾದ ರೇಖಾ ಶೆಟ್ಟಿ, ಗಣೇಶ್ ಕುಲಾಲ್, ಖಜಾಂಚಿ ಸುಜಿತ್ ಕುಮಾರ್, ಕೃಷ್ಣ ಶೆಣೈ, ಸುಜಿತ್ ಕುಮಾರ್, ಆನಂದ್ ಸೋನ್ಸ್ ಉಪಸ್ಥಿತರಿದ್ದರು.

ವಿಷು: 6 ಸ್ಪೆಷಲ್ ರೈಲುಗಳ ಸಂಚಾರ

ಕಾಸರಗೋಡು: ಕಾಸರಗೋಡು ಜಿಲ್ಲೆಯೂ ಸೇರಿದಂತೆ ಕೇರಳೀಯರಿಗೆ ರೈಲ್ವೇ ಇಲಾಖೆಯು ವಿಷು ಹಬ್ಬದ ಕೊಡುಗೆಗಳನ್ನು ನೀಡಿದೆ. ಅದರಂತೆ 6 ಸ್ಪೆಷಲ್ ರೈಲುಗಾಡಿಗಳನ್ನು ವಿಷು ಹಬ್ಬದ ಅಂಗವಾಗಿ ಸಂಚಾರದ ವ್ಯವಸ್ಥೆ ಮಾಡಲಾಗಿದೆ. ಚೆನ್ನೈಯಿಂದ ಮಂಗಳೂರಿಗೆ ಸ್ಪೆಷಲ್ ರೈಲು ಸಂಚಾರ ಆರಂಭಿಸಿದ್ದು, ಈ ರೈಲು ಬುಧವಾರ ರಾತ್ರಿ 11.55ಕ್ಕೆ ಚೆನ್ನೈ ಸೆಂಟ್ರಲ್ ನಿಲ್ದಾಣದಿಂದ ಹೊರಟು ಗುರುವಾರ ಸಂಜೆ 4 ಗಂಟೆಗೆ ಮಂಗಳೂರು ಜಂಕ್ಷನ್ ರೈಲು ನಿಲ್ದಾಣಕ್ಕೆ ಆಗಮಿಸಿದೆ. ಈ ರೈಲು 06127 ನಂಬ್ರದ ಸ್ಪೆಷಲ್ ರೈಲಾಗಿ ಸಂಚಾರ ನಡೆಸುತ್ತಿದೆ.

ಮಂಗಳೂರು ಜಂಕ್ಷನ್ - ಚೆನ್ನೈ ಎಗ್ಮೋರ್ 06128 ನಂಬ್ರದ ಸ್ಪೆಷಲ್ ರೈಲು ಸಂಚಾರವು ಗುರುವಾರ ರಾತ್ರಿ 8 ಗಂಟೆಗೆ ಮಂಗಳೂರು ಜಂಕ್ಷನ್‌ನಿಂದ ಹೊರಟು ಏ. 10ರಂದು ಮಧ್ಯಾಹ್ನ 12.30ಕ್ಕೆ ಚೆನ್ನೈ ಎಗ್ಮೋರ್‌ಗೆ ತಲುಪಲಿದೆ. ಪಾಲಕ್ಕಾಡು-ಶೋರ್ನೂರು-ತಿರೂರು -ಕಲ್ಲಿಕೋಟೆ-ವಡಗ'ರ-ತಲಶ್ಶೇರಿ-ಕಣ್ಣೂರು - ಪಯ್ಯನ್ನೂರು - ಕಾಞಂಗಾಡು - ಕಾಸರಗೋಡು ಮೊದಲಾದ ರೈಲು ನಿಲ್ದಾಣಗಳಲ್ಲಿ ಈ ರೈಲು ನಿಲುಗಡೆಗೆ ವ್ಯವಸ್ಥೆ ಏರ್ಪಡಿಸಲಾಗಿದೆ.

ಏ.10ರಂದು ಚೆನ್ನೈ ಎಗ್ಮೋರ್ - ಮಂಗಳೂರು ಸೆಂಟ್ರಲ್ ರೂಟ್‌ನಲ್ಲಿ 06153 ನಂಬ್ರದ ಸ್ಪೆಷಲ್ ರೈಲುಓಡಾಟ ನಡೆಸಲಿದ್ದು, ಅಪರಾಹ್ನ 2.30ಕ್ಕೆ ಚೆನ್ನೈ ಎಗ್ಮೋರ್‌ನಿಂದ ಸಂಚಾರ ಆರಂಭಿಸಲಿದೆ. ಈ ರೈಲು ಕಾಞಂಗಾಡು ಮತ್ತು ಕಾಸರಗೋಡಿನಲ್ಲಿ ನಿಲುಗಡೆಗೆ ವ್ಯವಸ್ಥೆ ಕೈಗೊಳ್ಳಲಾಗಿದೆ.

ಏ.11ರಂದು ಮಂಗಳೂರು ಜಂಕ್ಷನ್‌ನಿಂದ ತಿರುವನಂತಪುರ ನಾರ್ತ್‌ಗೆ 06041 ನಂಬ್ರದ ಸ್ಪೆಷಲ್ ರೈಲು ಸಂಚಾರ ಏರ್ಪಡಿಸಲಾಗಿದೆ. ಮಂಗಳೂರು ಜಂಕ್ಷನ್‌ನಿಂದ ಸಂಜೆ 6 ಗಂಟೆಗೆ ಹೊರಡುವ ಈ ರೈಲು ಮರುದಿನ ಬೆಳಗ್ಗೆ 6.30ಕ್ಕೆ ತಿರುವನಂತಪುರ ನಾರ್ತ್‌ಗೆ ತಲುಪಲಿದೆ. ಈ ರೈಲಿಗೂ ಕಾಸರಗೋಡು ಮತ್ತು ಕಾಞಂಗಾಡು ನಿಲ್ದಾಣಗಳಲ್ಲಿ ನಿಲುಗಡೆ ಮಂಜೂರು ಮಾಡಲಾಗಿದೆ.

ಏ.12ರಂದು ತಿರುವನಂತಪುರ ನಾರ್ತ್ - ಮಂಗಳೂರು ಜಂಕ್ಷನ್ 06042 ನಂಬ್ರದ ಸ್ಪೆಷಲ್ ರೈಲು ಸಂಚಾರ ಆರಂಭಗೊಳ್ಳಲಿದೆ. ಏ.15ರಂದು ಮಂಗಳೂರು ಸೆಂಟ್ರಲ್‌ನಿಂದ ಚೆನ್ನೈ ಎಗ್ಮೋರ್‌ಗೆ ರೈಲು ಸಂಚಾರ ನಡೆಯಲಿದ್ದು, ಸಂಜೆ 4 ಗಂಟೆಗೆ ಮಂಗಳೂರು ಸೆಂಟ್ರಲ್‌ನಿಂದ ಹೊರಡುವ ಈ ರೈಲು ಮರುದಿನ ಬೆಳಗ್ಗೆ 10.45ಕ್ಕೆ ಎಗ್ಮೋರ್‌ಗೆ ತಲುಪಲಿದೆ.

ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಒಪರೇಟಿವ್ ಸೊಸೈಟಿ
ರೂ.1305 ಕೋಟಿ ವ್ಯವಹಾರ

ಮಂಗಳೂರು: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಕಾರ್ಯವ್ಯಾಪ್ತಿಯಲ್ಲಿ 29 ಶಾಖೆಗಳು ಹಾಗೂ 2 ವಿಸ್ತರಣಾ ಕೌಂಟರ್‌ಗಳೊಂದಿಗೆ, ವಿಸ್ತೃತ ಸೇವಾ ಜಾಲವನ್ನು ಹೊಂದಿ ಕಳೆದ 32 ವರ್ಷಗಳಿಂದ ಯಶಸ್ವಿಯಾಗಿ ಕಾರ್ಯಾಚರಿಸುತ್ತಿರುವ ರಾಜ್ಯದ ಅಗ್ರಗಣ್ಯ ಕ್ರೆಡಿಟ್ ಕೋ-ಒಪರೇಟಿವ್ ಸೊಸೈಟಿಗಳಲ್ಲಿ ಒಂದಾದ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಒಪರೇಟಿವ್ ಸೊಸೈಟಿ 2025-26ನೇ ಸಾಲಿನಲ್ಲಿ ಒಟ್ಟು ವ್ಯವಹಾರದಲ್ಲಿ ಸಾರ್ವಕಾಲಿಕ ದಾಖಲೆಯವೃದ್ಧಿಯನ್ನುಹೊಂದಿ 31.03.2026ಕ್ಕೆ ಠೇವಣಾತಿ ರೂ.695 ಕೋಟಿ ಹಾಗೂ ಸಾಲ ರೂ.610 ಕೋಟಿಯೊಂದಿಗೆ ಒಟ್ಟು ವ್ಯವಹಾರ ರೂ.1305 ಕೋಟಿಯನ್ನು ತಲುಪಿ, ರೂ.5901 ಕೋಟಿ ಒಟ್ಟು ವಹಿವಾಟು ದಾಖಲಿಸಿ ತನ್ನ ಎಲ್ಲಾ ಕಾರ್ಯವಿಭಾಗಗಳಲ್ಲಿ ನಿಗದಿತ ಗುರಿಯನ್ನು ಮೀರಿ ಅಮೋಘ ಸಾಧನೆ ಮಾಡಿದೆ.



ಹಿಂದಿನಸಾಲಿಗೆಹೋಲಿಸಿದಾಗಪ್ರಸ್ತುತ ಸಾಲಿನಲ್ಲಿ ಠೇವಣಾತಿಯಲ್ಲಿ ರೂ.106 ಕೋಟಿ ಹೆಚ್ಚಳ ಶೇ.18 ವೃದ್ಧಿ ಹಾಗೂ ಸಾಲದಲ್ಲಿ ರೂ. 105 ಕೋಟಿ ಹೆಚ್ಚಳ, ಶೇ. 21 ವೃದ್ಧಿ, ಒಟ್ಟು ವ್ಯವಹಾರದಲ್ಲಿ ರೂ. 211 ಕೋಟಿಯಾಗಿ ಸಾರ್ವಕಾಲಿಕ ದಾಖಲೆಯ ಹೆಚ್ಚಳದೊಂದಿಗೆ ಶೇ. 19 ವಾರ್ಷಿಕ ವೃದ್ಧಿಯೊಂದಿಗೆ ಒಟ್ಟು ವ್ಯವಹಾರವು ರೂ.1305 ಕೋಟಿ ತಲುಪಿದ್ದು ಸಂಘದ ವಿಷನ್ 2030ರ ರೂ. 2000 ಕೋಟಿ ಒಟ್ಟು ವ್ಯವಹಾರದ ಗುರಿಯನ್ನು ಸಾಧಿಸುವತ್ತ ದೃಢ ಹೆಜ್ಜೆಯೊಂದಿಗೆ ಮುನ್ನಡೆಯುತ್ತಿದೆ.

31.03.2026ಕ್ಕೆ ಸಂಘವು ರೂ.19.35 ಕೋಟಿಯನ್ನು ಮೀರಿದ ನಿವ್ವಳ ಲಾಭ ಗಳಿಸಿದ್ದು ಇದು ಕಳೆದ ಸಾಲಿಗಿಂತ ರೂ.3 ಕೋಟಿಯಷ್ಟು ಹೆಚ್ಚಳದೊಂದಿಗೆ ಶೇ.19 ವೃದ್ಧಿಯಾದೆ. ಸಂಘವು ಕಳೆದ 7 ವರ್ಷಗಳಿಂದ ಸತತವಾಗಿ ಶೇ.25 ಡಿವಿಡೆಂಡ್‌ನ್ನು ಸದಸ್ಯರಿಗೆ ನೀಡುತ್ತಾ ಬಂದಿದೆ. 2030ಕ್ಕೆ ರೂ.25 ಕೋಟಿ ನಿವ್ವಳ ಲಾಭ ಗಳಿಸುವ ಗುರಿಯನ್ನು ಹೊಂದಿದೆ.

ಸಂಘದಲ್ಲಿ 31.03.2026ಕ್ಕೆ ರೂ.22 ಲಕ್ಷದಷ್ಟು ಮಾತ್ರ ಅನುತ್ಪಾದಕ ಆಸ್ತಿ ಇದ್ದು, ಇದು ಹೊರಬಾಕಿ ಸಾಲದ ಶೇ.0.04ಕ್ಕೆ ಸೀಮಿತವಾಗಿರುವುದಲ್ಲದೆ ಸಂಘವು ಕೆಟ್ಟ ಮತ್ತು ಅನುತ್ಪಾದಕ ಸಾಲಕ್ಕೆ ಈಗಾಗಲೇ ರೂ.5 ಕೋಟಿಯಷ್ಟು ನಿಧಿಯನ್ನು ಅನುವು ಮಾಡಿಕೊಂಡಿದ್ದು ಸಂಘದ ನಿವ್ವಳ ಅನುತ್ಪಾದಕ ಆಸ್ತಿಯು ಕಳೆದ 19 ವರ್ಷದಿಂದ ಶೂನ್ಯ ಪ್ರಮಾಣದಲ್ಲಿದೆ.

ಸಂಘದ ಕೇಂದ್ರ ಕಚೇರಿಗೆ 37,000 ಚ.ಅ. ಸುಸಜ್ಜಿತ ಆಧುನಿಕ ಸೌಕರ್ಯವುಳ್ಳ ಸುಸಜ್ಜಿತ ಕಟ್ಟಡದ ಕಾಮಗಾರಿ ಕೊನೆಯ ಹಂತದಲ್ಲಿದ್ದು ಅದನ್ನು ಶೀಘ್ರದಲ್ಲೇ ಲೋಕಾರ್ಪಣೆಗೊಳಿಸಲು ಉದ್ದೇಶಿಸಲಾಗಿದೆ.

ಸಂಘವು ತನ್ನ ಕಾರ್ಯವ್ಯಾಪ್ತಿ ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ 1 ಲಕ್ಷಕ್ಕೂ ಅಧಿಕ ಸಂತೃಪ್ತಠೇವಣಿದಾರ, ಸಾಲಗಾರ ಸದಸ್ಯರುಗಳ ಸಹಕಾರ, ಆಡಳಿತ ಮಂಡಳಿಯ ಸೂಕ್ತ ಮಾರ್ಗದರ್ಶನ ಹಾಗೂ ಸಿಬ್ಬಂದಿಗಳ ಪ್ರಾಮಾಣಿಕತೆ, ಕಾರ್ಯದಕ್ಷತೆಯಿಂದ ತನ್ನ ಎಲ್ಲಾ ಕಾರ್ಯಕ್ಷೇತ್ರದಲ್ಲಿ ಸಾಧನೆಗಳನ್ನು ಮಾಡಿದೆ ಎಂದು ಸಂಘದ ಅಧ್ಯಕ್ಷ ಕೆ. ಜೈರಾಜ್ ಬಿ. ರೈ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

40 ಶಾಖೆ ಹೊಂದುವ ಯೋಜನೆ

2025-26ನೇ ಸಾಲಿನಲ್ಲಿ ಸಂಘವು 4 ಹೊಸ ಶಾಖೆಗಳು ಮತ್ತು2 ವಿಸ್ತರಣಾ ಕೌಂಟರ್ ಗಳನ್ನು ಆರಂಭಿಸಿ ತನ್ನ ಶಾಖಾ ಸೇವಾ ಜಾಲವನ್ನು 31 ಕೇಂದ್ರಗಳಿಗೆ ವಿಸ್ತರಿಸಿದೆ ಹಾಗೂ ಮುಂದಿನ ಸಾಲುಗಳಲ್ಲಿ ಪ್ರತಿ ವರ್ಷ 2 ಹೊಸ ಶಾಖೆಗಳೊಂದಿಗೆ 2030ಕ್ಕೆ ಒಟ್ಟು 40 ಶಾಖೆಯನ್ನು ಹೊಂದುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಹಲವು ಪ್ರಶಸ್ತಿಗಳು

2024ನೇ ಸಾಲಿನಲ್ಲಿ ಮೊದಲ ಬಾರಿಗೆ ಅನುಷ್ಠಾನಿಸಲಾದ ಅವಿಭಜಿತ ದ.ಕ. ಜಿಲ್ಲೆಯಲ್ಲಿ ಸರ್ವಾಂಗೀಣ ಪ್ರಗತಿ ಸಾಧಿಸಿದ ಅತ್ಯುತ್ತಮ ಕ್ರೆಡಿಟ್ ಸಹಕಾರ ಸಂಘಕ್ಕೆ ನೀಡಲಾಗುವ 'ಸಹಕಾರ ಮಾಣಿಕ್ಯ' ಪ್ರಶಸ್ತಿ ಹಾಗೂ ರೂ. 1000 ಕೋಟಿ ಒಟ್ಟು ವ್ಯವಹಾರವನ್ನು ದಾಖಲಿಸಿದ ಸಾಧನೆಗಾಗಿ ಎಸ್‌ಸಿಡಿಸಿಸಿ ಬ್ಯಾಂಕ್‌ನ ಮಹಾಸಭೆಯಲ್ಲಿ 'ವಿಶೇಷ ಗೌರವ' ಪ್ರಶಸ್ತಿ ಸೇರಿದಂತೆ ಸಹಕಾರ ಇಲಾಖೆಯಿಂದ ಒಟ್ಟು 7 ಬಾರಿರಾಜ್ಯ ಮಟ್ಟದ ಹಾಗೂ ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್‌ನಿಂದ ಒಟ್ಟು 14 ಬಾರಿ ಜಿಲ್ಲಾ ಮಟ್ಟದ ಅತ್ಯುತ್ತಮ ಕ್ರೆಡಿಟ್ ಕೋ-ಒಪರೇಟಿವ್ ಸಂಘ ಪ್ರಶಸ್ತಿ ದೊರೆತಿದೆ.

ಮೂಡುಬಿದಿರೆಯಲ್ಲಿಂದು ಜಿ.ಎಲ್. ಆಚಾರ್ಯ ಜುವೆಲರ್ಸ್ ನೂತನ ವಿಶಾಲ ಮಳಿಗೆ ಉದ್ಘಾಟನೆ

ಮೂಡುಬಿದಿರೆ : ಪುತ್ತೂರಿನ ಹೆಸರಾಂತ ಹಾಗೂ ದಕ್ಷಿಣ ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ಚಿನ್ನಾಭರಣ ಸಂಸ್ಥೆ ಜಿ ಎಲ್ ಆಚಾರ್ಯ ಜುವೆಲರ್ಸ್ 5ನೇ ಶಾಖೆ ಮೂಡುಬಿದಿರೆಯಲ್ಲಿ 2024ರಲ್ಲಿ ಶುಭಾರಂಭಗೊಂಡಿತ್ತು. ಈಗ ತನ್ನ ನವೀಕೃತ ನೂತನ ಶಾಖೆಯು ಮೂಡುಬಿದಿರೆಯ ನವಮಿ ಪ್ಲಾಝಾ ಬಸ್ ಸ್ಟ್ಯಾಂಡ್ ಎದುರಿಗೆ, ಮುಖ್ಯರಸ್ತೆಗೆ ಸ್ಥಳಾಂತರಗೊಂಡಿದೆ.

ಈ ನೂತನ ವಿಶಾಲ ಮಳಿಗೆಯ ಉದ್ಘಾಟನೆ ಏ.12ರಂದು ಬೆಳಗ್ಗೆ 10.30ಕ್ಕೆ ನೆರವೇರಲಿದೆ. ಶಾಸಕ ಉಮಾನಾಥ್ ಕೋಟ್ಯಾನ್, ಮಾಜಿ ಸಚಿವ ಅಭಯಚಂದ್ರ ಜೈನ್, ಆಳ್ವಾಸ್ ಎಜುಕೇಶನ್ ಟ್ರಸ್ಟ್ ಸ್ಥಾಪಕಾಧ್ಯಕ್ಷ ಮೋಹನ್ ಆಳ್ವ, ಮೂಡುಬಿದಿರೆಯ ಶ್ರೀ ಧನಲಕ್ಷ್ಮೀ ಕ್ಯಾಶ್ಯೂ ಎಕ್ಸ್‌ಪೋರ್ಟ್ಸ್‌ನ ಶ್ರೀಪತಿ ಭಟ್, ಚೌಟರ ಅರಮನೆಯ ಕುಲದೀಪ್ ಎಂ., ನವಮಿ ಗ್ರೂಪ್ ಆಡಳಿತ ನಿರ್ದೇಶಕ ನಂದಕುಮಾರ್ ಕುಡ್ವ ಆಗಮಿಸಲಿದ್ದಾರೆ ಎಂದು ಸಂಸ್ಥೆಯ ಚೇರ್ಮನ್ ಜಿ.ಎಲ್.ಬಲರಾಮ್ ಆಚಾರ್ಯ, ನಿರ್ದೇಶಕರಾದ ಲಕ್ಷ್ಮಿಕಾಂತ್ ಬಿ.ಆಚಾರ್ಯ, ಸುಧನ್ವ ಬಿ.ಆಚಾರ್ಯ ತಿಳಿಸಿದ್ದಾರೆ.

ಜಿ ಎಲ್ ಆಚಾರ್ಯ ಜ್ಯುವೆಲ್ಲರ್ಸ್

ವಿಶೇಷ ಕೊಡುಗೆ

ನೂತನ ಮಳಿಗೆಯ ಉದ್ಘಾಟನೆ ಸಲುವಾಗಿ ಎ.12ರಿಂದ 20ರವರೆಗೆ ಗ್ರಾಹಕರಿಗಾಗಿ ವಿಶೇಷ ಕೊಡುಗೆಗಳು ಲಭ್ಯವಿವೆ. 10 ಗ್ರಾಂ ಚಿನ್ನಾಭರಣಗಳ ಮೇಲೆ 5,000ರೂ. ರಿಯಾಯಿತಿ, ಬೆಳ್ಳಿ ಆಭರಣಗಳ ಮೇಲೆ ಪ್ರತೀ ಕೆ.ಜಿ.ಗೆ 6,000 ರೂ.ರಿಯಾಯಿತಿ, ವಜ್ರದ ಆಭರಣಗಳ ಮೇಲೆ ಪ್ರತೀ ಕ್ಯಾರಟ್‌ಗೆ 7,000 ರೂ. ರಿಯಾಯಿತಿ ನೀಡಲಾಗುತ್ತಿದೆ.

ಈ ನೂತನ ಮಳಿಗೆಯಲ್ಲಿ ಸಾಂಪ್ರದಾಯಿಕ ಹಾಗೂ ಆಧುನಿಕ ವಿನ್ಯಾಸಗಳ ಚಿನ್ನಾಭರಣಗಳು, ಬೆಳ್ಳಿ ಮತ್ತು ವಜ್ರಾಭರಣಗಳ ವೈವಿಧ್ಯಮಯ ಸಂಗ್ರಹ ಲಭ್ಯವಿದ್ದು, ಎಲ್ಲ ವಯೋಮಾನದ ಗ್ರಾಹಕರ ಅಗತ್ಯಗಳಿಗೆ ತಕ್ಕಂತೆ ವಿನ್ಯಾಸಗೊಳಿಸಲಾಗಿದೆ. ಸಮಾಜದ ಎಲ್ಲಾ ವರ್ಗದ ಜನರ ಅಭಿರುಚಿಗೆ ತಕ್ಕಂತೆ ಚಿನ್ನ,ಬೆಳ್ಳಿ ಮತ್ತು ವಜ್ರಾಭರಣಗಳ ವಿನೂತನ ಕಲೆಕ್ಷನ್‌ಗಳು ಇಲ್ಲಿ ಲಭ್ಯವಿದೆ. ವಿಶಾಲವಾದ ಪ್ರದರ್ಶನ ವ್ಯವಸ್ಥೆ, ಸುಸಜ್ಜಿತ ಒಳಾಂಗಣ ವಿನ್ಯಾಸ ಮತ್ತು ಅತ್ಯಾಧುನಿಕ ಭದ್ರತಾ ವ್ಯವಸ್ಥೆಗಳು ಶೋರೂಂನ ಪ್ರಮುಖ ವೈಶಿಷ್ಟ್ಯಗಳಾಗಿವೆ. ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಸಂಸ್ಥೆಯ ಪ್ರಕಟನೆ ತಿಳಿಸಿದೆ.

ಎಕ್ಸೆಲ್ ಕಾಲೇಜು ಅಧ್ಯಕ್ಷ ಸುಮಂತ್ ಕುಮಾರ್ ಜೈನ್ ಜನ್ಮದಿನಾಚರಣೆ
ಸರಸ್ವತೀ ಗೋ ಮಂದಿರ ಲೋಕಾರ್ಪಣೆ



ಗುರುವಾಯನಕೆರೆ: ಹಲವುಶೈಕ್ಷಣಿಕ ದಾಖಲೆಗಳ ಮೂಲಕ ರಾಜ್ಯ-ರಾಷ್ಟ್ರ ಮಟ್ಟದಲ್ಲಿ ಹೆಸರುವಾಸಿಯಾದ ಗುರುವಾಯನಕೆರೆ ಎಕ್ಸೆಲ್ ವಿದ್ಯಾ ಸಂಸ್ಥೆಗಳ ಆಡಳಿತ ಮಂಡಳಿಯ ಅಧ್ಯಕ್ಷ ಸುಮಂತ್ ಕುಮಾರ್ ಜೈನ್ ಅವರ ಜನ್ಮ ದಿನಾಚರಣೆಯ ಪ್ರಯುಕ್ತ ಎಕ್ಸೆಲ್ ಕಾಲೇಜಿನ ವಿದ್ಯಾ ಸಾಗರ ಕ್ಯಾಂಪಸ್‌ನಲ್ಲಿ ಸರಸ್ವತಿ ಗೋ ಮಂದಿರ ಲೋಕಾರ್ಪಣೆ ಮಾಡಲಾಯಿತು.

ದೇಸಿಯ ಮಲೆನಾಡು ಗಿಡ್ಡ ತಳಿಯ ಹಸು ಕರುಗಳನ್ನು ಸಾಕಿ ಬೆಳೆಸುವ ಬಗ್ಗೆ ಈ ಸಂದರ್ಭದಲ್ಲಿ ತೀರ್ಮಾನಿಸಲಾಯಿತು.

ಗೋ ಮಂದಿರವನ್ನು ಲೋಕಾರ್ಪಣೆ ಮಾಡಿದ ಮಲೆನಾಡು ಗಿಡ್ಡ ತಳಿಗಳ ಸಂರಕ್ಷಣೆ ಹಾಗೂ ಸಂವರ್ಧನಾ ಅಭಿಯಾನದ ಸಂಘಟಕರಾದ ಅಕ್ಷಯ ಆಳ್ವ ಅವರು, ದೇಸಿ ತಳಿ ಗೋವುಗಳ ಸಂರಕ್ಷಣೆ ಭಾರತೀಯರಾದ ನಮ್ಮ ಆದ್ಯ ಕರ್ತವ್ಯ ಎಂದರು.

ಮುಖ್ಯ ಅತಿಥಿಗಳಾದ ವಿಶ್ರಾಂತ ಪಶು ವೈದ್ಯಾಧಿಕಾರಿ ಆನಂದ ಶೆಟ್ಟಿ ಅವರು ಹಾಗೂ ಮಂಗಳೂರು ಜನತಾ ಬಜಾರ್‌ನ ಅಧ್ಯಕ್ಷ ಕೆ. ಪ್ರಸನ್ನ ಭಟ್ ಅವರು ಶುಭಾಶಂಸನೆ ಮಾಡಿದರು.

ಅಧ್ಯಕ್ಷರಾದ ಸುಮಂತ್ ಕುಮಾರ್ ಜೈನ್ ಅವರು ಮಾತನಾಡಿ, ಕೃಷಿ ಕುಟುಂಬದಿಂದ ಬಂದ ನಾನು ಹೈನುಗಾರಿಕೆಯನ್ನು ಬಹಳವಾಗಿ ಇಷ್ಟ ಪಟ್ಟವನು. ಇದೀಗ ಮಲೆನಾಡು ಗಿಡ್ಡ ಹಸುಗಳನ್ನೇ ನಮ್ಮ ಕ್ಯಾಂಪಸ್‌ನಲ್ಲಿ ಸಾಕಿ ಬೆಳೆಸುತ್ತೇವೆ ಎಂದರು.

ಪ್ರಾಂಶುಪಾಲಡಾ.ನವೀನ್‌ಕುಮಾರ್ ಮರಿಕೆ ಸ್ವಾಗತಿಸಿದರು. ಉಪನ್ಯಾಸಕಿ ಅನನ್ಯ ಜೈನ್ ನಿರೂಪಿಸಿದರು. ಅರಮಲೆ ಬೆಟ್ಟ ಕ್ಯಾಂಪಸ್‌ನ ಪ್ರಾಚಾರ್ಯ ಡಾ. ಪ್ರಜ್ವಲ್ ಕಜೆ ವಂದಿಸಿದರು.

ಶಕ್ತಿ ಕ್ಯಾನ್ ಕ್ರಿಯೇಟ್ -2026ರ ಬೇಸಿಗೆ ಶಿಬಿರದ ಸಮಾರೋಪ
ಬೇಸಿಗೆ ಶಿಬಿರಕ್ಕೆ 100+ ಮಕ್ಕಳು!

ಮಂಗಳೂರು: ಶಕ್ತಿನಗರದ ಶಕ್ತಿ ರೆಸಿಡೆನ್ಶಿಯಲ್ ಶಾಲೆಯಲ್ಲಿ 10 ದಿನಗಳಿಂದ ನಡೆಯುತ್ತಿರುವ ಶಕ್ತಿ ಕ್ಯಾನ್ ಕ್ರಿಯೇಟ್ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭವು ಶನಿವಾರ ನಡೆಯಿತು.

ಈ ಬೇಸಿಗೆ ಶಿಬಿರದಲ್ಲಿ ಮ್ಯಾಜಿಕ್, ಮಡಿಕೆ ತಯಾರಿಕೆ, ಚಲನಚಿತ್ರದ ವಿಕ್ಷಣೆ, ಪೈಜಾಮ ಪಾರ್ಟಿ, ಬೆಂಕಿ ಇಲ್ಲದೆ ಅಡುಗೆ, ಕಥೆ ಹೇಳುವುದು, ಆರೋಗ್ಯ ಮತ್ತು ನೈರ್ಮಲ್ಯ, ವಾಟರ್ ಸ್ಪ್ಲಾಶ್ ಪಾರ್ಟಿ, ತೋಟಗಾರಿಕೆ, ನೃತ್ಯ, ಜುಂಬಾ, ಈಜು, ಆಟೋಟ, ನಾಟಕ, ಗಾಳಿಪಟ ಹಾರಾಟ, ಬಾಟಲ್ ಪೆಯಿಟಿಂಗ್ ಸೇರಿದಂತೆ ಕಲೆ ಮತ್ತು ಸಂಸ್ಕೃತಿಯನ್ನು ಬಿಂಬಿಸುವ ಅನೇಕ ಕಾರ್ಯಕ್ರಮವನ್ನು ಈ 10 ದಿನದಲ್ಲಿ ಆಯೋಜಿಸಲಾಗಿತ್ತು. ಇದರ ಜೊತೆ ತಣ್ಣೀರುಬಾವಿ ಸಮುದ್ರ ತೀರಕ್ಕೆ ಮಕ್ಕಳ ಭೇಟಿ ನಡೆಯಿತು.

ಈ ಬೇಸಿಗೆ ಶಿಬಿರದಲ್ಲಿ ಸುಮಾರು 100ಕ್ಕಿಂತಲೂ ಹೆಚ್ಚಿನ ವಿದ್ಯಾರ್ಥಿಗಳು ಭಾಗವಹಿಸಿದ್ದು, ಎಲ್ಲ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರವನ್ನು ವಿತರಿಸಲಾಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಸಮರೋಪ ಭಾಷಣ ಮಾಡಿದ ಸಂಸ್ಥೆಯ ಪ್ರಧಾನ ಸಲಹೆಗಾರ ರಮೇಶ ಕೆ.ರವರು



ನಾವು 7 ವರ್ಷಗಳಿಂದ ಇಂತಹ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಿಕೊಂಡು ಬರುತ್ತಿದ್ದೇವೆ. ಈ ಕಾರ್ಯಕ್ರಮವು ಯಶಸ್ವಿಯಾಗಿ ಮೂಡಿಬರಲು ನಮ್ಮ ಸಂಸ್ಥೆಯ ಶಿಕ್ಷಕ ಶಿಕ್ಷಕೇತರ ಸಿಬ್ಬಂದಿಗಳು ಮಹತ್ತರವಾದ ಶ್ರಮವನ್ನು ವಹಿಸಿರುವುದನ್ನು ಈ ಸಂದರ್ಭದಲ್ಲಿ ಶ್ಲಾಘಿಸಿದರು. ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಯನ್ನು ಅನಾವರಣಗೊಳಿಸುವಲ್ಲಿ ಇದೊಂದು ಉತ್ತಮವಾದ ವೇದಿಕೆಯಾಗಿ ಶಕ್ತಿ ಕ್ಯಾನ್ ಕ್ರಿಯೇಟ್ ಮೂಡಿಬಂದಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಅಧ್ಯಕ್ಷೀಯ ಭಾಷಣ ಮಾಡಿದ ಸಂಸ್ಥೆಯ ಸಂಸ್ಥಾಪಕ ಡಾ.ಕೆ.ಸಿ. ನ್ಯಾಕ್ ಬೇಸಿಗೆ ಶಿಬಿರದಲ್ಲಿ ವಿದ್ಯಾರ್ಥಿಗಳ ಸಕ್ರಿಯ ಚಟುವಟಿಕೆಯನ್ನು ನೋಡಿ ಸಂತೋಷವಾಯಿತು. ಇದರ ಯಶಸ್ಸಿಗೆ ಶ್ರಮಿಸಿದ ಎಲ್ಲ ಶಿಕ್ಷಕರಿಗೂ ಪೋಷಕರಿಗೂ ಧನ್ಯವಾದಗಳು ಎಂದರು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಈಜು ಸ್ಪರ್ಧೆಯ ಬ್ರೇಕ್ ಸ್ಟ್ರೋಕ್‌ನಲ್ಲಿ ಭಾಗವಹಿಸಿ ಪ್ರಥಮ ಸ್ಥಾನವನ್ನು ಪಡೆದ ಶಕ್ತಿ ವಸತಿ ಶಾಲೆಯ ಒಂದನೇ ತರಗತಿಯ ವಿದ್ಯಾರ್ಥಿನಿ ಶ್ಲೋಕರಾಮ್ ಅವರನ್ನು ಸನ್ಮಾನಿಸಲಾಯಿತು. ಶಿಬಿರದ ಸಂಯೋಜಕಿ ಸುಷ್ಮಾ ಸತೀಶ್ ಶಿಬಿರದ ಚಟುವಟಿಕೆಯ ವರದಿ ಮಂಡಿಸಿದರು. ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿಯಾದ ಕ್ಯಾಪ್ಟನ್ ಲಕ್ಷ್ಮೀಕಾಂತ್ ಕಾಮತ್ ಉಪಸ್ಥಿತರಿದ್ದರು. ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. 6ನೇ ತರಗತಿಯ ವಿದ್ಯಾರ್ಥಿನಿ ವೃಷ್ಟಿ ಪಿ. ಕಾರ್ಯಕ್ರಮ ನಿರೂಪಿಸಿದರು.


ಪುತ್ತೂರಿನ ಆಕಾಂಕ್ಷ ಚಾರಿಟೇಬಲ್ ಟ್ರಸ್ಟ್ ಸಾರಥ್ಯ । ಗೋಡೆಯ ಮೇಲೆ ಅರಳಿದೆ ಯಕ್ಷಗಾನ, ಮೀನುಗಾರಿಕೆ, ಪ್ರಾಣಿ, ಪಕ್ಷಿಗಳ ಆಕರ್ಷಕ ಚಿತ್ರ
ಸುಳ್ಯ ತಾಲೂಕಿನ ಮಂಡೆಕೋಲು ಶಾಲೆ, ಗ್ರಂಥಾಲಯಕ್ಕೆ ಹೊಸ ಲುಕ್!

ಮಿಥುನ್ ಕರ್ಲಪ್ಪಾಡಿ

ಸುಳ್ಯ: ಪುತ್ತೂರಿನ ಆಕಾಂಕ್ಷ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಸುಳ್ಯ ತಾಲೂಕಿನ ಗಡಿ ಗ್ರಾಮವಾದ ಮಂಡೆಕೋಲು ಶಾಲೆ ಹಾಗೂ ಸಾರ್ವಜನಿಕ ಗ್ರಂಥಾಲಯದಲ್ಲಿ ಸಮಾಜ ಸೇವಾ ಮನೋಭಾವದಲ್ಲಿ ವರ್ಣಮಯ ಚಿತ್ರಗಳ ರಚನೆ ನಡೆದಿದ್ದು, ಜನಮನ ಸೆಳೆಯುತ್ತಿದೆ.

ಮಂಡೆಕೋಲು ಗ್ರಂಥಾಲಯದಲ್ಲಿ ಹಾಗೂ ಶಾಲೆಗಳಲ್ಲಿ ಶಿಕ್ಷಣಕ್ಕೆ ಪೂರಕವಾದ ಚಿತ್ರಗಳನ್ನು ಗೋಡೆಗಳ ಮೇಲೆ ಬರೆಯಲಾಗಿದ್ದು, ಇದೀಗ ಸಾರ್ವಜನಿಕ ಗ್ರಂಥಾಲಯ ಹಾಗೂ ಶಾಲೆಗಳು ಮಕ್ಕಳು ಮತ್ತು ಸಾರ್ವಜನಿಕರನ್ನು ಕೈ ಬೀಸಿ ಕರೆಯುವಂತಾಗಿದ್ದು ಇಲ್ಲಿ ಕರಾವಳಿಯ ಗಂಡು ಕಲೆ ಯಕ್ಷಗಾನ, ಕರಾವಳಿಯ ಮೀನು ಹಿಡಿಯುವ ಕೆಲಸ, ಪಕ್ಷಿ, ಪ್ರಾಣಿ ಹಾಗೂ ಇತರೆ ಆಕರ್ಷಕ ಚಿತ್ರಗಳನ್ನು ಬರೆಯಲಾಗಿದ್ದು ಜೊತೆಗೆ ಡಿಜಿಟಲೀಕರಣದ ಅರಿವು ಮೂಡಿಸುವ ಚಿತ್ರಗಳಿಗು ಒತ್ತು ನೀಡಲಾಗಿದೆ. ಸರಿ ಸುಮಾರು ರೂ.1 ಲಕ್ಷಕ್ಕೂ ಹೆಚ್ಚಿನ ಮೌಲ್ಯದ ಬಣ್ಣಗಳನ್ನು ಬಳಸಿಕೊಂಡು ನಿರಂತರವಾಗಿ ಎರಡು ದಿನಗಳ ಕಾಲ ಸಾಮಾಜಿಕ ಸೇವೆಯ ರೂಪದಲ್ಲಿ ವಿವೇಕಾನಂದ ಇಂಜಿನಿಯರಿಂಗ್, ಪದವಿ ಕಾಲೇಜಿನ ಉಪನ್ಯಾಸಕರು ಹಾಗೂ ಹಿರಿಯ ವಿದ್ಯಾರ್ಥಿಗಳ ತಂಡ ಈ ಮಹತ್ ಕಾರ್ಯವನ್ನು ನಡೆಸಿದ್ದು ಇದೀಗ ಶಾಲೆ ಹಾಗೂ ಗ್ರಂಥಾಲಯಗಳ ಹೊರಗೆ ಮತ್ತು ಒಳಗೆ ವರ್ಣಮಯವಾದ ಶಿಕ್ಷಣದ ಮಹತ್ವ ತಿಳಿಸುವ ಚಿತ್ರಗಳಿಂದ ತುಂಬಿಕೊಂಡಿವೆ.







ಆಕಾಂಕ್ಷ ಚಾರಿಟೇಬಲ್ ಟ್ರಸ್ಟ್‌ನ ನಾಲ್ಕನೇ ಪ್ರಾಜೆಕ್ಟ್ ಇದಾಗಿದ್ದು, ಇಲ್ಲಿ ಸರಿ ಸುಮಾರು 100ಕ್ಕೂ ಅಕ ಮಂದಿ ಈ ಕೆಲಸಗಳನ್ನು ನಿರ್ವಹಿಸಿದ್ದಾರೆ. ಆಕಾಂಕ್ಷ ಚಾರಿಟೇಬಲ್ ಟ್ರಸ್ಟ್‌ನ ಸ್ಥಾಪಕ ಡಾ. ಶ್ರೀಶಾ ಭಟ್, ನಿರ್ದೇಶಕ ಹೇಮಂತ್ ಹಾಗೂ ಚಿತ್ರ ರಚಣೆಗಳ ಕೋ ಆಡಿನೇಟರ್ ಕೃಷ್ಣಪ್ರಸಾದ್ ನೇತೃತ್ವದಲ್ಲಿ ಈ ಚಿತ್ರಗಳ ರಚನೆ ಕಾರ್ಯ ನಡೆದಿದೆ.

ಗ್ರಂಥಾಲಯ ಹಾಗೂ ಶಾಲೆಯ ಪರವಾಗಿ ಮಂಡೆಕೋಲುಪ್ರಾಥಮಿಕಕೃಷಿಪತ್ತಿನಸಹಕಾರಿ ಸಂಘದ ಕಾರ್ಯನಿರ್ವಾಹಣಾಧಿಕಾರಿ ಉದಯ ಕುಮಾರ್ ಹಾಗೂ ಗ್ರಂಥಾಲಯ ಮೇಲ್ವಿಚಾರಕಿ ಸಾವಿತ್ರಿ ಕಣೆಮರಡ್ಕ ಗೌರವಿಸಿದರು.

ಕಾರ್ಯವು ನಮಗೆ ಹೆಮ್ಮೆ

ಹಳ್ಳಿಯ ಮಕ್ಕಳನ್ನು ಬೆಳೆಸುವ ನಿಟ್ಟಿನಲ್ಲಿ ಆಕಾಂಕ್ಷ ಚಾರಿಟಬಲ್ ಟ್ರಸ್ಟ್ ಎರಡು ದಿನಗಳಲ್ಲಿ 20ಕ್ಕೂ ಅಧಿಕ ಚಿತ್ರಗಳನ್ನು ಕಲೆ, ಶಿಕ್ಷಣ, ಗಣ್ಯ ವ್ಯಕ್ತಿಗಳ ಚಿತ್ರ ರಚನೆಯ ಶಿಕ್ಷಣಕ್ಕೆ ಉತ್ತೇಜನ ನಿಟ್ಟಿನಲ್ಲಿ ರಚಿಸಲಾಗಿದ್ದು, ಹವ್ಯಾಸಿ ಚಿತ್ರಕಾರರ ಮೂಲಕ ಮಾಡಲಾಗುತ್ತಿದೆ. ತಂಡದಲ್ಲಿ ಇಂಜಿನಿಯರ್, ವಾಣಿಜ್ಯ ವಿಭಾಗ, ಭೌತಶಾಸ್ತ್ರ ವಿಭಾಗ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಸಹಕಾರದೊಂದಿಗೆ ಚಿತ್ರಗಳನ್ನು ರಚಿಸಲಾಗಿದ್ದು, ಗಡಿ ಗ್ರಾಮದಲ್ಲಿ ನಡೆಸಿದ ಈ ಕಾರ್ಯವು ನಮಗೆ ಹೆಮ್ಮೆಯಾಗುತ್ತಿದೆ ಎಂದು ಕೋ ಆಡಿನೇಟರ್ ಕೃಷ್ಣಪ್ರಸಾದ್ ಹೇಳುತ್ತಾರೆ.

ಹೈದರಾಬಾದ್ ವಿರುದ್ಧ 6 ವಿಕೆಟ್‌ಗಳ ಜಯ | ಅಭಿಷೇಕ್ ಹೋರಾಟ ವ್ಯರ್ಥ

ಪಂಜಾಬ್‌ಗೆ ಗೆಲುವಿನ ಶ್ರೇಯಸ್ಸು

ಚಂಡೀಗಢ: ಗೆಲುವಿನ ಹಾದಿ ಹಿಡಿದಿರುವ ಪಂಜಾಬ್ ಕಿಂಗ್ಸ್ ತಂಡವು ಕಳೆದ ಬಾರಿಯಂತೆ ಈ ಬಾರಿಯೂ ಅತ್ಯುತ್ತಮ ಪ್ರದರ್ಶನ ನೀಡುತ್ತಿದ್ದು, ಹೈದರಾಬಾದ್ ತಂಡದ ವಿರುದ್ಧ ಜಯಭೇರಿ ಬಾರಿಸಿದೆ.

ಶ್ರೇಯಸ್ ಅಯ್ಯರ್ ಅವರ ನಾಯಕತ್ವ ಮತ್ತು ಬ್ಯಾಟಿಂಗ್ ಜೊತೆಗೆ ಪಂಜಾಬ್ ತಂಡದ ಆರಂಭಿಕರ ಆರ್ಭಟದ ಮುಂದೆ ಹೈದರಾಬಾದ್ ಆಟ ನಡೆಯಲೇ ಇಲ್ಲ. ಮೂರು ಪಂದ್ಯಗಳಲ್ಲಿ ಮೊದಲೇ ಎರಡು ಗೆಲುವು ಮತ್ತು ಒಂದು ರದ್ದಿನೊಂದಿಗೆ ಇಳಿದಿದ್ದ ಪಂಜಾಬ್ ಬೌಲಿಂಗ್ ಆಯ್ಕೆ ಮಾಡಿಕೊಂಡಿತ್ತು. ಹೈದರಾಬಾದ್ ಸ್ಫೋಟಕ ಆರಂಭ ಪಡೆದ ನಂತರ ಕುಸಿತ ಕಂಡು 20 ಓವರ್‌ಗಳಲ್ಲಿ 219 ರನ್ ಗಳಿಸಿತು. ಆರು ವಿಕೆಟ್ ಕಲೆದುಕೊಂಡಿತು. ಗುರಿ ಬೆನ್ನತ್ತಿದ ಪಂಜಾಬ್ ಲಯದಲ್ಲೇ ಸಾಗಿ 18.5 ಓವರ್‌ಗಳಲ್ಲಿ ಪಂದ್ಯ ಮುಗಿಸಿಕೊಂಡು ಬಂದಿತು. ಮೂರನೇ ಜಯ ಸಾಧಿಸಿ ಅಗ್ರಸ್ಥಾನದ ಪೈಪೋಟಿಗೆ ಅಣಿಯಾಯಿತು.

ಆರಂಭಿಕರು V/S ಆರಂಭಿಕರು ಪಂದ್ಯದಲ್ಲಿ ಬ್ಯಾಟಿಗರೇ ಪಾರುಪತ್ಯ ಸಾಧಿಸಿದರು. ಅಭಿಷೇಕ್ ಶರ್ಮ ತಮ್ಮ ಅಸಲು ಆಟದೊಂದಿಗೆ ಪಂದ್ಯದ ಉತ್ತಮ ಬ್ಯಾಟರ್ ಅನ್ನಿಸಿಕೊಂಡರು. ಶ್ರೇಯಸ್ ಅಯ್ಯರ್ ಅಜೇಯ 69 ರನ್ ಬಾರಿಸಿ ಪಂದ್ಯ ಗೆಲ್ಲಿಸಿದವರಾದರು. ಹೈದರಾಬಾದ್‌ನ ಟ್ರಾವಿಸ್ ಹೆಡ್, ಕ್ಲಾಸೆನ್ ಮತ್ತು ಪಂಜಾಬ್ ತಂಡದ ಪ್ರಿಯಾಂಶ್ ಆರ್ಯ, ಪ್ರಭಸಿಮ್ರನ್ ಸಿಂಗ್ ಕೂಡ ಅರ್ಧಶತಕ ಬಾರಿಸಿ ಗೆಲುವಿನ ರೂವಾರಿ ಎನಿಸಿಕೊಂಡರು. ಶಿವಾಂಗ್ ಕುಮಾರ್ 3 ವಿಕೆಟ್ ಪಡೆದು ಬೆಸ್ಟ್ ಬೌಲರ್ ಅನಿಸಿಕೊಂಡರು.

ಅಭಿಷೇಕ್ ಅಬ್ಬರ: ಮೊದಲು ಬ್ಯಾಟಿಂಗ್ ಮಾಡಿದ ಹೈದರಾಬಾದ್‌ಗೆ ಜೋಶ್. ಹೆಡ್ ಹಾಗೂ ಅಭಿಷೇಕ್ ಶರ್ಮ ತಮ್ಮ ಸ್ವಾಭಾವಿಕ ಲಯಕ್ಕೆ ಬಂದ ಖುಷಿ. ಶರ್ಮ ಸಿಕ್ಸರ್‌ಗಳ ಸುರಿಮಳೆಗೈದರು. ಹೆಡ್ ಬೌಂಡರಿಗಳ ಹೊಳೆ ಹರಿಸಿದರು. ಇದರೊಂದಿಗೆ ಪವರ್‌ಪ್ಲೇನಲ್ಲೇ ಪಂಜಾಬ್ 105 ರನ್ ಬಾರಿಸಿತು. ಅಭಿಷೇಕ್ ಅರ್ಧಶತಕ ಪೂರೈಸಿಕೊಂಡು ಅದೇ ಸ್ಫೋಟಕ ಬ್ಯಾಟಿಂಗ್ ಮುಂದುವರಿಸಿದರು. ಇತ್ತ ಹೆಡ್ ಕೂಡ ಬೌಂಡರಿಗಳೊಂದಿಗೆ ಮಿಂಚಿದರು. ಹೈದರಾಬಾದ್ ರನ್‌ರೇಟ್ 15ರ ಆಸುಪಾಸು. ನಿರೀಕ್ಷಿತ ಸ್ಕೋರ್ 300ಕ್ಕಿತ್ತು.



ಅಯ್ಯರ್ ಆರ್ಭಟ

ಪಂಜಾಬ್ ಪವರ್‌ಪ್ಲೇನಲ್ಲಿ 93 ರನ್ ಗಳಿಸಿತ್ತು. ವಿಕೆಟ್ ಕಳೆದುಕೊಂಡ ನಂತರ ಬಿರುಸಿನ ಬ್ಯಾಟಿಂಗ್ ಶುರು ಮಾಡಿದ ನಾಯಕ ಶ್ರೇಯಸ್ ಅಯ್ಯರ್ ಕ್ರಮೇಣವಾಗಿ ಹೈದರಾಬಾದ್ ಪಡೆಯಿಂದ ಗೆಲುವು ಕಸಿದರು. 5 ಬೌಂಡರಿ ಮತ್ತು 5 ಸಿಕ್ಸರ್‌ಗಳನ್ನು ಬಾರಿಸಿ ಅರ್ಧ ಶತಕ ಬಾರಿಸಿದರು. ಮಧ್ಯಮ ಓವರ್‌ಗಳಲ್ಲಿ ಪಂಜಾಬ್ 104 ರನ್ ಗಳಿಸಿತು. ಶ್ರೇಯಸ್ ಅಯ್ಯರ್ ಕೊನೆಯ ಬಾಲ್ ವರೆಗೂ ನಿಂತು ಪಂದ್ಯ ಗೆಲ್ಲಿಸಿದರು. ಒಟ್ಟು 69 ರನ್ ಬಾರಿಸಿದ ಅವರು ಗೆಲುವಿನ ರೂವಾರಿ ಅನ್ನಿಸಿಕೊಂಡರು.

ಪಂಜಾಬ್‌ಗೆ ಸರಳ ಕೆಲಸ

ದೊಡ್ಡ ಗುರಿ ಪಂಜಾಬ್‌ಗೆ ಕಾಟ ನೀಡಲೇ ಇಲ್ಲ. ಆರಂಭಿಕರಾದ ಪ್ರಭಸಿಮ್ರನ್ ಹಾಗೂ ಪ್ರಿಯಾಂಶ್ ಆರ್ಯ ಕೂಡ ಅಷ್ಟೇ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಮೊದಲಿನಿಂದಲೂ ತಂಡವನ್ನು ದಂಡಿಸಿದರು. ಸಿಕ್ಸರ್‌ಗಳ ಬೆಟ್ಟ ಕಟ್ಟಿದ ಪ್ರಿಯಾಂಶ್ ಆರ್ಯ 20 ಬಾಲ್ ಮಾತ್ರದಲ್ಲೇ 57 ರನ್ ಚಚ್ಚಿ ವಿಕೆಟ್ ಒಪ್ಪಿಸಿದರು. ಇತ್ತ ಪ್ರಭಸಿಮ್ರನ್ ಕೂಡ ಸ್ಫೋಟಕ ಬ್ಯಾಟಿಂಗ್ ಮಾಡಿ 25 ಬಾಲ್‌ಗಳಲ್ಲಿ 51 ರನ್ ಗಳಿಸಿ ವಿಕೆಟ್ ಕೊಟ್ಟರು. ಕೂಪರ್ ಕೊನೊಲಿ 11 ರನ್‌ಗೆ ಔಟಾದಮೇಲೆ ತಂಡ ಸಂಕಷ್ಟ ಎದುರಿಸಿತ್ತು. ಅಲ್ಲಿ ಬಂದವರೆ ಶ್ರೇಯಸ್ ಅಯ್ಯರ್.

ಶ್ರೇಯಸ್ ಅಯ್ಯರ್ ಮಾಸ್ಟರ್ ಪ್ಲಾನ್

ನಾಗಾಲೋಟದಲ್ಲಿದ್ದ ಹೈದರಾಬಾದ್ ಕಡಿವಾಣಕ್ಕೆ ಶ್ರೇಯಸ್ ಅಯ್ಯರ್ ಭಾರೀ ಮಾಸ್ಟರ್ ಪ್ಲಾನ್ ಮಾಡಿ ಯಶಸ್ವಿಯಾದರು. ದಂಡಿಸಿಕೊಂಡಿದ್ದ ಪ್ರಮುಖ ಬೌಲರ್‌ಗಳ ಬದಲಾಗಿ ಪಾರ್ಟ್‌ಟೈಮ್ ಬಾಲರ್ ಶಶಾಂಕ್ ಸಿಂಗ್ ಅವರನ್ನು ಕಣಕ್ಕಿಳಿಸಿದರು. ಮೊದಲನೇ ಓವರ್‌ನಲ್ಲಿ ದಂಡಿಸಿಕೊಂಡರೂ ತಮ್ಮ ಎರಡನೇ ಓವರ್‌ನಲ್ಲಿ ಅವರು ಹೆಡ್ ವಿಕೆಟ್ ಪಡೆದರು. ಅಷ್ಟಕ್ಕೆ ನಿಲ್ಲದೆ 264 ಸ್ಟ್ರೈಕ್ ರೇಟ್‌ನಲ್ಲಿ ಬ್ಯಾಟಿಂಗ್ ಮಾಡುತ್ತಿದ್ದ ಅಭಿ ಅವರಿಗೂ ಖೆಡ್ಡಾ ತೋಡಿದರು. ಪಂದ್ಯದ ಗತಿಯೇ ಬದಲಾಯಿತು. ಆರಂಭಿಕ ಓವರ್‌ಗಳಲ್ಲಿ 105 ರನ್ ಬಾರಿಸಿದ್ದ ಹೈದರಾಬಾದ್ ಮಧ್ಯಮ ಓವರ್‌ಗಳಲ್ಲಿ 77 ರನ್ ಮಾತ್ರ ಗಳಿಸಿತು. ಅಂತಿಮ ಓವರ್‌ಗಳಲ್ಲಿ 26 ರನ್ ಮಾತ್ರ ಗಳಿಸಿತು.



ಸಂಕ್ಷಿಪ್ತ ಸ್ಕೋರ್

- ಹೈದರಾಬಾದ್: 20 ಓವರ್‌ಗಳಲ್ಲಿ 219/6; ಅಭಿಷೇಕ್ 74, ಕ್ಲಾಸೆನ್ 39, ಶಶಾಂಕ್ 20/2
- ಪಂಜಾಬ್: 18.5 ಓವರ್‌ಗಳಲ್ಲಿ 223/4; ಶ್ರೇಯಸ್ 69★, ಪ್ರಿಯಾಂಶ್ 57, ಪ್ರಭಸಿಮ್ರನ್ 51; ಶಿವಾಂಗ್ 33/3

ಮುಂಬೈ ವಿರುದ್ಧ ಪಾಟಿದಾರ ಬಣ ಪಂದ್ಯ

ಆರ್‌ಸಿಬಿಗೆ ಜಯದ ಹಂಬಲ



ಪಂದ್ಯಗಳ ವಿವರ

ಗುಜರಾತ್-ಲಖನೌ
ಯಾವಾಗ: ಭಾನುವಾರ
ಎಲ್ಲಿ: ಏಕಾನಾ ಕ್ರೀಡಾಂಗಣ, ಲಖನೌ
ಸಮಯ: ಮಧ್ಯಾಹ್ನ 3:30

ಆರ್‌ಸಿಬಿ-ಮುಂಬೈ
ಯಾವಾಗ: ಭಾನುವಾರ
ಎಲ್ಲಿ: ವಾಂಖೆಡೆ, ಮುಂಬೈ
ಸಮಯ: ಸಂಜೆ 7:30
(2 ಪಂದ್ಯಗಳ ಪ್ರಸಾರ; ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಮುಂಬೈ: ವಾರಾಂತ್ಯದ ಸೂಪರ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಮುಂಬೈ ಇಂಡಿಯನ್ಸ್ ನಡುವಿನ ಎಲ್-ಕ್ಲಾಸಿಕೋ ಪಂದ್ಯ ನಡೆಯಲಿದೆ. ಲಖನೌ ಸೂಪರ್ ಜೇಂಟ್ಸ್ ಹಾಗೂ ಗುಜರಾತ್ ಟೈಟಾನ್ಸ್ ನಡುವಿನ ಮೊದಲ ಪಂದ್ಯದ ನಂತರ ಎರಡನೇ ಪಂದ್ಯ ನಡೆಯಲಿದೆ.

ರಾಜಸ್ಥಾನ ವಿರುದ್ಧ ಶುಕ್ರವಾರದಂದು ನಡೆದಿರುವ ಪಂದ್ಯದಲ್ಲಿ ಸೋಲನುಭವಿಸಿದ್ದ ಬೆಂಗಳೂರು ಕೂಟದಲ್ಲಿ ಮೊದಲ ಬಾರಿಗೆ ಪರಾಭವ ಕಂಡಿದೆ. ಇತ್ತ ಮುಂಬೈ ಇಂಡಿಯನ್ಸ್ ತಂಡವು ಗೆಲುವಿಗಾಗಿ ಪರದಾಟ ನಡೆಸುತ್ತಿದ್ದು ಪಂದ್ಯ ರೋಮಾಂಚನಕಾರಿಯಾಗಲಿದೆ.

ಇತ್ತ ಹಿಂದಿನ ಪಂದ್ಯದಲ್ಲಿ ಗೆಲುವು ಸಾಧಿಸಿರುವ ಗುಜರಾತ್ ಟೈಟಾನ್ಸ್ ಮತ್ತು ಲಖನೌ ಸೂಪರ್ ಜೇಂಟ್ಸ್ ತಂಡಗಳು ಮುಖಾಮುಖಿಯಾಗಲಿವೆ. ಸೋಲಿನಿಂದ ಹೊರಬಂದಿರುವ ಲಖನೌ ಮುಕುಲ್ ಚೌದರಿ ಅವರ ಬ್ಯಾಟಿಂಗ್‌ನಿಂದಾಗಿ ಕೆಕೆಆರ್ ತಂಡವನ್ನು ಸೋಲಿಸಿತ್ತು. ಹೀಗಿರುವಾಗ ಗುಜರಾತ್ ತಂಡವನ್ನು ಎದುರಿಸಲಿದೆ.

ಗೆಲುವಿನ ಹಳಿಗೆ ಮರಳಿತೇ ಆರ್‌ಸಿಬಿ: ಹೈದರಾಬಾದ್ ಹಾಗೂ ಚೆನ್ನೈ ತಂಡವನ್ನು ತವರಿನಲ್ಲಿ ಸೋಲಿಸಿರುವ ಬೆಂಗಳೂರು ತವರಲ್ಲದ ಮೊದಲ ಪಂದ್ಯದಲ್ಲೇ ಸೋತಿದೆ. ಬಲಿಷ್ಠ ಬ್ಯಾಟಿಂಗ್ ಮತ್ತು ಸಮತೋಲಿತ ಬೌಲಿಂಗ್ ದಾಳಿಯೊಂದಿಗೆ ತಂಡ ಮಿಂಚುತ್ತಿದೆ. ಆದರೆ ಸಾಲ್ಟ್ ಅವರ ಲಯದ ಕೊರತೆ ತಂಡಕ್ಕೆ ಕಾಡುತ್ತಿದೆ. ಕೊಹ್ಲಿ, ಪಾಟಿದಾರ್ ಭರ್ಜರಿ ಲಯದಲ್ಲಿದ್ದಾರೆ. ಫಿನಿಶಿಂಗ್ ವಿಭಾಗದಲ್ಲಿ ಸ್ಫೋಟಕ ಬ್ಯಾಟರ್‌ಗಳಾದ ಟೀಮ್ ಡೆವಿಡ್, ಶೇಫರ್ಡ್ ಸಿದ್ಧವಾಗಿದ್ದಾರೆ. ಬೌಲಿಂಗ್‌ನಲ್ಲಿ ತಂಡಕ್ಕೆ ಜೋಶ್ ಹ್ಯಾಜೆಲ್ವುಡ್ ಬಲ ಸಿಕ್ಕಿದೆ. ಆದಾಗ್ಯೂ ಕಳೆದ ಪಂದ್ಯದಲ್ಲಿ ಎಲ್ಲಾ ಬೌಲರ್‌ಗಳು ದಂಡಿಸಿಕೊಂಡಿದ್ದಾರೆ. ಆದಾಗ್ಯೂ ಬೆಂಗಳೂರು ಲಯಕ್ಕೆ ಮರಳುವ ವಿಶ್ವಾಸದಲ್ಲಿದೆ. ಇತ್ತ ಮುಂಬೈ ಇಂಡಿಯನ್ಸ್ ಗೆಲುವಿನ ಹುಡುಕಾಟದಲ್ಲಿದೆ. ಮೊದಲನೇ ಪಂದ್ಯದಲ್ಲಿ ಗೆದ್ದ ನಂತರ ಮುಂದಿನ ಎಲ್ಲಾ ಪಂದ್ಯಗಳಲ್ಲಿ ಸೋಲನುಭವಿಸಿದೆ. ಅನುಭವಿ ಬ್ಯಾಟರ್‌ಗಳನ್ನು ಹೊಂದಿದ್ದರೂ ಲಯದ ಹಿನ್ನಡೆ ತಂಡ ಅನುಭವಿಸುತ್ತಿದೆ. ಬೌಲಿಂಗ್‌ನಲ್ಲೂ ಅದೇ ಕತೆ. ಬೂಮ್ರಾ, ಬೋಲ್ಟ್, ದೀಪಕ್ ವಿಕೆಟ್ ಹುಡುಕಾಟದಲ್ಲಿದ್ದಾರೆ.

ಪಿಚ್ ರಿಪೋರ್ಟ್: ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬ್ಯಾಟಿಗರು ವಿಶ್ವಾಸದಲ್ಲಿ ಕಾಣಿಸಕೊಳ್ಳಲಿದ್ದಾರೆ. ಫ್ಲಾಟ್ ಪಿಚ್ ಇರುವುದು ಸ್ಫೋಟಕ ಬ್ಯಾಟರ್‌ಗಳಿಗೆ ಭರವಸೆ ತಂದಿದೆ. ಸ್ಪಿನ್, ಸ್ವಿಂಗ್ ಕೂಡ ಇರಲಿದೆ. ಎರಡನೇ ಇನ್ನಿಂಗ್ಸ್‌ನಲ್ಲಿ ಇಬ್ಬನಿ ಕಾಟ ಇದ್ದು, ಟಾಸ್ ಗೆದ್ದವರು ಬೌಲಿಂಗ್ ತೆಗೆದುಕೊಳ್ಳುವ ಸಾಧ್ಯತೆ ಇದೆ. ಮಳೆ ಸಾಧ್ಯತೆ ಕಮ್ಮಿಯಿದೆ.

ಗುಜರಾತ್‌ಗೆ ಗೆಲುವಿನ ವಿಶ್ವಾಸ

ಮೊದಲ ಪಂದ್ಯದಲ್ಲಿ ಗುಜರಾತ್ ಮತ್ತು ಲಖನೌ ಮುಖಾಮುಖಿಯಾಗಲಿವೆ. ಹಿಂದಿನ ಪಂದ್ಯದಲ್ಲಿ ಮುಕಲ್ ಅವರ ಆಟದೊಂದಿಗೆ ಮಿಂಚಿರುವ ಲಖನೌ ಎರಡು ಗೆಲುವು ಮತ್ತು ಒಂದು ಸೋಲಿನೊಂದಿಗೆ ಪೈಪೋಟಿ ನಡೆಸುತ್ತಿದೆ. ಗುಜರಾತ್ ಕೂಡ ಕಳೆದ ಪಂದ್ಯದಲ್ಲಿ ಉತ್ತಮ ಬ್ಯಾಟಿಂಗ್ ಮಾಡಿದೆ. ಅಲ್ಲದೆ ಕೊನೆಯ ಓವರ್‌ನ ಥ್ರಿಲ್ಲರ್ ಪಂದ್ಯದಲ್ಲಿ ಗೆಲುವು ಸಾಧಿಸಿದೆ. ಬ್ಯಾಟಿಂಗ್ ಬಲ ಹೊತ್ತಿರುವ ಗುಜರಾತ್‌ಗೆ ಅನುಭವಿ ಬೌಲರ್‌ಗಳ ಕೊರತೆಯಿದೆ ಎಂದರೆ ತಪ್ಪಿಲ್ಲ. ಇತ್ತ ಲಖನೌ ಕೂಡ ಸ್ಫೋಟಕ ಬ್ಯಾಟರ್‌ಗಳನ್ನು ಹೊಂದಿದ್ದರೂ ಶಮಿ, ರಾಥಿ ಹೊರತು ಪಡಿಸಿ ಇನ್ನಿಷ್ಟು ಬೌಲರ್‌ಗಳು ದುಬಾರಿಯಾಗಿದ್ದಾರೆ.



ಕಿರುಸುದ್ದಿ

ಆರ್ಚರಿ: ಸಿಂಗಲ್ಸ್‌ನಲ್ಲಿ ನಿರಾಸೆ

ಹೊಸದಿಲ್ಲಿ: ಮೆಕ್ಸಿಕೋದ ಪ್ಯೂಬ್ಲಾದಲ್ಲಿ ನಡೆದ ಆರ್ಚರಿ ವಿಶ್ವಕಪ್ ಹಂತ-1 ರಲ್ಲಿ ಭಾರತೀಯ ಬಿಲ್ಲುಗಾರರು ವೈಯಕ್ತಿಕ ಸ್ಪರ್ಧೆಗಳಲ್ಲಿ ನೀರಸ ಪ್ರದರ್ಶನ ನೀಡಿದರು. ವಿ. ಜ್ಯೋತಿ ಸುರೇಖಾ ವಿಶ್ವ ಚಾಂಪಿಯನ್ ಮತ್ತು ವಿಶ್ವದ ನಂ. 1 ಸ್ಥಾನದಲ್ಲಿರುವ ಮೆಕ್ಸಿಕೋದ ಆಂಡ್ರಿಯಾ ಬೆಸೆರಾ (146-146, 10★-10,) ಮತ್ತು ಗ್ರೇಟ್ ಬ್ರಿಟನ್‌ನ ವಿಶ್ವದ ನಂ. 2 ಸ್ಥಾನದಲ್ಲಿರುವ ಎಲ್ಲಾ ಗಿಬ್ಸನ್ ಅವರನ್ನು ಸತತ ಸುತ್ತುಗಳಲ್ಲಿ ಹಿಂದಿಕ್ಕಿ - ಕ್ವಾರ್ಟರ್ ಫೈನಲ್‌ಗೆ ತಲುಪುವ ಮೂಲಕ ಭಾರತೀಯರಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದರು, ನಂತರ ಕಾಂಪೌಂಡ್‌ನಲ್ಲಿ ಮೆಕ್ಸಿಕನ್ ಡಪ್ನೆ ವಿರುದ್ಧ 143-149 ಸೋತರು.

ಫುಟ್‌ಬಾಲ್: ಭಾರತಕ್ಕೆ ಸೋಲು


ಹೊಸದಿಲ್ಲಿ: ಶನಿವಾರ ರಷ್ಯಾದ ಸೋಚಿಯಲ್ಲಿರುವ ಮ್ಯಾಟ್ಸೆಸ್ಟಾ ಫುಟ್‌ಬಾಲ್ ಸೆಂಟರ್‌ನಲ್ಲಿ ನಡೆದ ಮೂರು ಸ್ನೇಹಪರ ಪಂದ್ಯಗಳ ಪೈಕಿ ಭಾರತದ ಅಂಡರ್-17 ಮಹಿಳಾ ತಂಡವು ರಷ್ಯಾ ವಿರುದ್ಧ 0-4 ಅಂತರದಲ್ಲಿ ಸೋತಿತು. ವಲೇರಿಯಾ ಮೆನ್ಶ್ಯಲೋವಾ 44ನೇ ನಿಮಿಷದಲ್ಲಿ ಆತಿಥೇಯ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಡಾನಾ ಡೊಬ್ರೊವಿಟ್ಸ್ಕಯಾ ಮತ್ತು ಅಲಿಸಾ ಕ್ಲಿಮೋವಾ ಕ್ರಮವಾಗಿ 57ನೇ ಮತ್ತು 72ನೇ ನಿಮಿಷಗಳಲ್ಲಿ ಪೆನಾಲ್ಟಿಗಳನ್ನು ಗೋಲು ಗಳಿಸಿದರು, ನಂತರ ಏಂಜಲೀನಾ ಗುಲ್ಯಾಯೇವಾ 88ನೇ ನಿಮಿಷದಲ್ಲಿ ಗೋಲು ಗಳಿಸಿದರು. ಇಟಾಲಿಯನ್ ಪಮೇಲಾ ಕಾಂಟಿ ತರಬೇತುದಾರರಾಗಿರುವ ಯಂಗ್ ಟೈಗ್ರೆಸ್ಸ್ ತಂಡವು ಮುಂದಿನ ತಿಂಗಳು ನಡೆಯಲಿರುವ ಅತ್ಯಂತ ಪ್ರಮುಖವಾದ ಅ-17 ಮಹಿಳಾ ಏಷ್ಯನ್ ಕಪ್ ತಯಾರಿ ನಡೆಸಲು ಈ ಪಂದ್ಯಗಳನ್ನು ಆಡಲಿದೆ.

ರಾಜಸ್ಥಾನಕ್ಕೆ 4ನೇ ಗೆಲುವು

ಗುವಾಹಟಿ: ಬ್ಯಾಟಿನ ಮೂಲಕ ಕ್ರಿಕೆಟ್ ಕ್ಷೇತ್ರದಲ್ಲಿ ಪಂದ್ಯಕ್ಕೊಂದರಂತೆ ದಾಖಲೆ ಮಾಡಿರುವ ವೈಭವ್ ಸೂರ್ಯವಂಶಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ತಮ್ಮದೆ ಸ್ಟೈಲ್‌ನಲ್ಲಿ ದಂಡಿಸಿ ತಮ್ಮದೇ ದಾಖಲೆ ಮುರಿದರು, ಗಟ್ಟಿ ಅಡಿಪಾಯದ ನಂತರ ತಕ್ಕ ಆಟದೊಂದಿಗೆ ಇನ್ನಿಂಗ್ಸ್ ಕಟ್ಟಿದ ಧ್ರುವ್ ಜುರೇಲ್ ರಾಜಸ್ಥಾನಕ್ಕೆ ಸತತ ನಾಲ್ಕನೇ ಗೆಲುವು ತಂದುಕೊಟ್ಟರು. ಆರ್‌ಸಿಬಿ ಪಂದ್ಯಾವಳಿಯಲ್ಲಿ ಮೊದಲನೇ ಸೋಲನುಭವಿಸಿತು.

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಮೂಲಕ ವಿಶ್ವ ಕ್ರಿಕೆಟ್ ಪ್ರಿಯರ ಮನೆಮಾತಾಗಿರುವ ವೈಭವ್, ಶುಕ್ರವಾರದ ಪಂದ್ಯದಲ್ಲಿ ಅವರು ಅನುಭವಿ ಬೌಲರ್‌ಗಳ ಬೆವರಿಳಿಸಿಬಿಟ್ಟರು. ಬೂಮ್ರಾ ಬಾರಿ ಮುಗಿದ ನಂತರ ಇದು ಭುವನೇಶ್ವರ್ ಕುಮಾರ್, ಹ್ಯಾಜೆಲ್ವುಡ್ ಸರದಿಯಾಗಿತ್ತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್‌ಗಿಳಿದಿದ್ದ ಆರ್‌ಸಿಬಿ ಪಾಟಿದಾರ್ ಅವರ ಆಟದೊಂದಿಗೆ ಉತ್ತಮ ಸ್ಕೋರ್ ನಿರ್ಮಿಸಿ ಗೆಲುವಿನ ಯೋಜನೆಯಲ್ಲಿತ್ತು. ಆದರೆ ರಾಜಸ್ಥಾನ ಬ್ಯಾಟಿಂಗ್ ಮಾಡುವಾಗ ಯಾವುದೇ ಅವಕಾಶ ಸಿಗಲಿಲ್ಲ. ಜುರೇಲ್, ಜೈಸ್ವಾಲ್ ಮತ್ತು ವೈಭವ್ ಬಂದ ಬಾಲ್‌ಗಳನ್ನೆಲ್ಲಾ ಬೌಂಡರಿ, ಸಿಕ್ಸರ್‌ಗಟ್ಟಿದ ನಂತರ ಪಂದ್ಯ 18 ಓವರ್‌ಗಳಲ್ಲಿ ಮುಕ್ತಾಯಗೊಂಡಿತು.

ಸೂರ್ಯವಂಶಿ ಸ್ಟ್ರೈಕ್‌ರೇಟ್ ಬರೋಬ್ಬರಿ 300! ಇಡೀ ಪಂದ್ಯದಲ್ಲಿ ಆರ್‌ಸಿಬಿ 7 ಸಿಕ್ಸರ್‌ಗಳನ್ನು ಬಾರಿಸಿದ್ದರೆ, ವೈಭವ್ ಒಬ್ಬರೇ 7 ಸಿಕ್ಸರ್ ಬಾರಿಸಿದರು. ಇತ್ತ ಜುರೇಲ್ ಆಟಕ್ಕೂ ಮಿತಿ ಇರಲಿಲ್ಲ. ವೈಭವ್ ಔಟಾದ ನಂತರ ದಡ ಸೇರಿಸುವ ಜವಾಬ್ದಾರಿ ಎತ್ತಿಕೊಂಡ ಅವರು, ಅಜೇಯ 81 ರನ್ ಬಾರಿಸಿ ಪಂದ್ಯ ಗೆಲ್ಲಿಸಿದರು.



ವೈಭವ್‌ಗೆ ಕೊಹ್ಲಿಯಿಂದ ಉಡುಗೊರೆ

ಸ್ಫೋಟಕ ಬ್ಯಾಟಿಂಗ್ ಮಾಡಿದ ವೈಭವ್ ಸೂರ್ಯವಂಶಿಗೆ ವಿರಾಟ್ ಕೊಹ್ಲಿಯಿಂದ ಉಡುಗೊರೆ ಸಿಕ್ಕಿದೆ. ಪಂದ್ಯದ ನಂತರ ಸೋತ ಆರ್‌ಸಿಬಿ ತಂಡದ ಎಲ್ಲಾ ಆಟಗಾರರೂ ವೈಭವ್ ಸೂರ್ಯವಂಶಿ ಅವರನ್ನು ಕೊಂಡಾಡಲು ಸೇರಿದರು. ಪಾಟಿದಾರ್, ಭುವನೇಶ್ವರ್ ಸೇರಿದಂತೆ ಎಲ್ಲರೂ ವೈಭವ್‌ಗೆ ಅಭಿನಂದನೆ ಸಲ್ಲಿಸಿದರು. ಅತ್ತ ವಿರಾಟ್ ಕೊಹ್ಲಿ ತಮ್ಮ ಕ್ಯಾಪ್ ಮೇಲೆ, ವೈಭವ್ ಉತ್ತಮವಾಗಿ ಆಡುತ್ತಿದ್ದೀಯ ಎಂದು ಬರೆದು ಕೊಟ್ಟಿದ್ದಾರೆ.

ಸಂಕ್ಷಿಪ್ತ ಸ್ಕೋರ್

- ಬೆಂಗಳೂರು: 20 ಓವರ್‌ಗಳಲ್ಲಿ 201/8; ಪಾಟಿದಾರ್ 63, ಕೊಹ್ಲಿ 32; ಬಿಷ್ಣೋಯ್ 32/2
- ರಾಜಸ್ಥಾನ: 18 ಓವರ್‌ಗಳಲ್ಲಿ 202/4; ಜುರೇಲ್★, ವೈಭವ್ 78; ಕೃಣಾಲ್ 30/2

ಸಂಜು ಶತಕ, ದಿಲ್ಲಿಗೆ ದೊಡ್ಡ ಗುರಿ

ಚೆನ್ನೈ: ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಚೆನ್ನೈ ಪರ ಮೊದಲ ಶತಕ ಬಾರಿಸಿರುವ ಸಂಜು ಸ್ಯಾಮ್ಸನ್ ಕೊನೆಗೂ ಲಯಕ್ಕೆ ಮರಳಿದ್ದು, ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಚೆನ್ನೈ ಮೊದಲ ಬಾರಿಗೆ ಸ್ಥಿರ ಪ್ರದರ್ಶನ ನೀಡಿದೆ.

ದಿಲ್ಲಿ ವಿರುದ್ಧದ ಪಂದ್ಯದಲ್ಲಿ ಸ್ಯಾಮ್ಸನ್ ಶತಕ ಮತ್ತು ಆಯುಷ್ ಮಾತ್ರೆ ಅವರ ಸ್ಫೋಟಕ ಅರ್ಧಶತಕದೊಂದಿಗೆ ಚೆನ್ನೈ ಸೂಪರ್ ಕಿಂಗ್ಸ್ ತಂಡ ದಿಲ್ಲಿ ಕ್ಯಾಪಿಟಲ್ಸ್‌ಗೆ ಕಠಿಣ ಗುರಿ ನೀಡಿತು. ಸ್ಯಾಮ್ಸನ್ ಅವರ 115★ ರನ್ ಬ್ಯಾಟಿಂಗ್‌ನೊಂದಿಗೆ 20 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 212 ರನ್ ಗಳಿಸಿತು.

ಕೊನೆಗೂ ಮಿಂಚಿದ ಸಂಜು: ಮೊದಲು ಬ್ಯಾಟಿಂಗ್‌ಗಿಳಿದ ಚೆನ್ನೈ ಸ್ಫೋಟಕ ಆರಂಭ ಪಡೆಯಲಿಲ್ಲ. ವಿಕೆಟ್ ಬೀಳದಿದ್ದರೂ ದಿಲ್ಲಿ ಬೌಲರ್‌ಗಳು ರುತುರಾಜ್ ಗಾಯಕ್ವಾಡ್ ಅವರನ್ನು ಕಟ್ಟಿ ಹಾಕಿದರು. ಅತ್ತ ಸಂಜು ಸೆಟ್ ಆಗುವ ಔಪಚಾರಿಕತೆಗೆ ಬಿದ್ದರು. 18 ಬಾಲ್ ಎದುರಿಸಿದ ಗಾಯಕ್ವಾಡ್ ರನ್‌ಗಾಗಿ ಪರದಾಟ ನಡೆಸಿದರು. ಚೆನ್ನೈಗೆ ಹಿನ್ನಡೆಯಾಯಿತು. ಆದರೆ ಅಷ್ಟೊತ್ತಿಗಾಗಲೇ ಹೊಂದಿಕೊಂಡ ಸಂಜು ತಮ್ಮ ಅಸಲಿ ಲಯಕ್ಕೆ ಬಂದರು. ಸಂಜು ಸ್ಯಾಮ್ಸನ್ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ತಂಡವು ಪವರ್‌ಪ್ಲೇನಲ್ಲಿ 61 ರನ್ ಗಳಿಸಿತು. ಏಳನೇ ಓವರ್‌ನಲ್ಲಿ ಗಾಯಕ್ವಾಡ್ ವಿಕೆಟ್ ಒಪ್ಪಿಸಿದರು. ನಂತರ ಮೂರನೇ ಕ್ರಮಾಂಕದಲ್ಲಿ ಬಂದ ಆಯುಷ್ ಮಾತ್ರೆ ಸಂಜು ಸ್ಯಾಮ್ಸನ್‌ಗೆ ಸಾಥ್ ನೀಡಿದರು. ಸ್ಯಾಮ್ಸನ್ 26 ಬಾಲ್‌ಗಳಲ್ಲಿ ಅರ್ಧ ಶತಕ ಬಾರಿಸಿ ತಮ್ಮ ಅಬ್ಬರ ಮುಂದುವರಿಸಿದರು. ಆಯುಷ್ ಕೂಡ ಸಿಕ್ಸರ್‌ಗಳೊಂದಿಗೆ ಮಿಂಚತೊಡಗಿದರು. ಚೆನ್ನೈ ವಿಕೆಟ್ ಕಳೆದುಕೊಳ್ಳಲಿಲ್ಲ. ಮಧ್ಯಮ ಓವರ್‌ಗಳಲ್ಲಿ ಬರೋಬ್ಬರಿ 107 ರನ್ ಗಳಿಸಿತು. ಆಯುಷ್ ಅರ್ಧ ಶತಕ ಬಾರಿಸಿದರು. 39 ಬಾಲ್‌ಗಳಲ್ಲಿ ಅವರು 59 ರನ್ ಗಳಿಸಿದರು. ಸ್ಲಾಗ್ ಓವರ್‌ಗಳಲ್ಲಿ ಅವರು ನಿವೃತ್ತರಾದರು. ದುಬೆ 20 ರನ್ ಗಳಿಸಿದರು.



ಚೆನ್ನೈ ಪರ ಮೊದಲ ಶತಕ

ಸಂಜು ಸ್ಯಾಮ್ಸನ್ ಚೆನ್ನೈ ತಂಡದ ಪರ ಮೊದಲ ಶತಕ ಬಾರಿಸಿದರು. ಮೂರು ಪಂದ್ಯಗಳಲ್ಲಿ ಸತತ ಹಿನ್ನಡೆ ಅನುಭವಿಸಿದ್ದ ಅವರು ನಾಲ್ಕನೇ ಪಂದ್ಯದಲ್ಲಿ ಲಯಕ್ಕೆ ಮರಳಿದರು. ಬರೋಬ್ಬರಿ 15 ಸ್ಫೋಟಕ ಬೌಂಡರಿ, 4 ಬಾನೆತ್ತರದ ಸಿಕ್ಸರ್‌ಗಳನ್ನು ಬಾರಿಸಿದರು. 56 ಎಸೆತ ಎದುರಿಸಿ 115 ರನ್ ಗಳಿಸಿದರು.

ಫೈನಲ್‌ಗೆ ಆಯುಷ್ ಶೆಟ್ಟಿ!

ನಿಂಗ್ಬೋ(ಚೀನಾ): ಪ್ರತಿ ಪಂದ್ಯದಲ್ಲೂ ಕರಾರುವಾಕ್ ಪ್ರದರ್ಶನದೊಂದಿಗೆ ವಿಶ್ವ ಬ್ಯಾಡ್ಮಿಂಟನ್ ಕ್ಷೇತ್ರದಲ್ಲಿ ಸರದಾರನಾಗುತ್ತಿರುವ ಕನ್ನಡಿಗ ಆಯುಷ್ ಶೆಟ್ಟಿ ಬ್ಯಾಡ್ಮಿಂಟನ್ ಪ್ರಿಯರು ನಿಬ್ಬೆರಗಾಗುವಂತೆ ವಿಶ್ವದ ನಂಬರ್ 1 ಆಟಗಾರ ಕೆ. ವಿಟಿಡ್ಸರ್ನ್ ಅವರನ್ನು ಸೋಲಿಸಿದರು. ಪ್ರತಿಷ್ಠಿತ ಬ್ಯಾಡ್ಮಿಂಟನ್ ಏಷ್ಯನ್ ಚಾಂಪಿಯನ್‌ಶಿಪ್ ಪಂದ್ಯಾವಳಿಯಲ್ಲಿ ಮಿಂಚಿನಾಟ ಪ್ರದರ್ಶನ ನೀಡುತ್ತಿರುವ ಆಯುಷ್ ಪದಕ ಖಚಿತಪಡಿಸಿಕೊಂಡಿದ್ದಲ್ಲದೆ, ತಮ್ಮ ವೃತ್ತಿಜೀವನದ ಅತಿ ದೊಡ್ಡ ಸಾಧನೆ ಮಾಡಿದ್ದಾರೆ. ವಿಶ್ವದ ಅಗ್ರ ಶ್ರೇಯಾಂಕಿತ ಆಟಗಾರರನ್ನು ಸೋಲಿಸುತ್ತಾ ಸೆಮಿಫೈನಲ್‌ಗೇರಿದ್ದ ಅವರು, ಕೆ. ವಿಟಿಡ್ಸರ್ನ್ ಅವರನ್ನು ಎದುರಿಸಿ ಚಾಂಪಿಯನ್ ಪ್ರದರ್ಶನ ನೀಡಿದ್ದಾರೆ. ಇದರೊಂದಿಗೆ ಚಿನ್ನದ ನಿರೀಕ್ಷೆ ದ್ವಿಗುಣಗೊಳಿಸಿದ್ದಾರೆ. ಶನಿವಾರದಂದು ನಡೆದ ಪಂದ್ಯದಲ್ಲಿ ಅವರು ಕಠಿಣ ಪೈಪೋಟಿಯಲ್ಲಿ 3-1ರಿಂದ ಗೆದ್ದರು. ಮೊದಲಿನ ಸುತ್ತಲ್ಲಿ ಸೋತರೂ ಉಳಿದೆರಡೂ ಸುತ್ತಿನಲ್ಲಿ ಮಿಂಚಿದರು.



ಕಂಬ್ಯಾಕ್ ಕಿಂಗ್ ಆಯುಷ್

ಪಂದ್ಯದ ಆರಂಭಿಕ ಸೆಟ್‌ನಲ್ಲಿ ಪ್ಯಾರಿಸ್ ಒಲಿಂಪಿಕ್ಸ್‌ನ ಬೆಳ್ಳಿ ವಿಜೇತ ಕೆ. ವಿಟಿಡ್ಸರ್ನ್ ಮುನ್ನಡೆ ಸಾಧಿಸಿದರು. ಆಯುಷ್ ಅವರನ್ನು ಸರ್ವ್ ಅಂಕಗಳಲ್ಲಿ ಕಟ್ಟಿದ ಅವರು, 5 ಅಂಕಗಳ ಮುನ್ನಡೆ ಹಿಗ್ಗಿಸುತ್ತಾ 21 ಅಂಕದ ಗಳಿಸಿದರು. ಇತ್ತ ಭಾರತೀಯ 10 ಮಾತ್ರ ಅಂಕಗಳಿಸಿದ್ದರು. ಮೊದಲ ಸೆಟ್‌ನಲ್ಲಿ ಹಿನ್ನಡೆಯ ಬಿಸಿ. ಎದುರಿಗೆ ನಂಬರ್ 1 ಆಟಗಾರ... ಹೀಗೆ ಸವಾಲುಗಳನ್ನು ಎದುರಿಸಿದ ಆಯುಷ್ ಯಾವುದೇ ಸಮಯದಲ್ಲಿ ಒತ್ತಡಕ್ಕೊಳಗಾಗದೆ ಸ್ಥೈರ್ಯ ತೋರಿಸಿದರು. ಎರಡನೇ ಸೆಟ್‌ನ ಆರಂಭದಲ್ಲೇ ಆಕ್ರಮಣಕಾರಿ ಮನಸ್ಥಿತಿಯೊಂದಿಗೆ ಆಟವಾಡಿದ ಅವರು, ಮುನ್ನಡೆ ಸಾಧಿಸಿದರು. ಇತ್ತ ಎದುರಾಳಿ ಕೂಡ ಅದೇ ಪ್ರದರ್ಶನ ನೀಡಿದ ನಿಟ್ಟಿನಲ್ಲಿ ಸಮಬಲವಾಯಿತು. ಆದರೆ ಮುನ್ನಡೆ ಹಿಗ್ಗಿಸುತ್ತಾ ಬಂದ ಆಯುಷ್ ಸೆಟ್ ಅನ್ನು 21-19ರಿಂದ ಗೆದ್ದುಕೊಂಡರು. ನಿರ್ಣಾಯಕ ಹಂತಕ್ಕೆ ಕೊಂಡೊಯ್ದರು. ಅಲ್ಲಿ ಮೊದಲಿನಿಂದಲೂ ನಿಖರ ಪ್ರದರ್ಶನ ನೀಡುತ್ತಾ, ಮುನ್ನಡೆ ಕಾಯ್ದುಕೊಂಡರು. ಮಧ್ಯಮ ಆಟದಲ್ಲಿ ಎದುರಾಳಿ ಕಂಬ್ಯಾಕ್ ಮಾಡಿದರೂ ಗೆಲುವಿಗೆ ಅಡಚಣೆಯಾಗಲಿಲ್ಲ. ಪಂದ್ಯವನ್ನು 21-17ರಿಂದ ಗೆದ್ದ ಆಯುಷ್ ಫೈನಲ್‌ಗೇರಿದ್ದಾರೆ.

ಏಷ್ಯನ್ ಕುಸ್ತಿ: ಭಾರತ ಉತ್ತಮ ಪ್ರದರ್ಶನ

ಹೊಸದಿಲ್ಲಿ: ಕಿರ್ಗಿಸ್ತಾನದ ಬಿಶ್ಕೆಕ್ನಲ್ಲಿ ನಡೆದ ಏಷ್ಯನ್ ಕುಸ್ತಿ ಚಾಂಪಿಯನ್‌ಶಿಪ್‌ನಲ್ಲಿ ಭಾರತೀಯ ಕುಸ್ತಿಪಟುಗಳು ಉತ್ತಮ ಪ್ರದರ್ಶನ ನೀಡಿ ಗಮನಸೆಳೆದಿದ್ದಾರೆ.

ಪುರುಷರ ಫ್ರೀಸ್ಟೈಲ್ ವಿಭಾಗದಲ್ಲಿ ಸುಜೀತ್ ಕಲ್ಕಲ್ (65 ಕೆಜಿ), ಅಭಿಮನ್ಯು (70 ಕೆಜಿ) ಮತ್ತು ಸಂದೀಪ್ ಸಿಂಗ್ ಮಾನ್ (79 ಕೆಜಿ) ಫೈನಲ್‌ಗೆ ಪ್ರವೇಶಿಸಿ ಪದಕ ಖಚಿತಪಡಿಸಿಕೊಂಡಿದ್ದಾರೆ. ಸುಜೀತ್ ಕಲ್ಕಲ್ ಅವರು ಕಿರ್ಗಿಸ್ತಾನದ ರುಸ್ತಂಝಾನ್ ಕಾಖರೊವ್ ಅವರನ್ನು 10-0 ಅಂತರದಲ್ಲಿ ಹಾಗೂ ತಜಿಕಿಸ್ತಾನದ ವಿಶ್ವ ಕಂಚಿನ ಪದಕ ವಿಜೇತ ಅಬ್ದುಲ್ಲರ‍್ಖಿದ್ ಕುಡಿಯೆವ್ ಅವರನ್ನು 7-2 ಅಂತರದಲ್ಲಿ ಸೋಲಿಸಿದರು. ಚಿನ್ನದ ಪದಕಕ್ಕಾಗಿ ಅವರು ಉಜ್ಬೇಕಿಸ್ತಾನದ ಅಲಿಬೆಗ್ ಆಲಿಬೆಗೋವ್ ವಿರುದ್ಧ ಸೆಣಸಲಿದ್ದಾರೆ.


ಅಭಿಮನ್ಯು ಅವರು ಚೀನಾದ ಸಿಮಿಂಗ್ ವಾಂಗ್ ಅವರನ್ನು 11-1 ಅಂತರದಲ್ಲಿ ಸೋಲಿಸಿ, ಬಳಿಕ ಕಿರ್ಗಿಸ್ತಾನದ ವಿಶ್ವ ಕಂಚಿನ ಪದಕ ವಿಜೇತ ಹಾಗೂ ಏಷ್ಯನ್ ಚಾಂಪಿಯನ್ ಎರ್ನಜಾರ್ ಅಕ್ಮತಾಲಿಯೇವ್ ವಿರುದ್ಧ 6-3 ಅಂತರದಲ್ಲಿ ಜಯ ಸಾಧಿಸಿದರು. ಫೈನಲ್‌ನಲ್ಲಿ ಅವರು ಮಂಗೋಲಿಯಾದ ತುಲ್ಗಾ ತುಮೂರ್ ಒಚಿರ್ ವಿರುದ್ಧ ಮುಖಾಮುಖಿಯಾಗಲಿದ್ದಾರೆ. ಸಂದೀಪ್ ಸಿಂಗ್ ಮಾನ್ ಅವರು ಜೋರ್ಡಾನ್‌ನ ಎರ್ಝೋರ್ ಶಮಿಲ್ ಇಸಾಕೋವ್ ಅವರನ್ನು 6-5 ಅಂತರದಲ್ಲಿ ಮತ್ತು ತಜಿಕಿಸ್ತಾನದ ಸೋಮೋಂಜೋನ್ ಇಕ್ರಮೋವ್ ಅವರನ್ನು 10-0 ಅಂತರದಲ್ಲಿ ಸೋಲಿಸಿ ಫೈನಲ್‌ಗೆ ಪ್ರವೇಶಿಸಿದ್ದಾರೆ. ಅವರು ಚಿನ್ನದ ಹೋರಾಟದಲ್ಲಿ ಜಪಾನ್‌ನ ಕೇವನ್ ಫುರೆಹ್ವಾಖಿ ಅವರನ್ನು ಎದುರಿಸಲಿದ್ದಾರೆ. ಇನ್ನೂ ಅಂಕುಶ್ (57 ಕೆಜಿ) ಮತ್ತು ವಿಕ್ಕಿ (97 ಕೆಜಿ) ಕಂಚಿನ ಪದಕದ ಹೋರಾಟದಲ್ಲಿ ಉಳಿದಿದ್ದಾರೆ.



ಮಹಿಳೆಯರ ವಿಭಾಗದಲ್ಲಿ: ಮಹಿಳಾ ವಿಭಾಗದಲ್ಲಿ ಮೀನಾಕ್ಷಿ ಅವರು ಚೀನಾದ ಜಿನ್ ಝೂಂಗ್ ವಿರುದ್ಧ 10-0 ಅಂತರದಲ್ಲಿ ಸೋತು ಬೆಳ್ಳಿ ಪದಕ ಪಡೆದರು. ಇನ್ನೂ ಮೋನಿಕಾ (65 ಕೆಜಿ) ದಕ್ಷಿಣ ಕೊರಿಯಾದ ಹ್ಯಾನ್‌ಬಿಟ್ ಲೀ ಅವರನ್ನು 9-0 ಅಂತರದಲ್ಲಿ ಸೋಲಿಸಿ ಕಂಚು ಗೆದ್ದರು. ಹರ್ಷಿತಾ (72 ಕೆಜಿ) ಉಜ್ಬೇಕಿಸ್ತಾನದ ಸೆವಿಂಚೋಯ್ ಫೊಲ್ಟ್ವೊನೋವಾ ಅವರನ್ನು 5-0 ಅಂತರದಲ್ಲಿ ಸೋಲಿಸಿ ಕಂಚಿನ ಪದಕ ಪಡೆದುಕೊಂಡರು.

ಪದಬಂಧ 5951

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
2. ಈತ ಪಾದಸೇವಕ-ಆಳು (5)
4. ಪತ್ರಿಕೆಗಳಿಗೆ ಸುದ್ದಿ ಕೊಡುವವನು (5)
7. ಸಮತಟ್ಟಾದ ನೆಲ-ಪ್ರದೇಶ (2)
9. ಪಟ್ಟಣವಾಸಿಗಳಲ್ಲಿರುವ ಸಭ್ಯತೆ (5)
11. ಕಡ್ಡಿಪೆಟ್ಟಿಗೆಯ ಇನ್ನೊಂದು ಹೆಸರು (5)
14. ಮಟ್ಟಕಂದ ಇಲ್ಲಿ ಉಲ್ಟಾ ಕಾಣುತ್ತಿದೆ (2)
17. ಬರಗಾಲದಲ್ಲುಂಟಾಗುವ ಭೀಕರ ಸ್ಥಿತಿ (5)
18. ಪಾತ್ರೆಗಳಿಗೆ ತವರಿನ ಲೇಪನಕ್ಕಾಗಿ ಬಳಸುವ ವಸ್ತು (5)

ಮೇಲಿನಿಂದ ಕೆಳಕ್ಕೆ
1. ವನಿತೆ ನನಗೆ ಕೊಟ್ಟ ಬೆಣ್ಣೆ (3)
2. ಯಾವಾಗಲೂ ಚಲಿಸುತ್ತಿರುವಂಥಾದ್ದು (2)
3. ಪಾರ್ವತಿಯ ಪತಿಯಾಗಿ ಶಿವ (3)
5. ಹಾಡುಗಾರಿಕೆಯು ಕಡೆಯಲ್ಲಿ ದೀರ್ಘವಾಗಿದೆ (3)
6. ಸಂಕಟದಿಂದ ದಾಟಿದ ಸೇತುವೆ (2)
8. ಸಹಾಯ-ಆಸರೆಯಿಲ್ಲಿ ತಲೆಕೆಳಗಾಗಿದೆ (3)
10. ಆಂಧ್ರಪ್ರದೇಶದ ಜನರ ಭಾಷೆಯಿದು (3)
12. ತೀವ್ರವಾದ ಬೆಂಕಿ-ಉರಿಯಿದು (2)
13. ಸಾವು ಇಲ್ಲಿ ಉಲ್ಟಾ ಬಂದಿದೆ (3)
15. ಇದು ಮನದ ಆಸೆ-ಕಾಮನೆ (4)
16. ವಾಯುಮಾರ್ಗದ ವಾಹನವಿದು (3)
17. ಇದು ಉಪ್ಪಿನ ರುಚಿಯುಳ್ಳದ್ದು (2)

5950 ಉತ್ತರ

ಎಡದಿಂದ ಬಲಕ್ಕೆ:
3. ಪರಮಗತಿ
5. ಶೀತಕಯಂತ್ರ
6. ಚಕ್ರವಾಕ 7. ಜೀವ
8. ಜಡತನ 10. ನನಸಾಗು
12. ರತ್ನ 13. ನಾರುಮಡಿ
15. ಭಗವದ್ಗೀತೆ
16. ಗರಲಗ್ರೀವ

ಮೇಲಿನಿಂದ ಕೆಳಕ್ಕೆ :
1. ವಶೀಲಿ 2. ಶಂಕರಗಂಡ
3. ಪತ್ರ 4. ತಿರುಕ 6. ಚವನ
9. ಜರಡಿ 11. ಕವಲುಮನ
13. ನಾಕಿಗ 14. ಕಂತೆಗ
15. ಭವ

ಕಿರುಸುದ್ದಿ

ಲೋಡರ್ ಮೇಲೆ ಬಸ್ ಚಾಲಕನಿಂದ ಚೂರಿ ಇರಿತ

ಮಡಿಕೇರಿ: ಲೋಡರ್ ಮೇಲೆ ಬಸ್ ಚಾಲಕನೊಬ್ಬ ಚೂರಿಯಿಂದ ಚುಚ್ಚಿದ ಘಟನೆ ಗೋಣಿಕೊಪ್ಪದಲ್ಲಿ ಶನಿವಾರ ಬೆಳಗಿನ ಜಾವನಡೆದಿದೆ. ಬಸ್ ನಿಲ್ದಾಣದ ಶಬರಿ ಬೇಕರಿಯ ಮುಂಭಾಗದಲ್ಲಿ ಈ ಘಟನೆ ನಡೆದಿದ್ದು, ಲೋಡರ್ ಸಬ್ಬಲ್ ಎಂಬಾತನ ಎಡಭಾಗದ ಹೊಟ್ಟೆಯ ಭಾಗಕ್ಕೆ, ಬಸ್ಸಿನ ಚಾಲಕ ಪ್ರವೀಣ್ ಎಂಬಾತ ಚೂರಿಯಿಂದ ಚುಚ್ಚಿರುವುದಾಗಿ ತಿಳಿದು ಬಂದಿದೆ. ಸಬ್ಬಲ್'ನನ್ನು ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ. ಸ್ಥಳೀಯ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

ಮಡಿಕೇರಿ: ಕಾಫಿ ತೋಟದಲ್ಲಿ ನವಜಾತ ಶಿಶು ಪತ್ತೆ

ಮಡಿಕೇರಿ: ಜನಿಸಿದ ಕೆಲವೇ ಗಂಟೆಗಳಲ್ಲಿ ಹೆಣ್ಣು ಶಿಶುವನ್ನು ಕಾಫಿ ತೋಟಕ್ಕೆ ಎಸೆದಿರುವ ಅಮಾನವೀಯ ಕೃತ್ಯ ಕೊಡಗಿನ ಮೂರ್ನಾಡು ಸಮೀಪ ಬೆಳಕಿಗೆ ಬಂದಿದೆ. ಮೂರ್ನಾಡು ಸಮೀಪದ ಬೇತ್ರಿ ವ್ಯಾಪ್ತಿಯ ಹೆಮ್ಮಾಡು ಗ್ರಾಮದ ತೋಟವೊಂದರಲ್ಲಿ ಈ ಅಮಾನವೀಯ ದೃಶ್ಯ ಕಂಡುಬಂದಿದ್ದು, ಬಟ್ಟೆಯಿಲ್ಲದೆ, ಶೀತದಿಂದ ನಡುಗುತ್ತಿರುವ ಸ್ಥಿತಿಯಲ್ಲಿ ಶಿಶು ಇರುವುದನ್ನು ಗಮನಿಸಿದ ಸ್ಥಳೀಯರೊಬ್ಬರು ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಮಾಹಿತಿ ನೀಡಿದ್ದಾರೆ. ಮಕ್ಕಳ ವಿಶೇಷ ಪೊಲೀಸ್ ಘಟಕ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಶಿಶುವಿನ ರಕ್ಷಣೆ ಮಾಡಿದ್ದು, ಜಿಲ್ಲಾಸ್ಪತ್ರೆಗೆ ದಾಖಲಿಸಿ ಶಿಶುವಿನ ಆರೈಕೆ ಮಾಡಲಾಗಿದೆ. ಈ ಕುರಿತು ಮಡಿಕೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕೃತ್ಯ ಎಸಗಿರುವ ಆರೋಪಿಗಳ ಪತ್ತೆಗಾಗಿ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

ಕಣಜದ ಹುಳು ದಾಳಿ: ಕೆಎಸ್‌ಆರ್‌ಟಿಸಿ ಚಾಲಕನಿಂದ ಮಹಿಳೆಗೆ ರಕ್ಷಣೆ

ಕಾಸರಗೋಡು: ಕಣಜದ ಹುಳುಗಳ ದಾಳಿಯಿಂದ ಮಹಿಳೆಯನ್ನು ಕೆಎಸ್‌ಆರ್‌ಟಿಸಿ ಬಸ್ ಚಾಲಕ ರಕ್ಷಿಸಿದ ಘಟನೆ ನಡೆದಿದೆ. ಕೆಎಸ್‌ಆರ್‌ಟಿಸಿ ಹೊಸದುರ್ಗ ಸಬ್ ಡಿಪ್ಪೋದ ಚಾಲಕ ನೀಲೇಶ್ವರ ಕಣಿಚ್ಚಿರ ನಿವಾಸಿ ಕೆ.ರಾಜೀವನ್ ಎಂಬವರು ಕಣಜದ ಹುಳುಗಳ ದಾಳಿಯಿಂದ ಮಹಿಳೆಯನ್ನು ರಕ್ಷಿಸಿದ ವ್ಯಕ್ತಿಯಾಗಿದ್ದಾರೆ. ಅವರು ಶುಕ್ರವಾರ ಬೆಳಿಗ್ಗೆ ಚೆರ್ವತ್ತೂರಿನಿಂದ ಕಯ್ಯೂರು ಮೂಲಕ ನೀಲೇಶ್ವರಕ್ಕೆ ಬಸ್ ಚಲಾಯಿಸಿಕೊಂಡು ಬರುತ್ತಿದ್ದ ದಾರಿ ಮಧ್ಯೆ ಕಯ್ಯೂರು ಅರಯಕಡವ್ ಸೇತುವೆ ಬಳಿ ತಲುಪಿದಾಗ ಅಲ್ಲಿ ಮಣ್ಣಿನ ಪಾತ್ರೆಗಳ ಮಾರಾಟದಲ್ಲಿ ತೊಡಗಿದ್ದ ಎರಿಕುಳ ನಿವಾಸಿ ಕಸ್ತೂರಿ ಎಂಬ ಮಹಿಳೆಯ ಮೇಲೆ ಕಣಜದ ಹುಳುಗಳು ದಾಳಿ ನಡೆಸುತ್ತಿರುವುದನ್ನು ಕಂಡ ರಾಜೀವನ್ ತಕ್ಷಣ ಬಸ್ ನಿಲ್ಲಿಸಿ ಮಹಿಳೆಯ ದೇಹದ ಮೇಲೆ ಶಾಲು ಹೊದೆಸಿ ಕಣಜದ ಹುಳುಗಳ ದಾಳಿಯಿಂದ ರಕ್ಷಿಸಿದರು. ಈ ಮಧ್ಯೆ ರಾಜೀವನ್‌ರ ಮೇಲೂ ಕಣದ ಹುಳುಗಳು ದಾಳಿ ನಡೆಸಿದ್ದು ಅದರ ನೋವನ್ನು ಸಹಿಸಿಕೊಂಡು ರಾಜೀವನ್ ಬಸ್ಸಿಗೇರಿ ಅದರಲ್ಲಿದ್ದ ಪ್ರಯಾಣಿಕರೆಲ್ಲರನ್ನು ನೀಲೇಶ್ವರ ನಿಲ್ದಾಣದಲ್ಲಿ ಇಳಿಸಿ ಬಳಿಕ ನೀಲೇಶ್ವರ ತಾಲೂಕು ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಪಡೆದರು. ಕಣಜದ ಹುಳುಗಳ ದಾಳಿಗೊಳಗಾದ ಕಸ್ತೂರಿ ಕೂಡಾ ಕಯ್ಯೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದರು. ಅವರನ್ನು ರಕ್ಷಿಸಿದ ಚಾಲಕ ರಾಜೀವನ್‌ರ ಮಾನವೀಯತೆ ನಿಲುವು ಎಲ್ಲರ ಪ್ರಶಂಸೆಗೆ ಪಾತ್ರವಾಗಿದೆ.

ಬಾಲಕನಿಗೆ ಬೈಕ್ ನೀಡಿದ್ದ ಮಾಲಕನ ವಿರುದ್ಧ ಕೇಸು

ಕುಂಬಳೆ: ಅಪ್ರಾಪ್ತ ಬಾಲಕನಿಗೆ ಚಲಾಯಿಸಲು ಬೈಕ್ ನೀಡಿದ್ದ ಮಾಲಕನ ವಿರುದ್ಧ ಕುಂಬಳೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೊಗ್ರಾಲ್ ಪುತ್ತೂರು ರೆಹ್ಮತ್ ನಗರದ ಅಬ್ದುಲ್ ಖಾದರ್ ಎಂಬವರ ವಿರುದ್ಧ ಈ ಪ್ರಕರಣ ದಾಖಲಿಸಲಾಗಿದೆ. ಮೊಗ್ರಾಲ್ ಕುತುಬ್ ನಗರದಲ್ಲಿ ಪೊಲೀಸರು ಶುಕ್ರವಾರ ಅಪ್ರಾಪ್ತ ಬೈಕ್ ಚಲಾಯಿಸುವುದನ್ನು ಕಂಡ ಪೊಲೀಸರು ಆ ಬೈಕ್‌ನ್ನು ತಕ್ಷಣ ವಶಕ್ಕೆ ತೆಗೆದುಕೊಂಡು ನಂತರ ಅದರ ಮಾಲಕನ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸ್ಕೂಟರ್‌ಗೆ ಟಿಪ್ಪರ್ ಡಿಕ್ಕಿ: ಮಹಿಳೆ ಸಾವು

ಕುಂದಾಪುರ: ಸ್ಕೂಟರ್‌ಗೆ ಹಿಂದಿನಿಂದ ಟಿಪ್ಪರ್ ಡಿಕ್ಕಿ ಹೊಡೆದು ಸಹಸವಾರೆ ಶಾರದಾ (54) ಮೃತಪಟ್ಟ ಘಟನೆ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಬೀಜಾಡಿ ಎಂಬಲ್ಲಿ ನಡೆದಿದೆ. ಬ್ರಹ್ಮಾವರ ವಡ್ಡರ್ಸೆ ಗ್ರಾಮದ ಅಜಿತ ಎಂಬವರು ಮನೆಯಿಂದ ಕೋಟೇಶ್ವರದ ಅಂಕದಕಟ್ಟೆ ಕಡೆಗೆ ಸ್ಕೂಟರ್‌ನಲ್ಲಿ ತಾಯಿ ಶಾರದ (54) ಅವರನ್ನು ಕುಳ್ಳಿರಿಸಿ ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ಹೋಗುತ್ತಿರುವಾಗ ಬೀಜಾಡಿಯ ಪೂಜಾ ಟೈಲ್ಸ್ ಎದುರು ಟಿಪ್ಪರ್ ಸ್ಕೂಟರ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ಶಾರದಾ ಅವರು ರಸ್ತೆಗೆ ಬಿದ್ದು ಅವರ ದೇಹದ ಮೇಲೆ ಟಿಪ್ಪರ್ ಹರಿದು ಗಂಭೀರವಾಗಿ ಗಾಯಗೊಂಡಿದ್ದರು. ಕೂಡಲೇ ಅವರನ್ನು ಚಿಕಿತ್ಸೆಗಾಗಿ ಮಣಿಪಾಲ ಕೆಎಂಸಿ ಆಸ್ಪತ್ರೆಗೆ ಕರೆದುಕೊಂಡು ಹೋದಲ್ಲಿ ವೈದ್ಯರು ಪರೀಕ್ಷಿಸಿ ಮೃತಪಟ್ಟಿರುವುದಾಗಿ ತಿಳಿಸಿದ್ದಾರೆ.

ಕಡಬ ತಾಲೂಕಿನ ಕೋಡಿಂಬಾಳ, 102ನೇ ನೆಕ್ಕಿಲಾಡಿ ಪರಿಸರದಲ್ಲಿ ಕೃಷಿ ಭೂಮಿಗಳಿಗೆ ಅಪಾರ ಹಾನಿ

ನದಿ ತಟದಲ್ಲಿ ಕಾಡಾನೆಗಳ ಬಿಂದಾಸ್ ಹೆಜ್ಜೆ

ಕಡಬ: ಕಡಬ ತಾಲೂಕಿನ ಕೋಡಿಂಬಾಳ, 102 ನೇ ನೆಕ್ಕಿಲಾಡಿ ಭಾಗದ ಕೋರಿಯಾರ್ ಸಮೀಪದ ಕುಮಾರಧಾರಾ ನದಿ ತಟದಲ್ಲಿ ಕಾಡಾನೆಗಳ ಹಿಂಡು ಕಾಣಿಸಿಕೊಂಡು ತೋಟಗಳಿಗೆ ಹಾನಿಗೈದ ಘಟನೆಯಿಂದಾಗಿ ಸ್ಥಳೀಯ ಜನರು ಆತಂಕಿತರಾಗಿದ್ದಾರೆ.

ಶುಕ್ರವಾರ ಕುಮಾರಾಧಾರ ನದಿಯ ಇನ್ನೊಂದು ಭಾಗ ಬಳ್ಪ ಗ್ರಾಮದ ಪಟ್ನೋಳಿ ಎಂಬಲ್ಲಿ ಆನೆಗಳು ಹಿಂಡು ಕಾಣಿಸಕೊಂಡು ಅಲ್ಲಿ ರೈತರೊಬ್ಬರ ಕೃಷಿ ನಾಶ ಮಾಡಿ ರಾತ್ರಿ ವೇಳೆಗೆ ನದಿ ದಾಟಿ ಪಂಜೊಡಿ ಭಾಗದಲ್ಲಿ ಬೀಡುಬಿಟ್ಟಿದ್ದವು. ಶನಿವಾರ ಮುಂಜಾವಿನ ವೇಳೆಗೆ ಕೋರಿಯಾರ್ ನದಿ ತೀರದಲ್ಲಿ ಕಾಣಿಸಿಕೊಂಡಿವೆ. ಶುಕ್ರವಾರ ರಾತ್ರಿ ಪಂಜೋಡಿ ಭಾಗದ ನೀಶಿತ್ ಮಾಯಿಪಾಜೆ, ಹರೀಶ್ ಕೋರಿಯಾರ್ ಅವರ ತೋಟಕ್ಕೆ ನುಗ್ಗಿ ತೆಂಗು, ಅಡಿಕೆ, ಬಾಳೆ ಗಿಡಗಳನ್ನು ಚಿಂದಿ ಮಾಡಿರುವ 1 ಮರಿಯಾನೆ ಸೇರಿದಂತೆ 8 ಆನೆಗಳು ಬೆಳಗ್ಗೆ ಕೆರ್ಮಾಯಿಯ ತಮಿಳು ಕಾಲನಿ ಸಮೀಪ ಬಂದಿವೆ. ಕುಮಾರಾಧಾರ ನದಿಯ ನೀರಿಗಿಳಿದು ಆಟವಾಡುತ್ತಿದ್ದ ಆನೆಗಳನ್ನು ಊರಿನ ಜನ ಬೇರೆಡೆಗೆ ಅಟ್ಟಲು ಪಟಾಕಿ, ಗರ್ನಾಲ್ ಸಿಡಿಸಿದಾಗ ಒಮ್ಮೆ ಚದುರಿದರೂ ಬಳಿಕ ಅರ್ಧ ಭಾಗ ನದಿಯ ಇನ್ನೊಂದು ಭಾಗಕ್ಕೆ ತೆರಳಿ ಮತ್ತೆ ಹಿಂಡನ್ನು ಸೇರಿಕೊಂಡು ಕೋರಿಯಾರ್ ಭಾಗದ ಅರಣ್ಯ ಅಭಿವೃದ್ಧಿ ನಿಗಮದ ರಬ್ಬರ್ ತೋಟದಲ್ಲಿ ಸಂಜೆಯ ತನಕ ಬೀಡು ಬಿಟ್ಟಿವೆ. ಸ್ಥಳದಲ್ಲಿ ಸುಬ್ರಹ್ಮಣ್ಯ ಮತ್ತು ಪಂಜ ವಲಯದ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ರಬ್ಬರ್ ತೋಟಗಳ ಸಿಬಂದಿಗಳು ಕಾಡಾನೆಗಳ ಚಲನವಲನಗಳ ಬಗ್ಗೆ ನಿಗಾ ಇಟ್ಟು ಅವುಗಳನ್ನು ಸುರಕ್ಷಿತವಾಗಿ ಅರಣ್ಯದತ್ತ ಅಟ್ಟುವ ಕಾರ್ಯದಲ್ಲಿ ತೊಡಗಿದ್ದಾರೆ.



ಕಡಬ: ಕೋರಿಯಾರ್‌ನಲ್ಲಿ ಕುಮಾರಧಾರಾ ನದಿ ತಟದಲ್ಲಿ ಕಾಡಾನೆಗಳ ಹಿಂಡು

» ಇತ್ತೀಚಿನ ದಿನಗಳಲ್ಲಿ ಆಹಾರ ಮತ್ತು ನೀರಿನ ಕೊರತೆಯಿಂದ ಕಾಡಾನೆಗಳು ಗ್ರಾಮೀಣ ಪ್ರದೇಶಗಳಿಗೆ ಬರುತ್ತಿರುವ ಘಟನೆಗಳು ಹೆಚ್ಚಾಗುತ್ತಿದೆ.



ಇತ್ತೀಚಿನ ದಿನಗಳಲ್ಲಿ ಆಹಾರ ಮತ್ತು ನೀರಿನ ಕೊರತೆಯಿಂದ ಕಾಡಾನೆಗಳು ಗ್ರಾಮೀಣ ಪ್ರದೇಶಗಳಿಗೆ ಬರುತ್ತಿರುವ ಘಟನೆಗಳು ಹೆಚ್ಚಾಗುತ್ತಿದ್ದು, ಆ ಹಿನ್ನೆಲೆಯಲ್ಲಿ ಸಾರ್ವಜನಿಕರು ಹೆಚ್ಚಿನ ಎಚ್ಚರಿಕೆ ವಹಿಸುವಂತೆ ಅರಣ್ಯ ಇಲಾಖೆಯವರು ಮನವಿ ಮಾಡಿದ್ದಾರೆ. ಸಾರ್ವಜನಿಕರು ಆನೆಗಳ ಹತ್ತಿರ ಹೋಗಿ ಫೋಟೋ/ವೀಡಿಯೋ ಮಾಡುವ ದುಸ್ಸಾಹಸಕ್ಕೆ ಇಳಿಯಬಾರದು, ರಾತ್ರಿ ಅನಾವಶ್ಯಕ ಸಂಚಾರ ಮಾಡಬಾರದು, ತುರ್ತು ಸಂದರ್ಭದಲ್ಲಿ ಅರಣ್ಯ ಇಲಾಖೆಗೆ ಮಾಹಿತಿ ನೀಡಬೇಕೆಂದು ಅರಣ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ದಿಢೀರ್ ಎದುರಾದ ಕಾಡಾನೆ: ನಿಯಂತ್ರಣ ತಪ್ಪಿ ಸ್ಕೂಟರ್ ಸವಾರನಿಗೆ ಗಾಯ

ಮಡಿಕೇರಿ: ರಸ್ತೆ ದಾಟುತ್ತಿದ್ದ ಕಾಡಾನೆಯನ್ನು ಕಂಡು ಭಯಗೊಂಡ ಸವಾರ ನಿಯಂತ್ರಣ ತಪ್ಪಿದ ಸ್ಕೂಟರ್‌ನಿಂದ ಬಿದ್ದು ಗಾಯಗೊಂಡ ಘಟನೆ ದಕ್ಷಿಣ ಕೊಡಗಿನ ಕಾಯಿಮಾನಿ ಗ್ರಾಮದಲ್ಲಿ ಶನಿವಾರ ಬೆಳಗ್ಗೆ ನಡೆದಿದೆ.

ಪೊನ್ನಂಪೇಟೆ ತಾಲೂಕಿನ ಕಾಯಿಮಾನಿಯ ಕಾಫಿ ಮಿಲ್ ಸಮೀಪ ನಡೆದ ಈ ಘಟನೆಯಲ್ಲಿ ಪೂಜೆಕಲ್ಲು ನಿವಾಸಿ ಆರ್ಮುಗಂ (65) ಎಂಬವರೇ ಗಾಯಗೊಂಡವರಾಗಿದ್ದಾರೆ.

ಶನಿವಾರ ಮುಂಜಾನೆ ಸ್ಕೂಟರ್‌ನಲ್ಲಿ ತೆರಳುತ್ತಿದ್ದ ಆರ್ಮುಗಂ ಅವರಿಗೆ ರಸ್ತೆ ದಾಟುತ್ತಿದ್ದ ಕಾಡಾನೆಯೊಂದು ದಿಢೀರಾಗಿ ಎದುರಾಗಿದೆ. ಈ ಸಂದರ್ಭ ಗಲಿಬಿಲಿಗೊಂಡ ಆರ್ಮುಗಂ ಅವರು ಚಾಲಿಸುತ್ತಿದ್ದ ಸ್ಕೂಟರ್ ನಿಯಂತ್ರಣ ತಪ್ಪಿದ್ದು, ಅದರಿಂದ ಬಿದ್ದ ಆರ್ಮುಗಂ ಗಂಭೀರವಾಗಿ ಗಾಯಗೊಂಡಿದ್ದಾರೆ. ಅಲ್ಲಿಯೇ ಬೀಟ್‌ನಲ್ಲಿದ್ದ ಶ್ರೀಮಂಗಲ ಅರಣ್ಯ ಇಲಾಖೆಯ ಸಿಬ್ಬಂದಿಗೆ ವಿಷಯ ತಿಳಿದು, ಕುಟ್ಟ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಕೊಡಿಸಿದ್ದಾರೆ.

ಬೀಟ್‌ನಲ್ಲಿರಲು ಶಾಸಕರ ಸೂಚನೆ


ಘಟನೆಯ ವಿಷಯ ತಿಳಿದ ವೀರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್. ಪೊನ್ನಣ್ಣ ಅವರು, ಮುಖ್ಯ ರಸ್ತೆಗಳಲ್ಲಿ ಅರಣ್ಯ ಇಲಾಖೆ ಸಿಬ್ಬಂದಿಗಳು ಬೀಟ್‌ನಲ್ಲಿರುವಂತೆ ಸೂಚಿಸಿದ್ದಾರೆ. ಕಾಡಾನೆ ಇರುವಿಕೆ ಬಗ್ಗೆ ಸಾರ್ವಜನಿಕರಿಂದ ಮಾಹಿತಿ ಬಂದ ತಕ್ಷಣ ನಿಗಾ ಇಡುವಂತೆ ಅವರು ಸೂಚಿಸಿದ್ದು, ಕುಟ್ಟ-ಕಾಯಿಮಾನಿ ಮುಖ್ಯ ರಸ್ತೆ, ಹಾಗೂ ಕಾಡಾನೆ ಇರುವಿಕೆಯ ಸುಳಿವು ಇರುವೆಡೆ ಬೆಳಗ್ಗೆ 6ರಿಂದ ಸಂಜೆ 8ಗಂಟೆಯವರೆಗೆ ಬೀಟ್ ವ್ಯವಸ್ಥೆ ಮಾಡಲಾಗುವುದೆಂದು ಶ್ರೀಮಂಗಲ ವಲಯ ಅರಣ್ಯಾಧಿಕಾರಿ ಅರವಿಂದ್ ಅವರು ಮಾಹಿತಿ ನೀಡಿದ್ದಾರೆ.

ಮತದಾರರು ಬರೆದ ಭವಿಷ್ಯ ಮತಪೆಟ್ಟಿಗೆಯಲ್ಲಿ ಭದ್ರ

ಸ್ಟ್ರಾಂಗ್ ರೂಮ್‌ಗೆ ಸರ್ಪಗಾವಲು

ಕಾಸರಗೋಡು: ಕೇರಳ ವಿಧಾನಸಭೆಗೆ ನಡೆದ ಚುನಾವಣೆ ಬೆನ್ನಲ್ಲೇ ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳ ಮತದಾನ ಯಂತ್ರಗಳು ಒಳಗೊಂಡ ಪೆಟ್ಟಿಗೆಗಳನ್ನು ಕಾಸರಗೋಡು ಸರಕಾರಿ ಕಾಲೇಜು ಮತ್ತು ಕಾಞಂಗಾಡು ದುರ್ಗಾ ಹೈಯರ್ ಸೆಕೆಂಡರಿ ಶಾಲೆಯ ಸ್ಟ್ರಾಂಗ್ ರೂಮ್‌ಗಳಲ್ಲಿ ಅತೀವ ಭದ್ರತೆಯೊಂದಿಗೆ ಇರಿಸಲಾಗಿದೆ. ಇದಕ್ಕೆ ಪೊಲೀಸ್ ಮತ್ತು ಕೇಂದ್ರ ಭದ್ರತಾ ಪಡೆಯಿಂದ ಬಿಗು ಸರ್ಪಗಾವಲು ಏರ್ಪಡಿಸಲಾಗಿದೆ. ಮತ ಎಣಿಕೆ ನಡೆಯುವ ಮೇ 4ರಂದು ಬೆಳಗ್ಗೆ ಈ ಸ್ಟ್ರಾಂಗ್ ರೂಮ್‌ಗಳನ್ನು ತೆರೆಯಲಾಗುವುದು. ಇದರಿಂದಾಗಿ ಮತಯಂತ್ರಗಳಿಗೆ ಸರ್ಪಗಾವಲು ಮುಂದಿನ 22 ದಿನಗಳ ತನಕ ಮತದಾನ ಯಂತ್ರಗಳು ಸ್ಟ್ರಾಂಗ್ ರೂಮ್‌ನಲ್ಲಿ ಇರಲಿದೆ.

ಜಿಲ್ಲೆಯಲ್ಲಿ ಒಟ್ಟು 1142 ಮತಗಟ್ಟೆಗಳಲ್ಲಿ ಏ.9ರಂದು ಮತದಾನ ನಡೆದಿದ್ದು, ಆ ಪೈಕಿ ಮಂಜೇಶ್ವರ, ಕಾಸರಗೋಡು ಮತ್ತು ಉದುಮ ವಿಧಾನಸಭಾ ಕ್ಷೇತ್ರಗಳ 665 ಮತಗಟ್ಟೆಗಳಲ್ಲಿ ಚಲಾಯಿಸಲ್ಪಟ್ಟ ಮತಯಂತ್ರಗಳನ್ನು ಕಾಸರಗೋಡು ಸರಕಾರಿ ಕಾಲೇಜಿನ ಸ್ಟ್ರಾಂಗ್ ರೂಮ್‌ನಲ್ಲೂ, ಕಾಞಂಗಾಡು ಮತ್ತು ತೃಕ್ಕರೀಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಮತ ಚಲಾಯಿಸಲ್ಪಟ್ಟ 457 ಮತಗಟ್ಟೆಗಳ ಮತಯಂತ್ರಗಳನ್ನು ಕಾಞಂಗಾಡು ದುರ್ಗಾ ಹೈಯರ್ ಸೆಕೆಂಡರಿ ಶಾಲೆಯ ಸ್ಟ್ರಾಂಗ್ ರೂಮ್‌ನಲ್ಲಿ ಅತೀವ ಭದ್ರತೆಯೊಂದಿಗೆ ಇರಿಸಲಾಗಿದೆ.



» ಮತಯಂತ್ರಗಳನ್ನು ಇರಿಸಲಾಗಿದ್ದ ಭದ್ರತಾ ಕೊಠಡಿಗಳ ವಿದ್ಯುತ್ ಸರಬರಾಜನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

» ಕೇಂದ್ರ ಪಡೆ, ಪೊಲೀಸರಿಂದ ಸತತ 24 ತಾಸುಗಳ ತನಕವೂ ಸರ್ಪಗಾವಲು

ವಿದ್ಯುತ್ ಶಾರ್ಟ್‌ಸರ್ಕ್ಯೂಟ್ ಉಂಟಾಗದಂತೆ ಮುಂಜಾಗ್ರತಾ ಕ್ರಮ ಎಂಬಂತೆ ಮತಯಂತ್ರಗಳನ್ನು ಇರಿಸಲಾಗಿದ್ದ ಭದ್ರತಾ ಕೊಠಡಿಗಳ ವಿದ್ಯುತ್ ಸರಬರಾಜನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಈ ಸ್ಟ್ರಾಂಗ್ ರೂಮ್‌ಗಳ ಬಾಗಿಲುಗಳಿಗೆ ಬೀಗ ಜಡಿಯಲಾಗಿದೆ ಮಾತ್ರವಲ್ಲದೆ ಅವುಗಳ ದ್ವಾರಗಳಲ್ಲಿ ಮರದ ರೀಪುಗಳನ್ನು ಲಗತ್ತಿಸಿ ಆಣಿ ಹೊಡೆದು ಭದ್ರತೆಯನ್ನು ಇನ್ನಷ್ಟು ಖಾತರಿಪಡಿಸಲಾಗಿದೆ.

ಸ್ಟ್ರಾಂಗ್ ರೂಮ್‌ಗಳ ಬಾಗಿಲುಗಳ ಮುಂದೆ ಮಾತ್ರವಲ್ಲದೆ ಅವುಗಳ ಸುತ್ತಲೂ ಬಂದೂಕು ಹಾಗೂ ಅಗತ್ಯದ ಯಂತ್ರೋಪಕರಣಗಳೊಂದಿಗೆ ಕೇಂದ್ರ ಪಡೆ ಮತ್ತು ಪೊಲೀಸರಿಂದ ಸತತ 24 ತಾಸುಗಳ ತನಕವೂ ಸರ್ಪಗಾವಲು ಏರ್ಪಡಿಸಲಾಗಿದೆ. ಮಾತ್ರವಲ್ಲದೆ ಸ್ಟ್ರಾಂಗ್ ರೂಮ್‌ನ ಎದುರು ಮತ್ತು ಸುತ್ತಮುತ್ತಲೂಸಿಸಿಟಿವಿಕ್ಯಾಮರಾಗಳನ್ನು ಸ್ಥಾಪಿಸಲಾಗಿದೆ. ಅವುಗಳ ದೃಶ್ಯಗಳ ಮೇಲೆ ಪೊಲೀಸರು ಸದಾ ನಿಗಾ ಇರಿಸತೊಡಗಿದ್ದಾರೆ.

ಸಾಧನೆಗೆ ವಯಸ್ಸಿನ ಅಡ್ಡಿಯಲ್ಲ ಎಂದು ನಿರೂಪಿಸಿದ ಪ್ರಶಾಂತ್ ಪೂಜಾರಿ

ನಲ್ವತ್ತಮೂರರ ಹರೆಯದಲ್ಲಿ ಪಿಯುಸಿ ಪಾಸಾದ ರಿಕ್ಷಾ ಚಾಲಕ!

ಕಾರ್ಕಳ: ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಉಡುಪಿ ಜಿಲ್ಲೆ ಪ್ರಥಮ ಸ್ಥಾನ ಗಳಿಸಿದ ಬೆನ್ನಲ್ಲೇ, ಜಿಲ್ಲೆಯ ಕಾರ್ಕಳ ತಾಲೂಕಿನ ನಿಟ್ಟೆ ಗ್ರಾಮದ ಅತ್ತೂರು ನಿವಾಸಿಯಾಗಿರುವ ರಿಕ್ಷಾ ಚಾಲಕ ನಲ್ವತ್ತಮೂರರ ಹರೆಯದಲ್ಲಿ ಪಿಯುಸಿ ತೇರ್ಗಡೆಯಾದ ಆತನ ಸಾಧನೆಗೆ ಪ್ರಶಂಸೆ ವ್ಯಕ್ತವಾಗಿದೆ.



ಸಾಧನೆಗೆ ವಯಸ್ಸು ಅಡ್ಡಿಯಾಗುವುದಿಲ್ಲ!

ಹೆಸರು ಪ್ರಶಾಂತ್ ಪೂಜಾರಿ. ವೃತ್ತಿಯಲ್ಲಿ ರಿಕ್ಷಾ ಚಾಲಕ. ಅತ್ತೂರು ಸೈಂಟ್ ಲಾರೆನ್ಸ್ ಹೈಸ್ಕೂಲ್‌ನಲ್ಲಿ 1996-97ರ ಸಾಲಿನಲ್ಲಿ 9ನೇ ತರಗತಿಯಲ್ಲಿ ಅನುತ್ತೀರ್ಣಗೊಂಡ ಬಳಿಕ, ಶಾಲೆಯ ಮೆಟ್ಟಿಲಿ ಹತ್ತಲಿಲ್ಲ. ಛಲ ಹಿಡಿದು ಕಲಿಸುವ ವಾತಾವರಣ ಕೂಡಾ ಮನೆಯಲ್ಲಿ ಇರಲಿಲ್ಲ. ಆದರೆ ತಾನೊಬ್ಬ ಹೆಚ್ಚಿನ ವಿದ್ಯಾಭ್ಯಾಸದ ಮೂಲಕ ವಿದ್ಯಾವಂತನಾಗಬೇಕೆಂಬ ನಿರ್ಧಾರ ಮನಸ್ಸಿನಲ್ಲಿ ಅಚಲವಾಗಿತ್ತು. ಬಾಲ್ಯದಲ್ಲಿದ್ದ ಬಡತನ ಓದುಗೆ ಅವಕಾಶ ಕಲ್ಪಿಸಿಕೊಡಲಿಲ್ಲ. ಅದಕ್ಕಾಗಿ ಛಲ ಬಿಡದೆ ಈ ಪ್ರಯತ್ನ ಮುಂದುವರೆಸಿದ್ದಾರೆ. ವೃತ್ತಿ ಜೀವನದ ಜಂಜಾಟದ ನಡುವೆ ಹಿಡಿದ ಕಾರ್ಯದ ಫಲಿತಾಂಶವನ್ನು ಸಮಾಜದ ಮುಂದೆ ಪ್ರಕಟಿಸಿದ್ದಾರೆ.

ಪತ್ನಿ ದೀಪಾ ಸುರತ್ಕಲ್‌ನಲ್ಲಿ ಉದ್ಯೋಗದಲ್ಲಿದ್ದು, ಇಬ್ಬರು ಪುತ್ರರು ಅವರಿಗಿದ್ದಾರೆ. ಪ್ರಸ್ತುತ ಅತ್ತೂರುನಲ್ಲಿ ರಿಕ್ಷಾ ಚಾಲಕರಾಗಿ ದುಡಿಯುತ್ತಿದ್ದಾರೆ.

> **ಮುಂಜಾನೆ ಬೇಗ ಎದ್ದು ಓದುವ ಅಭ್ಯಾಸವನ್ನು ರೂಢಿಸಿಕೊಂಡಿದ್ದೆ. ಪ್ರತಿ ವಿಷಯದಲ್ಲೂ ಸಾಧ್ಯವಾದಷ್ಟು ಅರ್ಥೈಸಿಕೊಂಡು ಕಲಿಕೆಯಲ್ಲಿ ತೊಡಗಿಸಿಕೊಂಡಿದ್ದೆ. ಒಂಬತ್ತನೇ ತರಗತಿ ಅನುತ್ತೀರ್ಣವಾದ ಕೆಲವೇ ವರ್ಷಗಳಲ್ಲಿ ಕಲಿಕೆ ಮುಂದುವರೆಸಬೇಕೆಂಬ ಮನಸ್ಸು ನನ್ನಲ್ಲಿತ್ತು. ಅದು ಈಗ ಯಶಸ್ಸಾಗಿದೆ. ಮುಂದೆ ಡಿಗ್ರಿ ಪಡೆಯಬೇಕೆಂಬ ಪ್ರಯತ್ನ ಮುಂದುವರೆಸುತ್ತೇನೆ. ಕಲಿತ ವಿದ್ಯೆ ಮುಂದಿನ ಬದುಕಿಗೆ ದಾರಿದೀಪವಾಗುತ್ತದೆ ಎನ್ನುವ ಬಲವಾದ ನಂಬಿಕೆ ನನ್ನಲ್ಲಿದೆ.**
>
> ■ ಪ್ರಶಾಂತ್ ಪೂಜಾರಿ, ಅತ್ತೂರು (ರಿಕ್ಷಾ ಚಾಲಕ)

ಎಸ್‌ಎಸ್‌ಎಲ್ ಪಿಯುಸಿ...!

ಅತ್ತೂರು ಹೈಸ್ಕೂಲಿನ ಶಿಕ್ಷಕರ ನೆರವಿನಿಂದ 2024-25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದು ತೇರ್ಗಡೆ ಹೊಂದಲಾಯಿತು. ಮುಂದೆ ಕಲಿಯಬೇಕೆಂಬ ಹಂಬಲವಿದ್ದ ಕಾರಣ, ಕಾರ್ಕಳ ಯಶಸ್ವಿ ಟ್ಯುಟೋರಿಯಲ್‌ನಲ್ಲಿ ಮೂರು ತಿಂಗಳ ಕಾಲ ಪಿಯುಸಿ ಕೋಚಿಂಗ್ ಪಡೆದು ಪರೀಕ್ಷೆ ಬರೆಯಲಾಯಿತು. ಕಲಾ ವಿಭಾಗದಲ್ಲಿ 334 ಅಂಕ ಪಡೆದುಕೊಂಡಿರುವ ಅವರು, ವಿದ್ಯಾವಂತನಾಗಬೇಕೆಂಬ ಕನಸಿಗೆ ಮುನ್ನುಡಿಯಿಟ್ಟಿದ್ದಾರೆ.

ಏ.15ರಂದು ಬೆಳಗ್ಗೆ 4 ಗಂಟೆಯಿಂದ ಶಬರಿಮಲೆ ಕ್ಷೇತ್ರದಲ್ಲಿ ವಿಷು ಕಣಿ ದರ್ಶನ

ಕಾಸರಗೋಡು: ಶಬರಿಮಲೆ ಶ್ರೀ ಧರ್ಮಶಾಸ್ತಾ ಕ್ಷೇತ್ರದಲ್ಲಿ ವಿಷು ಸಂಕ್ರಮಣ ಪೂಜೆಗಳಿಗಾಗಿ ಶುಕ್ರವಾರ ಸಂಜೆ ಬಾಗಿಲು ತೆರೆದಿದ್ದು, ಏ.18ರ ವರೆಗೆ ಪೂಜೆ ಮತ್ತು ದರ್ಶನಕ್ಕೆ ಸೌಲಭ್ಯಗಳಿವೆ. ಶುಕ್ರವಾರ ಸಂಜೆ ಪ್ರಧಾನ ಅರ್ಚಕ ಇ.ಡಿ.ಪ್ರಸಾದ್ ನಂಬೂದಿರಿ ಅವರು ತಂತ್ರಿ ಕಂಠರರ್ ಮಹೇಶ್ ಮೋಹನರ್ ಅವರ ಸಮ್ಮುಖದಲ್ಲಿ ದೇವಾಲಯದ ಬಾಗಿಲು ತೆರೆದರು.

ಲಕ್ಷಾಂತರ ಭಕ್ತರು ಕಾಯುತ್ತಿರುವ ವಿಷು ಕಣಿ ದರ್ಶನ ಏ.15ರಂದು ಬೆಳಗ್ಗೆ 4 ಗಂಟೆಯಿಂದ 7ರ ವರೆಗೆ ಇರುತ್ತದೆ. ತಂತ್ರಿ ಮತ್ತು ಪ್ರಧಾನ ಅರ್ಚಕರು ಯಾತ್ರಿಕರಿಗೆ ವಿಷು ಕೈನೀಟ್ಟಂ (ಉಡುಗೊರೆ ಪ್ರಸಾದ) ನೀಡಲಿದ್ದಾರೆ.



ವಿಷು ದಿನನಂದು ಅತೀ ಹೆಚ್ಚು ಯಾತ್ರಿಕರು ದರ್ಶನಕ್ಕೆ ಬರುತ್ತಿರುವ ಹಿನ್ನೆಲೆಯಲ್ಲಿದೇವಸ್ವಂಮಂಡಳಿಯುಸಕಲ ಸಿದ್ಧತೆಗಳನ್ನು ಕೈಗೊಂಡಿದೆ. ಏ.18ರಂದು ರಾತ್ರಿ 10 ಗಂಟೆಗೆ ದೇವಾಲಯದ ಬಾಗಿಲು ಮುಚ್ಚಲಾಗುವುದು.

ಪಂಪಾ - ನೀಲಕ್ಕಲ್ ಚೈನ್ ಸರ್ವೀಸ್‌ಗಾಗಿ ಕೆಎಸ್‌ಆರ್‌ಟಿಸಿ 76 ಬಸ್‌ಗಳನ್ನು ವ್ಯವಸ್ಥೆಮಾಡಿದೆ. ಅವುಗಳಲ್ಲಿ 12 ಎಸಿ, 14 ನೋನ್ ಎಸಿ, 50 ಫಾಸ್ಟ್ ಮತ್ತು ಸೂಪರ್ ಫಾಸ್ಟ್ ಬಸ್‌ಗಳಾಗಿವೆ. ಚೆಂಗನ್ನೂರು, ಪತ್ತನಂತ್ತಿಟ್ಟ, ತಿರುವನಂತಪುರ, ಎರುಮೇಲಿ ಮತ್ತು ಕುಮಿಳಿಗಳಿಂದ ಪಂಪಾಗೆ ವಿಶೇಷ ದೂರದ ಸೇವೆಗಳನ್ನು ಒದಗಿಸಲಾಗುವುದು. ಚೆಂಗನ್ನೂರು ಡಿಪೋಗೆ 40 ಬಸ್, ಪತ್ತನಂತ್ತಿಟ್ಟಕ್ಕೆ 15 ಮತ್ತು ಕುಮಿಳಿಗೆ 4 ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ.

ಕಾಡೂರು ಗ್ರಾ.ಪಂ.: ತ್ಯಾಜ್ಯ ಎಸೆದವರಿಂದ ಕಸ ತೆಗೆಸಿ, 5000 ರೂ. ದಂಡ ವಸೂಲಿ!

ಉಡುಪಿ: ನಿರಂತರವಾಗಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕಸ ಸುರಿಯುತ್ತಿದ್ದ ಮಹಿಳೆಗೆ ರೂ. 5000 ದಂಡ ವಿಧಿಸಿ ಸುದ್ದಿಯಾಗಿದ್ದ ಕಾಡೂರು ಗ್ರಾಮ ಪಂಚಾಯತ್, ತ್ಯಾಜ್ಯ ಎಸೆಯುವವರ ವಿರುದ್ಧ ಕಠಿಣ ಕ್ರಮಕ್ಕೆ ಮತ್ತೊಮ್ಮೆ ಮುಂದಾಗಿದೆ.

ಪ್ಲಾಸ್ಟಿಕ್, ಬಾಟಲ್ ಸೇರಿದಂತೆ ಪಂಚಾಯತ್ ವ್ಯಾಪ್ತಿಯ ರಸ್ತೆ ಪಕ್ಕದಲ್ಲಿ ಕಸ ಸುರಿದಿದ್ದ ಜನಾರ್ದನ್ ಎನ್ನುವ ವ್ಯಕ್ತಿಗೆ 5000 ರೂ. ದಂಡ ವಿಧಿಸುವುದರೊಂದಿಗೆ ಅವರಿಂದಲೇ ಕಸ ತೆಗೆಸಿ, ವಿಲೇವಾರಿಗೆ ಕಳುಹಿಸುವ ಮೂಲಕ ಮತ್ತೊಮ್ಮೆ ಎಚ್ಚರಿಕೆಯ ಸಂದೇಶ ನೀಡಿದೆ.



» ತ್ಯಾಜ್ಯ ಎಸೆಯುವವರ ವಿರುದ್ಧ ಕಠಿಣ ಕ್ರಮಕ್ಕೆ ಮತ್ತೊಮ್ಮೆ ಮುಂದಾಗಿದೆ.

ಉಡುಪಿ ಜಿಲ್ಲಾ ಪಂಚಾಯತ್ ನಿರ್ದೇಶನದಂತೆ ಹಾಗೂ ಗ್ರಾಮ ಪಂಚಾಯತ್‌ನ ಉಪವಿಧಿಗಳ ಪ್ರಕಾರ ರೂ. 25000ಗಳವರೆಗೆ ದಂಡನೆ ವಿಧಿಸುವ ಅವಕಾಶಗಳಿದ್ದು, ತ್ಯಾಜ್ಯವನ್ನು ವೈಜ್ಞಾನಿಕ ವಿಲೇವಾರಿಗೆ ನೀಡುವಂತೆ ಮತ್ತು ಯಾವುದೇ ಕಾರಣಕ್ಕೂ ಎಲ್ಲೆಂದರಲ್ಲಿ ಎಸೆಯದಂತೆ ಪ್ರಕಟಣೆಯಲ್ಲಿ ಸೂಚಿಸಿದೆ.

ತಲಪಾಡಿ - ಕಾಸರಗೋಡು - ಚೆಂಗಳ ಹೈವೇ 66 ಪ್ರಥಮ ರೀಚ್‌ನಲ್ಲಿ ಕಾರ್ಯಾರಂಭಗೊಳ್ಳದ ಸಿಸಿ ಟಿವಿ ಕ್ಯಾಮರಾ | ಹೆಚ್ಚುತ್ತಿರುವ ಅಪಘಾತಗಳು

ರಾಷ್ಟ್ರೀಯ ಹೆದ್ದಾರಿಯಲ್ಲಿ ಪಾಲನೆಯಾಗುತ್ತಿಲ್ಲ ವಾಹನ ಸುರಕ್ಷತಾ ನಿಯಮ!

ಕಾಸರಗೋಡು: ಜಿಲ್ಲೆಯಲ್ಲಿ ನೂತನವಾಗಿ ಹಾಗೂ ಆಧುನಿಕ ಯೋಜನೆಯಡಿ ನಿರ್ಮಿಸಲಾದ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನ ಅಪಘಾತಗಳ ಸಂಖ್ಯೆಯಲ್ಲಿ ಭಾರೀ ಏರಿಕೆಯಾಗುತ್ತಿದೆ. ಈ ಮಧ್ಯೆ ರಾಷ್ಟ್ರೀಯ ಹೆದ್ದಾರಿ - 66ರ ತಲಪಾಡಿಯಿಂದ ಕಾಸರಗೋಡು ಮೂಲಕ ಚೆಂಗಳ ತನಕದ ಪ್ರಥಮ ರೀಚ್‌ನ ಕಾಮಗಾರಿ ಪೂರ್ತಿಗೊಂಡಿದ್ದು ಅಧಿಕೃತವಾಗಿ ಉದ್ಘಾಟನೆಗೊಂಡಿದೆ.

ಆದರೆ ರಸ್ತೆ ಸುರಕ್ಷತಾ ನಿಯಮಗಳು ಪೂರ್ಣರೂಪದಲ್ಲಿ ಜಾರಿಗೊಂಡಿಲ್ಲ. ಮಾತ್ರವಲ್ಲದೆ ಕಾನೂನುಗಳನ್ನು ವಾಹನ ಚಾಲಕರು ಪಾಲಿಸುತ್ತಿಲ್ಲ ಎಂಬ ಆರೋಪವೂ ವ್ಯಾಪಕವಾಗಿದೆ. ಈ ಹಿನ್ನೆಲೆಯಲ್ಲಿ ಹೊಸ ರಾಷ್ಟ್ರೀಯ ಹೆದ್ದಾರಿಯು ಪದೇ ಪದೇ ಅವಘಡಗಳು ಸಂಭವಿಸುವ ಅಪಘಾತ ವಲಯವಾಗಿ ಮಾರ್ಪಡುತ್ತಿದೆ.

ರಾಷ್ಟ್ರೀಯ ಹೆದ್ದಾರಿಯನ್ನು ತಿಂಗಳುಗಳ ಹಿಂದೆ ಪ್ರಧಾನಮಂತ್ರಿನರೇಂದ್ರಮೋದಿಯವರುಕೊಚ್ಚಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಸಮಾರಂಭದಲ್ಲಿ ಲೋಕಾರ್ಪಣೆಗೊಳಿಸಿದ್ದರು. ಆದರೂ ನಿಯಮ ಉಲ್ಲಂಘನೆಗಳನ್ನು ಪತ್ತೆಹಚ್ಚುವ ನಿಟ್ಟಿನಲ್ಲಿ ಸ್ಥಾಪಿಸಲಾದ ಅತ್ಯಾಧುನಿಕ ಮಾದರಿಯ ಸಿಸಿ ಟಿವಿ ಕ್ಯಾಮರಾಗಳು ಸಮರ್ಪಕವಾದ ರೀತಿಯಲ್ಲಿ ಇನ್ನೂ ಕಾರ್ಯಾರಂಭಗೊಳ್ಳದಿರುವುದು ವಿಪರ್ಯಾಸವಾಗಿದೆ. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆಂದು ದೂರಲಾಗಿದೆ.

ಇದರ ಲಾಭ ಪಡೆಯುತ್ತಿರುವ ವಾಹನ ಚಾಲಕರು ಸುರಕ್ಷಾನಿಯಮಗಳನ್ನುಪಾಲಿಸದೆಬೇಕಾಬಿಟ್ಟಿಯಾಗಿ ವಾಹನಗಳನ್ನು ಚಲಾಯಿಸುತ್ತಿರುವುದು ಕಂಡು ಬರುತ್ತಿದೆ. ಇನ್ನೊಂದೆಡೆ ರಾಷ್ಟ್ರೀಯ ಹೆದ್ದಾರಿಯಲ್ಲಿ ದ್ವಿಚಕ್ರ, ತ್ರಿಚಕ್ರ ಸೇರಿದಂತೆ ಸಣ್ಣಪುಟ್ಟ ವಾಹನಗಳು ಸಂಚರಿಸಬಾರದೆಂಬ ಕಾನೂನಿದೆ. ಸಣ್ಣಪುಟ್ಟ ವಾಹನಗಳು ರಾಷ್ಟ್ರೀಯ ಹೆದ್ದಾರಿಯ ಸರ್ವೀಸ್ ರೋಡ್‌ಗಳಲ್ಲೇ ಸಾಗಬೇಕೆಂಬ ನಿಯಮವಿದೆ. ಆದರೆ ಈ ಕಾನೂನುಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಲಾಗುತ್ತಿದೆ.

ಇದೇ ವೇಳೆ ರಾಷ್ಟ್ರೀಯ ಹೆದ್ದಾರಿಯಲ್ಲೇ ಎಲ್ಲೆಂದರಲ್ಲಿ ಲಾರಿಗಳು, ಟ್ಯಾಂಕರ್‌ಗಳು ಸಹಿತ ಘನ ವಾಹನಗಳನ್ನು ನಿಲುಗಡೆಗೊಳಿಸುತ್ತಿರುವುದು ಕಂಡುಬರುತ್ತಿದೆ. ಅವೈಜ್ಞಾನಿಕವಾಗಿ ವಾಹನ ನಿಲುಗಡೆಯಿಂದಾಗಿ ಅಪಘಾತಗಳಿಗೆ ಕಾರಣವಾಗುತ್ತಿದೆ. ಇದರೊಂದಿಗೆ ಸಾರ್ವಜನಿಕರು ರಾ.ಹೆ.ಯಲ್ಲಿ ಅತ್ತಿಂದಿತ್ತ ದಾಟುತ್ತಿರುವುದು ಕೂಡಾ ಅಪಾಯಕ್ಕೆ ಆಹ್ವಾನ ನೀಡುವಂತಿದೆ.

ಈರೀತಿಯಗಂಭೀರನಿಯಮಉಲ್ಲಂಘನೆಗಳನ್ನು ತಡೆಯಲು ಮೋಟಾರ್ ವಾಹನ ಇಲಾಖೆಯಾಗಲಿ, ಪೊಲೀಸ್ ಇಲಾಖೆಯಾಗಲಿ ಯಾವುದೇ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳದಿರುವುದು ಸಮಸ್ಯೆಯನ್ನು ಜಟಿಲಗೊಳ್ಳುವಂತೆ ಮಾಡಿದೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ಪೊಲೀಸರಾಗಲಿ, ಗಸ್ತು ತಿರುಗುವಿಕೆ ತಂಡವಾಗಲಿ ಸಕ್ರಿಯವಾಗದಿರುವುದು ನಿರಂತರ ನಿಯಮ ಉಲ್ಲಂಘನೆಗೆ ಕಾರಣವಾಗುತ್ತಿದೆ ಎಂಬ ಆಪಾದನೆಯಿದೆ.



ಹೈವೇಯಲ್ಲಿ ಸಣ್ಣಪುಟ್ಟ ವಾಹನಗಳಿಗೆ ನಿರ್ಬಂಧ

ರಾಷ್ಟ್ರೀಯ ಹೆದ್ದಾರಿಯಲ್ಲಿ ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳ ಸಂಚಾರಕ್ಕೆ ನಿರ್ಬಂಧವಿದೆ. ಆದರೆ ಅವುಗಳು ನಿರಾಂತರವಾಗಿ ಸಾಗುತ್ತಿವೆ ಎಂಬ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗದಿರುವುದು ದುರಂತವಾಗಿದೆ. ಇನ್ನಾದರೂ ರಾಷ್ಟ್ರೀಯ ಹೆದ್ದಾರಿಯಲ್ಲಿ ಹೆಚ್ಚುತ್ತಿರುವ ವಾಹನ ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಅಳವಡಿಸಿಕೊಳ್ಳಬೇಕು ಎಂದು ಸಾರ್ವಜನಿಕ ವಲಯ ಆಗ್ರಹಿಸಿದೆ.



ಅವೈಜ್ಞಾನಿಕ ರೀತಿಯಲ್ಲಿ ವಾಹನ ನಿಲುಗಡೆ

ರಾಷ್ಟ್ರೀಯ ಹೆದ್ದಾರಿಯ ಬದಿಗಳಲ್ಲಿ ಅವೈಜ್ಞಾನಿಕ ರೀತಿಯಲ್ಲಿ ವಾಹನಗಳನ್ನು ನಿಲುಗಡೆಗೊಳಿಸುವುದರಿಂದ ಅಪಘಾತಗಳ ಸಂಖ್ಯೆಯಲ್ಲಿ ವಿಪರೀತ ಹೆಚ್ಚಳವಾಗುತ್ತಿದೆ ಎಂಬುದನ್ನು ಅಧ್ಯಯನ ವರದಿಯಲ್ಲೇ ಉಲ್ಲೇಖಿಸಲಾಗಿದೆ. ಕಳೆದ ವಾರ ಬಂದ್ಯೋಡು ಪರಿಸರದ ಹೈವೇಯಲ್ಲಿ ನಿಲುಗಡೆಗೊಳಿಸಿದ್ದ ತರಕಾರಿ ತುಂಬಿದ ಲಾರಿಯ ಹಿಂಭಾಗಕ್ಕೆ ಬೈಕೊಂದು ಡಿಕ್ಕಿ ಹೊಡೆದು ವ್ಯಕ್ತಿಯೋರ್ವ ಸ್ಥಳದಲ್ಲೇ ಮೃತಪಟ್ಟ ಘಟನೆ ನಡೆದಿತ್ತು. ಇದೇ ರೀತಿಯ ಹಲವಾರು ಅವಘಡಗಳು ಸಂಭವಿಸಿವೆ.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 35° 26° | ಉಡುಪಿ 32° 27°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಭಾನುವಾರ 12, ಏಪ್ರಿಲ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU


ಪುಟ 3
ಆಮೆ ಗತಿಯಲ್ಲಿ ಸಾಗುತ್ತಿದೆ ರೂ.30 ಕೋಟಿ ವೆಚ್ಚದ ಅಮೃತ್-2 ಯೋಜನೆ


ಪುಟ 5
ಕುಡಿಯುವ ನೀರು ಪೂರೈಕೆಗೆ ಇನ್ನೂ ಕೂಡಿ ಬಂದಿಲ್ಲ ಕಾಲ!

ಪೊಳಲಿಯ ಸಾವಿರ ಸೀಮೆಯ ಒಡತಿಯ ಸನ್ನಿಧಿಯಲ್ಲಿ ಮಹಾರಥೋತ್ಸವದ ಸಂಭ್ರಮ


ಸಾವಿರ ಸೀಮೆಯ ಒಡತಿ ಪೊಳಲಿ ಶ್ರೀ ರಾಜರಾಜೇಶ್ವರೀ ದೇವಸ್ಥಾನದಲ್ಲಿ 29 ದಿನಗಳ ಕಾಲ ಅದ್ದೂರಿಯಾಗಿ ನಡೆದ ಜಾತ್ರೋತ್ಸವ ಶನಿವಾರ ರಾತ್ರಿ ಸಂಪನ್ನಗೊಂಡಿತು. ಸಂಜೆ ಮಹಾರಥೋತ್ಸವದಲ್ಲಿ ದೇವರು ರಥಾರೂಢರಾದ ಬಳಿಕ ಭಕ್ತರು ದೇವಳದ ಸುತ್ತ ರಥವನ್ನು ಎಳೆಯುವ ಮೂಲಕ ಸಂತೃಪ್ತರಾದರು. ಇದೇ ವೇಳೆ ಆಕರ್ಷಕ ಸುಡುಮದ್ದು ಪ್ರದರ್ಶನವು ಕೂಡಾ ಗಮನಸೆಳೆಯಿತು.

ಸುತ್ತಮುತ್ತ

ಕೆಂಡವಾಗಿದೆ ಕರಾವಳಿ ಜಿಲ್ಲೆಗಳ ನೆಲ: ತಾಪಮಾನ ಈಗ 36° ಸೆಲ್ಸಿಯಸ್!

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶನಿವಾರ ತಾಪಮಾನ ಮತ್ತಷ್ಟು ಏರಿಕೆಯಾಗಿದ್ದು, 36 ಡಿಗ್ರಿ ಸೆಲ್ಸಿಯೆಸ್ ದಾಟಿದೆ. ಈ ನಡುವೆ ಮೋಡ ಕವಿದ ವಾತಾವರಣ ಉಷ್ಣತೆಯ ತೀವ್ರತೆಯನ್ನು ಹೆಚ್ಚಿಸುತ್ತಿದೆ. ಬೇಸಗೆ ಮಳೆ ಮಾತ್ರ ಮರೆಯಾಗಿದ್ದು, ಸುಡು ಬಿಸಿಲಿಗೆ ಅಂತರ್ಜಲ ಮಟ್ಟ ತೀವ್ರವಾಗಿ ಕುಸಿತ ಕಾಣುತ್ತಿದೆ. ಗ್ರಾಮೀಣ ಭಾಗಗಳ ಬಾವಿ, ಬೋರ್ ವೆಲ್‌ಗಳಲ್ಲಿ ಈಗಾಗಲೇ ನೀರು ಬತ್ತಲಾರಂಭಿಸಿದ್ದು, ಕೃಷಿ ಕ್ಷೇತ್ರಕ್ಕೆ ಚಿಂತೆ ಕಾಡಲಾರಂಭಿಸಿದೆ.

ಇನ್ನೆರಡು ದಿನ ಬಿಸಿ ಗಾಳಿ, ಆರ್ದ್ರ ವಾತಾವರಣ: ಆರೋಗ್ಯ ಜೋಪಾನ!

ಮಂಗಳೂರು: ಮುಂದಿನ ಎರಡು ದಿನಗಳ ಕಾಲ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಸಹಿತ ಕರಾವಳಿ ಭಾಗದಲ್ಲಿ ಬಿಸಿ ಗಾಳಿ ಬೀಸುವ ಸಾಧ್ಯತೆ ಇದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ. ಬಿಸಿ ಗಾಳಿ, ಆರ್ದ್ರ ವಾತಾವರಣ ಕಂಡುಬರಲಿದ್ದು, ನಾಗರಿಕರು ಅನಾವಶ್ಯಕ ಬಿಸಿಲಿಗೆ ಮೈಯೊಡ್ಡದೆ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವಂತೆ ಆರೋಗ್ಯ ಇಲಾಖೆ ಅಧಿಕಾರಿಗಳು ಕೂಡಾ ಈಗ ಮುನ್ನೆಚ್ಚರಿಕೆ ನೀಡಿದ್ದಾರೆ.

ಕಾಸರಗೋಡು ಸಹಿತ ಕೇರಳ ರಾಜ್ಯದ 12 ಜಿಲ್ಲೆಗಳಲ್ಲಿ ಉಷ್ಣತೆ ಏರಿಕೆ

ಕಾಸರಗೋಡು: ಕೇರಳದ ಇಡುಕ್ಕಿ ಮತ್ತು ವಯನಾಡು ಜಿಲ್ಲೆಗಳನ್ನು ಹೊರತುಪಡಿಸಿ ಕಾಸರಗೋಡು ಸಹಿತ ಉಳಿದ ಎಲ್ಲಾ ಜಿಲ್ಲೆಗಳಲ್ಲೂ ಉಷ್ಣತೆ ಏರಿಕೆಯಾಗುತ್ತಿದೆ.
ಪಾಲಕ್ಕಾಡು ಜಿಲ್ಲೆಯಲ್ಲಿ 39 ಡಿಗ್ರಿ, ಕೊಲ್ಲಂ ಜಿಲ್ಲೆಯಲ್ಲಿ 38 ಡಿಗ್ರಿ ಹಾಗೂ ಕಾಸರಗೋಡು ಮತ್ತು ಕಣ್ಣೂರು ಜಿಲ್ಲೆಗಳಲ್ಲಿ 36–37 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದ್ದು, ಸುಡು ಬಿಸಿಲಿಗೆ ನಾಗರಿಕರು ನಿತ್ಯ ಹೈರಾಣಾಗುತ್ತಿದ್ದಾರೆ.

ಕೋಳಿ ಬಾಳಿನಿಂದ ಇರಿತ


ಬಂಟ್ವಾಳ: ನೆರೆಮನೆಯರಿಬ್ಬರ ಜಗಳ ಕೋಳಿ ಬಾಳಿನಿಂದ ಇರಿತದಲ್ಲಿ ಅಂತ್ಯಗೊಂಡ ಘಟನೆ ಅಮ್ಟಾಡಿ ಗ್ರಾಮದ ತಲಂಬಿಲದಲ್ಲಿ ನಡೆದಿದೆ. ಇಲ್ಲಿನ ದಯಾನಂದ ಮಡಿವಾಳ ಎಂಬವರ ಮಧ್ಯೆ ಮಾತಿಗೆ ಮಾತು ಬೆಳೆದು ದಯಾನಂದ ಅವರಿಗೆ ನೆರೆಮನೆಯ ವಸಂತ ಶೆಟ್ಟಿ ಎಂಬವರು ಕೋಳಿಯ ಬಾಳಿನಿಂದ ಇರಿದು ಕೊಲೆಗೆ ಯತ್ನಿಸಿದ್ದಾರೆ ಎಂದು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಕಾಸರಗೋಡು ಜಿಲ್ಲೆಗೆ ಯೆಲ್ಲೋ ಅಲರ್ಟ್
ಇಳೆಗೆ ಬೆಂಕಿಯ ಮಳೆ
ವಿಪತ್ತು ನಿರ್ವಹಣಾ ಪ್ರಾಧಿಕಾರ ಎಚ್ಚರಿಕೆ

ಕಾಸರಗೋಡು: ಜಿಲ್ಲೆಯಲ್ಲಿ ಬಿಸಿಲಿನ ತಾಪ ವಿಪರೀತವಾಗಿ ಏರಿಕೆಯಾಗುತ್ತಿದ್ದು, ಈ ನಿಟ್ಟಿನಲ್ಲಿ ಜಿಲ್ಲೆಯಾದ್ಯಂತ 'ಯೆಲ್ಲೋ ಅಲರ್ಟ್' ಘೋಷಿಸಲಾಗಿದೆ.
ಇದರ ಬೆನ್ನಿಗೇ ಜಿಲ್ಲೆಯ ಜನರು ಗರಿಷ್ಠ ಮುನ್ನೆಚ್ಚರಿಕೆ ಪಾಲಿಸಬೇಕೆಂದು ಕೇರಳ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ಕಟ್ಟುನಿಟ್ಟಿನ ಸಲಹೆ ನೀಡಿದೆ.

ನಾಗರಿಕರಿಗೆ ಗೈಡ್‌ಲೈನ್ ಬಿಡುಗಡೆ
ಉಷ್ಣಾಂಶ ಏರಿಕೆಯಿಂದ ಬಿಸಿಲು, ಶಾಖದ ಹೊಡೆತ ಮತ್ತು ಬೇಸಿಗೆಯ ಹೊಡೆತದಿಂದಾಗಿ ಗಂಭೀರ ಆರೋಗ್ಯ ಸಮಸ್ಯೆಗಳು ಸಂಭವಿಸುವ ಸಾಧ್ಯತೆಯಿದೆ. ಆದ್ದರಿಂದ ಸಾರ್ವಜನಿಕರು ಕೆಲವೊಂದು ನಿಯಮಗಳನ್ನು ಜನತೆ ಸಮರ್ಪಕವಾಗಿ ಪಾಲಿಸಬೇಕೆಂದು ತಿಳಿಸಲಾಗಿದೆ.

ನೇರವಾಗಿ ಬಿಸಿಲಿಗೆ ಮೈಯೊಡ್ಡದಿರಿ
ಬೆಳಗ್ಗೆ 11 ಗಂಟೆಯಿಂದ ಅಪರಾಹ್ನ 3ರ ವರೆಗೆ ನೇರ ಸೂರ್ಯನ ಬೆಳಕಿಗೆ ದೀರ್ಘಕಾಲ ಮೈಯೊಡ್ಡುವುದನ್ನು ತಪ್ಪಿಸಬೇಕೆಂದು ಸೂಚಿಸಲಾಗಿದೆ. »ಪುಟ 4



- ಮಧ್ಯಾಹ್ನದ ಬಿಸಿಲಿನಲ್ಲಿ ಜಾನುವಾರು ಮೇಯಲು ಬಿಡುವುದು, ಸಾಕುಪ್ರಾಣಿ ಕಟ್ಟಿಹಾಕುವುದು ತಪ್ಪಿಸಿ
- ಯಾವುದೇ ಅನಾರೋಗ್ಯ ಕಂಡುಬಂದಲ್ಲಿ ಕೂಡಲೇ ವೈದ್ಯರ ಸಲಹೆ ಪಡೆಯಿರಿ
- ಬಿಸಿಲಿನ ತಾಪಮಾನ ಅಧಿಕಗೊಳ್ಳುತ್ತಿರುವ ಕಾರಣ ಆರೋಗ್ಯದ ವಿಷಯದಲ್ಲಿ ಮುಂಜಾಗ್ರತೆಗಳನ್ನು ಪಾಲಿಸಲು ಸೂಚನೆ

ಶಾಲಾ ಮಕ್ಕಳ ಬಗ್ಗೆ ಹೆಚ್ಚು ಕಾಳಜಿ ವಹಿಸಲು ಸೂಚನೆ
ಕಾಸರಗೋಡು ಜಿಲ್ಲೆಯ ಎಲ್ಲಾ ಮಕ್ಕಳನ್ನು ಬಿಸಿಲಿನ ಉಷ್ಣಾಂಶಕ್ಕೆ ಮೈಯೊಡ್ಡಲು ಬಿಡಬಾರದು. ಮಧ್ಯಾಹ್ನದ ವೇಳೆಯಲ್ಲಿ ಸೂರ್ಯನ ತಾಪಮಾನವಿರುವಾಗ ಯಾವುದೇ ಕ್ರೀಡೆಗಳಲ್ಲಿ ತೊಡಗಬಾರದು. ಸೂರ್ಯಾ ಘಾತಕ್ಕೆ ಒಳಗಾಗದಂತೆ ಕಾಳಜಿ ವಹಿಸಬೇಕು. ಮಕ್ಕಳನ್ನು ಪ್ರವಾಸಗಳಿಗೆ ಕರೆದೊಯ್ಯುವ ಶಾಲೆಗಳು ಬೆಳಗ್ಗೆ 11ರಿಂದ ಅಪರಾಹ್ನ 3ರ ತನಕ ನೇರ ಬಿಸಿಲಿನಲ್ಲಿ ವಿಹರಿಸದಂತೆ ಗಮನಹರಿಸಬೇಕು ಎಂದು ಪ್ರಾಧಿಕಾರವು ತಿಳಿಸಿದೆ.

ವಾಡಿಕೆಗಿಂತ 2-3 ಡಿಗ್ರಿ ಸೆಲ್ಸಿಯಸ್ ಹೆಚ್ಚಳ
ಕಾಸರಗೋಡು ಜಿಲ್ಲೆಯಲ್ಲಿ ಕಳೆದ ಕೆಲವು ದಿನಗಳಿಂದ ಸಾಮಾನ್ಯ ಉಷ್ಣತೆಗಿಂತ 2-3 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿ ಹೆಚ್ಚಳ ಕಂಡುಬಂದಿದೆ. ಈ ನಡುವೆ ಕಾಸರಗೋಡು ಜಿಲ್ಲೆಯ ಮಂಜೇಶ್ವರ, ಕಾಸರಗೋಡು, ಹೊಸದುರ್ಗ, ವೆಳ್ಳರಿಕುಂಡು ಕಂದಾಯ ತಾಲೂಕುಗಳಲ್ಲಿ ಸಮಾನ ಉಷ್ಣಾಂಶ ಗೋಚರಿಸುತ್ತಿದೆ.


ಮಳೆ ಸಾಧ್ಯತೆ?
ಇದೇ ವೇಳೆ ಕೇಂದ್ರ ಹವಾಮಾನ ಇಲಾಖೆಯು ಕಾಸರಗೋಡು ಜಿಲ್ಲೆಯಲ್ಲಿ ಸಾಮಾನ್ಯ ಪ್ರಮಾಣದ ಮಳೆ ಸುರಿಯ ಬಹುದೆಂದು ಮುನ್ಸೂಚನೆ ನೀಡಿದೆ.

ಆತಂಕದಲ್ಲಿದೆ ಇಲ್ಲಿ ಹೆದ್ದಾರಿ ಸಂಚಾರ
ಹೇರಿಕುದ್ರು ಸೇತುವೆ ಮಧ್ಯೆ ಹೊಂಡ ಸೃಷ್ಟಿ!
ಕಾಮಗಾರಿ ಗುಣಮಟ್ಟ ಮೇಲೆ ಶಂಕೆ

ಕುಂದಾಪುರ: ಉಡುಪಿ, ಉತ್ತರ ಕನ್ನಡ ಜಿಲ್ಲೆಯನ್ನು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ 66ರ ಹೇರಿಕುದ್ರು ಸೇತುವೆ ಸಮೀಪ ಕುಸಿತದಿಂದ ಹೊಂಡ ನಿರ್ಮಾಣಗೊಂಡಿದ್ದು ಪ್ರಯಾಣಿಕರಲ್ಲಿ ಆತಂಕ ಮೂಡಿದೆ.

ಕಲವೇ ವರ್ಷ ಹಿಂದೆ ರಸ್ತೆ ನಿರ್ಮಾಣ
ಕಳೆದ ಕೆಲವು ವರ್ಷಗಳ ಹಿಂದಷ್ಟೇ ರಾಷ್ಟ್ರೀಯ ಹೆದ್ದಾರಿ ಚತುಷ್ಪಥ ಸಂದರ್ಭ ಹೇರಿ ಕುದ್ರು ಸಮೀಪ ನಿರ್ಮಿಸಲಾದ ಹೊಸ ಸೇತುವೆ ಸಮೀಪ ಸೇತುವೆ, ರಸ್ತೆ ಸಂಧಿಸುವ ಸ್ಥಳದಲ್ಲಿ ಭೂಕುಸಿತ ಕಂಡು ಬಂದಿದ್ದು, ಇದರಿಂದ ಈ ಸ್ಥಳದಲ್ಲಿ ಹೊಂಡ ನಿರ್ಮಾಣಗೊಂಡಿದೆ.

ಬಹುರಾಜ್ಯ ಬೆಸೆಯುವ ಕೊಂಡಿ
ಈ ರಸ್ತೆ ರಾಷ್ಟ್ರೀಯ ಹೆದ್ದಾರಿ 66 ಕರ್ನಾಟಕ ಮತ್ತು ಗೋವಾ, ಮಹಾರಾಷ್ಟ್ರ ರಾಜ್ಯಗಳನ್ನು ಬೆಸೆಯುವ ಪ್ರಮುಖ ಕೊಂಡಿಯಾಗಿದೆ. ಈ ಮಾರ್ಗದ ಮೂಲಕ ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ವಾಹನಗಳು ಸಂಚರಿ ಸುತ್ತಿದ್ದು ವಾಹನ ದಟ್ಟಣೆ ಹೆಚ್ಚಾಗಿದೆ. ಇಂತಹ ಮಾರ್ಗದ ಪ್ರಮುಖ ಸೇತುವೆಯ ಸಮೀಪ ಭೂಕುಸಿತದಿಂದ ಹೊಂಡ ನಿರ್ಮಾಣಗೊಂಡಿರುವುದು ಆತಂಕ ಸೃಷ್ಟಿಸಿದೆ. »ಪುಟ 4



ಶೀಘ್ರ ರಸ್ತೆ ದುರಸ್ತಿಗೆ ನಾಗರಿಕರಿಂದ ಆಗ್ರಹ
ಹೇರಿಕುದ್ರು ಹೊಸ ಸೇತುವೆ ಸಮೀಪ ಉಂಟಾದ ಭೂಕುಸಿತವನ್ನು ಆದಷ್ಟು ಶೀಘ್ರ ದುರಸ್ಥಿಗೊಳಿಸಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಸವಾರರು ಹಾಗೂ ಪ್ರಯಾಣಿಕರು ಒತ್ತಾಯಿಸಿದ್ದಾರೆ.

ಪ್ರವಾಹ, ಭೂಕುಸಿತ ಪರಿಸ್ಥಿತಿ ಎದುರಿಸಲು 'ಸರ್ಚ್'ನಲ್ಲಿ ಸಾಥ್ ನೀಡಲಿದೆ ಎಐ
ಎನ್ಐಟಿಕೆ ಸಂಶೋಧನೆಗೆ ನೊಮ್ಯಾಡ್‌ನ ಬಲ

ಮಂಗಳೂರು: ವಿಶ್ವವೇ ತಾಂತ್ರಿಕ ಜಗತ್ತಿಗೆ ತೆರೆದುಕೊಂಡಿರುವ ಪ್ರಸ್ತುತ ಕಾಲದಲ್ಲಿ ಎಲ್ಲೆಡೆ ಈಗ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಭರ್ಜರಿ ಸದ್ದು ಮಾಡುತ್ತಿದೆ. ಇದಕ್ಕೆ ಪೂರಕವೆಂಬಂತೆ ಇಲ್ಲಿನ ಸುರತ್ಕಲ್‌ನ ರಾಷ್ಟ್ರೀಯ ತಾಂತ್ರಿಕ ಸಂಸ್ಥೆ ಕರ್ನಾಟಕ ಮಹತ್ವದ ಗೆಜ್ಜೆಯೊಂದನ್ನು ಇಟ್ಟಿದೆ.

ಶುರುವಾಯ್ತು ನೊಮ್ಯಾಡ್
ಇದು ನೋಡ್ ಫಾರ್ ಓಪನ್‌ಸೋರ್ಸ್ ಮೊಬೈಲ್ ಎಐ ಡಿಪ್ಲಾಯ್‌ಮೆಂಟ್ (ನೊಮ್ಯಾಡ್) ಹೆಸರಿನ ಎಐ ಸಂಶೋಧನಾ ಕೇಂದ್ರವಾಗಿದ್ದು, ಇದು ವಿದ್ಯಾರ್ಥಿಗಳಿಗೆ ಸಾಕಷ್ಟು ಅವಕಾಶ ಕಲ್ಪಿಸಿದೆ. ಎನ್ಐಟಿಕೆ ಸಹ ಪ್ರಾಧ್ಯಾಪಕ ಡಾ. ಪೃಥ್ವಿರಾಜ್ ಯು. ಕಲ್ಪನೆ ಇಲ್ಲಿ ಸಾಕಾರವಾಗಿದೆ. »ಪುಟ 4



ಎಲ್ಲಿ ಸ್ಥಾಪಿಸಲಾಗಿದೆ ಈ 'ನೊಮ್ಯಾಡ್' ಕೇಂದ್ರ?
ಎನ್ಐಟಿಕೆ ಕಡಲ ತೀರದ 'ಸರ್ಚ್' ಸಂಶೋಧನಾ ಕೇಂದ್ರದಲ್ಲಿ, ಪುನರ್‌ಬಳಕೆ ಮಾಡಲಾದ ಶಿಪ್ಪಿಂಗ್ ಕಂಟೈನರ್‌ನಲ್ಲಿ 'ನೊಮ್ಯಾಡ್' ಕೇಂದ್ರವನ್ನು ಸ್ಥಾಪಿಸಲಾಗಿದೆ. ಇದು ಸ್ವಯಂ ಆಗಿ ಕಾರ್ಯ ನಿರ್ವಹಿಸುವ ಸಾಮರ್ಥ್ಯ ಹೊಂದಿದೆ. ಗ್ರಿಡ್, ಸೌರ, 15 ಕೆಡಬ್ಲ್ಯೂ ಸೌರ- ಬ್ಯಾಟರಿ ಘಟಕ ಮತ್ತು ಯುಪಿಎಸ್ ಹೊಂದಿದ ಡೀಸೆಲ್ ಜನರೇಟರ್‌ನಿಂದ ಇದಕ್ಕೆ ನಿರಂತರವಾಗಿ ಸಿಗುವಂತೆ ವಿದ್ಯುತ್ ಸಂಪರ್ಕ ಒದಗಿಸಲಾಗಿದೆ.

ಹೇಗಿದೆ 'ನೊಮ್ಯಾಡ್' ಎಐ ಕೇಂದ್ರ ವಿನ್ಯಾಸ?
ದೂರದ, ಸಂಪರ್ಕರಹಿತ ಪ್ರದೇಶಗಳು ಹಾಗೂ ವಿಪತ್ತು ಪೀಡಿತ ಪರಿಸರಗಳಲ್ಲಿ, ಸಾಮಾನ್ಯ ಕ್ಲೌಡ್ ಸೌಕರ್ಯ ಕೂಡಾ ಲಭ್ಯವಿಲ್ಲದ ಸಂದರ್ಭಗಳಲ್ಲಿ ಬಳಸಲು ಅನುಕೂಲವಾಗುವಂತೆ ನೋಡ್ ಫಾರ್ ಓಪನ್ ಸೋರ್ಸ್ ಮೊಬೈಲ್ ಎಐ ಡಿಪ್ಲಾಯ್‌ಮೆಂಟ್ ವಿನ್ಯಾಸಗೊಂಡಿದ್ದು, ಇದೀಗ ವಿದ್ಯಾರ್ಥಿಗಳ ಆಕರ್ಷಣೆಯ ಕೇಂದ್ರವಾಗಿ ಬದಲಾಗಿದೆ.

ಮನೆ ಬಳಿ ಕಟ್ಟಿ ಹಾಕಿದ್ದ ಹಸುಗಳ ಮೇಲೆ ದಾಳಿ ನಡೆಸಿದ ಚಿರತೆರಾಯ!
ಸಿದ್ದಾಪುರ ಸಮೀಪ ಘಟನೆ | ಆತಂಕದಲ್ಲಿ ಜನತೆ

ಮಡಿಕೇರಿ: ಹಸುಗಳ ಮೇಲೆ ಚಿರತೆ ಹಠಾತ್ ದಾಳಿ ನಡೆಸಿರುವ ಘಟನೆ ವೀರಾಜಪೇಟೆ ತಾಲೂಕಿನ ಸಿದ್ದಾಪುರ ಸಮೀಪದ ಕೂಡುಗದ್ದೆಯಲ್ಲಿ ನಡೆದಿದೆ.
ಗ್ರಾಮದ ಉಮೇಶ್ (ಜಪ್ಪು) ಎಂಬವರಿಗೆ ಸೇರಿದ ಹಸುಗಳನ್ನು ತಮ್ಮ ಮನೆಯ ಪಕ್ಕದಲ್ಲೇ ಕಟ್ಟಿದ್ದು, ಶುಕ್ರವಾರ ರಾತ್ರಿ 9.30ರ ಸುಮಾರಿಗೆ ಚಿರತೆ ಹಸುಗಳ ಮೇಲೆ ದಾಳಿ ಮಾಡಿದೆ. ಮಾಹಿತಿ ತಿಳಿದ ಘಟನಾ ಅರಣ್ಯ ಅಧಿಕಾರಿಗಳು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಗ್ರಾಮಸ್ಥರು ಎಚ್ಚರಿಕೆಯಿಂದ ಇರುವಂತೆ ಸೂಚಿಸಿದ್ದಾರೆ.

ಕಾಡಾನೆ ಹಾವಳಿ ನಡುವೆ ಕಾಡುತ್ತಿದೆ ಹೊಸ ಚಿಂತೆ

ಈಗಾಗಲೇ ಕಾಡಾನೆಗಳ ಹಾವಳಿಯಿಂದ ಬೇಸತ್ತಿರುವ ವೀರಾಜಪೇಟೆ ತಾಲೂಕಿನ ಸಿದ್ದಾಪುರ ಪರಿಸರದ ಜನತೆಗೆ ಇದೀಗ ಚಿರತೆ ಕಾಟ ಆರಂಭವಾಗಿದ್ದು, ಭಯ ಹುಟ್ಟಿಸಿದೆ. ಸೂಕ್ತ ರಕ್ಷಣೆ ಒದಗಿಸುವಂತೆ ಈ ಭಾಗದ ಸ್ಥಳೀಯರು ಅರಣ್ಯ ಇಲಾಖೆಗೆ ಮನವಿ ಮಾಡಿದ್ದಾರೆ.

ಹೊಸ ದಿಗಂತ ವರದಿಗೆ ಮುಖ್ಯಮಂತ್ರಿ ಕಚೇರಿ ಸ್ಪಂದನೆ | ದುರಸ್ತಿ ಕಾರ್ಯಕ್ಕೆ ಶೀಘ್ರ ಟೆಂಡರ್
'ನೀಲಿ ಟರ್ಪಾಲ್'ಗೆ ಶೀಘ್ರವೇ ಸಿಗಲಿದೆ ಮುಕ್ತಿ?

ಸುಳ್ಯ: 'ಆಡಳಿತ ವೈಖರಿ ಅಣಕಿಸುತ್ತಿದೆ ನೀಲಿ ಟರ್ಪಾಲು' ತಲೆಬರಹದಲ್ಲಿ ಪ್ರಕಟಗೊಂಡ 'ಹೊಸ ದಿಗಂತ' ಪತ್ರಿಕೆಯ ವರದಿಗೆ ಮುಖ್ಯಮಂತ್ರಿ ಕಚೇರಿ ತಕ್ಷಣ ಸ್ಪಂದಿಸಿದ್ದು, ಶೀಘ್ರವೇ ಸುಳ್ಯ ತಾಲೂಕು ಆಡಳಿತ ಕೇಂದ್ರ ಕಟ್ಟಡದ ಮೇಲ್ಛಾವಣೆಗೆ ದುರಸ್ತಿಗೊಳ್ಳಲಿದೆ.

ಉತ್ತರ ರವಾನಿಸಿದ ಸ್ಥಳೀಯಾಡಳಿತ
ಸುಳ್ಯ ತಾಲೂಕು ಆಡಳಿತ ಕೇಂದ್ರ ಕಟ್ಟಡದ ಮೇಲ್ಛಾವಣಿ ದುರಸ್ತಿ ಕುರಿತು ಏ.8 ರ 'ಹೊಸ ದಿಗಂತ' ಪತ್ರಿಕೆಯಲ್ಲಿ ಪ್ರಕಟಗೊಂಡ ವರದಿ ವಿಚಾರದಲ್ಲಿ ತಾಲೂಕು ದಂಡಾಧಿಕಾರಿಗಳಿಗೆ ಮುಖ್ಯಮಂತ್ರಿಗಳ ಕಾರ್ಯಾಲಯದ ವಿಶೇಷ ಕರ್ತವ್ಯ ಅಧಿಕಾರಿ, ವರದಿ ಕೇಳಿದ್ದು, ಅಲ್ಲಿನ ಸಮಸ್ಯೆ ಪರಿಹಾರದ ಬಗ್ಗೆ ಸಮರ್ಪಕ ಉತ್ತರ ನೀಡುವಂತೆ ಸೂಚಿಸಿದ್ದರು. ಇದೀಗ ಆಡಳಿತವು ಉತ್ತರವನ್ನು ನೀಡಿದೆ.

ರೂ. 21.75 ಲಕ್ಷ ಅನುದಾನ
ಇದರ ಬೆನ್ನಿಗೇ, ಸಹಾಯಕ ಕಾರ್ಯಪಾಲಕ ಇಂಜನಿಯರ್ ಹಾಗೂ ಲೋಕೋಪಯೋಗಿ ಇಲಾಖೆ ಉಪ ವಿಭಾಗ ಸುಳ್ಯ ತಾಲೂಕು ಇವರಿಂದ ಮಾಹಿತಿ ಪಡೆದುಕೊಂಡು ಕಟ್ಟಡದ ಮೇಲ್ಛಾವಣಿ ದುರಸ್ತಿಗೆ ಸರಕಾರ ರೂ. 21.75 ಲಕ್ಷ ಅನುದಾನವನ್ನು ಬಿಡುಗಡೆಗೊಳಿಸಿದ್ದು, ಮೇಲಿನ ಕಾರ್ಯಕ್ಕೆ ತಯಾರಿಸಿದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿ ಕಾಮಗಾರಿ ಅನುಷ್ಠಾನ ಗೊಳಿಸಲು ಕಾರ್ಯ ನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮಂಗಳೂರು ಇವರಿಗೆ ಆದೇಶಿಸಿದ್ದಾರೆ. »ಪುಟ 4


ಬೇಸಿಗೆ ಮುಗೀತಾ ಬಂದರೂ ರಿಪೇರಿಯಾಗದ ಮಿನಿ ವಿಧಾನ ಸೌಧ, ಪಡಸಾಲೆ
ಆಡಳಿತ ವೈಖರಿ ಅಣಕಿಸುತ್ತಿದೆ ನೀಲಿ ಟರ್ಪಾಲು!

- ಪರಿಶೀಲನೆ ಹಂತದಲ್ಲಿ ತಾಂತ್ರಿಕ ಮಂಜೂರಾತಿ ಪ್ರಕ್ರಿಯೆ
- ಪಡಸಾಲೆ ಮೇಲ್ಛಾವಣಿ ದುರಸ್ತಿಗೆ ಕೂಡಾ ಅವಕಾಶ
- ಕೂಡಲೇ ಇಲಾಖಾ ನಿಯಮಾನುಸಾರ ಟೆಂಡರ್ ಕರೆದು ಕಾಮಗಾರಿಯನು ಅನುಷ್ಠಾನಗೊಳಿಸಲು ಕ್ರಮ

ರಾಷ್ಟ್ರೀಯ ಹೆದ್ದಾರಿಯಲ್ಲಿ ಸರಣಿ ಅಪಘಾತ


ರಾಷ್ಟ್ರೀಯ ಹೆದ್ದಾರಿಯ ತುಂಬೆಯಲ್ಲಿ ಕಾರು, ಗೂಡ್ಸ್ ರಿಕ್ಷಾ ಹಾಗೂ ಬೈಕ್ ನಡುವೆ ಸರಣಿ ಅಪಘಾತ ಸಂಭವಿಸಿದ್ದು, ಈ ಘಟನೆಯಲ್ಲಿ ನಾವೂರ ಸಮೀಪದ ಮೈಂದಾಳ ನಿವಾಸಿ ಮಹಮ್ಮದ್ ಅನ್ವಾರ್ ಎಂಬವರು ಗಾಯಗೊಂಡಿದ್ದಾರೆ. ಸ್ಥಳೀಯರು ಗಾಯಾಳುವನ್ನು ಮಂಗಳೂರು ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಘಟನಾ ಸ್ಥಳಕ್ಕೆ ಬಂಟ್ವಾಳ ಸಂಚಾರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಸುತ್ತ ಮುತ್ತ

ಏ.14: ಶಿಕ್ಷಣ, ಕಾನೂನು, ಸಾರಿಗೆ ನಿಯಮ ಮಾಹಿತಿ

ಕೈಕಂಬ: ಕುಪ್ಪೆಪದವು ಆಟೋ ರಿಕ್ಷಾ ಚಾಲಕರ ಸಂಘದ ಬೆಳ್ಳಿಹಬ್ಬ ಸಂಭ್ರಮದ ಅಂಗವಾಗಿ, ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿಯ ಏ. 14ರಂದು ಬೆಳಿಗ್ಗೆ 9:30ರಿಂದ ಮಂಗಳೂರಿನ ಇನ್ಸ್ಟಿಟ್ಯೂಟ್ ಆಫ್ ಇಂಡಿವಿಜುವಲ್ ಡವಲಪ್ಮೆಂಟ್‌ನ ನಿರ್ದೇಶಕ, ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತುದಾರ ಪ್ರೊ. ರೊನಾಲ್ಡ್ ಪಿಂಟೋ ಅವರಿಂದ ವಿದ್ಯಾರ್ಥಿಗಳಿಗೆ ಖಾಸಗಿ ಹಾಗೂ ಸರಕಾರಿ ಕ್ಷೇತ್ರಗಳಲ್ಲಿ ಉನ್ನತ ಹುದ್ದೆಗಳನ್ನು ಪಡೆದುಕೊಳ್ಳಲು ಉನ್ನತ ಶಿಕ್ಷಣ ಮಾರ್ಗದರ್ಶನ, 11 ಗಂಟೆಯಿಂದ ಬಜಪೆ ಪೊಲೀಸ್ ವೃತ್ತ ನಿರೀಕ್ಷಕ ಎಚ್.ಎಸ್. ಬಾಲಕೃಷ್ಣ ಅವರಿಂದ ವಾಹನ ಸವಾರರಿಗೆ ಸಂಚಾರಿ ನಿಯಮಗಳು ಮತ್ತು ಕಾನೂನುಗಳ ಮಾಹಿತಿ, ಮಧ್ಯಾಹ್ನ 12ರಿಂದ ಮಂಗಳೂರಿನ ನ್ಯಾಯವಾದಿ ಚರಣ್ ಶೆಟ್ಟಿ ಅವರಿಂದ ಭಾರತದ ಕಾನೂನುಗಳ(ಕ್ರಿಮಿನಲ್ ಮತ್ತು ಸಿವಿಲ್) ಮಾಹಿತಿ ಕಾರ್ಯಕ್ರಮ ಕುಪ್ಪೆಪದವಿನ ಅನಂತ್ರಾಜ್ ಸಭಾ ಭವನದಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು 'ಮಹಾನಾಯಕ ರಾಷ್ಟ್ರನಾಯಕ'

ಉಳ್ಳಾಲ: ಸನಾತನ ಹಿಂದು ಸೇವಾ ಪ್ರತಿಷ್ಠಾನ ಮತ್ತು ಉಳ್ಳಾಲ ತಾಲೂಕು ಸಾಮರಸ್ಯ ವೇದಿಕೆಯ ಸಹಯೋಗದೊಂದಿಗೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯ ಪ್ರಯುಕ್ತ ಕುತ್ತಾರು ಶ್ರೀ ರಾಜರಾಜೇಶ್ವರಿ ಸಿದ್ಧಿ ವಿನಾಯಕ ದೇವಸ್ಥಾನದಲ್ಲಿ ಏ. 12ರಂದು ಸಂಜೆ 5.30ಕ್ಕೆ 'ಮಹಾನಾಯಕ ರಾಷ್ಟ್ರನಾಯಕ' ಕಾರ್ಯಕ್ರಮವು ನಡೆಯಲಿದೆ. ಕಾರ್ಯಕ್ರಮದಲ್ಲಿ ಕಲ್ಲಡ್ಕ ಶ್ರೀರಾಮ ವಿದ್ಯಾ ಕೇಂದ್ರದ ನಿವೃತ್ತ ಶಿಕ್ಷಕರಾದ ರಾಧಾಕೃಷ್ಣ ಅಡ್ಯಂತಾಯ ಅವರು ವಿಚಾರ ಮಂಡನೆಗೈಯಲಿರುವರು. ಕಾರ್ಯಕ್ರಮಕ್ಕೆ ಪೂರ್ವಭಾವಿಯಾಗಿ ಸಂಜೆ 4 ಗಂಟೆಗೆ ಕುತ್ತಾರು ಬಾಲಸಂರಕ್ಷಣಾ ಕೇಂದ್ರದಿಂದ ಕುತ್ತಾರು ರಾಜರಾಜೇಶ್ವರಿ ಕ್ಷೇತ್ರದವರೆಗೆ ಆಕರ್ಷಕ ಶೋಭಾಯಾತ್ರೆ ನಡೆಯಲಿದೆ.

ಏ.14: ಅಂಬೇಡ್ಕರ್ ಜನ್ಮದಿನಾಚರಣೆ

ಉಳ್ಳಾಲ: ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆ ಅಂಗವಾಗಿ ಡಾ.ಬಿ.ಆರ್.ಅಂಬೇಡ್ಕರ್ ವಿದ್ಯಾನಿಧಿ ಟ್ರಸ್ಟ್ ವತಿಯಿಂದ 6ನೇ ವರ್ಷದ ಸಮಾರಂಭವು ಏ.14ರಂದು ಮಂಗಳವಾರ ಬೆಳಿಗ್ಗೆ 9.30ಕ್ಕೆ ಅಸೈಗೋಳಿ ಕೇಂದ್ರ ಮೈದಾನದಲ್ಲಿ ನಡೆಯಲಿದೆ ಎಂದು ಟ್ರಸ್ಟ್ ಸ್ಥಾಪಕಾಧ್ಯಕ್ಷ ಯಾದವ ಅಸೈಗೋಳಿ ತಿಳಿಸಿದ್ದಾರೆ.

ತೊಕ್ಕೊಟ್ಟಿನ ಉಳ್ಳಾಲ ಪ್ರೆಸ್ ಕ್ಲಬ್‌ನಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಕಾರ್ಯಕ್ರಮವನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಉಪಾಧ್ಯಕ್ಷ ನಿಕೇತ್ ರಾಜ್ ಮೌರ್ಯ ಉದ್ಘಾಟಿಸಲಿದ್ದಾರೆ. ವಿಧಾನ ಸಭೆಯ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆಗೈಯಲಿದ್ದಾರೆ. ಟ್ರಸ್ಟ್ ಸ್ಥಾಪಕಾಧ್ಯಕ್ಷ ಯಾದವ ಅಸೈಗೋಳಿ ಅಧ್ಯಕ್ಷತೆ ವಹಿಸಲಿರುವರು ಎಂದರು.

ಮುಖ್ಯ ಅತಿಥಿಗಳಾಗಿ ಮೂಡ ಅಧ್ಯಕ್ಷ ಸದಾಶಿವ ಉಳ್ಳಾಲ, ಕರ್ನಾಟಕ ರಾಜ್ಯ ಗೇರು ಅಭಿವೃದ್ಧಿ ನಿಗಮ ಅಧ್ಯಕ್ಷೆ ಮಮತಾ ಡಿ.ಎಸ್. ಗಟ್ಟಿ, ಮಂಗಳೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಪಿ.ಎಲ್. ಧರ್ಮ,ಕ್ಷೇತ್ರ ಶಿಕ್ಷಣಾಧಿಕಾರಿ ಎಚ್. ಆರ್. ಈಶ್ವರ್, ಮುಡಿಪು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪ್ರಶಾಂತ್ ಕಾಜವ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ. ಕುಂಟಾಲಗುರಿ ಸರಕಾರಿ ಶಾಲೆಯ ನಿವೃತ್ತ ಮುಖ್ಯ ಶಿಕ್ಷಕಿ ಚಂದಿಕಾ, ಟ್ರಸ್ಟಿಗಳಾದ ಸದಾನಂದ ಮಾಡೂರು, ರಹಿಮಾನ್ ಕೊಣಾಜೆ ಹಾಗೂ ಸಮಾಜ ಸೇವಕ ಯೋಗೀಶ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಪಿಯು ಪರೀಕ್ಷೆ: ಮನೋಜ್ಞಾ ಶೇ. 98.17 ಸಾಧನೆ

ಪುತ್ತೂರು: ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ



ಪುತ್ತೂರು ವಿವೇಕಾನಂದ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಮನೋಜ್ಞಾ ಚೆಕ್ಕೆ ವಿಜ್ಞಾನ ವಿಭಾಗದಲ್ಲಿ ಶೇ. 98.17 ಗಳಿಸಿದ್ದಾರೆ. ಈಕೆ ಕಾಸರಗೋಡು ಜಿಲ್ಲೆಯ ಧರ್ಮತ್ತಡ್ಕದ ನಿವಾಸಿ ರಾಮಮೋಹನ ಚೆಕ್ಕೆ ಮತ್ತು ವಿಜಯಲಕ್ಷ್ಮೀ ದಂಪತಿಯ ಪುತ್ರಿ.

ಕೆಎಸ್ಸಾರ್ಟಿಸಿ ನೂತನ ಮೇಲ್ಚಾವಣಿ ನಿರ್ಮಿತ ದೇವರ ಕಟ್ಟೆ ಲೋಕಾರ್ಪಣೆಗೊಳಿಸಿ ಈಶ್ವರ ಭಟ್ ಹೇಳಿಕೆ

ರೂ. 60 ಕೋಟಿ ವೆಚ್ಚದಲ್ಲಿ ಪುತ್ತೂರು ದೇಗುಲ ಜೀರ್ಣೋದ್ಧಾರ

ಪುತ್ತೂರು: ನಗರದ ಕೆಎಸ್ಸಾರ್ಟಿಸಿ ಬಸ್ಸು ನಿಲ್ದಾಣದ ಮುಂಭಾಗದಲ್ಲಿ ಶ್ರೀ ದೇವತಾ ಸಮಿತಿ ಕೆಎಸ್ಸಾರ್ಟಿಸಿ ಪುತ್ತೂರು ನಿಗಮದ ವತಿಯಿಂದ ನಿರ್ಮಿಸಲ್ಪಟ್ಟ ಶ್ರೀ ಮಹಾಲಿಂಗೇಶ್ವರ ದೇವರ ಕಟ್ಟೆಗೆ 10 ವರ್ಷಗಳು ಪೂರ್ಣಗೊಂಡಿದ್ದು ಈ ಸಂದರ್ಭದಲ್ಲಿ ಕಟ್ಟೆಗೆ ನಿರ್ಮಿಸಲಾಗಿದ್ದ ನೂತನ ಮೇಲ್ಚಾವಣಿಯ ಲೋಕಾರ್ಪಣಾ ಕಾರ್ಯಕ್ರಮ ಶನಿವಾರ ನಡೆಯಿತು.



ಬೆಳಗ್ಗೆ ಗಣಹೋಮದೊಂದಿಗೆ ಕಳಶ ಪ್ರತಿಷ್ಠೆ ನಡೆಸಲಾಯಿತು. ಶ್ರೀ ಮಹಾಲಿಂಗೇಶ್ವರ ದೇಗುಲದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿ ಗುಡ್ಡೆ ಲೋಕಾರ್ಪಣೆಗೊಳಿಸಿದರು. ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇವಾಲಯದಲ್ಲಿ ಶಾಸಕ ಅಶೋಕ್ ಕುಮಾರ್ ರೈ ಅವರ ಮಾರ್ಗದರ್ಶನದಲ್ಲಿ ಸುಮಾರು ರೂ.60 ಕೋಟಿ ವೆಚ್ಚದಲ್ಲಿ ಪೂರ್ಣ ಜೀರ್ಣೋದ್ಧಾರ ನಡೆಸಲು ಯೋಜನೆ ರೂಪಿಸಲಾಗಿದೆ. ಈಗಾಗಲೇ ಮರುನಿರ್ಮಾಣಗೊಳ್ಳುತ್ತಿರುವ 5 ಕಟ್ಟೆಗಳ ಕೆಲಸ ಕಾರ್ಯಗಳು ಪೂರ್ಣಗೊಂಡಿದೆ. ಅಯ್ಯಪ್ಪನ ಗುಡಿಯ ಕೆಲಸವೂ ಆಗಲಿದೆ. ಕೆರೆಯ ಅಭಿವೃದ್ಧಿ ಕಾರ್ಯವೂ ನಡೆಯಲಿದೆ. ಅನ್ನದ ಅಗಳು ಉಂಟಾದ ಜಾಗದಲ್ಲಿ ಸಾವಿರಾರು ಜನರಿಗೆ ಅನ್ನದಾನ ಮಾಡಲಾಗುತ್ತಿದೆ ಎಂದರು.

ದೇವಳದ ಸುತ್ತು ಮುತ್ತಲಿನಲ್ಲಿ ಸಾಕಷ್ಟು ಜಾಗವನ್ನು ವಿಸ್ತರಣೆ ಮಾಡಲಾಗಿದೆ. ದೇವಳದಿಂದ ಎಣ್ಣೆ ಪ್ರಸಾದ ನೀಡಲಾಗುತ್ತಿದ್ದು, ಇದು ಹಲವು ರೋಗಗಳನ್ನು ತಡೆಯುತ್ತಿದೆ. 10 ಸಾವಿರಕ್ಕೂ ಅಧಿಕ ಮಂದಿ ಈ ಪ್ರಸಾದ ಸ್ವೀಕಾರ ಮಾಡಿದ್ದಾರೆ. ದೇವರಿಗೆ ಮತ್ತು ಸ್ಮಶಾನದ ನಡುವೆ ಇರುವ ಕಟ್ಟಡವು ಅಡ್ಡಲಾಗುತ್ತಿದ್ದು, ಮುಂದಿನ ಜಾತ್ರೆಯ ಒಳಗಾಗಿ ಈ ಕಟ್ಟಡವನ್ನು ತೆರವುಗೊಳಿಸಲಾಗುವುದು. ಇನ್ನೂ ಸಾಕಷ್ಟು ಅಭಿವೃದ್ಧಿ ಕೆಲಸಗಳು ನಡೆಯಬೇಕಾಗಿದೆ.

- ಸುಮಾರು ರೂ.60 ಕೋಟಿ ವೆಚ್ಚದಲ್ಲಿ ಪೂರ್ಣ ಜೀರ್ಣೋದ್ಧಾರ ನಡೆಸಲು ಯೋಜನೆ
- ಈಗಾಗಲೇ ಮರು ನಿರ್ಮಾಣಗೊಳ್ಳುತ್ತಿರುವ 5 ಕಟ್ಟೆಗಳ ಕೆಲಸ ಕಾರ್ಯಗಳು ಪೂರ್ಣ
- ಅನ್ನದ ಅಗಳು ಉಂಟಾದ ಜಾಗದಲ್ಲಿ ಸಾವಿರಾರು ಜನರಿಗೆ ಅನ್ನದಾನ
- ದೇವಳದ ಸುತ್ತು ಮುತ್ತಲಿನಲ್ಲಿ ಸಾಕಷ್ಟು ಜಾಗವನ್ನು ವಿಸ್ತರಣೆ ಮಾಡಲಾಗಿದೆ

ವ್ಯವಸ್ಥಾಪನಾ ಸಮಿತಿಯ ವತಿಯಿಂದ ಭಕ್ತರ ಸಹಕಾರದಲ್ಲಿ ಶ್ರೀ ಮಹಾಲಿಂಗೇಶ್ವರ ದೇವರಿಗೆ ಸಂತುಷ್ಟತೆ ನೀಡಲಾಗುತ್ತಿದೆ. ನಾವೆಲ್ಲರೂ ದೇವರ ಚಾಕರಿಗೆ ಇರುವವರು. ಪ್ರಶ್ನಾಚಿಂತನೆಯಲ್ಲಿ ಕಂಡು ಬಂದಿರುವಂತೆ ದೇವಳದ ಅಭಿವೃದ್ಧಿ ಕೆಲಸಗಳನ್ನು ನಡೆಸಲಾಗುತ್ತಿದೆ. ಭಕ್ತರ ಮಾರ್ಗದರ್ಶದಂತೆ ಅವರು ನೀಡಿರುವ ಹಣವು ಸದುಪಯೋಗವಾಗುವಂತೆ ಯೋಜನೆ ರೂಪಿಸಲಾಗುತ್ತಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕೆಎಸ್ಸಾರ್ಟಿಸಿ ಪುತ್ತೂರು ವಿಭಾಗದ ಸಂಚಲನಾಧಿಕಾರಿ ಜೈಶಾಂತ್ ಮಾತನಾಡಿ, ಕಳೆದ 10 ವರ್ಷಗಳಿಂದ ಇಲ್ಲಿ ಶ್ರೀ ಮಹಾಲಿಂಗೇಶ್ವರ ದೇವರ ಕಟ್ಟೆ ಪೂಜೆ ನಡೆಯುತ್ತಿದೆ. ಇದೊಂದು ಒಗ್ಗಟ್ಟಿನ ಸಂಕೇತವಾಗಿದೆ. ಯಾವುದೇ ಜಾತಿ, ಧರ್ಮಗಳ ಭೇದವಿಲ್ಲದೆ ಸಂಸ್ಥೆಯು ಜನರಿಗೆ ಸೇವೆಯನ್ನು ಸಲ್ಲಿಸುತ್ತಿದೆ. ಇಲ್ಲಿ ಯಾವುದೇ ದ್ವೇಷ, ಅಸೂಯೆಗಳಿಗೆ ಜಾಗವಿಲ್ಲ, ನಾವೆಲ್ಲರೂ ಒಟ್ಟಾಗಿದ್ದೇವೆ ಎಂಬುದು ಇಂತಹ ಕಾರ್ಯಕ್ರಮಗಳ ಮೂಲಕ ತೋರಿಸಿ ಕೊಡೋಣ ಎಂದರು.

ವೇದಿಕೆಯಲ್ಲಿ ಕೆಎಸ್ಸಾರ್ಟಿಸಿ ವಲಯ ಯಾಂತ್ರಿಕ ಅಭಿಯಂತರ ವೆಂಕಟೇಶ್, ಭದ್ರತಾ ಅಧಿಕಾರಿ ಪ್ರಸನ್ನ ಉಪಸ್ಥಿತರಿದ್ದರು. ಶ್ರೀ ದೇವತಾ ಸಮಿತಿ ಅಧ್ಯಕ್ಷ ಲೋಕೇಶ್ ಸ್ವಾಗತಿಸಿ, ಘಟಕ ವ್ಯವಸ್ಥಾಪಕ ಸುಬ್ರಹ್ಮಣ್ಯ ಪ್ರಕಾಶ್ ವಂದಿಸಿದರು.

ಬಿ.ಸಿ.ರೋಡಿನಲ್ಲಿ ಬಂಟ್ವಾಳ ರಿಕ್ಷಾ ಡ್ರೈವರ್ ಅಸೋಸಿಯೇಶನ್ ಸುವರ್ಣ ಮಹೋತ್ಸವ



ಬಂಟ್ವಾಳ: ರಿಕ್ಷಾ ಡ್ರೈವರ್ ಅಸೋಸಿಯೇಶನ್ ಬಂಟ್ವಾಳ ಇದರ ಸುವರ್ಣ ಮಹೋತ್ಸವ ಹಾಗೂ ರಿಕ್ಷಾ ಭವನದ 25ನೇ ವರ್ಷದ ಬೆಳ್ಳಿ ಹಬ್ಬ ಆಚರಣೆಯು ಶನಿವಾರ ಬಿ.ಸಿ.ರೋಡಿನ ರಿಕ್ಷಾ ಭವನದಲ್ಲಿ ನಡೆಯಿತು.

ಬಿಜೆಪಿ ಮುಖಂಡ ಸಂದೇಶ್ ಶೆಟ್ಟಿ ಅವರು ಉದ್ಘಾಟಿಸಿ ಮಾತನಾಡಿ, ವೃತ್ತಿಯಲ್ಲಿ ಕೀಳರಿಮೆ ಸಲ್ಲದು. ಯಾವುದೇ ಕ್ಷೇತ್ರದಲ್ಲಿ ಯಶಸ್ಸು ಸಾಧಿಸುವುದು ಮತ್ತು ಸಾಮಾಜಿಕವಾಗಿ ಸಂಘಟಿತರಾಗುವುದು ಮುಖ್ಯವಾಗಿದೆ. ದಿನಪೂರ್ತಿ ಕಷ್ಟಪಟ್ಟು ದುಡಿಯುವ ರಿಕ್ಷಾ ಚಾಲಕರು ಸಮಾಜ ಮುಖಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವುದು ಅಭಿನಂದನೀಯ ಎಂದರು.

ಮುಖ್ಯ ಅತಿಥಿಯಾಗಿದ್ದ ಕಿಯೋನಿಕ್ಸ್ ನಿಗಮದ ಮಾಜಿ ಅಧ್ಯಕ್ಷ ಹರಿಕೃಷ್ಣ ಬಂಟ್ವಾಳ್ ಮಾತನಾಡಿ, ಜ್ಞಾನ ಶಕ್ತಿ ಮತ್ತು ಸಂಘಟನಾ ಶಕ್ತಿಗೆ ಜಗತ್ತು ಬೆಲೆ ನೀಡುತ್ತದೆ, ಹಾಗಾಗಿ ಸಂಘಟನೆಯ ಮೂಲಕ ರಿಕ್ಷಾ ಚಾಲಕರ ಸಮಸ್ಯೆಗಳಿಗೆ ಪರಿಹಾರ ಪಡೆಯಲು ಸಾಧ್ಯವಿದೆ. ರಾಷ್ಟ್ರ ಸೇವೆಯಲ್ಲಿ ರಿಕ್ಷಾ ಚಾಲಕರ ಪಾತ್ರವು ಮಹತ್ವದ್ದಾಗಿದೆ ಎಂದು ಹೇಳಿದರು.

ಸಂಘದ ಅಧ್ಯಕ್ಷ ರಾಜೇಶ್ ಬೊಳ್ಳುಕಲ್ಲು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪುರಸಭೆ ಮಾಜಿ ಉಪಾಧ್ಯಕ್ಷ ಬಿ.ಮೋಹನ್, ಹಿರಿಯ ವಕೀಲ ನಾರಾಯಣ ಪೂಜಾರಿ, ಲಯನ್ಸ್ ಸ್ಥಾಪಕಾಧ್ಯಕ್ಷ ವಸಂತ ವಿ.ಬಾಳಿಗ, ಬೊಳ್ಳುಕಲ್ಲು ನಾರಾಯಣ ಪೂಜಾರಿ ವೇದಿಕೆಯಲ್ಲಿದ್ದರು. ಸಂಘದ ಉಪಾಧ್ಯಕ್ಷ ಹುಸೈನ್ ಪರ್ಲ್ಯ, ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಪೂಂಜರಕೋಡಿ, ಸಂಘಟನಾ ಕಾರ್ಯದರ್ಶಿ ಚಂದ್ರಶೇಖರ ಭಂಡಾರಿಬೆಟ್ಟು, ಜೊತೆ ಕಾರ್ಯದರ್ಶಿಗಳಾದ ತಿಮ್ಮಪ್ಪ ಪೂಜಾರಿ, ಕೇಶವ ಪೇರ್ಲಬೈಲು ಇದ್ದರು. ಈ ಸಂದರ್ಭ ಅಸೋಸಿಯೇಶನ್ ಗೌರವಾಧ್ಯಕ್ಷ ಟಿ. ನಾರಾಯಣ ಪೂಜಾರಿ ಹಾಗೂ ಹಿರಿಯ ರಿಕ್ಷಾ ಚಾಲಕರನ್ನು ಸನ್ಮಾನಿಸಲಾಯಿತು. ಕೃಷ್ಣಪ್ಪ ಮಡಿವಾಳ ಚಿಕ್ಕಯ್ಯ ಮಠ ಪ್ರಸ್ತಾವಿಕವಾಗಿ ಮಾತನಾಡಿದರು. ನಿತಿನ್ ಸಜೀಪ ಸ್ವಾಗತಿಸಿದರು. ಎಚ್. ಕೆ. ನಯನಾಡು ನಿರೂಪಿಸಿದರು. ಸಂಜೆ ಸಾಂಸ್ಕೃತಿಕ ಕಾರ್ಯಕ್ರಮದ ಪ್ರಯುಕ್ತ ನಾಟಕ ಪ್ರದರ್ಶನ ನಡೆಯಿತು.

ಪೊಳಲಿಯಲ್ಲಿ ಮಹಾರಥೋತ್ಸವ, 29 ದಿನಗಳ ಅದ್ದೂರಿ ಜಾತ್ರೆ ಸಂಪನ್ನ



ಬಂಟ್ವಾಳ: ಸಾವಿರ ಸೀಮೆಯಒಡತಿ ಪೊಳಲಿ ರಾಜರಾಜೇಶ್ವರೀ ದೇವಸ್ಥಾನದಲ್ಲಿ 29 ದಿನಗಳ ಕಾಲ ಅದ್ದೂರಿಯಾಗಿ ನಡೆದ ಜಾತ್ರೆ ಶನಿವಾರ ರಾತ್ರಿ ಸಂಪನ್ನಗೊಂಡಿದೆ.

ಸಂಜೆ ಮಹಾರಥೋತ್ಸವದಲ್ಲಿ ದೇವರು ರಥಾರೂಢರಾದ ಬಳಿಕ ಭಕ್ತರು ದೇವಳದ ಸುತ್ತ ರಥವನ್ನು ಎಳೆಯುವ ಮೂಲಕ ಸಂತೃಪ್ತರಾದರು. ಬಂಟ್ವಾಳ ತಾಲೂಕಿನ ಇತಿಹಾಸ ಪ್ರಸಿದ್ಧ ಪೊಳಲಿ ಶ್ರೀ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಕಳೆದೊಂದು ತಿಂಗಳಿಂದ ವಾರ್ಷಿಕ ಜಾತ್ರೆ ನಡೆಯುತ್ತಿತ್ತು. ದೇವರ ರಥೋತ್ಸವದ ಬಳಿಕ ಜಾತ್ರೆ ಸಂಪನ್ನವಾಗಿದೆ.

ಕೊನೆಯ ದಿನ ಸಾಗರೋಪಾದಿಯಲ್ಲಿ ಪೊಳಲಿಗೆ ಆಗಮಿಸಿದ ಭಕ್ತರು ಮಹಾ ರಥೋತ್ಸವವನ್ನು ಕಣ್ತುಂಬಿಕೊಂಡರು. ಇದೇ ವೇಳೆ ಸುಡುಮದ್ದು ಪ್ರದರ್ಶನವು ಗಮನಸೆಳೆಯಿತು.

ಈ ಸಂದರ್ಭ ದೇವಳದ ತಂತ್ರಿ ಸುಬ್ರಹ್ಮಣ್ಯ ತಂತ್ರಿ, ವೆಂಕಟೇಶ್ ತಂತ್ರಿವರ್ಯರು, ಪ್ರದಾನ ಅರ್ಚಕ ಮಾಧವ ಭಟ್, ಹಿರಿಯ ಪ್ರಧಾನ ಅರ್ಚಕ ಕೆ. ರಾಮ್ ಭಟ್, ಪರಮೇಶ್ವರ ಭಟ್, ಅರ್ಚಕ ಪದ್ಮನಾಭ ಭಟ್, ಅನಂತಪದ್ಮನಾಭ ಭಟ್, ಆದರ್ಶಭಟ್, ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪಾಡಿ, ದೇವಳದ ಆಡಳಿತ ಮೊಕ್ತೇಸರ ಡಾ. ಮಂಜಯ್ಯ ಶೆಟ್ಟಿ ಅಮ್ಮುಂಜೆಗುತ್ತು, ಮೊಕ್ತೇಸರ ಚೇರಾ ಸೂರ್ಯನಾರಾಯಣ ರಾವ್, ವಿವಿಧ ಗುತ್ತಿನವರು, ಕಾರ್ಯನಿರ್ವಹಣಾಧಿಕಾರಿ ಕೆ.ಪಿ.ಚಂದ್ರಮೋಹನ್, ಮಾಜಿ ಸಚಿವ ಬಿ. ರಮಾನಾಥ ರೈ, ಸುಭಾಶ್ಚಂದ್ರ ನ್ಯಾಕ್ ಉಳಿಪಾಡಿಗುತ್ತು ಇದ್ದರು.

ಸಂಸದ ಕ್ಯಾ.ಬ್ರಿಜೇಶ್ ಚೌಟ,ಧಾರ್ಮಿಕ ಪರಿಷತ್ ಸದಸ್ಯ ಜಗನ್ನಾಥ ಚೌಟ ಕೃಷ್ಣಕುಮಾರ್ ಪೂಂಜಾ ಫರಂಗಿಪೇಟೆ, ಬಿಜೆಪಿ ಮುಖಂಡ ಸಂಜಯ ಪ್ರಭು ಸಹಿತ ಹಲವಾರು ಗಣ್ಯರು ದೇವರದರ್ಶನ ಪಡೆದು ಪ್ರಸಾದ ಸ್ವೀಕರಿಸಿದರು.

ಇಂದು ನೇಮ

ಏ.12 ರಂದು ಅವಭೃತ ಸ್ನಾನ ಹಾಗೂ ಮಗೃಂತಾಯ ನೇಮ ನಡೆಯಲಿದೆ.

ಸಸಿಹಿತ್ಲು ಶ್ರೀ ಭಗವತೀ ದೇಗುಲದಲ್ಲಿ ನಡಾವಳಿ ಉತ್ಸವ



ಮುಲ್ಕಿ: ಹಳೆಯಂಗಡಿ ಸಮೀಪದ ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದಲ್ಲಿ ನಡಾವಳಿ ಮಹೋತ್ಸವ ಶುಕ್ರವಾರ ವಿಜೃಂಭಣೆಯಿಂದ ನಡೆಯಿತು

ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಏ.9ರಂದು ರಾತ್ರಿ ಕದಿಕೆ ಭಂಡಾರಮನೆಯಿಂದ ಶ್ರೀ ಕ್ಷೇತ್ರಕ್ಕೆ ಭಂಡಾರ ಆಗಮನ, 10ರಂದು ಬೆಳಗ್ಗೆ ನಾಗ ತಂಬಿಲ, ಮಧ್ಯಾಹ್ನ ಮಹಾಪೂಜೆ ನಡೆಯಿತು

ಶುಕ್ರವಾರ ರಾತ್ರಿ 11ರಿಂದ ನಡಾವಳಿ, ಮಹಾ ಪೂಜೆ, ಬಲಿ ಪ್ರಾರಂಭ, ಮೂರ್ತಿ ಬಲಿ, ಕಂಚೀಲು ಸೇವೆ, ಉರುಳು ಸೇವೆ ಹರಕೆ, ತುಲಾಭಾರ ಸೇವೆ ನಡೆಯಿತು

ಈ ವೇಳೆ ದೇವಸ್ಥಾನದ ಆನುವಂಶಿಕ ಮೊಕ್ತೇಸರ ಹಾಗೂ ಪ್ರಧಾನ ಅರ್ಚಕ ಶ್ರೀನಿವಾಸ ಯಾನೆ ಅಪ್ಪು ಪೂಜಾರಿ, ಆಡಳಿತ ಮೊಕ್ತೇಸರ ಚಂದ್ರಶೇಖರ್ ಬೆಲ್ಚಡ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಆಡಳಿತ ಸಮಿತಿ ಅಧ್ಯಕ್ಷ ವಾಮನ್ ಇಡ್ಯಾ, ಮುಂಬೈ ಸಮಿತಿಯ ಅಧ್ಯಕ್ಷ ವೇದ ಪ್ರಕಾಶ್ ಎಂ. ಶ್ರೀಯಾನ್, ಆಡಳಿತ ಮಂಡಳಿ ಉಪಾಧ್ಯಕ್ಷ ವಿಶ್ವನಾಥ ಬೆಲ್ಚಡ, ಸಮಿತಿಯ ರಮೇಶ್ ಬಂಗೇರ, ರಾಜೇಂದ್ರ ಪ್ರಸಾದ್ ಎಕ್ಕಾರು, ಶಿವಣ್ಣ ಅಂಚನ್ ಕಾಪು, ಸುರೇಶ್ ಕೆ. ಬಂಗೇರ ತೋಕೂರು, ಗುರಿಕಾರರು ಇದ್ದರು.

ಇಂದಿನ ಕಾರ್ಯಕ್ರಮ

ದೇವಸ್ಥಾನದಲ್ಲಿ ಏ.11ರಿಂದ ಭರಣಿ ಮಹೋತ್ಸವ, ಬೆಳಗ್ಗೆ 10.25ಕ್ಕೆ ಮಿಥುನ ಲಗ್ನ ಸುಮುಹೂರ್ತದಲ್ಲಿ ಧ್ವಜಾರೋಹಣ, ರಾತ್ರಿ ಮಹಾಪೂಜೆ ನಡೆಯಲಿದೆ.

ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಾಲಯದಲ್ಲಿ ಜಾತ್ರೆ, ದರ್ಶನ ಬಲಿ



ಆಲಂಕಾರು: ಕಡಬ ತಾಲೂಕು ಆಲಂಕಾರು ಗ್ರಾಮದ ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಾಲಯದ ವಾರ್ಷಿಕ ಜಾತ್ರೆ ಅಂಗವಾಗಿ ಶುಕ್ರವಾರ ಮಧ್ಯಾಹ್ನ ದರ್ಶನ ಬಲಿ, ಬಟ್ಟಲು ಕಾಣಿಕೆ ಉತ್ಸವ ನಡೆಯಿತು. ಸಂಜೆ ಸವಾರಿ ಮಂಟಪ ಕಟ್ಟೆಪೂಜೆಗಳು, ಕೆರೆ ಉತ್ಸವ, ವಸಂತ ಕಟ್ಟೆ ಪೂಜೆ, ಪುಷ್ಪರಥೋತ್ಸವ ಮಹಾಪೂಜೆ, ಭೂತಬಲಿ, ಪ್ರಸಾದ ವಿತರಣೆ ನಡೆಯಿತು. ಈ ಸಂಧರ್ಭ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಕೆ. ಸುಬ್ರಹ್ಮಣ್ಯ ರಾವ್ ನಗ್ರಿ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಗೋಪಾಲಕೃಷ್ಣ ಪಡ್ಡಿಲ್ಲಾಯ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಹೇಮಂತ ರೈ ಮನವಳಿಕೆ ಗುತ್ತು, ಪವಿತ್ರಪಾಣಿ ಎನ್. ಹರೀಶ್ ಆಚಾರ್ಯ ನಗ್ರಿಗುತ್ತು ಮತ್ತಿತರರು ಉಪಸ್ಥಿತರಿದ್ದರು.

ಏ.15ರಿಂದ ವಾಲಿಬಾಲ್-ಕಬಡ್ಡಿ ಬೇಸಿಗೆ ಉಚಿತ ತರಬೇತಿ ಶಿಬಿರ

ಪುತ್ತೂರು: ದೈಹಿಕ ಕ್ಷಮತೆ ಚುರುಕುತನ ಹಾಗೂ ತಂಡ ಮನೋಭಾವವನ್ನು ಬೆಳೆಸುವ ನಿಟ್ಟಿನಲ್ಲಿ ಪ್ರತಿಭಾವಂತರಿಗೆ ಅವಕಾಶ ಸೃಷ್ಟಿಸುವ ವಾಲಿಬಾಲ್ ಮತ್ತು ಕಬಡ್ಡಿ ಬೇಸಿಗೆ ಉಚಿತ ತರಬೇತಿ ಶಿಬಿರವನ್ನು ಮಿತ್ರ ವೃಂದ ವಾಲಿಬಾಲ್ ಅಕಾಡೆಮಿ, ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ ಮೈ ಭಾರತ್ ಹಾಗೂ ಸಂಪ್ಯದ ಅಕ್ಷಯ ಕಾಲೇಜಿನ ಜಂಟಿ ಆಶ್ರಯದಲ್ಲಿ ಆಯೋಜಿಸಲಾಗಿದೆ. 10 ವರ್ಷದಿಂದ 18 ವರ್ಷದೊಳಗಿನ ಬಾಲಕ-ಬಾಲಕಿಯರಿಗೆ ಒಂದು ತಿಂಗಳ ಬೇಸಿಗೆ ತರಬೇತಿ ಶಿಬಿರ ಏ.15ರಿಂದ ಆರಂಭಗೊಳ್ಳಲಿದೆ ಎಂದು ಆಯೋಜನಾ ಸಮಿತಿ ಪ್ರಧಾನ ಕಾರ್ಯದರ್ಶಿ ಬಾಲಚಂದ್ರ ಕೆ. ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೊದಲ ಬಾರಿಗೆ ನೆದರ್‌ಲ್ಯಾಂಡ್‌ನ ಲೆಟ್ಸ್ ಕೀಪ್‌ದ ಬಾಲ್ ಫ್ಲೈಯಿಂಗ್ ಫೌಂಡೇಶನ್ ಎಂಬ ಸಂಸ್ಥೆ ಸಹಯೋಗ ನೀಡಲಿದೆ. ತರಬೇತಿಯನ್ನು ಎನ್‌ಐಎಸ್ ಅರ್ಹತೆ ಹೊಂದಿದ ತರಬೇತುದಾರರು ನೀಡಲಿದ್ದಾರೆ. ರಾಷ್ಟ್ರೀಯ ವಾಲಿಬಾಲ್ ಕೋಚ್ ಪಿ.ವಿ. ನಾರಾಯಣನ್ ವಾಲಿಬಾಲ್ ತರಬೇತಿಯ ಮುಖ್ಯ ಕೋಚ್ ಆಗಿರುತ್ತಾರೆ. ಕಬಡ್ಡಿಗೆ ದೈಹಿಕ ಶಿಕ್ಷಕ ನವೀನ್ ಅವರು ತರಬೇತಿ ನೀಡಲಿದ್ದಾರೆ. ಸಂಪ್ಯದ ಅಕ್ಷಯ ಕಾಲೇಜಿನಲ್ಲಿ ಬೆಳಗ್ಗೆ 7ರಿಂದ 9 ಗಂಟೆ ತನಕ ಹಾಗೂ ಸಂಜೆ 4.30ರಿಂದ 6.30ರ ತನಕ ಈ ತರಬೇತಿ ನಡೆಯಲಿದೆ. ವಾಲಿಬಾಲ್‌ಗೆ ಯೋಗ್ಯ ಎತ್ತರ ಹೊಂದಿರುವ ಅಭ್ಯರ್ಥಿಗಳನ್ನು ವಯಸ್ಸಿನ ಪರಿಮಿತಿ ಇಲ್ಲದೆ ಆಯ್ಕೆ ಮಾಡಲಾಗುತ್ತದೆ ಎಂದು ಅವರು ತಿಳಿಸಿದರು.

ಇಂದು ಆಯ್ಕೆ ಪರೀಕ್ಷೆ

ಈ ಉಚಿತ ವಾಲಿಬಾಲ್ ಮತ್ತು ಕಬಡ್ಡಿ ತರಬೇತಿಯಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವ ಬಾಲಕ ಬಾಲಕಿಯರು ಪಿ.ವಿ. ನಾರಾಯಣನ್-99000269455, ನವೀನ್-8748018004 ಹಾಗೂ ಹಮೀದ್ ಸಜಾ-9448501724 ಅವರನ್ನು ಸಂಪರ್ಕಿಸುವಂತೆ ವಿನಂತಿ ಮಾಡಲಾಗಿದೆ. ಏ.12ರಂದು ಬೆಳಗ್ಗೆ 8 ಗಂಟೆಗೆ ಸಂಪ್ಯದ ಅಕ್ಷಯ ಕಾಲೇಜಿನಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಆಯೋಜನಾ ಸಮಿತಿ ಅಧ್ಯಕ್ಷ ಪಿ.ವಿ. ಕೃಷ್ಣನ್, ರಾಷ್ಟ್ರೀಯ ವಾಲಿಬಾಲ್ ಕೋಚ್ ಪಿ.ವಿ. ನಾರಾಯಣನ್, ಟ್ರಸ್ಟಿ ರಾಮಚಂದ್ರ ಮತ್ತು ಸದಸ್ಯ ಆನನ್ಯ ಕೃಷ್ಣ ಭಟ್ ಉಪಸ್ಥಿತರಿದ್ದರು.

ಹಿರಿಯರ ಆದರ್ಶಗಳು ನಂದಾದೀಪವಾಗಲಿ: ಡಾ.ಭಟ್



ಬಂಟವಾಳ: ಹಿರಿಯ ಆದರ್ಶಗಳು ನಂದಾದೀಪ ಆಗಬೇಕು ಸಾಧಕರ ನೂರು ಹೆಜ್ಜೆಗಳಲ್ಲಿ ಒಂದು ಹೆಜ್ಜೆಯನ್ನಾದರೂ ಅನುಸರಿಸಿ ಸಾರ್ಥಕತೆ ಪಡೆಯೋಣ ಎಂದು ಪುತ್ತೂರು ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ ಕೆ. ಪ್ರಭಾಕರ ಭಟ್ ಕಲ್ಲಡ್ಕ ಹೇಳಿದರು.

ಶನಿವಾರ ಕಲ್ಲಡ್ಕ ಸಮೀಪದ ಜೀವೆ ನೀರಕೋಡಿಯಲ್ಲಿ ಇತ್ತೀಚೆಗೆ ನಿಧನರಾದ ಕಲ್ಲಡ್ಕ ಶ್ರೀರಾಮ ವಿದ್ಯಾಸಂಸ್ಥೆಯ ನಿವೃತ್ತ ಹಿಂದಿ ಶಿಕ್ಷಕ ಗೋವಿಂದಭಟ್ ಅವರಿಗೆನುಡಿನಮನ ಸಲ್ಲಿಸಿ ಅವರು ಮಾತನಾಡಿದರು. ಜಾತ್ಯತೀತ ವ್ಯವಸ್ಥೆ ಪ್ರತಿಪಾದಕರಾಗಿ ಎಲ್ಲರೊಂದಿಗೆ ಬೆರೆಯುತ್ತಿದ್ದ ಅವರು ಪರಿವಾರ ಸಂಘಟನೆಗಳಲ್ಲಿ ತೊಡಗಿಸಿಕೊಂಡವರು. ಶಿಕ್ಷಕನಾಗಿಯೂ ಶಿಸ್ತು ಮತ್ತು ಅನುಕರಣೀಯ ಜೀವನಶೈಲಿಯಿಂದ ಜನಪ್ರಿಯರಾಗಿದ್ದರು ಎಂದರು.

ಸಂಘ ಪರಿವಾರದ ಹಿರಿಯ ಮುಖಂಡ ರಾಧಾಕೃಷ್ಣ ಅಡ್ಯಂತಾಯ, ಮಾಜಿ ಶಾಸಕ ಪದ್ಮನಾಭ ಕೊಟ್ಟಾರಿ, ವಸಂತ ಮಾಧವ, ರಮೇಶ್ ಕಲ್ಲಡ್ಕ ಮಹೇಶ್ ಭಟ್ ಕಜೆ ಮಾತನಾಡಿದರು. ಡಾ. ಕಮಲಾ ಪ್ರಭಾಕರ ಭಟ್, ಸಂಘ ಪರಿವಾರದ ಪ್ರಮುಖರು, ಶ್ರೀರಾಮ ವಿದ್ಯಾಸಂಸ್ಥೆಯವರು, ದಿ. ಗೋವಿಂದ ಭಟ್ ಒಡನಾಡಿಗಳು, ಹಿತೈಷಿಗಳು, ಸಹೋದ್ಯೋಗಿಗಳು, ಕುಟುಂಬದವರು ಇದ್ದರು. ಶ್ರೇಯಸ್ ಸ್ವಾಗತಿಸಿದರು. ರಾಜೇಶ್ ಕಲ್ಲಡ್ಕ ನಿರ್ವಹಿಸಿ ದರು. ದಿ. ಭಾವಚಿತ್ರಕ್ಕೆ ಪುಷ್ಪಾರ್ಚನೆ ಬಳಿಕ ಸಹಭೋಜನ ನಡೆಯಿತು.

ಬಂಟಕಲ್ಲು ಶಾಲಾ ಶತಮಾನೋತ್ಸವ, ವಾರ್ಷಿಕೋತ್ಸವಕ್ಕೆ ಚಾಲನೆ | ಜಯರಾಮ ಪ್ರಭು ಅಭಿಪ್ರಾಯ

ಸ್ವಪ್ರತಿಭೆಗಳ ವಿಕಸನಕ್ಕೆ ಶಾಲಾ ವಾರ್ಷಿಕೋತ್ಸವಗಳು ವೇದಿಕೆ

ಶಿರ್ವ: ನೂರು ಸಂವತ್ಸರಗಳನ್ನು ಪೂರೈಸಿದ ಶ್ರೀಕ್ಷೇತ್ರ ಬಂಟಕಲ್ಲು ಶ್ರೀದುರ್ಗಾಪರಮೇಶ್ವರೀ ದೇವಳದ ಆಡಳಿತಕ್ಕೆ ಒಳಪಟ್ಟ ಶ್ರೀದುರ್ಗಾಪರಮೇಶ್ವರೀ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ ಶತಮಾನೋತ್ಸವ ಸಂಭ್ರಮದಲ್ಲಿದ್ದು, ಪ್ರಥಮ ದಿನವಾದ ಶನಿವಾರ ಶಾಲಾ ವಾರ್ಷಿಕೋತ್ಸವ ಸಮಾರಂಭಕ್ಕೆ ಬಂಟಕಲ್ಲು ಶ್ರೀದೇವಳದ ಆಡಳಿತ ಮೊಕ್ತೇಸರ ಗಂಪದಬೈಲು ಜಯರಾಮ ಪ್ರಭು ಧ್ವಜಾರೋಹಣದ ಮೂಲಕ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿ, ಕಳೆದ ನಾಲ್ಕು ವರ್ಷಗಳಿಂದ ಸರಕಾರದ ವತಿಯಿಂದ ಅ ಕೃತ ಶಿಕ್ಷಕರಿಲ್ಲದೆ ಗೌರವ ಶಿಕ್ಷಕಿಯರನ್ನು ಇಟ್ಟುಕೊಂಡು ಶಾಲೆಯನ್ನು ನಡೆಸುತ್ತಿದ್ದೇವೆ. ಶಾಲಾ ವಾರ್ಷಿಕೋತ್ಸವ ನಡೆಸಲು ಅಸಾಧ್ಯವಾಗಿದ್ದು



ಶತಮಾನೋತ್ಸವದ ಶುಭಾವಸರದಲ್ಲಿ ಶಾಲಾ ಹಳೆವಿದ್ಯಾರ್ಥಿಗಳ ಸಹಕಾರ ಹಾಗೂ ಶಾಲಾ ಶತಮಾನೋತ್ಸವ ಸಮಿತಿಯ ಜತೆಗೂಡಿ ವಾರ್ಷಿಕೋತ್ಸವ ನಡೆಸುತ್ತಿದ್ದೇವೆ. ವಿದ್ಯಾರ್ಥಿಗಳ ಸ್ವಪ್ರತಿಭೆಗಳ ವಿಕಸನಕ್ಕೆ ಶಾಲಾ ವಾರ್ಷಿಕೋತ್ಸವಗಳು ವೇದಿಕೆಯಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ಬಂಟಕಲ್ಲು ಬಿ.ಸಿ.ರೋಡ್ ಲಯನ್ಸ್‌ಕ್ಲಬ್ ಅಧ್ಯಕ್ಷ, ಶಾಲಾ ಹಳೆವಿದ್ಯಾರ್ಥಿ ಟೋನಿ ಮೋನಿಸ್ ಶಾಲಾ ಬಾಲ್ಯದ ನೆನಪುಗಳನ್ನು ಸ್ಮರಿಸಿ ಶುಭ ಹಾರೈಸಿದರು. ವೇದಿಕೆಯಲ್ಲಿ ದಾನಿಗಳಾದ ತೆರೆಜಾ ಫೆಲಿಕ್ಸ್ ಮಾರ್ಟಿಸ್, ಸುಂದರ ಪಾಟ್ಕರ್ ಮೊದಮಲೆ, ಶಾಲಾ ಶತಮಾನೋತ್ಸವ ಸಮಿತಿಯ ಅಧ್ಯಕ್ಷ ಮಾಧವ ಕಾಮತ್, ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಶಶಿಧರ ವಾಗ್ಲೆ, ಎಸ್‌ಡಿಎಂಸಿ ಅಧ್ಯಕ್ಷ ರವೀಂದ್ರ ಪಾಟ್ಕರ್, ಶಾಲಾ ಶಿಕ್ಷಕ ರಕ್ಷಕ ಸಂಘದ ಅಧ್ಯಕ್ಷ ನವೀನ್, ಶಾಲಾ ನಾಯಕ ರಿತಿಕ್, ಶಾಲಾ ಮುಖ್ಯ ಶಿಕ್ಷಕಿ ಸಂಗೀತಾ ಆರ್ ಪಾಟ್ಕರ್ ಉಪಸ್ಥಿತರಿದ್ದರು. ಶಾಲಾ ಸಂಚಾಲಕ ರಾಮದಾಸ್ ಪ್ರಭು ಸ್ವಾಗತಿಸಿದರು. ಶಾಲಾ ಹಳೆವಿದ್ಯಾರ್ಥಿ ದೇವದಾಸ್ ಪಾಟ್ಕರ್ ನಿರೂಪಿಸಿದರು.

ದ್ವಿತೀಯ ಪಿಯುಸಿ ಫಲಿತಾಂಶ ಉಡುಪಿ ಜಿಲ್ಲೆ ಪ್ರಥಮ

ಶಾಸಕ ಯಶ್‌ಪಾಲ್ ಸುವರ್ಣ ಅಭಿನಂದನೆ

ಉಡುಪಿ: ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶದಲ್ಲಿ ಉಡುಪಿ ಜಿಲ್ಲೆ ಶೇ. 96.39 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆಯುವ ಮೂಲಕ ಶೈಕ್ಷಣಿಕವಾಗಿ ಅತ್ಯುತ್ತಮ ಸಾಧನೆ ಮಾಡಿರುವ ವಿದ್ಯಾರ್ಥಿಗಳು ಹಾಗೂ ಶಿಕ್ಷಣ ಇಲಾಖೆಗೆ ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಅಭಿನಂದನೆ ಸಲ್ಲಿಸಿದ್ದಾರೆ.



ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉಡುಪಿ ಮತ್ತು ದ.ಕ. ಜಿಲ್ಲೆ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆಯುವ ಮೂಲಕ ಕರಾವಳಿ ಜಿಲ್ಲೆಯ ಶಿಕ್ಷಣದ ಗುಣಮಟ್ಟವನ್ನು ಮತ್ತೊಮ್ಮೆ ರಾಜ್ಯಮಟ್ಟದಲ್ಲಿ ಸಾಬೀತು ಮಾಡಿದೆ. ಮುಖ್ಯಮಂತ್ರಿ ಹಾಗೂ ಶಿಕ್ಷಣ ಸಚಿವರು ಉಡುಪಿ ಜಿಲ್ಲೆಯ ನಿರಂತರ ಶೈಕ್ಷಣಿಕ ಸಾಧನೆ, ಗುಣಮಟ್ಟದ ಶಿಕ್ಷಣ ವ್ಯವಸ್ಥೆಗೆ ಇನ್ನೂ ಹೆಚ್ಚಿನ ಶಕ್ತಿ ತುಂಬುವ ನಿಟ್ಟಿನಲ್ಲಿ ಉಡುಪಿ ಜಿಲ್ಲೆಯ ಶಾಲಾ ಕಾಲೇಜುಗಳ ಕಟ್ಟಡ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಗೆ 25 ಕೋಟಿ ಹಾಗೂ ಪ್ರತಿ ವರ್ಷ ಹೊರ ಜಿಲ್ಲೆಯಿಂದ ಶಿಕ್ಷಣಕ್ಕಾಗಿ ಉಡುಪಿಗೆ ಆಗಮಿಸುವ ಸಾವಿರಾರು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿದ್ಯಾರ್ಥಿ ನಿಲಯಗಳ ನಿರ್ಮಾಣಕ್ಕೆ 25 ಕೋಟಿ ವಿಶೇಷ ಅನುದಾನವನ್ನು ಜಿಲ್ಲೆಗೆ ಮಂಜೂರು ಮಾಡಬೇಕು. ಜಿಲ್ಲೆಯ ಸರಕಾರಿ ಶಾಲಾ ಕಾಲೇಜುಗಳಲ್ಲಿ ಗಣನೀಯ ಪ್ರಮಾಣದಲ್ಲಿ ಶಿಕ್ಷಕರ ಕೊರತೆಯಿದ್ದರೂ ಜಿಲ್ಲೆಯ ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ಅವಿರತ ಶ್ರಮದ ಮೂಲಕ ಉತ್ತಮ ಫಲಿತಾಂಶ ಬಂದಿದ್ದು, ರಾಜ್ಯ ಸರ್ಕಾರ ತಕ್ಷಣ ಖಾಲಿ ಇರುವ ಶಿಕ್ಷಕರ ಹುದ್ದೆ ಭರ್ತಿ ಮಾಡಿ ಜಿಲ್ಲೆಯ ಶಿಕ್ಷಣ ವ್ಯವಸ್ಥೆ ಬಲಪಡಿಸಲು ಆದ್ಯತೆ ನೀಡಬೇಕು ಎಂದು ಹೇಳಿದ್ದಾರೆ. ಹಾಗೂ ಜಿಲ್ಲೆಗೆ ಕೀರ್ತಿ ತಂದ ವಿದ್ಯಾರ್ಥಿಗಳಿಗೆ, ಶಿಕ್ಷಕ ವೃಂದ, ಶಾಲಾಡಳಿತ ಮಂಡಳಿ, ಪೋಷಕರು, ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಸುತ್ತಮುತ್ತ

ಏ.13ರಿಂದ 23ರವರೆಗೆ ಅಮೃತೇಶ್ವರ ದೇವಳದಲ್ಲಿ ವಾರ್ಷಿಕ ಜಾತ್ರೆ

ಕೈಕಂಬ: ವಾಮಂಜೂರು ತಿರುವೈಲಿನ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ವೇದ ಮೂರ್ತಿ ಬ್ರಹ್ಮಶ್ರೀ ಕುಡುಪು ನರಸಿಂಹ ತಂತ್ರಿಗಳ ನೇತೃತ್ವದಲ್ಲಿ ಕಾಲಾವಧಿ ಉತ್ಸವವು ಏ.13ರಿಂದ 23ರವರೆಗೆ ಜರುಗಲಿದೆ.

ಏ.13ರಂದು ಬೆಳಿಗ್ಗೆ 9.30ಕ್ಕೆ ಶತರುದ್ರಾಭಿಷೇಕ, ಏ.14ರಂದು ಮೇಷ ಸಂಕ್ರಮಣದಂದು ಬೆಳಿಗ್ಗೆ 108 ಕಾಯಿ ಗಣಯಾಗ, ರಾತ್ರಿ 7.30ಕ್ಕೆ ಧ್ವಜಾರೋಹಣ ಗೊಳ್ಳಲಿದೆ. ಏ.15ರಂದು ಬೆಳಿಗ್ಗೆ 7ಕ್ಕೆ ದೀಪದ ಬಲಿ ಉತ್ಸವ (ಯುಗಾದಿ) ಪಂಚಾಂಗ ಶ್ರವಣ, ತಪ್ಪಂಗಾಯಿ, ಏ. 16ರಂದು ಸಂಜೆ 6ಕ್ಕೆ ಪ್ರಥಮ ಚೆಂಡು, ಬಯನ ಬಲಿ ಉತ್ಸವ 'ಅಷ್ಟಾವಧಾನ'. ಏ.17ರಂದು ಭಜನೆ, 2ನೇ ಚೆಂಡು, ಏ.18ರಂದು 3ನೇ ಚೆಂಡು, ಏ.19ರಂದು 4ನೇ ಚೆಂಡು, ರಾತ್ರಿ 7ಕ್ಕೆ ಚಂದ್ರಮಂಡಲೋತ್ಸವ, ಶ್ರೀ ಕೊಡಮಣಿತ್ತಾಯ ದೈವದ ಭೇಟಿ, ಏ.20 ರಂದು ಕಡೇ(5ನೇ) ಚೆಂಡು ನಡೆಯಲಿದೆ.

ಏ.21ರಂದು ಸಂಜೆ 8ಕ್ಕೆ ರಥೋತ್ಸವ, ಏ. 22 ರಂದು ಬೆಳಿಗ್ಗೆ 9ರಿಂದ ತುಲಾಭಾರ ಸೇವೆ, ಬಲಿ ಹೊರಟು ಓಕುಳಿ, ಅವಭೃತ ನಡೆಯ ಲಿದೆ. ಏ.23ರಂದು ರಾತ್ರಿ 7.30ರಿಂದ ಶ್ರೀ ಕೊಡಮಣಿ ತ್ತಾಯ, ಪರಿವಾರ ದೈವಗಳಿಗೆ ನೇಮ ನಡೆಯಲಿದೆ.

ಹೊರೆಕಾಣಿಕೆ

ಏ.16ರಂದು ಸಂಜೆ 4.30ಕ್ಕೆ ವಿಜಯಲಕ್ಷ್ಮೀ ಫ್ರೆಂಡ್ಸ್ ಕ್ಲಬ್ ಪರಾರಿ–ವಾಮಂಜೂರು ಶ್ರೀ ರಾಮ ಮಂದಿರದಿಂದ, ಏ.19 ರಂದು ಪಡುಬದಿನಡಿ ದೈವಸ್ಥಾನ, ಉಳಾಯಿಬೆಟ್ಟು ಸಾಲೆ ಶ್ರೀ ವಿಶ್ವನಾಥ ಮಹಾಗಣಪತಿ ದೇವಸ್ಥಾನದಿಂದ ಶ್ರೀ ಅಮೃತೇಶ್ವರ ದೇವಳಕ್ಕೆ ಹೊರೆಕಾಣಿಕೆ ಮೆರವಣಿಗೆ ಸಾಗಿ ಬರಲಿದೆ. ಪ್ರತಿದಿನ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

ಕುಳ ಶ್ರೀ ವಿಷ್ಣುಮೂರ್ತಿ ದೈವದ ಒತ್ತೆಕೋಲ

ಮುಳ್ಳೇರಿಯ: ಬೆಳ್ಳೂರು ಕುಳ ಶ್ರೀ ವಿಷ್ಣುಮೂರ್ತಿ ದೈವದ ಒತ್ತೆಕೋಲ ಮಹೋತ್ಸವವು ಏ.22 ಮತ್ತು 23ರಂದು ಶ್ರದ್ಧಾಭಕ್ತಿಯಿಂದ ಜರಗಲಿದೆ. ಏ.22ರಂದು ರಾತ್ರಿ 7ಕ್ಕೆ ಕುಳ ದೈವಸ್ಥಾನದಿಂದ ಕುಳದಪಾರೆಗೆ ಭಂಡಾರ ಹೊರಡುವುದು, 8ಕ್ಕೆ ಮೇಲೇರಿಗೆ ಅಗ್ನಿಸ್ಪರ್ಶ, 8.30ಕ್ಕೆ ಕುಳದಪಾರೆ ಅಂಗನವಾಡಿ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, 9ಕ್ಕೆ ಊರವರಿಂದ ನೃತ್ಯ ವೈವಿಧ್ಯ, 11ರಿಂದ ಶ್ರೀ ವಿಷ್ಣುಮೂರ್ತಿ ದೈವದ ಕುಳಿಚ್ಚಾಟ, ಮಧ್ಯರಾತ್ರಿ 1ಗಂಟೆಗೆ ಸುಳ್ಯಪದವು ಶ್ರೀ ಮಹಾವಿಷ್ಣು ಯಕ್ಷಗಾನ ಕಲಾಸಂಘದವರಿಂದ ವಿದ್ಯುನ್ಮತಿ ಕಲ್ಯಾಣ ಯಕ್ಷಗಾನ ಬಯಲಾಟ ಪ್ರದರ್ಶನಗೊಳ್ಳಲಿದೆ. ಏ.23ರಂದು ಮುಂಜಾನೆ 5ಗಂಟೆಗೆ ಶ್ರೀ ವಿಷ್ಣುಮೂರ್ತಿ ದೈವದ ಅಗ್ನಿಸೇವೆ, ಬೆಳಗ್ಗೆ 7ಗಂಟೆಗೆ ಆರಸಿನ ಪ್ರಸಾದ ವಿತರಣೆ ನಡೆಯಲಿದೆ.

ಸಿಸಿಲಿಯಾ ಫರೀದಾ ಗೋವಿಯಸ್‌ಗೆ ಪಿಎಚ್ ಡಿ ಪದವಿ



ಕೊಣಾಜೆ: ಸಿಸಿಲಿಯಾ ಫರೀದಾ ಗೋವಿಯಸ್ ಅವರು ಮಂಗಳೂರು ವಿವಿ ಅರ್ಥಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಶ್ರೀಪತಿ ಕಲ್ಲೂರಾಯ ಅವರ ಮಾರ್ಗದರ್ಶನದಲ್ಲಿ 'ದಕ್ಷಿಣ ಕನ್ನಡದ ವಾಣಿಜ್ಯ ಬ್ಯಾಂಕುಗಳು ಒದಗಿಸುವ ಇ-ಬ್ಯಾಂಕಿಂಗ್ ಉತ್ಪನ್ನಗಳು ಮತ್ತು ಸೇವೆಗಳ ಬಗ್ಗೆ ಗ್ರಾಹಕರ ತೃಪ್ತಿ'ಎಂಬ ವಿಷಯದಲ್ಲಿ ಶ್ರೀನಿವಾಸ್ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಮಹಾಪ್ರಬಂಧಕ್ಕೆ ಶ್ರೀನಿವಾಸ ವಿವಿ ಅವರಿಗೆ ಅರ್ಥಶಾಸ್ತ್ರದಲ್ಲಿ ಪಿ.ಎಚ್.ಡಿ ಪದವಿ ನೀಡಿದೆ. ಗೋವಿಯಸ್ ಪ್ರಸ್ತುತ ಸ್ಕೂಲ್ ಆಫ್ ಸೋಷಿಯಲ್ ವರ್ಕ್ ರೋಶನಿ ನಿಲಯ (ಸ್ವಾಯತ್ತ) ಕಾಲೇಜಿನಲ್ಲಿ ಅರ್ಥಶಾಸ್ತ್ರದ ಸಹ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ದಿ.ಫ್ರಾನ್ಸಿಸ್ ಪೆರೇರಾ ಮತ್ತು ಕ್ಯಾಥರೀನ್ ಪೆರೇರಾ ದಂಪತಿಯ ಪುತ್ರಿ , ಕಾನ್ಪ್ರೆಡ್ ಗೋವಿಯಸ್ ಅವರ ಪತ್ನಿಯಾಗಿದ್ದಾರೆ.

250-300 ಎಕರೆ ಮಾತ್ರ ಕೈಗಾರಿಕೆಗಳ ಬಳಕೆಗೆ ಯೋಗ್ಯ: ಐವನ್

ಮಂಗಳೂರು: ಬಳ್ಕುಂಜೆ, ಕೊಲ್ಲೂರು, ಉಳೇಪಾಡಿ ಗ್ರಾಮಗಳಲ್ಲಿ ಕೈಗಾರಿಕೆಗಳಿಗೆ 1091.57 ಎಕರೆ ಭೂಸ್ವಾಧೀನ ಮಾಡಿಕೊಳ್ಳಲು ಕೆಐಎಡಿಬಿ ಪ್ರಕ್ರಿಯೆ ನಡೆಸಿದ್ದು, ಇದರಲ್ಲಿ 250–300 ಎಕರೆ ಮಾತ್ರ ಕೈಗಾರಿಕೆಗಳ ಬಳಕೆಗೆ ಯೋಗ್ಯ ಎಂದು ಸರ್ವೇ ತಂಡ ರಾಜ್ಯ ಸರಕಾರಕ್ಕೆ ವರದಿ ನೀಡಿದೆ ಎಂದು ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ತಿಳಿಸಿದರು.

ವಿಧಾನಪರಿಷತ್ ಅಧಿವೇಶನದಲ್ಲಿ ಐವನ್ ಡಿಸೋಜ ಅವರು ಭೂಮಾಫಿಯಾದ ಪ್ರಭಾವದಿಂದ ಅವೈಜ್ಞಾನಿಕವಾಗಿ ಉಪಯೋಗವಲ್ಲದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. ಕೂಡಲೇ ಈ ಬಗ್ಗೆ ಪರಿಶೀಲನೆ ನಡೆಸಿ ವರದಿ ನೀಡಬೇಕೆಂದು ಆಗ್ರಹಿಸಿದ್ದರು. ಇದಕ್ಕೆ ರಾಜ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ್ ಈ ಬಗ್ಗೆ ಉತ್ತರಿಸಿದ್ದು, 1091 ಎಕರೆಯಲ್ಲಿ ಸುಮಾರು 300 ಎಕರೆ ಮಾತ್ರವೇ ಕೈಗಾರಿಕಾ ಬಡಾವಣೆಗೆ ಯೋಗ್ಯವಾಗಿದ್ದು, ಉಳಿದ ಜಮೀನು ಕೈಬಿಡುವ ಬಗ್ಗೆ ನಿಯಮಾನುಸಾರ ಪರಿಶೀಲಿಸಲಾಗುವುದು ಎಂದು ತಿಳಿಸಿದ್ದಾರೆ ಎಂದು ಐವನ್ ಡಿಸೋಜ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕೈಗಾರಿಕಾ ಬಡಾವಣೆ ರಚಿಸಲು ಭೂಸ್ವಾಧೀನಕ್ಕೆ ಅಧಿಸೂಚನೆಗೊಂಡ ಭೂಮಿ ಸೂಕ್ತವಲ್ಲ ಎಂಬ ವರದಿಯನ್ನು ಸರ್ವೇ ಸಮಿತಿಯು ನೀಡಿದೆ. ಆದರಲ್ಲಿ ಸರಕಾರಿ ಭೂಮಿ ಅತ್ಯಲ್ಪವಾಗಿದ್ದು, ಭೂಮಾಫಿಯಾದ ಪ್ರಭಾವದಿಂದಾಗಿ ಕೈಗಾರಿಕೆಗೆ ಖಾಸಗಿ ಭೂಮಿ ಖರೀದಿಸಿ ಸರಕಾರದ ಬೊಕ್ಕಸಕ್ಕೆ ಸಾಕಷ್ಟು ಕೋಟಿ ರೂ. ನಷ್ಟವಾಗುವ ಪ್ರಮೇಯ ತಪ್ಪಿದೆ. ಕೆಲವೊಮ್ಮೆ ಸರಕಾರವು ಯಾವ ರೀತಿಯಲ್ಲಿ ತೊಂದರೆಗೆ ಸಿಲುಕಿಕೊಳ್ಳಬಹುದು ಎಂಬುದಕ್ಕೆ ಇದು ಸೂಕ್ತ ನಿದರ್ಶನವಾಗಿದೆ. ಇದೀಗ ಈ ಭೂಮಿ ಡಿನೋಟಿಫೈ ಆಗುವ ಹಂತದಲ್ಲಿದ್ದು, ಇದು ಸ್ಥಳೀಯರು ಹಲವು ವರ್ಷಗಳ ಕಾಲ ನಡೆಸಿದ ಹೋರಾಟಕ್ಕೆ ಸಂದ ಜಯ ಎಂದರು.

ಕಡಬ ಪಟ್ಟಣ ಪಂಚಾಯತ್ ಸಾಮಾನ್ಯಸಭೆ | ಫೆಬ್ರವರಿ ತಿಂಗಳ ಜಮಾ ಖರ್ಚು ಮಂಡನೆ

ವಿವಿಧ ಕ್ರಿಯಾ ಯೋಜನೆಗಳ ತಯಾರಿಯ ಚರ್ಚೆ

ಕಡಬ: ಕಡಬ ಪಟ್ಟಣ ಪಂಚಾಯತ್‌ನ ಸಾಮಾನ್ಯ ಸಭೆ ಅಧ್ಯಕ್ಷೆ ತಮನ್ನಾ ಜಬೀನ್ ಅವರ ಅಧ್ಯಕ್ಷತೆಯಲ್ಲಿ ಪ.ಪಂ. ಸಭಾಂಗಣದಲ್ಲಿ ನೆರವೇರಿತು.



ಸಭೆಯಲ್ಲಿ ಸ್ಥಾಯಿ ಸಮಿತಿ ಸಭೆಯ ನಡವಳಿ ಮತ್ತು ಫೆಬ್ರವರಿ ತಿಂಗಳ ಜಮಾ ಖರ್ಚು ಮಂಡಿಸಲಾಯಿತು. 2026–27ನೇ ಸಾಲಿನ ಪಟ್ಟಣ ಪಂಚಾಯತ್ ವ್ಯಾಪ್ತಿಯ 13 ವಾರ್ಡುಗಳಲ್ಲಿ ವಾರ್ಷಿಕವಾಗಿ ಮಳೆ ನೀರು ಚರಂಡಿ ಹೂಳು ಎತ್ತುವುದು, ಗಿಡಗಂಟಿ, ಪೊದೆಗಳನ್ನು ತೆರವುಗೊಳಿಸುವುದು ಮೊದಲಾದ ಕಾಮಗಾರಿಗಳಿಗೆ ಕ್ರಿಯಾ ಯೋಜನೆ ತಯಾರಿಸುವುದು, 2026–27ನೇ ಸಾಲಿಗೆ ಸರಕಾರದ ಆಯವ್ಯಯದಂತೆ ಬಿಡುಗಡೆಯಾಗುವ ಎಸ್‌ಎಫ್‌ಸಿ (ಮುಕ್ತ ನಿಧಿ) ಮತ್ತು ಎಸ್‌ಎಫ್‌ಸಿ ಪರಿಶಿಷ್ಟ ಜಾತಿ ನಿಧಿಯ ಅನುದಾನಕ್ಕೆ ಸರಕಾರದ ಸುತ್ತೋಲೆಯಂತೆ ಕ್ರಿಯಾ ಯೋಜನ ತಯಾರಿಸುವುದು, 2026–27ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಡುವ (ಶೇ.24.10, 5, 7.25) ಪರಿಶಿಷ್ಟ ಜಾತಿ, ಪಂಗಡ ವಿಕಲ ಚೇತನ ಕಲ್ಯಾಣ ಮತ್ತು ಇತರೆ ಹಿಂದುಳಿದ ವರ್ಗಗಳ ಅಭಿವೃದ್ಧಿಯ ಮೊತ್ತಗಳಿಗೆ ಕ್ರಿಯಾ ಯೋಜನೆ ತಯಾರಿಸುವುದು, ಪಟ್ಟಣ ಪಂಚಾಯತ್‌ಗೆ ಸರಕಾರದ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ 2023–24 ಮತ್ತು 2024–25ನೇ ಸಾಲಿಗೆ ಎನ್‌ಎಂಪಿಸಿ 15ನೇ ಹಣಕಾಸು ಯೋಜನೆಯಡಿ ಬಿಡುಗಡೆಯಾಗುವ ಕ್ರಮವಾಗಿ ರೂ.68 ಲಕ್ಷ ಮತ್ತು 70 ಲಕ್ಷಗಳಿಗೆ ಸರಕಾರದ ಸುತ್ತೋಲೆಯಂತೆ ಕ್ರಿಯಾ ಯೋಜನೆ ತಯಾರಿಸಿ ಸಕ್ಷಮ ಪ್ರಾಧಿಕಾರಕ್ಕೆ ಮಂಜೂರಾತಿಗೆ ಸಲ್ಲಿಸುವ ಕುರಿತು ಚರ್ಚಿಸಿ ನಿರ್ಣಯ ಕೈಗೊಳ್ಳಲಾಯಿತು.

ವಿವಿಧ ವಿಚಾರಗಳ ಕುರಿತು ಚರ್ಚೆ

ಕಳಾರದ ತಿಮರಡ್ಡದಲ್ಲಿ ಮಲ ತ್ಯಾಜ್ಯ ಸಂಸ್ಕರಣ ಘಟಕ ಸ್ಥಾಪಿಸಲು ಸ್ಥಳೀಯರು ವಿರೋಧ ವ್ಯಕ್ತಪಡಿಸುತ್ತಿರುವ ವಿಚಾರ ಚರ್ಚೆಗೆ ಬಂದಾಗ

ಸಿಬ್ಬಂದಿಗೆ ನಿಂದನೆ: ಸದಸ್ಯರ ಅಸಮಾಧಾನ

ಕಡಬದ ಹಸಿ ಮೀನು ಮಾರುಕಟ್ಟೆಯಲ್ಲಿ ಕಳಪೆ ಗುಣಮಟ್ಟದ ಮೀನು ಮಾರಾಟ ಮಾಡಲಾಗುತ್ತಿದೆ. ಜೊತೆಗೆ ಹೆಚ್ಚಿನ ಧಾರಣೆಯನ್ನು ಗ್ರಾಹಕರ ಮೇಲೆ ಹೇರಲಾಗುತ್ತಿದೆ ಎನ್ನುವ ಗ್ರಾಹಕರ ದೂರಿನ ಹಿನ್ನೆಲೆಯಲ್ಲಿ ಅಲ್ಲಿನ ವ್ಯಾಪಾರಸ್ಥರಿಗೆ ನೋಟಿಸ್ ನೀಡಿರುವ ವಿಚಾರದಲ್ಲಿ ಮೀನು ವ್ಯಾಪಾರಿಯೊಬ್ಬರು ಪ.ಪಂ. ಸಿಬ್ಬಂದಿಗೆ ದೂರವಾಣಿ ಕರೆ ಮಾಡಿ ನಿಂದಿಸಿದ್ದಾರೆ ಎನ್ನುವ ಆರೋಪ ಸಭೆಯಲ್ಲಿ ಪ್ರಸ್ತಾಪ ವಾಯಿತು. ಆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಸದಸ್ಯರು ಸಿಬ್ಬಂದಿಯನ್ನು ನಿಂದಿಸಿದ ವ್ಯಕ್ತಿಯ ವಿರುದ್ಧ ಪೊಲೀಸರಿಗೆ ದೂರು ನೀಡುವಂತೆ ಸೂಚಿಸಿದರು.

ಕೆಲವು ಸದಸ್ಯರು ಕಂದಾಯ ಇಲಾಖೆ ಸೂಚಿಸಿದ ಸ್ಥಳದಲ್ಲಿಯೇ ಘಟಕ ಆರಂಭಿಸುವುದು ಒಳಿತು ಎಂದು ಅಭಿಪ್ರಾಯವ್ಯಕ್ತಪಡಿಸಿದರೆ, ಇನ್ನು ಕೆಲವರು ಬೇರೆ ಕಡೆ ಜಾಗ ಗುರುತಿಸುವಂತೆ ಕಂದಾಯ ಇಲಾಖೆಗೆ ಕೇಳಿಕೊಳ್ಳುವಂತೆ ಸಲಹೆ ನೀಡಿದರು. ಬಳಿಕ ಸ್ಥಳೀಯರ ವಿರೋಧದ ಕುರಿತು ಜಿಲ್ಲಾಧಿಕಾರಿಗೆ ಪತ್ರ ಬರೆಯುವಂತೆ ನಿರ್ಣಯಿಸಲಾಯಿತು. ಕಟ್ಟಡ ತೆರಿಗೆಗಳನ್ನು ಆನ್‌ಲೈನ್ ಮೂಲಕವೇ ಸಂಗ್ರಹಿಸುವ ಬಗ್ಗೆ ಚರ್ಚಿಸಲಾಯಿತು.

ಸ್ಥಾಯಿ ಸಮಿತಿ ಅಧ್ಯಕ್ಷ ಕೆ.ಎಂ. ಹನೀಫ್, ಉಪಾಧ್ಯಕ್ಷೆ ನೀಲಾವತಿ ಶಿವರಾಮ್, ಸದಸ್ಯರಾದ ಸೈಮನ್ ಸಿ.ಜೆ., ದಯಾನಂದ ಪಿಜಕ್ಕಳ, ಕೃಷ್ಣಪ್ಪ ಬೈಲಂಗಡಿ, ರೋಹಿತ್ ಪಣೆಮಜಲು, ಫೈಝುಲ್, ಅಕ್ಷತಾ ಮಣಿಮುಂಡ, ಗುಣವತಿ ರಘುರಾಮ, ಮೋಹನ, ಕೃಷ್ಣಪ್ಪ ನಾಯ್ಕ್, ಕುಸುಮ ಅಂಗಡಿಮನೆ ಉಪಸ್ಥಿತರಿದ್ದರು.

ಮುಖ್ಯಾಧಿಕಾರಿ ಲೀಲಾವತಿ ಇ., ಇಂಜಿನಿಯರ್ ಶಿವಕುಮಾರ್ ಎಂ.ಆರ್., ಆರೋಗ್ಯಾಧಿಕಾರಿ ಶ್ವೇತಾ ಕಿರಣ್, ಸಿಬಂದಿಗಳಾದ ಬಾಲಕೃಷ್ಣ ಪಂಬದ, ಹರೀಶ್ ಬೆದ್ರಾಜೆ, ವಾರಿಜಾ, ಕೀರ್ತನ್ ಪೂರಕ ಮಾಹಿತಿ ನೀಡಿದರು.

ಒಂಬತ್ತು ಮಾಗಣೆ ಕೊಲಕಾಡಿ ಶ್ರೀ ಕಾಳಿಕಾಂಬಾ ದೇವಸ್ಥಾನಕ್ಕೆ ಶಿಲಾನ್ಯಾಸ



ಮೂಲ್ಕಿ: ಒಂಬತ್ತು ಮಾಗಣೆ ಕೊಲಕಾಡಿ ಶ್ರೀ ಕಾಳಿಕಾಂಬಾ ದೇವಳವನ್ನು ಸುಮಾರು 6 ಕೋ.ರೂ. ವೆಚ್ಚದಲ್ಲಿ ಪುನರ್ ನಿರ್ಮಿಸಲಿದ್ದು ಶಿಲಾಮಯ ಗರ್ಭಗುಡಿ, ಸುತ್ತುಪೌಳಿಗೆ ಶಿಲಾನ್ಯಾಸ ಶುಕ್ರವಾರ ನಡೆಯಿತು.

ಆನೆಗುಂದಿ ಸರಸ್ವತಿ ಪೀಠದ ಜಗದ್ಗುರು ಅನಂತ ಶ್ರೀ ವಿಭೂಷಿತ ಕಾಳಹಸ್ತೇಂದ್ರ ಸರಸ್ವತಿ ಮಹಾಸ್ವಾಮೀಜಿ ಹಾಗೂ ಅರೆಮಾದನಹಳ್ಳಿ ಮಠದ ಅನಂತಶ್ರೀ ವಿಭೂಷಿತ ಶಿವಸುಜ್ಞಾನ ತೀರ್ಥಮಹಾಸ್ವಾಮೀಜಿ ಶಿಲಾನ್ಯಾಸ ನೆರವೇರಿಸಿದರು. ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು. ಮಧೂರು ಕಾಳಿಕಾಂಬಾ ಮಠದ ಅಧ್ಯಕ್ಷ ಕೆ. ಪ್ರಭಾಕರ ಆಚಾರ್ಯ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಕುಂಜಾರಗಿರಿ ಶ್ರೀ ಮಹಾಲಿಂಗೇಶ್ವರ ಶಾಸ್ತಾವು ದೇವಳ ಆಡಳಿತ ಮೊಕ್ತೇಸರ ಗಂಗಾಧರ ಶೆಟ್ಟಿ , ನಡಿಬೆಟ್ಟು ಧೂಮಾವತಿ ದೈವಸ್ಥಾನದ ಗುತ್ತಿನಾರ್ ಸುಧಾಕರ ಶೆಟ್ಟಿ, ಮನೋಹರ ಕೋಟ್ಯಾನ್, ಗೋಕರ್ಣ ಶ್ರೀ ಕಾಳಿಕಾಂಬಾ ಕಮತೇಶ್ವರ ದೇವಳ ಆಡಳಿತ ಮೊಕ್ತೇಸರ ಮಧುಕರ ಸಿ. ಆಚಾರ್ಯ, ಕುಂಬಳೆ ಕಾರ್ಲೆ ಶ್ರೀ ಕಾಳಿಕಾಂಬಾ ದೇವಳ ಆಡಳಿತ ಮೊಕ್ತೇಸರ ಜನಾರ್ದನ ಆಚಾರ್ಯ, ಕಾಪು ಶ್ರೀ ಕಾಳಿಕಾಂಬಾ ದೇವಳ ಆಡಳಿತ ಮೊಕ್ತೇಸರ ಗಣೇಶ ಆಚಾರ್ಯ, ಗುರುಸೇವಾ ಪರಿಷತ್ ಕೇಂದ್ರ ಸಮಿತಿ ಅಧ್ಯಕ್ಷ ಗಣೇಶ ಆಚಾರ್ಯ ಭಾಗವಹಿಸಿದ್ದರು.

ಕ್ಷೇತ್ರದ ತಂತ್ರಿ ಕೇಶವ ಆಚಾರ್ಯ, ವಾಸ್ತುಶಿಲ್ಪಿ ಉಮೇಶ್ ಆಚಾರ್ಯ ಮುಂಚೂರು, ದಾರುಶಿಲ್ಪಿ ವಾಸುದೇವ ಆಚಾರ್ಯ ಕಲ್ಲಮುಂಡ್ಕೂರು, ಶಿಲಾಶಿಲ್ಪಿ ಸುಧೀರ್ ಆಚಾರ್ಯ ಪೆರ್ಡೂರು, ಇಂಜಿನಿಯರ್ ಸುಂದರ್ರಾಮ್ ಚಿಲಿಂಬಿ ಅವರನ್ನು ಗೌರವಿಸಲಾಯಿತು.

ದೇವಳ ಆಡಳಿತ ಮೊಕ್ತೇಸರ ಸುಧಾಕರ ಆಚಾರ್ಯ, ಸುಬ್ರಾಯ ಆಚಾರ್ಯ, ಮುಂಬೈ ಉದ್ಯಮಿ ಕೃಷ್ಣ ವಿ. ಆಚಾರ್ಯ, ಧನಂಜಯ ಪಾಲ್ಕೆ ಮಂಗಳೂರು, ಬಿ. ಸೀತಾರಾಮ ಆಚಾರ್ಯ ಬೆಳುವಾಯಿ, ಕೈಂತಿಲ ಸದಾಶಿವ ಆಚಾರ್ಯ ವಿಟ್ಲ, ದಿನೇಶ ಆಚಾರ್ಯ ಕಿನ್ನಿಗೋಳಿ ವೇದಿಕೆಯಲ್ಲಿದ್ದರು.

ಮಕ್ಕಳ ಪ್ರತಿಭೆ ಅನಾವರಣಕ್ಕೆ ಬೇಸಿಗೆ ಶಿಬಿರಗಳು ಸಹಕಾರಿ: ಭಾಸ್ಕರ ನೆಲ್ಯಾಡಿ



ಪುತ್ತೂರು: ಬೇಸಿಗೆ ಶಿಬಿರಗಳು ಮಕ್ಕಳ ಎಳೆ ಮನಸ್ಸಿನಲ್ಲಿ ಇರುವ ಅನೇಕ ಕುತೂಹಲಗಳಿಗೆ ನೀರೆರೆದು ಪೋಷಿಸಲು ಸಹಕಾರಿ. ಪ್ರತಿಯೊಂದು ಮಗುವಿನಲ್ಲಿಯೂ ತನ್ನದೇ ಆದ ಕೌಶಲ್ಯ ಯೋಚನೆಗಳು ಇರುತ್ತವೆ. ಅದಕ್ಕೆ ಸೂಕ್ತ ಅವಕಾಶ ಮತ್ತು ಮಾರ್ಗದರ್ಶನ ದೊರೆತಾಗ ಬೆಳೆದು ಹೆಮ್ಮರವಾಗಲು ಸಾಧ್ಯ ಎಂದು ಮೂಡಬಿದಿರೆಯ ಚಿತ್ರಕಲಾ ಶಿಕ್ಷಕ, ಸಾಹಿತಿ, ಕವಿ ಭಾಸ್ಕರ ನೆಲ್ಯಾಡಿ ಹೇಳಿದರು.

ನಗರದ ಬನ್ನೂರು ಎವಿಜಿ ಇಂಗ್ಲಿಷ್ ಮೀಡಿಯಂ ಸ್ಕೂಲ್‌ನಲ್ಲಿ ಏರ್ಪಡಿಸಲಾಗಿರುವ ಬೇಸಿಗೆ ಶಿಬಿರವನ್ನು ಅವರು ದೀಪ ಪ್ರಜ್ವಲಿಸಿ ಭಾರತ ಮಾತೆಗೆ ಪುಷ್ಪಾರ್ಚನೆ ಗೈದು ಉದ್ಘಾಟಿಸಿ ಶುಭ ಕೋರಿದರು.

ವಿದ್ಯಾರತ್ನ ಪ್ರಶಸ್ತಿ ಪುರಸ್ಕೃತ ಸುಳ್ಯದ ಶಾರದ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ದಯಾಮಣಿ , ಶಾಲೆಯ ಆಡಳಿತ ಮಂಡಳಿ ಅಧ್ಯಕ್ಷ ಕಳವಾಸಿ ವೆಂಕಟರಮಣ ಗೌಡ ಪ್ರಸ್ತಾವನೆಗೈದರು. ನಿರ್ದೇಶಕ ಎ.ವಿ. ಗಂಗಾಧರ ಗೌಡ, ಆಡಳಿತ ಅಕಾರಿ ಗುಡ್ಡಪ್ಪ ಗೌಡ ಬಲ್ಯ, ಉಪಾಧ್ಯಕ್ಷ ಉಮೇಶ್ ಮಳುವೇಲು, ಶಿಕ್ಷಕರ ರಕ್ಷಕ ಸಂಘದ ಅಧ್ಯಕ್ಷೆ ಸೌಮ್ಯಶ್ರೀ ಹೆಗಡೆ, ಮುಖ್ಯೋಪಾಧ್ಯಾಯ ಅಮರನಾಥ್ ಪಟ್ಟೆ ಹಾಗೂ ಶಿಬಿರದ ನಿರ್ದೇಶಕಿ ರಾಧಾ ಉಪಸ್ಥಿತರಿದ್ದರು. ಈ ಸಂದರ್ಭ ದಯಾಮಣಿ ಅವರನ್ನು ಶಾಲಾ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ನಿರ್ದೇಶಕರಾದ ಪುಷ್ಪಾವತಿ ಕಳುವಾಜೆ, ಪ್ರತಿಭಾದೇವಿ, ಸೀತಾರಾಮ ಕೇವಳ, ಶಾಲಾ ಸಂಚಾಲಕ ಎ.ವಿ. ನಾರಾಯಣ , ಶಿಕ್ಷಕಿಯರಾದ ಶ್ವೇತ , ಹರ್ಷಿತ , ರಾಧಾ , ರೀಮಾ ಲೋಬೋ , ಸುಚಿತ ಉಪಸ್ಥಿತರಿದ್ದರು.

> **ವ್ಯಕ್ತಿತ್ವದ ಬೆಳವಣಿಗೆ**
> **ಮಕ್ಕಳ ಬದುಕಿನಲ್ಲಿ ನಾನಾ ಅವಕಾಶಗಳಿದ್ದು ಅವರನ್ನು ಇಂತಹ ಶಿಬಿರಗಳಲ್ಲಿ ತೊಡಗಿಸಿಕೊಂಡಾಗ ವ್ಯಕ್ತಿತ್ವದ ಬೆಳವಣಿಗೆ ಸಾಧ್ಯ.**
> ● ದಯಾಮಣಿ

ಕರಿಯ ದೇಸಿಂಗರಾಯ ಬೊಳಿಯ ದೇಸಿಂಗರಾಯ ಕಂಬಳ ಉದ್ಘಾಟನೆ



ಕಿನ್ನಿಗೋಳಿ: ಬಳ್ಕುಂಜೆ ಕಂಬಳ, ಬಳ್ಕುಂಜೆಗ್ರಾಮಕ್ಕೆ ಹಬ್ಬದ ವಾತಾವರಣ ಸೃಷ್ಟಿಸಿದೆ, ಕಂಬಳ ಎಂಬುದು ಆರಾಧನೆಯ ರೂಪ ಪಡೆದಿರುವುದು ಮಾತ್ರವಲ್ಲದೆ ನಮ್ಮ ಸಂಸ್ಕೃತಿಯ ಪ್ರತೀಕ ಎಂದು ಉಳೆಪಾಡಿ ಶ್ರೀ ಉಮಾಮಹೇಶ್ವರ ಮಹಾಗಣಪತಿ ದೇವಸ್ಥಾನದ ಪ್ರಧಾನ ಅರ್ಚಕ ಮದ್ವಪತಿ ಆಚಾರ್ಯ ಹೇಳಿದ್ದಾರೆ.

ಅವರು ಬಳ್ಕುಂಜೆ ಕಂಬಳ ಸಮಿತಿ ವತಿಯಿಂದ ಕರಿಯದೇಸಿಂಗರಾಯ ಬೊಳಿಯ ದೇಸಿಂಗರಾಯ ಕಂಬಳ ಉದ್ಘಾಟಿಸಿ ಮಾತನಾಡಿದರು.

ಕಂಬಳದ ಕರೆಯನ್ನು ಶಿಬರೂರು ವೇದವ್ಯಾಸ ತಂತ್ರಿ , ಬಳಕುಂಜ ಸಂತ ಪೌಲರ ದೇವಾಲಯದ ಧರ್ಮಗುರು ಪೌಲ್ ಸಿಕ್ವೇರ ಉದ್ಘಾಟಿಸಿ ದರು. ಕಂಬಳ ಸಮಿತಿ ಗೌರವಾಧ್ಯಕ್ಷ ಬಾಲಕೃಷ್ಣ ಹೆಗ್ಡೆ ಕೊಟ್ನಾಯ ಗುತ್ತು ವಹಿಸಿದ್ದರು.

ಈ ಸಂದರ್ಭ ಧಾರ್ಮಿಕ ಪರಿಷ್ಯತ್ ಸದಸ್ಯ ಮಲ್ಲಿಕಾ ಪಕ್ಕಳ, ಬಳಕುಂಜ ಹಯಾತುಲ್ ಇಸ್ಲಾಂ ಮದ್ರಸದ ಧರ್ಮಗುರು ಮೊಹಮ್ಮದ್ ಮುಸ್ತಾಪ, ಹಿರಿಯರಾದ ಬಿ.ಎಚ್ ಖಾಸಿಂ, ಉದ್ಯಮಿ ಡಾ.ವಿರಾರ್ ಶಂಕರ ಶೆಟ್ಟಿ ಕರ್ನಿರೆ ವಿಶ್ವನಾಥ ಶೆಟ್ಟಿ ಗುಣಪಾಲ ಪೂಂಜ, ಪ್ರಭಾಕರ ಪೂಂಜ, ಮಂಗಳೂರು ಎಸಿಪಿ ಶ್ರೀಕಾಂತ್, ಮುಲ್ಕಿ ಪೊಲೀಸ್ ಇನ್‌ಸ್ಪೆಕ್ಟರ್ ಮಂಜುನಾಥ್ ಬಿ.ಎಸ್., ರವಿಪೂಂಜ, ಪದ್ಮಾವತಿ, ಭಗವಾನ್ ಆಳ್ವ ಶೇಖರ ಶೆಟ್ಟಿ ಪಡುಮನೆ, ಸತೀಶ್ ಶೆಟ್ಟಿ ಬೋಳದಗುತ್ತು, ಮೂಲ್ಕಿ ಬಂಟರ ಸಂಘದ ಅಧ್ಯಕ್ಷ ಅಶೋಕ್ ಕುಮಾರ್ ಶೆಟ್ಟಿ, ಕಿಲ್ಪಾಡಿ ಭಂಡಸಾಲೆ ರಂಜನ್ ಬಿ.ಶೆಟ್ಟಿ, ಮೂಲ್ಕಿ ಬಿರುವೆರ್ ಕುಡ್ಲದ ಗೌರವಾಧ್ಯಕ್ಷ ಕಿಶೋರ್ ಸಾಲ್ಯಾನ್, ಭಾನುಮತಿ ಶೆಟ್ಟಿ ಕಕ್ವಗುತ್ತು, ರೋಷನ್ ಡಿಸೋಜ, ಡಾ ಫ್ರೀಡಾ ರಾಡ್ರಿಗಸ್, ಕೇಸರಿ ಪಿ.ರೈ, ರಾಜೇಶ್ ಶೆಟ್ಟಿ ಪುಲೋಡಿ ಬೀಡು, ಕರುಣಾಕರ ಶೆಟ್ಟಿ ಉಳೆಪಾಡಿ, ಕಂಬಳ ಸಮಿತಿಯ ಅಧ್ಯಕ್ಷತೆ ಮಲ್ಲಿಕಾ ಶೆಟ್ಟಿ ಬಳ್ಕುಂಜೆಗುತ್ತು ಮತ್ತಿತರರಿದ್ದರು.

ದಿನಕರ ಶೆಟ್ಟಿ ಬಳ್ಕುಂಜೆ ಸ್ವಾಗತಿಸಿ, ಬಾಬಾ ಪ್ರಸಾದ್ ಅರಸ್, ಶರತ್ ಶೆಟ್ಟಿ ಕಿನ್ನಿಗೋಳಿ ನಿರೂಪಿಸಿದರು.ಬಳಿಕ ಕರಿಯ ದೇಸಿಂಗರಾಯ ಬೊಳಿಯ ದೇಸಿಂಗರಾಯ ಕಂಬಳ ಕೂಟ ನಡೆಯಿತು.

ವಿವೇಕಾನಂದ ಕಾಲೇಜಿನಲ್ಲಿ 'ಯುರೇಕಾ 2026' ನಾಲ್ಕನೇ ದಿನದ ಕಾರ್ಯಾಗಾರ



ಪುತ್ತೂರು: ನಗರದ ವಿವೇಕಾನಂದ ಪದವಿ ಪೂರ್ವ ಕಾಲೇಜಿನಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗಾಗಿ ನಡೆಯುತ್ತಿರುವ 'ಯುರೇಕಾ–2026' ನಾಲ್ಕನೇ ದಿನದ ಶಿಬಿರದಲ್ಲಿ ಮಂಗಳೂರಿನ ಖ್ಯಾತ ಕಲಾವಿದ ಹಾಗೂ ಪರಿಸರ ಶಾಸ್ತ್ರಜ್ಞ ದಿನೇಶ್ ಹೊಳ್ಳ ಅವರು ಪರಿಸರ ಸಂರಕ್ಷಣೆ ಹಾಗೂ ಪರಿಸರ ಪ್ರೇಮದ ಬಗ್ಗೆ ಜಾಗೃತಿ ಮೂಡಿಸುವ ಕುರಿತು ಅವಧಿಯನ್ನು ನಡೆಸಿಕೊಟ್ಟರು.

ಪರಿಸರ ಜಾಗೃತಿ

ಪೂರ್ವಾಹ್ನದ ಅವಧಿಯಲ್ಲಿ ಪಶ್ಚಿಮ ಘಟ್ಟವನ್ನು ಹೇಗೆ ಸಂರಕ್ಷಿಸಬಹುದು? ಇಂದಿನ ಯುವಜನತೆಯಲ್ಲಿ ಪರಿಸರ ಪ್ರೇಮ ಹಾಗೂ ಕಲೆಯ ಕುರಿತು ಜಾಗೃತಿ ಹೇಗೆ ಮೂಡಿಸಬಹುದು? ನಮ್ಮ ಮೂಲ ಪ್ರಕೃತಿ ಮತ್ತು ಸಂಸ್ಕೃತಿಯನ್ನು ಉಳಿಸಿಕೊಳ್ಳದೆ ಹೋದರೆ ನಾವು ಎದುರಿಸಬೇಕಾಗಬಲ್ಲ ಅನಾಹುತಗಳ ಕುರಿತು ವಿದ್ಯಾರ್ಥಿಗಳನ್ನು ಎಚ್ಚರಿಸಿದರು.

ರೇಖಾ ಚಿತ್ರ ಬಿಡಿಸುವ ಮಾಹಿತಿ

ನಂತರದ ಅವಧಿಯಲ್ಲಿ ಬರವಣಿಗೆಯನ್ನು ಸುಧಾರಿಸುವ ವಿನೂತನ ವಿಧಾನ, ರೇಖಾ ಚಿತ್ರಗಳನ್ನು ಬಿಡಿಸುವ ಹಾಗೂ ಅವುಗಳನ್ನು ಮುಖಪುಟ, ಗ್ರಾಫಿಕ್ಸ್ ಮುಂತಾದ ಕಡೆಗಳಲ್ಲಿ ಉಪಯೋಗಿಸುವುದರ ಕುರಿತಾದ ಮಾಹಿತಿಯನ್ನು ಶಿಬಿರಾರ್ಥಿಗಳಿಗೆ ನೀಡಿದರು.

ಕರಕುಶಲ ತಯಾರಿ ಪ್ರಾತ್ಯಕ್ಷಿಕೆ

ಅಪರಾಹ್ನದ ಬಳಿಕ ವಿದ್ಯಾರ್ಥಿಗಳಿಗೆ ಬಣ್ಣದ ಕಾಗದಗಳನ್ನು ಬಳಸಿಕೊಂಡು ವಿವಿಧ ಕರಕುಶಲ ವಸ್ತು ಹಾಗೂ ವಿನ್ಯಾಸಗಳನ್ನು ತಯಾರಿಸುವ ಬಗ್ಗೆ ಪ್ರಾತ್ಯಕ್ಷಿಕೆ ನೀಡಲಾಯಿತು.

ಶಿಬಿರಾರ್ಥಿಗಳು ಚಟುವಟಿಕೆಗಳಲ್ಲಿ ಅತ್ಯಂತ ಆಸಕ್ತಿಯಿಂದ ಪಾಲ್ಗೊಂಡರು.

ಶಿರ್ವ ಸಂತ ಮೇರಿ ಕಾಲೇಜಿನಲ್ಲಿ ಜಾಗತಿಕ ಆರೋಗ್ಯ ದಿನ ಆಚರಣೆ



ಶಿರ್ವ: ಸಂತ ಮೇರಿ ಕಾಲೇಜು, ಇಲ್ಲಿನ ಯುವ ರೆಡ್‌ಕ್ರಾಸ್ ಘಟಕ ಮತ್ತು ರೋವರ್ಸ್ – ರೇಂಜರ್ಸ್ ಘಟಕ ಹಾಗೂ ಐ.ಕ್ಯೂ.ಎ.ಸಿ ಇವರ ಸಹಯೋಗದೊಂದಿಗೆ 'ಜಾಗತಿಕ ಆರೋಗ್ಯ ದಿನಾಚರಣೆ'ಯನ್ನು ಕಾಲೇಜಿನಲ್ಲಿ ಆಚರಿಸಲಾಯಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಶಿರ್ವ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ರವೀಂದ್ರ ಮಾತನಾಡಿ, ಆರೋಗ್ಯದ ಮಹತ್ವ ಆರೋಗ್ಯಯುತ ಶರೀರಕ್ಕೆ ಸಮತೋಲನದ ಆಹಾರ ಪದ್ಧತಿ, ಯೋಗ, ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವ ಬಗ್ಗೆ ಮಾಹಿತಿ ನೀಡಿದರು.

ಅಧ್ಯಕ್ಷತೆ ವಹಿಸಿದ ಕಾಲೇಜಿನ ಪ್ರಾಂಶುಪಾಲ ಡಾ. ಹೆರಾಲ್ಡ್ ಐವನ್ ಮೊನಿಸ್ ಮಾತನಾಡಿ, ಇಂದು ನಾವು ಆಹಾರದಲ್ಲಿ ಶುಚಿತ್ವ, ಶಿಸ್ತನ್ನು ಕಾಪಾಡಿಕೊಳ್ಳಲೇಬೇಕು. ಪೌಷ್ಟಿಕ ಆಹಾರ ಸೇವಿಸಬೇಕು, ದುಶ್ಚಟಗಳಿಂದ ದೂರವಿದ್ದು ಆರೋಗ್ಯ ಕಾಪಾಡಿಕೊಳ್ಳೋಣ ಎಂದರು.

ಜಸ್ಟಿಟಾ ಸ್ವಾಗತಿಸಿ, ಯೂತ್ ರೆಡ್‌ಕ್ರಾಸ್ ಘಟಕದ ನಾಯಕಿ ಸೋನಲ್ ಶೆಟ್ಟಿ ವಂದಿಸಿ, ರಿಯಾನ ನಿರೂಪಿಸಿ ದರು. ಯೂತ್ ರೆಡ್ ಕ್ರಾಸ್ ಘಟಕ ಸಂಯೋಜಕಿ ಸಂಗೀತಾ ಎಚ್.ಪೂಜಾರಿ, ಐಕ್ಯೂಎಸಿ ಸಂಯೋಜಕ ಜಗದೀಶ್ ಆಚಾರ್ಯ ಉಪಸ್ಥಿತರಿದ್ದರು.

> **ಆರೋಗ್ಯ ಕಾಪಾಡಿಕೊಳ್ಳಿ**
> **ಅನಾರೋಗ್ಯಕರ ಚಟಗಳು, ಜಂಕ್ ಫುಡ್‌ಗಳು, ಕಲಬೆರಕೆ ಎಣ್ಣೆಯಿಂದ ಕರಿದ ಪದಾರ್ಥಗಳು,ಇಂತಹ ಅನಾರೋಗ್ಯಕರ ಆಹಾರಗಳಿಂದ ದೂರವಿದ್ದು ತಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕು.**
> ● ಡಾ. ರವೀಂದ್ರ

ಆಮೆ ಗತಿಯಲ್ಲಿ ಸಾಗುತ್ತಿರುವ ರೂ.30 ಕೋಟಿ ವೆಚ್ಚದ ಅಮೃತ್ -2 ಯೋಜನೆ



ಕುಶಾಲನಗರ: ಕುಶಾಲನಗರ ಪುರಸಭೆ ಎಲ್ಲಾ ವಾರ್ಡ್‌ಗಳಿಗೆ ಶಾಶ್ವತ ಕುಡಿಯುವ ನೀರನ್ನು ಒದಗಿಸುವ ರೂ. 30 ಕೋಟಿ ವೆಚ್ಚದ ಅಮೃತ್ 2 ಯೋಜನೆ ಆಮೆ ಗತಿಯಲ್ಲಿ ಸಾಗುತ್ತಿದೆ. ಕಾಮಗಾರಿ ಆರಂಭಗೊಂಡು 1 ವರ್ಷ ಕಳೆದರೂ, ಪೈಪ್‌ಲೈನ್ ಅಳವಡಿಕೆ, ಬೃಹತ್ ಟ್ಯಾಂಕ್‌ಗಳ ನಿರ್ಮಾಣ ಮಾಡುವ ಕಾಮಗಾರಿ ಕುಂಟುತ್ತಾ ಸಾಗಿದೆ. ಕುಶಾಲನಗರ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವ ಹಿನ್ನೆಲೆ ಮಡಿಕೇರಿ ಕ್ಷೇತ್ರದ ಶಾಸಕ ಡಾ. ಮಂಥರ್ ಗೌಡ ಪ್ರಯತ್ನದಿಂದ ಈ ಯೋಜನೆಗೆ ಚಾಲನೆ ನೀಡಲಾಗಿದೆ.

ಕೂಡಿಗೆಯಲ್ಲಿರುವ ಕಾವೇರಿ–ಹಾರಂಗಿ ನದಿ ಸಂಗಮ ಸ್ಥಳದಲ್ಲಿ ಅತ್ಯಾಧುನಿಕ ಯಂತ್ರಗಳ ಮೂಲಕ ನೀರನ್ನು ತೆಗೆದು ಕುಶಾಲನಗರ ಜಲಗಾರದಲ್ಲಿನ ಶುದ್ಧೀಕರಣ ಘಟಕಕ್ಕೆ ನೀರನ್ನು ಸರಬರಾಜು ಮಾಡುವ ಯೋಜನೆ ಇದಾಗಿದೆ. ಈ ಸಂಬಂಧ ಸಂಗಮ ವ್ಯಾಪ್ತಿಯಲ್ಲಿ ಮೋಟಾರು ಯಂತ್ರ, ಬೃಹತ್ ಪೈಪ್'ಗಳ ಅಳವಡಿಕೆ ಹಾಗೂ ಜಾಕ್ ವೆಲ್ ಅಳವಡಿಕೆ ಸಂಬಂಧಿಸಿದ ಕಾರ್ಯವೂ ನಿಧಾನಗತಿಯಲ್ಲಿ ನಡೆಯುತ್ತಿದೆ.

ಕುಶಾಲನಗರದ ಹೃದಯ ಭಾಗದಲ್ಲಿರುವ ಕರ್ನಾಟಕ ನೀರು ಸರಬರಾಜು, ಒಳಚರಂಡಿ ಮಂಡಳಿ ಆವರಣದಲ್ಲಿ ನೂತನವಾಗಿ ನಿರ್ಮಿಸಲಾಗುತ್ತಿರುವ ಬೃಹತ್ ಟ್ಯಾಂಕ್ ಕೆಲಸ ನಿಧಾನವಾಗಿದೆ. ಕೂಡಿಗೆ– ಕುಶಾಲನಗರದವರೆಗಿನ ಪೈಪ್‌ಲೈನ್ ಅಳವಡಿಕೆಗೆ ತೆಗೆದ ಕಾಲುವೆಗಳನ್ನು ಸಮರ್ಪಕವಾಗಿ ಮುಚ್ಚುವಂತೆ ಸ್ಥಳೀಯ ಗ್ರಾಮಸ್ಥರು ಆಗ್ರಹಿಸಿ ದ್ದರೆ, ಅಂದಾಜು 30.86 ಕೋಟಿ ವೆಚ್ಚದ ಈ ಕಾಮಗಾರಿ ಅತಿ ಶೀಘ್ರ ಪೂರ್ಣ ಗೊಳಿಸಲು ಸಂಬಂಸಿದ ಗುತ್ತಿಗೆದಾರರಿಗೆ ಕ್ಷೇತ್ರದ ಶಾಸಕರು ಸೂಚನೆ ನೀಡಬೇ ಕೆಂಬುದು ಕುಶಾಲನಗರ ಪಟ್ಟಣದ ನಾಗರಿಕರ ಒತ್ತಾಯ.

ಬಿ.ಸಿ.ರೋಡು ರಾಣಿ ಅಬ್ಬಕ್ಕ ಅಧ್ಯಯನ ಕೇಂದ್ರದಲ್ಲಿ 1 ತಿಂಗಳ ಕಾಲ ನಡೆಯಲಿದೆ ಕಾರ್ಯಕ್ರಮ

'ಹಸಿರು ಹೊದಿಕೆಯಡಿ ತುಳು ಜೀವನದ ಸಾಂಸ್ಕೃತಿಕ ಪರಂಪರೆ' ವಸ್ತು ಪ್ರದರ್ಶನ

ಬಂಟ್ವಾಳ: 'ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಐಎಫ್ ಎ) ಸಂಸ್ಥೆಯ ಆರ್ಕೈವ್ ಮತ್ತು ಮ್ಯೂಸಿಯಂಸ್ ಕಾರ್ಯಕ್ರಮದ ಅಡಿಯಲ್ಲಿ, ರಾಣಿ ಅಬ್ಬಕ್ಕ ತುಳು ಸಂಗ್ರಹಾಲಯ ಮತ್ತು ಅಧ್ಯಯನ ಕೇಂದ್ರದ ಹಾಗೂ ಟಾಟಾ ಟ್ರಸ್ಟ್ ಸಹಯೋಗದಲ್ಲಿ ತುಳುನಾಡಿನ ಸಂಸ್ಕೃತಿ, ಜೀವನಶೈಲಿ ಮತ್ತು ಪರಂಪರೆಯನ್ನು ಮುಂದಿನ ಪೀಳಿಗೆಗೆ ತಲುಪಿಸುವ ಉದ್ದೇಶದಿಂದ 'ಹಸಿರು ಹೊದಿಕೆಯಡಿ ತುಳು ಜೀವನದ ಸಾಂಸ್ಕೃತಿಕ ಪರಂಪರೆ' ಎಂಬ ವಿಶೇಷ ವಸ್ತುಪ್ರದರ್ಶನ ಒಂದು ತಿಂಗಳ ಕಾಲ ಆಯೋಜಿಸಲಾಗಿದೆ ಎಂದು ರಾಣಿ ಅಬ್ಬಕ್ಕ ಅಧ್ಯಯನ ಕೇಂದ್ರದ ಸ್ಥಾಪಕ ಪ್ರೊ. ತುಕಾರಾಂ ಪೂಜಾರಿ ಹೇಳಿದರು.

ಬಿ.ಸಿ.ರೋಡ್‌ನ ಸಂಚಯಗಿರಿಯಲ್ಲಿರುವ ಕೇಂದ್ರದ ಆವರಣದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸಂಗ್ರಹಾಲಯವು ದ.ಕ. ಜಿಲ್ಲೆಯ ಪ್ರಮುಖ ಸಾಂಸ್ಕೃತಿಕ ಆಕರ್ಷಣೆಯಾಗಿದ್ದು ತುಳುನಾಡಿನ ಸಾಂಪ್ರದಾಯಿಕ ಜೀವನಶೈಲಿಯನ್ನು ಜೀವಂತವಾಗಿ ಪರಿಚಯಿಸುವ ಸಮಗ್ರ ಅನುಭವ ನೀಡುತ್ತಿದೆ. ಇಲ್ಲಿ ಪುರಾತನ ಕೃಷಿ ಉಪಕರಣಗಳು, ಮನೆಬಳಕೆಯ ವಸ್ತುಗಳು, ಜನಪದ ಕಲಾಕೃತಿಗಳು ಹಾಗೂ ಆಚರಣೆಗಳಿಗೆ ಸಂಬಂಧಿಸಿದ ಅಪರೂಪದ ಸಂಗ್ರಹಗಳು ಸಂರಕ್ಷಿಸಲ್ಪಟ್ಟಿವೆ. ರಾಣಿ ಅಬ್ಬಕ್ಕನ ಹೆಸರಿನಲ್ಲಿ ಅಂಚೆ ಚೀಟಿ ಬಿಡುಗಡೆಯಾದ ಬಳಿಕ ಈ ಸಂಗ್ರಹಾಲಯವು ಜಾಗತಿಕ ಮಟ್ಟದಲ್ಲಿ ಗುರುತಿಸುವಂತಾಗಿದೆ. ಭಾರತ ಮಾತ್ರವಲ್ಲ ವಿದೇಶದಿಂದಲು ಸಂಶೋಧಕರು, ಪ್ರವಾಸಿಗರು ಹಾಗೂ ಸಂಸ್ಕೃತಿಯ ಆಸಕ್ತರು ಕೇಂದ್ರಕ್ಕೆ ಭೇಟಿ ನೀಡುತ್ತಿದ್ದಾರೆ ಎಂದರು.





ಈ ಬಾರಿ, ಮ್ಯೂಸಿಯಂ ವಿನ್ಯಾಸಕಾರರಾದ ಮಧುಶ್ರೀ ಕಾಮತ್, ಬ್ರಿಯಾನ್ ನೆಜಿಲ್ ಡಿ'ಸೋಜಾ ಅವರು ಐಎಫ್ ಎ , ಟಾಟಾ ಟ್ರಸ್ಟ್ ನೆರವಿನಲ್ಲಿ ಈ ವಿಶೇಷ ವಸ್ತುಪ್ರದರ್ಶನ ಆಯೋಜಿಸಲಾಗಿದ್ದು ಎಂದರು.

ಐಎಫ್ ಎ ಕಾರ್ಯಕ್ರಮ ಸಂಯೋಜಕಿ ರುತ್ವಿಕಾ ಮಿಶ್ರಾ ಮಾತನಾಡಿ, ಇಂದಿನ ಮಕ್ಕಳು ಈ ಪ್ರದರ್ಶನದ ಜೊತೆ ಜೋಡಿಸಿಕೊಂಡು ಇದರ ಸದುಪಯೋಗ ಪಡಿಸಿಕೊಂಡಾಗ ಕಾರ್ಯಕ್ರಮ ಯಶಸ್ವಿಯಾಗಲು ಸಾಧ್ಯವಿದೆ ಎಂದರು.

ಐಎಫ್ ಎ ಗ್ರ್ಯಾಂಟಿಗಳಾದ ಮಧುಶ್ರೀ ಕಾಮತ್ ಹಾಗೂ ಬ್ರಿಯಾನ್ ನೆಜಿಲ್ ಡಿಸೋಜಾ ಮಾತನಾಡಿ, ಮರದ ತೊಟ್ಟಿಲು, ತೆಂಗಿನಕಾಯಿ ಗೆರಟೆಯಿಂದ ತಯಾರಿಸಿದ ಉಪಕರಣಗಳು ಹಾಗೂ ವಿವಿಧ ಆಚರಣಾತ್ಮಕ ವಸ್ತುಗಳು ಪ್ರದರ್ಶನದ ಪ್ರಮುಖ ಆಕರ್ಷಣೆಗಳಾಗಿವೆ ಎಂದರು.

ಇಂದು ಕಾರ್ಯಾಗಾರ

ಇಂದು ಬೆಳಿಗ್ಗೆ ಮಕ್ಕಳಿಗೆ ಚಿತ್ರಬಿಡಿಸುವ ಕಾರ್ಯಾಗಾರ ನಡೆಯಲಿದೆ ಎಂದು ಅವರು ತಿಳಿಸಿದರು.

ರಾಣಿ ಅಬ್ಬಕ್ಕ ತುಳು ಬದುಕು ವಸ್ತು ಸಂಗ್ರಹಾಲಯದ ಕಾರ್ಯದರ್ಶಿ ಡಾ.ಆಶಾಲತಾ ಸುವರ್ಣ, ಕು. ಸಿಂಧೂರ, ಪಲ್ಲವಿ, ದಾಮೋದರ ಸಂಚಯಗಿರಿ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

> **ಪ್ರಮುಖ ವಸ್ತುಗಳ ಆಯ್ಕೆ**
> **ಈ ಪ್ರದರ್ಶನದಲ್ಲಿ ತುಳು ಜನರ ಜೀವನಚಕ್ರ ಪ್ರತಿಬಿಂಬಿಸುವ ಹತ್ತು ಪ್ರಮುಖ ವಸ್ತುಗಳ ಆಯ್ಕೆ ಮಾಡಲಾಗಿದೆ. ಹುಟ್ಟಿನಿಂದ ಅಂತ್ಯಕ್ರಿಯೆ ಗಳವರೆಗೆ ನಡೆ ಯುವ ಆಚರಣೆಗಳು, ದೈನಂದಿನ ಬದುಕಿನ ಅಂಶಗಳ ನೋಡುಗರಿಗೆ ಪರಿಚಯಿಸಲಾಗುತ್ತದೆ.**
> ● ಪ್ರೊ. ತುಕಾರಾಂ ಪೂಜಾರಿ

ಸುತ್ತಮುತ್ತ

ಏ.16, 17: ವಾರ್ಷಿಕೋತ್ಸವ

ಮಡಿಕೇರಿ: ಕಾಂತೂರು-ಮೂರ್ನಾಡು ಶ್ರೀ ಪನ್ನಂಗಾಲ ತಾಯಿಯ ವಾರ್ಷಿಕೋತ್ಸವವು ಏ.16, 17ರಂದು ನಡೆಯಲಿದೆ. ಏ.16ರಂದು ಬೆಳಿಗ್ಗೆ ದೇವರ ಶುದ್ಧ ಕಳಸ ಪೂಜೆ, ಕೆರೆಮನೆಯಿಂದ ಭಂಡಾರ ತರುವುದು, ಎತ್ತೇರಾಟ, ದೇವರ ದರ್ಶನ ಹಾಗೂ ಸಂಜೆ 7 ಗಂಟೆಗೆ ಕುರುಂದ ಭಾರಣಿ ಜರುಗಲಿದೆ. ಏ.17ರಂದು ಬೆಳಿಗ್ಗೆ ದೇವರ ದರ್ಶನ, ಚಾಮುಂಡಿ ಉತ್ಸವ, ದೇವರಿಗೆ ಹರಕೆ ಒಪ್ಪಿಸುವುದು ಹಾಗೂ ಕುರುಂದಾಟ ದೇವರ ಜಳಕ ನಡೆಯಲಿದೆ.

ಮೊದಲನೇ ಪುಟದಿಂದ

ಬೆಂಕಿಯ ಮಳೆ

ಸಾಧ್ಯವಾದಷ್ಟು ಶುದ್ಧ ನೀರನ್ನೇ ಕುಡಿಯಬೇಕು. ಇಲ್ಲವಾದಲ್ಲಿ ಇತರ ಪಾನೀಯಗಳನ್ನೂ ಕುಡಿಯಬಹುದಾಗಿದೆ. ವಿದ್ಯಾರ್ಥಿಗಳು ಶುದ್ಧ ಕುಡಿಯುವ ನೀರು ಕೊಂಡೊಯ್ಯಬೇಕು. ತರಗತಿ ಕೊಠಡಿಗಳಿಗೆ ಗಾಳಿಯ ಪ್ರಸರಣ ಖಚಿತಪಡಿಸಿಕೊಳ್ಳಬೇಕು. ಶಾಲಾ ಅಧಿಕಾರಿಗಳು ಮತ್ತು ಮಕ್ಕಳ ಪೋಷಕರು ಈ ವಿಚಾರದಲ್ಲಿ ಗರಿಷ್ಠ ಜಾಗರೂಕತೆ ಪಾಲಿಸಬೇಕು ಎಂದು ಶಿಕ್ಷಣ ಇಲಾಖೆಯೂ ತಿಳಿಸಿದೆ. ಜಿಲ್ಲೆಯ ಎಲ್ಲಾ ಗ್ರಾ.ಪಂ.ಗಳು ಮತ್ತು ನಗರಸಭೆಗಳು ಸಾರ್ವಜನಿಕರ ಆರೋಗ್ಯಕ್ಕೆ ವಿಶೇಷ ಆದ್ಯತೆ ನೀಡಬೇಕು ಎಂದು ವಿಪತ್ತು ನಿರ್ವಹಣಾ ಪ್ರಾಧಿಕಾರವು ಸೂಚಿಸಿದೆ. ಅಂಗನವಾಡಿಗಳ ಪುಟಾಣಿ ಮಕ್ಕಳ ಬಗ್ಗೆಯೂ ಮುತುವರ್ಜಿ ವಹಿಸಬೇಕು. ಹಾಸಿಗೆ ಹಿಡಿದ ರೋಗಿಗಳು, ಹಿರಿಯ ನಾಗರಿಕರು, ಗರ್ಭಿಣಿಯರು ಹಾಗೂ ಇತರ ಕಾಯಿಲೆಗಳಿಂದ ಬಳಲುತ್ತಿರುವವರು ಮಧ್ಯಾಹ್ನದ ಬಿಸಿಲಿಗೆ ಹೊರಗಡೆ ಹೋಗಬಾರದೆಂದು ಸಲಹೆ ನೀಡಲಾಗಿದೆ. ಮಧ್ಯಾಹ್ನದ ಬಿಸಿಲಿನಲ್ಲಿ ಜಾನುವಾರುಗಳನ್ನು ಮೇಯಲು ಬಿಡುವುದನ್ನು ಮತ್ತು ಸಾಕು ಪ್ರಾಣಿಗಳನ್ನು ಬಿಸಿಲಿನಲ್ಲಿ ಕಟ್ಟಿಹಾಕುವುದನ್ನು ತಪ್ಪಿಸಬೇಕಾಗಿದೆ. ಸಾರ್ವಜನಿಕರಿಗೆ ಯಾವುದೇ ರೀತಿಯ ಅನಾರೋಗ್ಯ ಕಂಡುಬಂದಲ್ಲಿ ಕೂಡಲೇ ಸಮೀಪದ ವೈದ್ಯರ ಸಲಹೆಗಳನ್ನು ಪಡೆಯಬೇಕು. ಬಿಸಿಲಿನ ತಾಪಮಾನ ಅಧಿಕಗೊಳ್ಳುತ್ತಿರುವ ಕಾರಣ ಒಟ್ಟಿನಲ್ಲಿ ಜನರು ತಮ್ಮ ಆರೋಗ್ಯದ ವಿಷಯದಲ್ಲಿ ಮುಂಜಾಗ್ರತೆಗಳನ್ನು ಪಾಲಿಸಬೇಕೆಂದು ವಿಪತ್ತು ನಿರ್ವಹಣಾ ಪ್ರಾಧಿಕಾರವು ತಿಳಿಸಿದೆ.

ಹೊಂಡ ಸೃಷ್ಟಿ!

ಕಳೆದ ಕೆಲವು ವರ್ಷಗಳ ಹಿಂದೆ ಸೇತುವೆ ಮತ್ತು ರಸ್ತೆ ಸಂಧಿಸುವ ಸ್ಥಳದಲ್ಲಿ ಭೂಕುಸಿತ ಕಂಡು ಬಂದಿದ್ದು ಬಳಿಕ ಇದರ ದುರಸ್ತಿ ಕಾರ್ಯ ನಡೆಸಲಾಗಿತ್ತು. ರಾಷ್ಟ್ರೀಯ ಹೆದ್ದಾರಿ ಚತುಷ್ಪಥ ಕಾಮಗಾರಿ ಮುಗಿದು ನಾಲ್ಕೈದು ವರ್ಷಗಳಷ್ಟೇ ಕಳೆದಿದ್ದು ಇಷ್ಟರೊಳಗೆ ರಾ.ಹೆ.ಯ ವಿವಿಧ ಕಡೆಗಳಲ್ಲಿ ಕುಸಿತ ಕಂಡು ಬರುತ್ತಿರುವುದು ಕಾಮಗಾರಿಯ ಗುಣಮಟ್ಟವನ್ನು ಪ್ರಶ್ನಿಸುವಂತಿದೆ.

ನೊಮ್ಯಾಡ್‌ನ ಬಲ

ದೂರದ, ಸಂಪರ್ಕರಹಿತ ಪ್ರದೇಶಗಳು ಹಾಗೂ ವಿಪತ್ತು ಪೀಡಿತ ಪರಿಸರಗಳಲ್ಲಿ, ಸಾಮಾನ್ಯ ಕ್ಲೌಡ್ ಸೌಕರ್ಯ ಕೂಡಾ ಲಭ್ಯವಿಲ್ಲದ ಸಂದರ್ಭಗಳಲ್ಲಿ ಬಳಸಲು ಅನುಕೂಲವಾಗುವಂತೆ ನೋಡ್ ಫಾರ್ ಓಪನ್ ಸೋರ್ಸ್ ಮೊಬೈಲ್ ಎಐ ಡಿಪ್ಲಾಯ್‌ಮೆಂಟ್ ವಿನ್ಯಾಸಗೊಂಡಿದ್ದು, ಜೊತೆಗೆ ಭೂಕುಸಿತ ಮತ್ತು ಪ್ರವಾಹಗಳಂತಹ ಘಟನೆಗಳ ಸಂದರ್ಭ ಇದು ಉಪಯೋಗಕ್ಕೆ ಬರಲಿದೆ.

ಸಿಗಲಿದೆ ಮುಕ್ತಿ?

ಪ್ರಸ್ತುತ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿಗೆ ಪರಿಶೀಲನೆಯಲ್ಲಿದ್ದು, ಇದರಲ್ಲಿ ಪಡಸಾಲೆ ಮೇಲ್ಛಾವಣಿ ದುರಸ್ತಿಗೆ ಸಹ ಅವಕಾಶ ಕಲ್ಪಿಸಲಾಗಿದ್ದು, ಕೂಡಲೇ ಇಲಾಖಾ ನಿಯಾಮಾನುಸಾರ ಟೆಂಡರ್ ಕರೆದು ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗುವುದು ಎಂಬ ಉಲ್ಲೇಖದಂತೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಉಪವಿಭಾಗ, ಸುಳ್ಯ ತಾಲೂಕು ಇವರು ವರದಿಯನ್ನು ಸಲ್ಲಿಸಿದ್ದಾರೆ. ಮೇಲಿನ ವರದಿಯನ್ವಯ, ಲೋಕೋಪಯೋಗಿ ಇಲಾಖೆ, ಉಪವಿಭಾಗ, ಸುಳ್ಯ ತಾಲೂಕು ಇವರ ಮುಖಾಂತರ ಸುಳ್ಯ ತಾಲೂಕು ಆಡಳಿತ ಕೇಂದ್ರ ಕಟ್ಟಡ(ಪಡಸಾಲೆ) ಮೇಲ್ಛಾವಣಿ ದುರಸ್ತಿ ಕಾರ್ಯವನ್ನು ಕೂಡಲೇ ಮಾಡಲಾಗುವುದು ಎಂಬ ಅಂಶವನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ, ಉಲ್ಲೇಖಿತ ಪತ್ರದ ಪ್ರತಿಯನ್ನು ಹಾಗೂ ಪತ್ರಿಕಾ ಪ್ರಕಟಣೆಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಸಲ್ಲಿಸಿದೆ ಎಂದು ತಹಶೀಲ್ದಾರ್ ಮಂಜುಳ ಎಂ. ಮುಖ್ಯಮಂತ್ರಿ ಕಚೇರಿಗೆ ಲಿಖಿತವಾಗಿ ಸಲ್ಲಿಸಿದ್ದರು. ಮಳೆಗಾಲ ಮುಂಚಿತವಾಗಿ ಮೇಲ್ಛಾವಣಿ ದುರಸ್ತಿ ಕಾರ್ಯ ಪೂರ್ಣಗೊಳ್ಳಲಿದ್ದು ಸಾರ್ವಜನಿಕರಿಗೆ ಸಹಕಾರಿಯಾಗಲಿದೆ.

ಮಡಿಕೇರಿ ಶಾಸಕ ಡಾ. ಮಂತರ್‌ಗೌಡ ಅಧ್ಯಕ್ಷತೆಯ ಪೂರ್ವಭಾವಿ ಸಭೆಯಲ್ಲಿ ತೀರ್ಮಾನ

ಮೇ 29, 30ರಂದು ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ



ಸುಂಟಿಕೊಪ್ಪ: ಕೊಡಗು ಜಿಲ್ಲಾ 17ನೇ ಕನ್ನಡ ಸಾಹಿತ್ಯ ಸಮ್ಮೇಳನ ಮೇ 29, 30ರಂದು ಸುಂಟಿಕೊಪ್ಪ ಜಿಎಂಪಿ ಶಾಲಾ ಮೈದಾನದಲ್ಲಿ ನಡೆಯಲಿದೆ.

ಗುರುವಾರ ಸುಂಟಿಕೊಪ್ಪ ಕೊಡವ ಸಮಾಜದ ಸಭಾಂಗಣದಲ್ಲಿ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷ ಮಡಿಕೇರಿ ಶಾಸಕ ಡಾ. ಮಂತರ್‌ಗೌಡ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

ಸಭೆಯಲ್ಲಿ ಮಾತನಾಡಿದ ಶಾಸಕರು ಆರ್ಥಿಕ ಸಂಪನ್ಮೂಲ ಕ್ರೋಢೀಕರಣದ ಕುರಿತು ಯಾವುದೇ ಆತಂಕ ಬೇಡ. ಸಮ್ಮೇಳನವನ್ನು ಐತಿಹಾಸಿಕವಾಗಿ ಸದಾಕಾಲ ನೆನಪಿಸಿಕೊಳ್ಳುವಂತಹ ಮುಂದಿನ ಎಲ್ಲಾ ಸಮ್ಮೇಳನಗಳಿಗೆ ಮಾದರಿಯಾಗುವಂತಹ ರೀತಿಯಲ್ಲಿ ಆಯೋಜಿಸಬೇಕೆಂದು ಅವರು ಕರೆ ನೀಡಿದರು. ವಿಶೇಷವಾಗಿ ಯುವಕರು ಮತ್ತು ಮಹಿಳೆಯರನ್ನು ಸಂಪರ್ಕಿಸಿ ಸಾಹಿತ್ಯದ ಕಡೆಗೆ ಅವರನ್ನು ಸೆಳೆಯಬೇಕೆಂದು ಕಿವಿಮಾತು ಹೇಳಿದರು. ಜಿಲ್ಲಾಮಟ್ಟದ ಕಾರ್ಯಕ್ರಮ ವಾಗಿರುವ ಹಿನ್ನಲೆಯಲ್ಲಿ ಸುಂಟಿಕೊಪ್ಪ ಅಥವಾ ಮಡಿಕೇರಿ ಕ್ಷೇತ್ರಕ್ಕೆ ಸಿಮೀತವಾಗಿಸದೆ ಜಿಲ್ಲೆಯ 104 ಗ್ರಾ.ಪಂ.ಗಳನ್ನು ತಲುಪಿ ಜಿಲ್ಲೆಯ ಎಲ್ಲೆಡೆಗಳಿಂದ ಸಾಹಿತ್ಯ ಅಭಿಮಾನಿಗಳು, ಆಸಕ್ತರು ಕನ್ನಡಿಗರು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬರುವಂತಾಗಬೇಕೆಂದು ಅವರು ಹೇಳಿದರು.

ಏ.23ರವರೆಗೆ ಪೂರ್ವ ನಿಗದಿತ ಕಾರ್ಯಕ್ರಮಗಳಲ್ಲಿ ತಾವು ತೊಡಗಿಕೊಂಡಿದ್ದು ಆನಂತದ ದಿನಗಳಲ್ಲಿ ಮುಖ್ಯಮಂತ್ರಿಗಳನ್ನು ಭೇಟಿಯಾಗುವದರಿಂದ ಹಿಡಿದು ಜಿಲ್ಲಾ ಉಸ್ತುವಾರಿ ಸಚಿವ ಜಿಲ್ಲೆಯ ಜನಪ್ರತಿನಿಧಿಗಳು ಮತ್ತು ರಾಜ್ಯದ ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರ ಶಿವರಾಜ್ ತಂಗಡಗಿ ಅವರನ್ನು ಜಿಲ್ಲೆ ಆಹ್ವಾನಿಸುವ ಕಾರ್ಯಕ್ರಮಗಳಲ್ಲಿ ತಾನು ನೇತೃತ್ವ ವಹಿಸುತ್ತೇನೆಂದು ಹೇಳಿದರು.

ತಾಲೂಕು ಗ್ಯಾರಂಟಿ ಸಮಿತಿಯ ಅಧ್ಯಕ್ಷ ವಿ.ಪಿ.ಶಶಿಧರ್ ಮಾತನಾಡಿ, ಕುಶಾಲನಗರ ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಮತ್ತು ಐಗೂರಿನಲ್ಲಿ ನಡೆದ ಸೋಮವಾರಪೇಟೆ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿ ಆಯೋಜನೆಯನ್ನು ಮಾದರಿಯಾಗಿ ಇಟ್ಟುಕೊಂಡು ಸುಂಟಿಕೊಪ್ಪದಲ್ಲಿ ಅತ್ಯಂತ ವಿಜೃಂಭಣೆಯಿಂದ ಸಾಹಿತ್ಯ ಸಮ್ಮೇಳನ ಆಯೋಜಿಸಿ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಟಿ.ಪಿ. ರಮೇಶ್ ಮಾತನಾಡಿ, ಕೊಡಗು ಜಿಲ್ಲೆಯಲ್ಲಿ ತನ್ನದೆಯಾದ ವೈಶಿಷ್ಟ್ಯತೆ ಪರಂಪರೆ ಹೊಂದಿರುವ ಸುಂಟಿಕೊಪ್ಪ ಹೋಬಳಿಯಲ್ಲಿ ಈ ಸಾಲಿನ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಲು ತಿರ್ಮಾನಿಸಲಾಗಿದೆ. ಸಮ್ಮೇಳನವು 2 ದಿನಕಾಲ ನಡೆಯಲಿದ್ದು, 29 ರ ಸಂಜೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ಮತ್ತು 30 ರಂದು ಸಮ್ಮೇಳನದ ಅಂಗವಾಗಿ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಸಮ್ಮೇಳನದ ಯಶಸ್ವಿಗಾಗಿ ಅಂದಾಜು 18 ರಿಂದ19 ಲಕ್ಷ ರೂ ವೆಚ್ಚ ತಗುಲಿದ್ದು ಸಮ್ಮೇಳನವನ್ನು ಅರ್ಥಪೂರ್ಣವಾಗಿ ನಡೆಸಲು 11 ಉಪ ಸಮಿತಿಗಳ ರಚನೆಯಾಗಿದೆ ರೂ.5 ಲಕ್ಷ ಅನುದಾನ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ನೀಡುತ್ತದೆ ಎಂದರು.

ಹಣಕಾಸು ಸಮಿತಿಯ ಅಧ್ಯಕ್ಷ ಎ. ಲೋಕೇಶ್ ಕುಮಾರ್ ಮಾತನಾಡಿದರು. ಇದೇ ಸಂದರ್ಭದಲ್ಲಿ ಸಮ್ಮೇಳನದ ಯಶಸ್ವಿಯಾಗಿ ರಚಿಸಲಾದ ವಿವಿಧ ಉಪಸಮಿತಿಗಳ ಸಂಚಾಲಕರು ಸಮಿತಿಗಳ ಕಾರ್ಯ ಪ್ರಗತಿಯ ಕುರಿತು ಮಾಹಿತಿ ನೀಡಿದರು.

ವೇದಿಕೆಯಲ್ಲಿ ಸುಂಟಿಕೊಪ್ಪ ಹೋಬಳಿ ಕಸಾಪ ಅಧ್ಯಕ್ಷ ಪಿ.ಎಫ್. ಸಬಾಸ್ಟೀನ್, ಕುಶಾಲನಗರ ತಾಲೂಕು ಕಸಾಪ ಅಧ್ಯಕ್ಷ ಕೆ.ಎಸ್.ನಾಗೇಶ್, ಜಿಲ್ಲಾ ಗೌರವ ಕಾರ್ಯದರ್ಶಿಗಳಾದ ರೇವತಿ ರಮೇಶ್, ಸುಂಟಿಕೊಪ್ಪ ಹೋಬಳಿ ಪ್ರಧಾನ ಕಾರ್ಯದರ್ಶಿ ಕೆ.ಎಸ್. ಅನಿಲ್‌ಕುಮಾರ್, ಮಹಿಳಾ ಕಾರ್ಯದರ್ಶಿ ಲೀಲಾ ಮೇದಪ್ಪ, ಸುಂಟಿಕೊಪ್ಪ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ವಿ.ಜಿ.ಲೋಕೇಶ್, ಕನ್ನಡ ಸಂಸ್ಕೃತಿಯ ಇಲಾಖೆಯ ಸಹಾಯ ನಿರ್ದೇಶಕ ಕುಮಾರ್, ಸುಂಟಿಕೊಪ್ಪ ಉಪ ತಹಶೀಲ್ದಾರ್ ಕೆ.ಎಂ. ದೀಪಿಕಾ, ಚೆಸ್ಕಾಂ ಕಿರಿಯ ಅಭಿಯಂತರ ಲವಕುಮಾರ್, ಸುಂಟಿಕೊಪ್ಪ ವಾಹನ ಚಾಲಕರ ಸಂಘದ ಅಧ್ಯಕ್ಷ ಕಿಟ್ಟಣ್ಣ ರೈ ಇದ್ದರು.

ಅಕ್ಷಯ ಪದವಿ ಕಾಲೇಜಿನಲ್ಲಿ 'ರನ್ ವೇ ಸ್ಕಿಲ್ಸ್' ತರಬೇತಿ ಕಾರ್ಯಾಗಾರ



ಪುತ್ತೂರು: ಅಕ್ಷಯ ಪದವಿ ಕಾಲೇಜಿನಲ್ಲಿ ಮಂಗಳೂರು ವಿವಿ ಮಟ್ಟದ ಫ್ಯಾಷನ್ ಡಿಸೈನ್ ಅಸೋಸಿಯೇಷನ್ ವತಿಯಿಂದ ಒಂದು ದಿನದ 'ರನ್‌ವೇ ಸ್ಕಿಲ್ಸ್' ತರಬೇತಿ ಕಾರ್ಯಾಗಾರ ನಡೆಯಿತು.

ಕಾರ್ಯಕ್ರಮವನ್ನು ದೀಪ ಪ್ರಜ್ವಲನದ ಮೂಲಕ ಉದ್ಘಾಟಿಸಿದ ಮಂಗಳೂರಿನ ಪಾಥ್‌ವೇ ಮೋಡಲಿಂಗ್ ಸ್ಟುಡಿಯೋದ ಸಂಸ್ಥಾಪಕ ದೀಪಕ್ ಗಂಗೂಲಿ ಮೋಡೆಲಿಂಗ್ ಕುರಿತು ಮಾಹಿತಿಯನ್ನು ನೀಡಿದರು. ಅಕ್ಷಯ ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯ ಅಧ್ಯಕ್ಷ ಜಯಂತ್ ನಡುಬೈಲು ಮಾತನಾಡಿದರು. ಅಕ್ಷಯ ಪದವಿ ಕಾಲೇಜಿನ ಪ್ರಾಂಶುಪಾಲ ಸಂಪತ್ ಕೆ. ಪಕ್ಕಳ ಮೋಡೆಲಿಂಗ್‌ನ ಉಪಯೋಗ ಮತ್ತು ಅವಕಾಶಗಳ ಬಗ್ಗೆ ವಿವರಿಸಿದರು.

ದೀಪಕ್ ಗಂಗೂಲಿ ಅವರೊಂದಿಗೆ ಐದು ಮಂದಿ ಮೋಡೆಲ್ ತರಬೇತಿ ನೀಡಿದರು. 150 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಂಸ್ಥೆಯ ಕಾರ್ಯದರ್ಶಿ ಡಾ. ಅಕ್ಷಯ್, ಆಡಳಿತಾಧಿಕಾರಿ ಅರ್ಪಿತ್ ಟಿ.ಎ., ಶೈಕ್ಷಣಿಕ ನಿರ್ದೇಶಕ ಅಭಿಲಾಶ್ ಕ್ಷತ್ರಿಯ, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಗಂಗಾರತ್ನ, ಐಕ್ಯೂಎಸಿ ನಿರ್ದೇಶಕಿ ರಶ್ಮಿ ಕೆ., ಫ್ಯಾಷನ್ ಡಿಸೈನ್ ವಿಭಾಗದ ಮುಖ್ಯಸ್ಥೆ ವೀಣಾ ಬಿ.ಕೆ., ಫ್ಯಾಷನ್ ಡಿಸೈನ್ ಅಸೋಸಿಯೇಷನ್ ನಿರ್ದೇಶಕಿ ಧನ್ಯಶ್ರೀ ಹಾಗೂ ಅಸೋಸಿಯೇಷನ್ ಅಧ್ಯಕ್ಷೆ ವಿದ್ಯಾರ್ಥಿನಿ ಜೆನಿಫರ್ ಡಿ'ಸೋಜಾ ಉಪಸ್ಥಿತರಿದ್ದರು. ಪ್ರಕೃತಿ ಪ್ರಾರ್ಥಿಸಿದರು. ಉಪನ್ಯಾಸಕಿ ಶೈಲಶ್ರೀ ವಿ.ಎಸ್. ಸ್ವಾಗತಿಸಿ, ವಿದ್ಯಾರ್ಥಿ ಮಿಲನ್ ವಂದಿಸಿದರು. ವಿದ್ಯಾರ್ಥಿನಿಯರಾದ ಹಲೀಮಾ ಮುಸ್ಕಾನ್ ಮತ್ತು ರಿಜೋನಾ ಬಾನು ನಿರ್ವಹಿಸಿದರು.

ವಿದ್ಯಾರ್ಥಿಗಳು ದೇಶದ ಅಮೂಲ್ಯ ರತ್ನಗಳಾಗಲಿ: ಸುಬ್ರಮಣ್ಯ ನಟ್ಟೋಜ



ಪುತ್ತೂರು: ವಿದ್ಯಾರ್ಥಿ ಜೀವನ ಬಹಳ ಅಮೂಲ್ಯವಾದುದು. ಈ ದೇಶದ ಪ್ರತಿಯೊಬ್ಬರೂ ಕೂಡ ಸ್ವಂತಕ್ಕೆ ಸ್ವಲ್ಪ ಸಮಾಜಕ್ಕೆ ಸರ್ವಸ್ವ ಎಂಬ ರೀತಿಯಲ್ಲಿ ಕರ್ತವ್ಯ ನಿರ್ವಹಿಸಿದಾಗ ಮಾತ್ರ ನಮ್ಮ ದೇಶ ವಿಶ್ವಕ್ಕೆ ಪರಿಚಯವಾಗುವುದಕ್ಕೆ ಸಾಧ್ಯ ಎಂದು ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಬ್ರಮಣ್ಯ ನಟ್ಟೋಜ ಹೇಳಿದರು.

ಅವರು ಅಂಬಿಕಾ ವಿದ್ಯಾಲಯ ಸಿಬಿಎಸ್‌ಇಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ ನಡೆಯುತ್ತಿರುವ ಬೇಸಿಗೆ ಶಿಬಿರದಉದ್ಘಾಟನಾಸಮಾರಂಭದಅಧ್ಯಕ್ಷತೆ ವಹಿಸಿ ಮಾತನಾಡಿದರು. ಹಾಗಾಗಿ ಸ್ಕೌಟ್ಸ್ ಗೈಡ್ಸ್‌ಗೆ ಸೇರಿದ ಪ್ರತಿಯೊಬ್ಬರೂ ಶಿಸ್ತಿನಿಂದ, ಶ್ರದ್ಧೆಯಿಂದ ಕೆಲಸ ನಿರ್ವಹಿಸಿ ಉಳಿದವರಿಗೆ ಮಾದರಿ ವಿದ್ಯಾರ್ಥಿಗಳಾಗಬೇಕು ಎಂದು ಶುಭ ಹಾರೈಸಿದರು.

ಮುಖ್ಯ ಅತಿಥಿ ಪುತ್ತೂರು ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ, ಎ.ಎಲ್.ಟಿ. ತರಬೇತುದಾರೆ ಸುನೀತಾ ಜೆ. ರೈ ಶಿಬಿರ ಉದ್ಘಾಟಿಸಿ ಮಾತನಾಡಿ, ಕಲಿಕೆ ನಿರಂತರ ಪ್ರಕ್ರಿಯೆ. ಸಮಾಜದಲ್ಲಿ ಎಲ್ಲರೂ ಅಭಿವೃದ್ಧಿ ಹೊಂದಬೇಕು. ಎಲ್ಲರಲ್ಲಿಯೂ ನಾಯಕತ್ವ ಗುಣ, ಸಮಾಜಮುಖಿ ಆಲೋಚನೆಗಳು ಬೆಳೆಯಬೇಕು ಎಂದರು. ಗಿಡಗಳನ್ನು ನೆಟ್ಟು ಪೋಷಿಸಬೇಕು, ಇದರಿಂದ ಮುಂದಿನ ಜನಾಂಗ ಸುಖಿಯಾಗಿರುತ್ತದೆ. ಜೀವನಕ್ಕೆ ಉತ್ತಮವಾದ ದಾರಿ ಮಾಡುವಲ್ಲಿ ಇಂತಹ ಶಿಬಿರ ಸಹಾಯಕವಾಗುತ್ತವೆ ಎಂದರು.

ವೇದಿಕೆಯಲ್ಲಿ ಸ್ಕೌಟ್ ಗೈಡ್ಸ್ ಎ.ಎಲ್.ಟಿ. ತರಬೇತಿ ಪಡೆದ ಮೇಬಲ್, ಶಿಬಿರದ ನಾಯಕ ಚಂದ್ರಾಕ್ಷ, ವಿದ್ಯಾಲಯದ ಪ್ರಾಂಶುಪಾಲೆ ಮಾಲತಿ ಡಿ., ಸ್ಕೌಟ್ ಶಿಕ್ಷಕ ಸತೀಶ್ ಇರ್ದೆ, ಗೈಡ್ಸ್ ಶಿಕ್ಷಕಿ ಚಂದ್ರಕಲಾ ಇದ್ದರು. ಸ್ಕೌಟ್ ಶಿಕ್ಷಕ ಸತೀಶ್ ಇರ್ದೆ ಸ್ವಾಗತಿಸಿ, ಕಾರ್ಯಕ್ರಮ ನಿರ್ವಹಿಸಿದರು.

ಕದ್ರಿ ದಕ್ಷಿಣ ವಾರ್ಡ್ ಮೈದಾನ-ಕದ್ರಿ ಕಂಬಳ ಜಂಕ್ಷನ್ ರಸ್ತೆ ಅಭಿವೃದ್ಧಿಗೆ ಚಾಲನೆ



ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯ 33ನೇ ಕದ್ರಿ ದಕ್ಷಿಣ ವಾರ್ಡಿನ ಮೈದಾನದಿಂದ ಕದ್ರಿ ಕಂಬಳ ಜಂಕ್ಷನ್ ವರೆಗಿನ ರಸ್ತೆಯು ಸುಮಾರು 1 ಕೋಟಿ ರೂಪಾಯಿ ಅನುದಾನದಲ್ಲಿ ಕಾಂಕ್ರೀಟೀಕರಣಗೊಳ್ಳಲಿದ್ದು ಶಾಸಕ ವೇದವ್ಯಾಸ ಕಾಮತ್ ರವರ ನೇತೃತ್ವದಲ್ಲಿ ಭೂಮಿ ಪೂಜೆ ನಡೆಯಿತು.

ನಂತರ ಮಾತನಾಡಿದ ಶಾಸಕರು, ಇದು ಹಲವು ಸಮಯದ ಬೇಡಿಕೆಯಾಗಿದ್ದು ಪ್ರತಿವರ್ಷ ಮಳೆಗಾಲದ ಸಂದರ್ಭದಲ್ಲಿ ಇಡೀ ರಸ್ತೆ ಹಾಳಾಗಿ ಸ್ಥಳೀಯರು ತೀವ್ರ ತೊಂದರೆ ಅನುಭವಿಸುತ್ತಿದ್ದರು. ಹಾಗಾಗಿ ಪಾಲಿಕೆಯ ಬಿಜೆಪಿ ಆಡಳಿತದ ಅವಧಿಯಲ್ಲಿ ಈ ಕಾಮಗಾರಿಗೆ ವಿಶೇಷ ಅನುದಾನವನ್ನು ಮೀಸಲಿಡಲಾಗಿತ್ತು. ಆದರೆ ಕಾರಣಾಂತರಗಳಿಂದ ಸ್ಥಗಿತಗೊಂಡಿದ್ದ ಕಾಮಗಾರಿಗೆ ಈ ಭಾಗದ ನಿಕಟಪೂರ್ವ ಮನಪಾ ಸದಸ್ಯರಾದ ಮನೋಹರ್ ಕದ್ರಿ ಹಾಗೂ ಶಕೀಲಾ ಕಾವ ರವರ ವಿಶೇಷ ಒತ್ತಾಯದ ಮೇರೆಗೆ ಮರು ಚಾಲನೆ ದೊರೆತಿರುವುದು ಸಂತಸ ತಂದಿದೆ ಎಂದರು.

ಮುಂದಿನ ದಿನಗಳಲ್ಲಿ ಇಲ್ಲಿನ ರಸ್ತೆಗೆ ಅತ್ಯುತ್ತಮ ಸ್ಟ್ರೀಟ್ ಲೈಟ್‌ಗಳೂ ಸಹ ಬರಲಿದ್ದು ಆ ಪ್ರಕ್ರಿಯೆಗಳೂ ಸಹ ಚಾಲನೆಯಲ್ಲಿವೆ. ಈ ಪ್ರದೇಶವು ಹಲವು ಹೋಟೆಲ್, ವೈದ್ಯಕೀಯ, ವಸತಿ ಸಮುಚ್ಚಯ, ಸೇರಿದಂತೆ ಜನನಿಬಿಡವಾಗಿದ್ದು, ಸಾರ್ವಜನಿಕರಿಗೆ ತೊಂದರೆಯಾಗದಂತೆ ಕಾರ್ಯ ನಿರ್ವಹಿಸುವಂತೆ ಸಂಬಂಧ ಪಟ್ಟವರಿಗೆ ಸೂಚನೆ ನೀಡಿದ್ದೇನೆ ಎಂದರು.

ಸಂದೀಪ್ ಗರೋಡಿ ಬಿಜೆಪಿ ಪ್ರಮುಖರಾದ ಫೆಡ್ರಿಕ್, ಪಮ್ಮಿ ಕೊಡಿಯಾಲ್ ಬೈಲ್, ವೆಂಕಟೇಶ್, ವೇಣುಗೋಪಾಲ್ ಶೆಟ್ಟಿ, ಹೇಮಾನಂದ್, ಯಶವಂತ್, ತಾರನಾಥ್ ಉಪಸ್ಥಿತರಿದ್ದರು.

ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಿತ್ರಕೂಟ ಸಮ್ಮಿಲನ



ಕುಂದಾಪುರ: ಕುಂದಾಪುರ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ಪ್ರಾಕ್ತನ ವಿದ್ಯಾರ್ಥಿ ಸಂಘದ ವತಿಯಿಂದ ಆಯೋಜಿಸಿದ ವಾರ್ಷಿಕ ಮಿತ್ರಕೂಟ ಸಮ್ಮಿಲನ –2026 ಕಾರ್ಯಕ್ರಮ ಕಾಲೇಜಿನ ಮುಕಾಂಬಿಕಾ ಸಭಾಂಗಣದಲ್ಲಿ ಶುಕ್ರವಾರ ನಡೆಯಿತು.

ಕಾಲೇಜಿನಪ್ರಾಕ್ತನವಿದ್ಯಾರ್ಥಿ, ಗಂಗೊಳ್ಳಿಯ ಸ್ಟೆಲ್ಲಾ ಮೇರಿಸ್ ಪ್ರೌಢ ಶಾಲೆಯ ದೈಹಿಕ ಶಿಕ್ಷಕ ಪ್ರಣಯ ಕುಮಾರ್ ಶೆಟ್ಟಿ ಮಾತನಾಡಿ, ಕಾಲೇಜು ಶೈಕ್ಷಣಿಕ, ಸಾಂಸ್ಕೃತಿಕ, ಸಾಹಿತ್ಯಿಕ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ಆಸಕ್ತಿರುವ ವಿದ್ಯಾರ್ಥಿಗಳಿಗೆ ನಿರಂತರ ಬೆಂಬಲ ನೀಡುತ್ತಾ ಬಂದಿದೆ. ಸಾವಿರಾರು ಗ್ರಾಮೀಣ ವಿದ್ಯಾರ್ಥಿಗಳ ಬದುಕು ಈ ಸಂಸ್ಥೆಗೆ ಬಂದು ಬೆಳಗಿದೆ. ಕಾಲೇಜು ಕನ್ನಡ ಕರಾವಳಿ, ಮಂಗಳೂರು ವಿಶ್ವವಿದ್ಯಾನಿಲಯ ಮಾತ್ರವಲ್ಲ, ನಾಡಿನ ಪ್ರತಿಷ್ಠಿತ ಸಂಸ್ಥೆಯಾಗಿ ಮೂಡಿಬಂದಿರುವುದು ಹೆಮ್ಮೆಯ ಸಂಗತಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಕಾಲೇಜಿನ ಪ್ರಾಂಶುಪಾಲ ಪ್ರೊ. ಡಾ. ಕೆ. ಉಮೇಶ ಶೆಟ್ಟಿ ಅವರು ಸಂಸ್ಥೆಯ ಶ್ರೇಯೋಭಿವೃದ್ಧಿಯಲ್ಲಿ ಪ್ರಾಕ್ತನ ವಿದ್ಯಾರ್ಥಿಗಳ ಮಹತ್ವದ ಬಗ್ಗೆ ತಿಳಿಸಿದರು. ಉಪ ಪ್ರಾಂಶುಪಾಲ ಡಾ. ಚೇತನ ಶೆಟ್ಟಿ ಕೋವಾಡಿ ಆಶಯ ನುಡಿಗಳನ್ನಾಡಿದರು. ಆಡಳಿತ ನಿಕಾಯಕ ರಕ್ಷಿತ್ ರಾವ್ ಗುಜ್ಜಾಡಿ ಶುಭ ಹಾರೈಸಿದರು.

ರಶ್ಮಿ ಉಡುಪ ಪ್ರಾರ್ಥಿಸಿ, ಸಂಘದ ಕಾರ್ಯದರ್ಶಿ ದೀಪ ಪೂಜಾರಿ ಸ್ವಾಗತಿಸಿದರು. ಪ್ರಾಕ್ತನ ವಿದ್ಯಾರ್ಥಿ ಸಂಘದ ಅಧ್ಯಕ್ಷ ಯೋಗೀಶ್ ಶ್ಯಾನುಭೋಗ್ ಪ್ರಸ್ತಾವಿಸಿ, ಖಜಾಂಚಿ ಶ್ರೀಸಚಿನ್ ದೇವಾಡಿಗ ವಂದಿಸಿದರು. ಪ್ರೀತಿ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಎಸೆಸೆಲ್ಸಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ನಾವೂರಿನಲ್ಲಿ ಮಾಹಿತಿ ಕಾರ್ಯಾಗಾರ



ಬೆಳ್ತಂಗಡಿ: ನಾವೂರು ಹಿ.ಪ್ರಾ. ಶಾಲಾ ವಠಾರದಲ್ಲಿ ನಾವೂರು ಶ್ರೀ ಗೋಪಾಲಕೃಷ್ಣ ಸೇವಾ ಟ್ರಸ್ಟ್ ನೇತೃತ್ವದಲ್ಲಿ ರೋಟರಿ ಕ್ಲಬ್ ಬೆಳ್ತಂಗಡಿ ಹಾಗೂ ಸರ್ವೋದಯ ಟ್ರಸ್ಟ್ ನಾವೂರು ಸಹಭಾಗಿತ್ವದಲ್ಲಿ ಎಸ್ಸೆಸ್ಸೆಲ್ಸಿ ಮುಗಿಸಿದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಮಾಹಿತಿ ಕಾರ್ಯಾಗಾರ ನಡೆಯಿತು.

ಉದ್ಘಾಟನೆಯನ್ನು ಬೆಳ್ತಂಗಡಿ ರೋಟರಿ ಕ್ಲಬ್‌ನ ಅಧ್ಯಕ್ಷ ಡಾ. ಪ್ರಕಾಶ್ ಪ್ರಭು ನೆರವೇರಿಸಿದರು. ಹರೀಶ್ ಮೋರ್ತಾಜೆ ಅಧ್ಯಕ್ಷತೆಯನ್ನು ವಹಿಸಿದ್ದರು. ಪ್ರಾಸ್ತಾವಿಕವಾಗಿ ಡಾ. ಪ್ರದೀಪ್ ಮಾತನಾಡಿದರು. ನಾವೂರು ಪ್ರೌಢ ಶಾಲಾ ಮುಖ್ಯೋಪಾಧ್ಯಾಯ ರಾಜೇಂದ್ರ ಭಟ್, ಸ್ಟಾರ್ ಲೈನ್ ಆಂಗ್ಲ ಮಾಧ್ಯಮ ಪ್ರೌಢ ಶಾಲಾ ಮುಖ್ಯೋಪಾಧ್ಯಾಯಿನಿ ಜಾಕಿನ್ ಬಿನ್ ಸರಾವೊ ಮಕ್ಕಳ ಉಜ್ವಲ ಭವಿಷ್ಯಕ್ಕೆ ಶುಭ ಹಾರೈಸಿದರು. ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಕೆ. ಧರ್ಣಪ್ಪ ಮೂಲ್ಯ ನಿರೂಪಿಸಿದರು. ಗಣೇಶ್ ಗೌಡ ನೆಲ್ಲಿಪಲ್ಕೆ ವಂದಿಸಿದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಧ. ಮ. ವಸತಿ ಪಿ ಯು ಕಾಲೇಜಿನ ಪ್ರಾಚಾರ್ಯ ಪ್ರೊ. ಸುನೀಲ್ ಪಂಡಿತ್ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ನಾವೂರು ಶ್ರೀ ಗೋಪಾಲಕೃಷ್ಣ ದೇವಸ್ಥಾನ ಸೇವಾ ಟ್ರಸ್ಟ್ ಪೂರ್ವಾಧ್ಯಕ್ಷ ಎ.ಬಿ. ಉಮೇಶ್ ಅತ್ಯಡ್ಕ, ಟ್ರಸ್ಟಿಗಳಾದ ಗಣೇಶ್ ಕನಾಲು, ತಿಮ್ಮಪ್ಪ ಜಿ, ಹರೀಶ್ ಕಾರಿಂಜ, ಕೋಶಾಧಿಕಾರಿ ಉಮೇಶ್ ಪ್ರಭು, ಸಂಚಾಲಕ ಕೆ. ಮೋಹನ್ ಬಂಗೇರ ಕಾರಿಂಜ, ಸಿಂಡಿಕೇಟ್ ಬ್ಯಾಂಕ್ ನಿವೃತ್ತ ಹಿರಿಯ ಪ್ರಬಂಧಕ ಸೂರ್ಯನಾರಾಯಣ ಭಟ್, ಮಹಿಳಾ ಸಮಿತಿ ಅಧ್ಯಕ್ಷೆ ಪ್ರಿಯಾ ಲಕ್ಷ್ಮಣ್, ಶಾಲಾ ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷ ಕೃಷ್ಣಪ್ಪ ಗೌಡ ದೇರ್ಲಕ್ಕಿ ಉಪಸ್ಥಿತರಿದ್ದರು.

ಕಲಾರಾಧನೆ ಜೊತೆ ಸಹಾಯಹಸ್ತ ಕಾರ್ಯ ಶ್ಲಾಘನೀಯ: ಆನಂದ್



ಕೋಟ: ಕಲಾರಾಧನೆ ಮೂಲಕ ಸಮಾಜಸೇವೆಗೆ ಮುನ್ನುಡಿ ಇಡುವ ಕಾರ್ಯ ನಿಜಕ್ಕೂ ಶ್ಲಾಘನಾರ್ಹ ಕಾರ್ಯ ಎಂದು ಕೋಟದ ಅಮೃತೇಶ್ವರೀ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಆನಂದ್ ಸಿ. ಕುಂದರ್ ಹೇಳಿದರು

ಸಾಲಿಗ್ರಾಮದ ಪಾರಂಪಳ್ಳಿ ಪ್ರಗತಿಪರ ಕೃಷಿಕ ರವೀಂದ್ರ ಐತಾಳ್ ಮನೆಯಲ್ಲಿ ಹಮ್ಮಿಕೊಂಡ ಪಾವಂಜೆ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮೀ ದೇಗುಲದ ಯಕ್ಷಗಾನ ಮಂಡಳಿಯ ಯಕ್ಷಗಾನ ಬಯಲಾಟದ ಅಂಗವಾಗಿ ಸಮಾಜದ ವಿವಿಧ ಸ್ತರಗಳಲ್ಲಿ ಸಾಧನೆಗೈದ ಸಾಧಕರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ, ಅಶಕ್ತರಿಗೆ, ಶೈಕ್ಷಣಿಕ ಸಂಸ್ಥೆಗಳಿಗೆ ನೆರವು ನೀಡುವ ಕಾರ್ಯಕ್ರಮದಲ್ಲಿ ಮಾತನಾಡಿದರು. ಬಡಗಿನ ಸ್ತ್ರೀವೇಷಧಾರಿ ಶಶಿಕಾಂತ್ ಶೆಟ್ಟಿ ಕಾರ್ಕಳ ದಂಪತಿಗಳನ್ನು ಸನ್ಮಾನಿಸಲಾಯಿತು. ಪತ್ರಕರ್ತ ರವೀಂದ್ರ ಕೋಟ, ಪವರ್ ಲಿಫ್ಟರ್ ಆದಿತ್ಯ ಸದಾನಂದ್, ಸ್ಥಳೀಯ ಕೃಷಿ ಕಾಯಕಜೀವಿಗಳನ್ನು ಅಭಿನಂದಿಸಲಾಯಿತು. ಶಾಲೆಗಳಿಗೆ, ಸಂಘಸಂಸ್ಥೆಗಳಿಗೆ, ಕೋಟದ ಕಲ್ಲಟ್ಟು ದೇಗುಲ,ಕೋಡಿ ಮಹಾಸತೀಶ್ವರಿ ದೇಗುಲ, ಜೈ ಕುಂದಾಪ್ರ ಸೇವಾಟ್ರಸ್ಟ್‌ಗೆ ತಲಾ 25ಸಾವಿರ ರೂ.ಗಳಂತೆ ಸಹಾಯನಿಧಿ, ಅಶಕ್ತರಿಗೆ ಆರ್ಥಿಕ ನೆರವನ್ನು ಆನಂದ ಸಿ. ಕುಂದರ್, ಪಟ್ಲ ಫೌಂಡೇಶನ್ ಪ್ರವರ್ತಕ ಸತೀಶ ಶೆಟ್ಟಿ ಪಟ್ಲ ಹಸ್ತಾಂತರಿಸಿದರು. ಶಿವಾನಂದ ಮಯ್ಯ, ಪ್ರಗತಿಪರ ಕೃಷಿಕ ರವೀಂದ್ರ ಐತಾಳ್, ಪುತ್ರ ಪ್ರಜ್ವಲ್ ಐತಾಳ್, ರಾಘವೇಂದ್ರ ಮಯ್ಯ ಹಾಲಾಡಿ ಮತ್ತಿತರರು ಇದ್ದರು. ಕೆ.ರಾಜಾರಾಮ್ ಐತಾಳ್ ನಿರ್ವಹಿಸಿದರು. ಶ್ರೀಧರ ಶಾಸ್ತ್ರಿ ವಂದಿಸಿದರು. ನಂತರ ಪಾವಣ್ಣ ವಿಜಯ ಗುಣಸುಂದರಿ ಪ್ರದರ್ಶನಗೊಂಡಿತು.

ಕೃಷಿಕರಲ್ಲಿ ಮಂದಹಾಸ ಮೂಡಿಸಿದೆ ಸುಮಾರು 82.5 ಸೆಂಟ್ಸ್ ವಿಸ್ತೀರ್ಣದ ಕೆರೆಯ ನವೀಕರಣಕ್ಕೆ ಸಿದ್ಧತೆ | 200 ಎಕ್ರೆ ಕೃಷಿಭೂಮಿಗೆ ನೀರುಣಿಸುವ ಜಲಮೂಲ

ಶ್ರೀ ಕ್ಷೇತ್ರ ಧರ್ಮಸ್ಥಳ ಯೋಜನೆಯಿಂದ ಮಣೂರು ಒಡಗಿನ ನಂದಿಕೇಶ್ವರ ಕೆರೆಗೆ ಕಾಯಕಲ್ಪ

ಕೋಟ: ಕೋಟ ಗ್ರಾಮ ಪಂಚಾಯತ್ ವ್ಯಾಪ್ತಿಯ ಮಣೂರು ದೇವಸ ಒಡಗಿನ ನಂದಿಕೇಶ್ವರ ದೈವಸ್ಥಾನದ ಕೆರೆ ಅಭಿವೃದ್ಧಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಶುಕ್ರವಾರ ಚಾಲನೆ ನೀಡಲಾಗಿದೆ. ಸುಮಾರು 200 ಎಕ್ರೆ ಅಧಿಕ ವಿಸ್ತೀರ್ಣದ ಕೃಷಿ ಭೂಭಾಗ ಹೊಂದಿದ ಈ ಪ್ರದೇಶದಲ್ಲಿ ಬಹುದೊಡ್ಡ ಕೆರೆಯಾಗಿ ಗುರುತಿಸಿಕೊಂಡ ನಂದಿಕೇಶ್ವರ ದೈವಸ್ಥಾನದ ಕೆರೆ ಮಾತ್ರ ಹೂಳು ಮತ್ತು ಗಿಡಗಂಟಿಗಳಿಂದ ಹಾಸುಹೋಗಿದೆ.

ಈ ಬಗ್ಗೆ ಇಲ್ಲಿನ ಗ್ರಾಮಸ್ಥರು ಕೆಲವರ್ಷಗಳ ಹಿಂದೆ ಮರುಜೀವ ನೀಡುವ ಸಲವಾಗಿ ಹೂಳು ಮತ್ತು ಗಿಡ ಗಂಟೆಗಳನ್ನು ತೆರವುಗೊಳಿಸಿದ್ದರು. ಆದರೆ ಈಗ ಪುನಃ ಹೂಳು ತುಂಬಿಕೊಂಡಿದ್ದು, ಈಗ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹೊಸ ಅಧ್ಯಾಯಕ್ಕೆ ಮುನ್ನುಡಿ ಬರೆಯಲಿದೆ.



ಸುಮಾರು 82.5 ಸೆಂಟ್ಸ್ ವಿಸ್ತೀರ್ಣದ ಈ ಕೆರೆ ಗ್ರಾಮದ ಅಂತರ್ಜಲ ವೃದ್ಧಿಗೆ ಪೂರಕ ವಾತಾವರಣ ಕಲ್ಪಿಸಿದ್ದು, ಕೆರೆ ಪುನರ್ ನವೀಕರಣದ ಶಕೆ ಗ್ರಾಮದ ಕೃಷಿಕರಲ್ಲಿ ಮಂದಹಾಸ ಮನೆ ಮಾಡಿದೆ.

ಕೆರೆ ಸಮಿತಿ ಮೂಲಕ ಶ್ರೀ ಕ್ಷೇತ್ರ ಆಣಿ

ಕೆರೆ ಅಭಿವೃದ್ಧಿಗೆ ಸಮೀಪದಲ್ಲಿರುವ ದೈವಸ್ಥಾನದ ಪ್ರಮುಖರಾದ ಜಯರಾಮ ಶೆಟ್ಟಿ ಅವರನ್ನು ಅಧ್ಯಕ್ಷರಾಗಿ ನೇಮಿಸಿದ್ದು, ಸ್ಥಳೀಯ ಗ್ರಾಮಸ್ಥರ ಸಹಭಾಗಿತ್ವದಡಿ ಹೂಳು ಮುಕ್ತ ಸುಸಜ್ಜಿತ ಕೆರೆಗೆ ಪಣತೊಟ್ಟಿದ್ದಾರೆ.

> **ಇನ್ನಷ್ಟು ಅಭಿವೃದ್ಧಿ**
> ನಮ್ಮ ದೈವಸ್ಥಾನದ ಈ ಕೆರೆಯನ್ನು ಮುಂದಿನ ದಿಗಳಲ್ಲಿ ದಾನಿಗಳ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳದ ನೆರವಿನೊಂದಿಗೆ ಮತ್ತಷ್ಟು ಅಭಿವೃದ್ಧಿಗೊಳ್ಳಲಿದೆ.
> • **ಮಹೇಶ್ ಶೆಟ್ಟಿ**
> ನಿರ್ದೇಶಕ, ಕೋಟ ಸಿಎ ಬ್ಯಾಂಕ್

ಕೆರೆ ಉಳಿಸಿಕೊಳ್ಳಲು ಗ್ರಾಮಸ್ಥರ ಸಹಕಾರ

ಜಿಲ್ಲೆಯ ಹೆಚ್ಚಿನ ಭಾಗಗಳಲ್ಲಿ ಕೆರೆಗಳು ನಶಿಸಿಹೋಗುತ್ತಿರುವ ಕಾಲಘಟ್ಟದಲ್ಲಿ ಇಲ್ಲಿನ ಮಣೂರು ಭಾಗದ ಗ್ರಾಮಸ್ಥರು ಕೆರೆ ಅಭಿವೃದ್ಧಿಗೊಳಿಸಲು ಶ್ರೀ ಕ್ಷೇತ್ರದೊಂದಿಗೆ ಕೈಜೋಡಿಸಲು ಅಣಿಯಾಗಿದ್ದಾರೆ.

ನಮ್ಮೂರು ನಮ್ಮ ಕೆರೆಗೆ ಚಾಲನೆ

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಇವರ ನೇತೃತ್ವದಲ್ಲಿ ಕೋಟ ಗ್ರಾಮಪಂಚಾಯತ್, ಕೆರೆ ಅಭಿವೃದ್ಧಿ ಸಮಿತಿಯ ಸಹಭಾಗಿತ್ವದಡಿ ನಮ್ಮೂರು ನಮ್ಮ ಕೆರೆ ಯೋಜನೆಗೆ ಶುಕ್ರವಾರ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಚಾಲನೆ ನೀಡಿ ಮಾತನಾಡಿದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ನಾಗರಾಜ್ ಶೆಟ್ಟಿ ನಮ್ಮೂರು ನಮ್ಮ ಕೆರೆ ಶ್ರೀಕ್ಷೇತ್ರದ ಖಾವಂದರ ಕನಸಿನ ಯೋಜನೆಯಾಗಿದ್ದು ಕಳೆದ ಹತ್ತು ವರ್ಷಗಳಿಂದ ರಾಜ್ಯಾದ್ಯಂತ ಬರಗಾಲದ ಸನ್ನಿವೇಶ ನೀರಿನ ಮಹತ್ವಗಳನ್ನರಿತು ಈ ಯೋಜನೆ ಜಾರಿಗೊಳಿಸಿದ್ದಾರೆ. ಈಗಾಗಲೇ 980ಕ್ಕೂಮಿಕ್ಕಿ ಕೆರೆಗಳಿಗೆ ಜೀವ ತುಂಬಲಾಗಿದೆ ಎಂದರು.

ದೈವಸ್ಥಾನದ ಪಾತ್ರಿಗಳಾದ ಪ್ರಕಾಶ್ ಶೆಟ್ಟಿ, ಕೋಟ ಸಿ ಎ ಬ್ಯಾಂಕ್ ಅಧ್ಯಕ್ಷ ಡಾ.ಕೃಷ್ಣ ಕಾಂಚನ್, ನಿರ್ದೇಶಕರಾದ ತಿಮ್ಮ ಪೂಜಾರಿ, ಮಹೇಶ್ ಶೆಟ್ಟಿ ಬ್ಯಾಂಕ್ ಸಿಇಒ ಶರತ್ ಕುಮಾರ್ ಶೆಟ್ಟಿ, ಕೆರೆ ಸಮಿತಿಯ ಅಧ್ಯಕ್ಷ ಜಯರಾಮ ಶೆಟ್ಟಿ ಉಪಾಧ್ಯಕ್ಷ ಸರ್ವೋತ್ತಮ ಹೆಬ್ಬಾರ್, ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ರಮೇಶ್ ಪಿ.ಕೆ., ಕೋಟ ಗ್ರಾಮ ಪಂಚಾಯತ್ ಕಾರ್ಯದರ್ಶಿ ಜಲಜಾಕ್ಷಿ,ಗ್ರಾಮಾಭಿವೃದ್ಧಿ ಯೋಜನೆಯ ಮಣೂರು ಒಕ್ಕೂಟದ ಅಧ್ಯಕ್ಷ ದಿನೇಶ್ ಆಚಾರ್, ಕಸಾಪ ಜಿಲ್ಲಾಧ್ಯಕ್ಷ ನೀಲಾವರ ಸುರೇಂದ್ರ ಅಡಿಗ, ತಾಲೂಕು ಜನಜಾಗೃತಿ ಸಮಿತಿ ಅಧ್ಯಕ್ಷ ಸುಧಾಕರ ಶೆಟ್ಟಿ ಇದ್ದರು. ನಾಗೇಶ್ ಸ್ವಾಗತಿಸಿದರು. ರಾಘವೇಂದ್ರ ನಿರೂಪಿಸಿದರು.

ನಿರಂತರ ಸುದ್ದಿ ಅಪ್ಡೇಟ್‌ಗಾಗಿ
Google Lens ನಲ್ಲಿ
ಈ QRಕೋಡ್ ಸ್ಕ್ಯಾನ್ ಮಾಡಿ
WhatsApp ಗ್ರೂಪ್ ಇಂದೇ ಸೇರಿ!

ನಮ್ಮ ಕಾಸರಗೋಡು

ಹೊಸದಿಗಂತ ಸಂಗಮ 5

ಭಾನುವಾರ 12, ಏಪ್ರಿಲ್ 2026 | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಪುಟ ಸಂಖ್ಯೆ

ಸುತ್ತ ಮುತ್ತ

ಇಂದು ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರದಲ್ಲಿ ಶ್ರಮದಾನ

ಕಾಸರಗೋಡು: ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರದಲ್ಲಿ ಏ.18ರಿಂದ 23ರ ವರೆಗೆ ಜರಗಲಿರುವ ಅಷ್ಟಬಂಧ ಬ್ರಹ್ಮಕಲಶೋತ್ಸವದ ಪ್ರಯುಕ್ತ ಶ್ರಮದಾನವು ಏ.12ರಂದು ಬೆಳಗ್ಗೆ 9ರಿಂದ ನಡೆಯಲಿದೆ. ಶ್ರಮದಾನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಸಂಘಟಕರು ವಿನಂತಿಸಿದ್ದಾರೆ.

ಕ್ರಿಕೆಟ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ರಹಾನ್

ಕಾಸರಗೋಡು: ಆಲ್ ರೌಂಡ್ ಎಕ್ಸಲೆನ್ಸ್ ಹೊಂದಿರುವ ಕ್ರಿಕೆಟ್ ಆಟಗಾರ ರಹಾನ್ ಅವರು



ಸ್ಪೋರ್ಟ್ಸ್ ಲೈನ್ ಉತ್ತರ ವಲಯ ಕ್ರಿಕೆಟ್ ತಂಡದ ಅಂಡರ್-19 ಕ್ರಿಕೆಟ್ ಚಾಂಪಿಯನ್‌ಶಿಪ್‌ನಲ್ಲಿ ಬ್ಯಾಟಿಂಗ್ ಮತ್ತು ಬಾಲಿಂಗ್ ಎರಡರಲ್ಲೂ ಅದ್ಭುತ ಪ್ರದರ್ಶನ ನೀಡಿ ಉತ್ತರ ವಲಯ ಕ್ರಿಕೆಟ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಕಳೆದ ವರ್ಷ ಕಣ್ಣೂರು ವಿರುದ್ಧ ಶತಕ ಗಳಿಸಿದ್ದ ರಹಾನ್, ಈ ಬಾರಿಯೂ ಕಣ್ಣೂರು ವಿರುದ್ಧ ಶತಕ ದಾಖಲಿಸಿದ್ದಾರೆ. ಐದು ಸಿಕ್ಸರ್‌ಗಳು ಮತ್ತು ಎಂಟು ಬೌಂಡರಿಗಳೊಂದಿಗೆ 84 ರನ್ ಗಳಿಸಿದ್ದಾರೆ. ರಹಾನ್ ತಮ್ಮ ಬೌಲಿಂಗ್ ಮೂಲಕ ಇಡೀ ಪಂದ್ಯಾವಳಿಯಲ್ಲಿ 12 ವಿಕೆಟ್‌ಗಳನ್ನು ಪಡೆದರು. ಮಲಪ್ಪುರಂ, ಕೋಝಿಕ್ಕೋಡ್ ಮತ್ತು ವಯನಾಡು ವಿರುದ್ಧ ರಹಾನ್ ಉತ್ತಮ ಆಲ್ ರೌಂಡ್ ಪ್ರದರ್ಶನ ನೀಡಿದ್ದಾರೆ. ಏ.8ರಂದು ಕಾಸರಗೋಡು ಸಮೀಪದ ಮಾನ್ಯ ಕೆಸಿಎ ಕ್ರೀಡಾಂಗಣದಲ್ಲಿ ನಡೆದ ಅಂಡರ್-23 ಅಭ್ಯಾಸ ಪಂದ್ಯದಲ್ಲಿ ರಹಾನ್ 101 ಎಸೆತಗಳಲ್ಲಿ 151 ರನ್ ಪಡೆದಿದ್ದಾರೆ. ಈ ವರ್ಷದಲ್ಲಿ ಇದು ರಹಾನ್ ಅವರ ಐದನೇ ಶತಕವಾಗಿದೆ. ಅಲ್ಲದೆ ಅವರ ಆಟದಲ್ಲಿ 151 ರನ್‌ಗಳು, 15 ಬೌಂಡರಿಗಳು ಮತ್ತು 8 ಸಿಕ್ಸರ್‌ಗಳನ್ನು ಒಳಗೊಂಡಿತ್ತು. ರಹಾನ್ ಜೊತೆಗೆ ಮೊಹಮ್ಮದ್ ಫಜಲ್ ಕೈಸ್ ಕೂಡಾ ಉತ್ತರ ವಲಯ ತಂಡದಲ್ಲಿ ಸ್ಥಾನ ದಾಖಲಿಸಿಕೊಂಡಿದ್ದಾರೆ.

ಚುನಾವಣಾ ಪ್ರಕ್ರಿಯೆ ಹಾಳು ಮಾಡಲು ಕಾಂಗ್ರೆಸ್ ಷಡ್ಯಂತ್ರ

ಕಾಸರಗೋಡು: ಉದುಮದ ಮತಗಟ್ಟೆಯ ಯುಡಿಎಫ್ ಏಜೆಂಟ್, ವಕೀಲ ಬಿ.ಎಂ.ಜಮಾಲ್ ಕ್ಯಾಮರಾ ಹೊಂದಿರುವ ಕನ್ನಡಕ ಹಾಕಿಕೊಂಡು ಬಂದಿದ್ದು, ಇದು ವಿಧಾನಸಭಾ ಚುನಾವಣೆಯನ್ನು ಹಾಳುಮಾಡಲು ಕಾಂಗ್ರೆಸ್‌ನ ಷಡ್ಯಂತ್ರವಾಗಿತ್ತು ಎಂದು ಉದುಮ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಮನುಲಾಲ್ ಮೇಲತ್ ತಿಳಿಸಿದ್ದಾರೆ. ಜಿಲ್ಲೆ ಪ್ರಮುಖ ವಕೀಲರಾದ ಬಿ.ಎಂ.ಜಮಾಲ್ ಚುನಾವಣಾ ಗೌಪ್ಯತೆ ನಾಶಪಡಿಸಲು ಯತ್ನಿಸಿ ದ್ದಾರೆ. ಯಾರಿಗೆ ಮತ ಚಲಾಯಿಸಬೇಕೆಂದು ನಿರ್ಧರಿಸುವುದು ಮತದಾರರ ಹಕ್ಕು ಎಂದು ಬಿ.ಎಂ. ಜಮಾಲ್‌ಗೆ ಗೊತ್ತಿರಬೇಕು. ಈ ಘಟನೆ ಹಿಂದೆ ಬಹುದೊಡ್ಡ ಪಿತೂರಿ ಅಡಗಿದೆ ಎಂದ ಅವರು, ಈ ಬಗ್ಗೆ ಸಮಗ್ರ ತನಿಖೆ ನಡೆಸಬೇಕೆಂದು ಆಗ್ರಹಿಸಿ ದ್ದಾರೆ. ಈ ಆರೋಪಿಯನ್ನು ಮುನ್ನೆಚ್ಚರಿಕೆ ಕ್ರಮದ ಅಂಗವಾಗಿ ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಗೊ ಳಿಸಿರುವುದು ಅತ್ಯಂತ ದುರದೃಷ್ಟಕರವಾಗಿದೆ. ಈ ಬಗ್ಗೆ ಚುನಾವಣಾ ಆಯೋಗದ ಗಮನ ಸೆಳೆಯ ಲಾಗುವುದೆಂದು ಮನುಲಾಲ್ ಮೇಲತ್ ಹೇಳಿದ್ದಾರೆ.

ಕುಂಟಾರು ಶ್ರೀ ಮಹಾ ವಿಷ್ಣುಮೂರ್ತಿ ಕ್ಷೇತ್ರದಲ್ಲಿ ಒತ್ತೆಕೋಲ ಮಹೋತ್ಸವ

ಮುಳ್ಳೇರಿಯ: ಶ್ರೀ ರಕ್ತೇಶ್ವರಿ ದೈವದ ನೇಮ ಮತ್ತು ಶ್ರೀ ವಿಷ್ಣುಮೂರ್ತಿ ದೈವದ ಒತ್ತೆಕೋಲ ಮಹೋತ್ಸವವು ಕುಂಟಾರು ಶ್ರೀ ಮಹಾವಿಷ್ಣುಮೂರ್ತಿ ಕ್ಷೇತ್ರದ ಪರಿಸರದಲ್ಲಿ ಏ.18, 19 ಮತ್ತು 20ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ.


ಏ.18ರಂದು ಶ್ರೀ ದೈವದ ಕೊಡುವಿಕೆ, ಏ.19ರಂದು ಬೆಳಗ್ಗೆ 10ಕ್ಕೆ ಶ್ರೀ ರಕ್ತೇಶ್ವರಿ ದೈವದ ನೇಮ, ಸಂಜೆ 6.30ಕ್ಕೆ ಅಂಗನವಾಡಿ ಮಕ್ಕಳು ಮತ್ತು ಸ್ಥಳೀಯರಿಂದ ನೃತ್ಯ ವೈವಿಧ್ಯ, ರಾತ್ರಿ 7.30ಕ್ಕೆ ಶ್ರೀ ವಿಷ್ಣುಮೂರ್ತಿ ದೈವದ ಭಂಡಾರ ಆಗಮನ, 8ಗಂಟೆಗೆ ತೊಡಂಲ್, 8.30ಕ್ಕೆ ಮೇಲೇರಿಗೆ ಅಗ್ನಿಸ್ಪರ್ಶ, ಅನ್ನದಾನ, 11ರಿಂದ ಶ್ರೀ ವಿಷ್ಣುಮೂರ್ತಿ ದೈವದ ಕುಳಿಚ್ಚಾಟ್ಟ ನಡೆಯಲಿದೆ.

ಏ.20ರಂದು ಪ್ರಾತಃಕಾಲ 4ರಿಂದ ಶ್ರೀ ವಿಷ್ಣುಮೂರ್ತಿ ದೈವದ ಕೆಂಡಸೇವೆ, ಪ್ರಸಾದ ವಿತರಣೆ, ಭಂಡಾರ ನಿರ್ಗಮನ ನೆರವೇರಲಿದೆ.

ವಿದ್ಯುತ್ ಸಂಪರ್ಕಕ್ಕೆ ಎದುರು ನೋಡುತ್ತಿದೆ ಬಾವಿಕ್ಕೆರೆಯಲ್ಲಿರುವ ಪಂಪಿಂಗ್ ಸ್ಟೇಷನ್

ಕುಡಿಯುವ ನೀರು ಪೂರೈಕೆಗೆ ಇನ್ನೂ ಕೂಡಿ ಬಂದಿಲ್ಲ ಕಾಲ!





ಕಾಸರಗೋಡು: ಕಾಸರಗೋಡು ನಗರಸಭೆ ಹಾಗೂ ಪರಿಸರದ ಗ್ರಾಮ ಪಂಚಾಯತ್‌ಗಳಿಗೆ ಕುಡಿಯುವ ನೀರು ಪೂರೈಸುವ ಯೋಜನೆಯಾದ ಮುಳಿಯಾರು ಬಾವಿಕ್ಕೆರೆಯಲ್ಲಿ ನೂತನವಾಗಿ ಸ್ಥಾಪಿಸಲಾದ ಪಂಪಿಂಗ್ ಸ್ಟೇಷನ್‌ಗೆ ವಿದ್ಯುತ್ ಸಂಪರ್ಕವಿಲ್ಲದೆ ನೀರು ಪೂರೈಕೆಗೆ ಸಂಕಷ್ಟ ಎದುರಾಗಿದೆ.

ಹೊಸ ಸ್ಟೇಷನ್ ಇದ್ದರೂ ವಿದ್ಯುತ್ ಸಮಸ್ಯೆಯ ಕಾರಣದಿಂದ ಹಳೆಯ ಪಂಪಿಂಗ್ ಸ್ಟೇಷನ್ ಮೂಲಕವೇ ನೀರನ್ನು ಪೂರೈಸಲಾಗುತ್ತಿದೆ.

ಮುಂದಿನ ಪ್ರಕ್ರಿಯೆ ನಡೆದೇ ಇಲ್ಲ

ಕೋಟ್ಯಂತರ ರೂಪಾಯಿ ವಿನಿಯೋಗಿಸಿ ಪಂಪಿಂಗ್ ಸ್ಟೇಷನ್‌ನ್ನು ನಿರ್ಮಿಸಿ ವರ್ಷಗಳು ಕಳೆದರೂ ಮುಂದಿನ ಪ್ರಕ್ರಿಯೆ ಮಾತ್ರ ನಡೆದೇ ಇಲ್ಲ. ಈ ಯೋಜನೆಗೆ ಭೂಗರ್ಭ ಕೇಬಲ್ ಮೂಲಕ ವಿದ್ಯುತ್ ಸಾಗಿಸಬೇಕಿದೆ. ಹೊಸದಾಗಿ ನಿರ್ಮಿಸಿದ ಪಂಪಿಂಗ್ ಸ್ಟೇಷನ್‌ನ ಎರಡು ಮೋಟಾರುಗಳು ಏಕ ಸಮಯದಲ್ಲಿ ಕಾರ್ಯಗತಗೊಂಡರೆ ಪ್ರತಿದಿನ 55 ದಶಲಕ್ಷ ಲೀಟರ್ ನೀರು ಬಾವಿಕ್ಕೆರೆಯಿಂದ ಶುದ್ಧೀಕರಣ ಘಟಕಕ್ಕೆ ಸರಬರಾಜು ಮಾಡಲು ಸಾಧ್ಯವಿದೆ. ಆದರೆ ಹೊಸ ಪಂಪಿಂಗ್ ಸ್ಟೇಷನ್‌ಗೆ ವಿದ್ಯುತ್ ಸಂಪರ್ಕ ಒದಗಿಸದ ಹಿನ್ನೆಲೆ ಇದು ಅಸಾಧ್ಯವಾಗಿದೆ.

ಸಾಮಗ್ರಿ ಹಾನಿಗೀಡಾಗಿವೆ

ಪ್ರಸ್ತುತ ಪ್ರತಿದಿನ 25 ದಶಲಕ್ಷ ಲೀಟರ್ ನೀರು ಮುಳಿಯಾರು ಬಾವಿಕ್ಕೆರೆ ತೂಗುಸೇತುವೆ ಸಮೀಪದ ಹಳೆಯ ಪಂಪಿಂಗ್ ಸ್ಟೇಷನ್ ಮೂಲಕ ಪೂರೈಕೆಯಾಗುತ್ತಿದೆ. ಹಳೆಯ ಪಂಪಿಂಗ್ ಸ್ಟೇಷನ್‌ನಿಂದ 300 ಮೀಟರ್‌ನಷ್ಟು ದೂರದಲ್ಲಿ ನೂತನ ಪಂಪಿಂಗ್ ಸ್ಟೇಷನ್ ನಿರ್ಮಿಸಲಾಗಿದೆ. ಕೋಟ್ಯಂತರ ರೂಪಾಯಿ ವಿನಿಯೋಗಿಸಿ ನಿರ್ಮಿಸಿದ ಶುದ್ಧೀಕರಣ ಘಟಕ ಕಾರ್ಯಾರಂಭಗೊಂಡು ನಾಲ್ಕು ವರ್ಷ ಸಂದರೂ, ಸಂಪೂರ್ಣ ಉಪಯೋಗಿಸಲು ಸಾಧ್ಯವಾಗಿಲ್ಲ, ಘಟಕದ ಹಲವು ಉಪಕರಣಗಳು ಬಳಕೆಯಾಗದ ಹಿನ್ನೆಲೆ ಲಕ್ಷಾಂತರ ರೂಪಾಯಿ ಸಾಮಗ್ರಿಗಳು ಹಾನಿಗೀಡಾಗುತ್ತಿವೆ.

ವಿದ್ಯಾನಗರದ ಜಿಲ್ಲಾಧಿಕಾರಿ ಕಚೇರಿ ಜಂಕ್ಷನ್‌ನಿಂದ ಚೆರ್ಕಳ ವರೆಗೆ ಸರ್ವೀಸ್ ರಸ್ತೆಗೆ ಹೊಂದಿಕೊಂಡಿರುವ ಚರಂಡಿಯ ಸಮೀಪದಿಂದ ಭೂಗರ್ಭ ಕೇಬಲ್ ಹಾದುಹೋಗುತ್ತಿದೆ. ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕೆ ಸಂಬಂಧಪಟ್ಟು ಹಲವೆಡೆ ಯಂತ್ರಗಳನ್ನು ಉಪಯೋಗಿಸಿ ಹೊಂಡಗಳನ್ನು ಅಗೆಯುವುದು, ಕುಡಿಯುವ ನೀರು ಪೈಪ್‌ಲೈನ್ ಸ್ಥಾಪಿಸಿದ ಹೊಂಡಗಳನ್ನು ತೋಡುವುದು ಇತ್ಯಾದಿ ವಿದ್ಯುತ್ ಕೇಬಲ್‌ಗಳಿಗೆ ಹಾನಿಯುಂಟು ಮಾಡುತ್ತಿದೆ ಎಂದು ಕೆಎಸ್‌ಇಬಿ ಅಧಿಕಾರಿಗಳು ತಿಳಿಸಿದ್ದಾರೆ.

ಭೂಗರ್ಭ ಕೇಬಲ್ ಸ್ಥಾಪಿಸಬೇಕು

ವಿದ್ಯಾನಗರದಿಂದ ಬಾವಿಕ್ಕೆರೆಗೆ ಭೂಗರ್ಭ ಕೇಬಲ್ ಮೂಲಕ ಯಾವುದೇ ಅಡಚಣೆಯಿಲ್ಲದೆ ವಿದ್ಯುತ್ ಪೂರೈಕೆ ಮಾಡಿದರಷ್ಟೇ ನೂತನ ಮತ್ತು ಹಳೆಯ ಪಂಪಿಂಗ್ ಸ್ಟೇಷನ್‌ಗಳ ಕಾರ್ಯಾಚರಣೆಯನ್ನು ಕಾರ್ಯದಕ್ಷಗೊಳಿಸಲು ಸಾಧ್ಯವಿದೆ. ಆದ್ದರಿಂದ ಕಾಸರಗೋಡು ನಗರ ಪರಿಸ ರದ ಗ್ರಾ.ಪಂ.ಗಳ ಕುಡಿಯುವ ನೀರು ಯೋಜನೆ ಸಮರ್ಪಕಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಗಮನಹರಿ ಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಕಡತದಲ್ಲೇ ಬಾಕಿ

ಕೋಟ್ಯಂತರ ರೂ. ವಿನಿಯೋಗಿಸಿಪಂಪಿಂಗ್ ಸ್ಟೇಷನ್ ನಿರ್ಮಿಸಿ ವರ್ಷಗಳು ಕಳೆದರೂ ಮುಂದಿನ ಪ್ರಕ್ರಿಯೆ ಕಡತದಲ್ಲಿ ಉಳಿದುಕೊಂಡಿವೆ. ಈ ಯೋಜನೆಗೆ ಭೂಗರ್ಭ ಕೇಬಲ್ ಮೂಲಕ ವಿದ್ಯುತ್ ಸಾಗಿಸ ಬೇಕಿದೆ. ಹೊಸದಾಗಿ ನಿರ್ಮಿಸಿದ ಪಂಪಿಂಗ್ ಸ್ಟೇಷನ್‌ನ ಎರಡು ಮೋಟಾರು ಗಳು ಏಕ ಸಮಯದಲ್ಲಿ ಕಾರ್ಯಗತಗೊಂ ಡರೆ ಪ್ರತಿದಿನ 55 ದಶ ಲಕ್ಷ ಲೀ.ನೀರು ಬಾವಿಕ್ಕೆರೆಯಿಂದ ಶುದ್ಧೀಕರಣ ಘಟಕಕ್ಕೆ ಸರಬರಾಜು ಮಾಡಲು ಸಾಧ್ಯವಿದೆ. ಆದರೆ ಹೊಸ ಪಂಪಿಂಗ್ ಸ್ಟೇಷನ್‌ಗೆ ವಿದ್ಯುತ್ ಸಂಪರ್ಕ ಒದಗಿಸದ ಹಿನ್ನೆಲೆ ಅಸಾಧ್ಯವಾಗಿದೆ.

ಕುರುಮುಜ್ಜಿಕಟ್ಟೆ ಶ್ರೀ ಧರ್ಮಶಾಸ್ತಾ ಭಜನಾ ಮಂದಿರದಲ್ಲಿ ಶ್ರೀಮದ್ ಭಾಗವತ ಸಪ್ತಾಹ



ಬದಿಯಡ್ಕ: ಕುರುಮುಜ್ಜಿಕಟ್ಟೆ ಶ್ರೀ ಧರ್ಮಶಾಸ್ತಾ ಭಜನಾ ಮಂದಿರದಲ್ಲಿ ಜರಗುತ್ತಿರುವ ಶ್ರೀಮದ್ ಭಾಗವತ ಸಪ್ತಾಹದ ಅಂಗವಾಗಿ ದ್ವಿತೀಯ ದಿನ ಶನಿವಾರ ಬೆಳಗ್ಗೆ ಯಜ್ಞಾಚಾರ್ಯ ಬ್ರಹ್ಮಶ್ರೀ ಶಂಕರನ್ ನಂಬೂದಿರಿ ಚೇದಮಂಗಲಂ ಪಯ್ಯನ್ನೂರು ಪ್ರವಚನ ನಡೆಸಿಕೊಟ್ಟರು.

ಧ್ಯಾನದ ಮೂಲಕ ಭಗವಂತನ ಒಲಿಸಿಕೊಳ್ಳಬೇಕು


ಮನಸ್ಸು ವ್ಯಾಕುಲತೆಯಲ್ಲಿರುವಾಗ ಯಾವುದೇ ದಿಟ್ಟ ನಿರ್ಧಾರ ತೆಗೆದುಕೊಳ್ಳಬಾರದು ಎಂದು ತಿಳಿಸಿದ ಅವರು, ಇಂತಹ ಸಂದರ್ಭಗಳಲ್ಲಿ ಮನಸ್ಸಿಗೆ ಸಮಾಧಾನವನ್ನು ತಂದುಕೊಳ್ಳುವತ್ತ ಚಿಂತಿಸಬೇಕು. ಶಿವನೆಂದರೆ ಮಂಗಳ ಸ್ವರೂಪಿ. ಧ್ಯಾನದ ಮೂಲಕ ಭಗವಂತನನ್ನು ಒಲಿಸಿಕೊಂಡು ಶಾಂತಿ ಸಮಾಧಾನ ತಂದುಕೊಳ್ಳಬೇಕು. ತಂದೆ ಎಂಬ ಭಾವಕ್ಕೆ ಶ್ರೇಷ್ಠತೆಯಿದೆ ಎಂದರು. ಕಪಿಲಾವತಾರ, ನರನಾರಾಯಣ ಅವತಾರ, ದಕ್ಷಯಾಗ, ಧ್ರುವಚರಿತೆ, ಪುರಂಜನೋಪಖ್ಯಾನ, ಋಷಭಾವತಾರ, ಭಾರತ ಕಥೆ, ಭದ್ರಕಾಳಿ ಆವಿರ್ಭಾವ ಕಥಾಭಾಗವನ್ನು ಆಯ್ದುಕೊಂಡು ಪಾರಾಯಣ ಪ್ರವಚನ ನಡೆಯಿತು.

ಪ್ರಾತಃಕಾಲ ಗಣಪತಿ ಹೋಮ ನಡೆಯಿತು. ಗೋಸಾಡ ಮಹಿಷಮರ್ಧಿನಿ ಮಾತೃ ಸಮಿತಿ ಅಧ್ಯಕ್ಷೆ ಲಲಿತಾ ಗೋಸಾಡ ಅವರಿಂದ ದೀಪ ಪ್ರಜ್ವಲನೆಯೊಂದಿಗೆ ಸಾಮೂಹಿಕ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ ನಡೆಯಿತು.

ಮೇ 16 ರಂದು ಸಂಪನ್ನ

ತೃತೀಯ ದಿನವಾದ ಏ.12ರಂದು ಭರತ ಚರಿತ್ರೆ, ಭೂಗೋಳವರ್ಣನೆ, ಅಜಾಮಿಳ ಮೋಕ್ಷ, ವೃತ್ರಾಸುರ ಚರಿತೆ, ಚಿತ್ರಕೇತು ಉಪಖ್ಯಾನ, ಪ್ರಹ್ಲಾದ ಚರಿತೆ, ನರಸಿಂಹಾವತಾರ ಕಥಾಭಾಗದಲ್ಲಿ ಪಾರಾಯಣ ಪ್ರವಚನ ನಡೆಯಲಿರುವುದು. ಗುರುವಾರ ಪ್ರಾರಂಭಗೊಂಡ ಕಾರ್ಯಕ್ರಮ ಮೇ 16ರಂದು ಸಂಪನ್ನವಾಗಲಿದೆ.

'ವಿಷು' ಹಬ್ಬವನ್ನು ಸ್ವಾಗತಿಸಲು ಸಜ್ಜಾಗಿವೆ ಕೊನ್ನೆಮರಗಳ ಹೂವುಗಳು



ಕಾಸರಗೋಡು: ಸುಡು ಬೇಸಿಗೆಯಲ್ಲೂ ಬಾಡದ ಹಳದಿ ಬಣ್ಣದೊಂದಿಗೆ ಕಾಸರಗೋಡು ಜಿಲ್ಲೆಯಾದ್ಯಂತ ವಿವಿಧ ರಸ್ತೆ ಬದಿಗಳಲ್ಲಿ ಹೂವುಬಿಟ್ಟ ಕೊನ್ನೆ ಮರಗಳು ಆಕರ್ಷಕವಾಗಿ ಕಂಡುಬರುತ್ತಿದ್ದು, ವಿಷು ಹಬ್ಬವನ್ನು ಸ್ವಾಗತಿಸಲು ಸಜ್ಜಾಗಿವೆ. ವಿವಿಧ ಪ್ರದೇಶಗಳಲ್ಲಿ ಹಾಗೂ ರಸ್ತೆ ಬದಿಗಳಲ್ಲಿ ಕೊನ್ನೆಮರಗಳು ಹೂವುಬಿಟ್ಟು ಮನೋಹರವಾಗಿ ಕಂಗೊಳಿಸುತ್ತಿವೆ.

ವಿಷುಕಣಿಗೆ ವಿಶೇಷವಾಗಿವೆ

ವಿಷುಕಣಿಗೆ ಕೊನ್ನೆಪುಷ್ಪವು ಅತ್ಯಂತ ವಿಶೇಷವಾಗಿದೆ. ಇತರ ಎಲ್ಲವನ್ನೂ ಸೇರಿಸಿ ವಿಷುಕಣಿ ತಯಾರಿಸಿದರೂ ಕೊನ್ನೆಪುಷ್ಪ ಇಲ್ಲದಿದ್ದರೆ ವಿಷುಕಣಿ ಪೂರ್ಣವಾಗದು ಎಂಬ ಪ್ರತೀತಿಯಿದೆ. ಕೊನ್ನೆಪುಷ್ಪವು ಕೇರಳ ರಾಜ್ಯದ ಅಧಿಕೃತ ಪುಷ್ಪವಾಗಿದೆ. ಔಷಧೀಯ ಗುಣಗಳಲ್ಲೂ ಕೊನ್ನೆಪುಷ್ಪ ಹೆಸರುವಾಸಿಯಾಗಿದೆ. ವಾತ, ಪಿತ್ತ, ಕಫ ಮುಂತಾದ ಶಾರೀರಿಕ ಸಮಸ್ಯೆಗಳನ್ನು ಪರಿಹರಿಸಲು ಕೊನ್ನೆಪುಷ್ಪಗಳನ್ನು ಬಳಸಲಾಗುತ್ತಿದೆ. ಮಲಬದ್ಧತೆಯನ್ನು ಶಮನಗೊಳಿಸಲು ಕೊನ್ನೆಹೂವುಗಳನ್ನು ಉಪಯೋಗಿಸಲಾಗುತ್ತಿದೆ.

ಚರ್ಮ ರೋಗಗಳಿಗೆ ಉತ್ತಮ

ಕೊನ್ನೆಮರದ ತೊಗಟನ್ನು ಬಳಸಿಕೊಂಡು ತಯಾರಿಸುವ ಕಷಾಯವು ಚರ್ಮ ರೋಗಗಳಿಗೆ ಉತ್ತಮ ಎಂದು ಆಯುರ್ವೇದದಲ್ಲಿ ಹೇಳಲಾಗಿದೆ. ಸೊಳ್ಳೆಗಳ ನಿರ್ಮೂಲನೆಗೆ ಉತ್ತಮ ನಾಶಕವೂ ಹೌದು. ಬೇಸಗೆಯಲ್ಲಿ ಕೊನ್ನೆಮರವು ತುಂಬಾ ಹೂವು ಬಿಡುವುದರಿಂದ ಅದನ್ನು ನೆರಳಿನ ಮರವಾಗಿ ಹಾಗೂ ಚಂದದ ಹೂವುಗಳು ಅರಳುವುದರಿಂದ ಅಲಂಕಾರ ವೃಕ್ಷವಾಗಿ ನೆಟ್ಟು ಬೆಳೆಸಲಾಗುತ್ತದೆ.

ವಿಷು ಹಬ್ಬಕ್ಕೆ ಹಣ ನೀಡಿ ಕೊನ್ನೆಹೂವುಗಳನ್ನು ಖರೀದಿಸಿ ವಿಷುಕಣಿಗೆ ಇಡಲಾಗುತ್ತದೆ. ಆರ್ಟಿಫಿಶಿಯಲ್ ಕಣಿ ಕೊನ್ನೆಹೂವು ಕೂಡಾ ಮಾರುಕಟ್ಟೆಯಲ್ಲಿ ವ್ಯಾಪಕವಾಗಿ ಲಭ್ಯವಿದೆ.

ಕೇರಳ ಕೇಂದ್ರೀಯ ವಿವಿ, ಕೋಟಕ್ಕಲ್ ವೈದ್ಯರತ್ನಂ ಕಾಲೇಜು ಮಧ್ಯೆ ಒಪ್ಪಂದ



ಕಾಸರಗೋಡು: ಪೆರಿಯದಲ್ಲಿರುವ ಕೇರಳ ಕೇಂದ್ರೀಯ ವಿಶ್ವವಿದ್ಯಾಲಯ ಮತ್ತು ಕೋಟಕ್ಕಲ್ ವೈದ್ಯರತ್ನಂ ಪಿ.ಎಸ್.ವಾರಿಯರ್ ಆಯುರ್ವೇದ ಕಾಲೇಜು ನಡುವೆ ಶೈಕ್ಷಣಿಕ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಸಹಕಾರಕ್ಕಾಗಿ ತಿಳುವಳಿಕೆ ಒಪ್ಪಂದಕ್ಕೆ (ಎಂಒಯು) ಸಹಿ ಹಾಕಲಾಗಿದೆ.

ವಿಶ್ವವಿದ್ಯಾಲಯದ ಪ್ರಭಾರ ಕುಲ ಸಚಿವ ಪ್ರೊ.ವಿ.ಬಿ.ಸಮೀರ್ ಕುಮಾರ್ ಮತ್ತು ಕಾಲೇಜು ಪ್ರಾಂಶುಪಾಲ ಡಾ.ಬಿಂದು ಕೆ.ಕೆ. ಅವರು ಈ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.

ಕೇರಳ ಕೇಂದ್ರೀಯ ವಿವಿ ಡೀನ್ ಅಕಾಡೆಮಿಕ್ ಪ್ರೊ.ಜೋಸೆಫ್ ಕೊಯಿಪಳ್ಳಿ, ಭೌತ ವಿಜ್ಞಾನ ವಿಭಾಗದ ಡೀನ್ ಪ್ರೊ.ಎ.ಶಕ್ತಿವೇಲ್, ಕಂಪ್ಯೂಟರ್ ವಿಜ್ಞಾನ ವಿಭಾಗದ ಮುಖ್ಯಸ್ಥ ಪ್ರೊ. ಆರ್.ರಾಜೇಶ್, ಪ್ರಾಧ್ಯಾಪಕರಾದ ಪ್ರೊ.ಜಯಸುಧಾ ಜೆ.ಎಸ್., ಡಾ.ವಿ. ಕುಮಾರ್, ಕಾಲೇಜು ಉಪ ಪ್ರಾಂಶುಪಾಲ ಡಾ.ಮನೋಜ್ ಕುಮಾರ್ ಎನ್., ಆಸ್ಪತ್ರೆ ಅಧಿಕಾರಿ ಡಾ.ಬೆನಿಲ್ ಬಿ.ಬಿ. ಮತ್ತಿತರರಿದ್ದರು.

ಶೈಕ್ಷಣಿಕ ಸಂಶೋಧನೆ

ಭೌತ ವಿಜ್ಞಾನ, ಸಾರ್ವಜನಿಕ ಆರೋಗ್ಯ, ಜೀವ ವಿಜ್ಞಾನ, ಸಾಮಾಜಿಕ ವಿಜ್ಞಾನ ಕ್ಷೇತ್ರಗಳಲ್ಲಿ ಎರಡೂ ಸಂಸ್ಥೆಗಳು ಜಂಟಿಯಾಗಿ ಶೈಕ್ಷಣಿಕ, ಸಂಶೋಧನಾ ಯೋಜನೆಗಳನ್ನು ಸಮರ್ಥವಾಗಿ ಕಾರ್ಯಗತಗೊಳಿಸಲು ನಿರ್ಧರಿಸಿವೆ.

ಏ.14ರಿಂದ 18ರವರೆಗೆ ಮಧೂರು ಶ್ರೀ ಸಿದ್ಧಿವಿನಾಯಕ ದೇವಳ ವಾರ್ಷಿಕ ಜಾತ್ರೆ



ಕಾಸರಗೋಡು: ಕುಂಬಳೆ ಸೀಮೆಯ ಅತೀ ಪುರಾತನ ಹಾಗೂ ಪ್ರಸಿದ್ಧ ಮಧೂರು ಶ್ರೀ ಮದನಂತೇಶ್ವರ ಸಿದ್ಧಿವಿನಾಯಕ ದೇವಸ್ಥಾನದಲ್ಲಿ ವಾರ್ಷಿಕ ಜಾತ್ರಾ ಮಹೋತ್ಸವವು ಏ.14ರಿಂದ 18ರ ವರೆಗೆ ಜರಗಲಿದೆ.

ಬೆಳಗ್ಗೆ 6.30ಕ್ಕೆ ವೇದ ಪಾರಾಯಣ, 9 ಗಂಟೆಗೆ ಧ್ವಜಾರೋಹಣ, 10ಕ್ಕೆ ಸಹಸ್ರ ಕುಂಭಾಭಿಷೇಕ, 12ಕ್ಕೆ ತುಲಾಭಾರ ಸೇವೆ, ಮಹಾಪೂಜೆ, ಸಂಜೆ 5 ಗಂಟೆಗೆ ತಾಯಂಬಕ, ದೀಪಾರಾಧನೆ, ರಾತ್ರಿ 9ಕ್ಕೆ ಉತ್ಸವ, ಬಲಿ ಜರಗಲಿದೆ. ಏ.15ರಂದು ಬೆಳಗ್ಗೆ 5ಕ್ಕೆ ವಿಶೇಷೋತ್ಸವ, ವಿಷು ಕಣಿಯ ವಿಶೇಷಬಲಿ, ರಾಜಾಂಗಣ ಪ್ರಸಾದ, ಪೂರ್ವಾಹ್ನ ಪಂಚವಾದ್ಯ, ಮಧ್ಯಾಹ್ನ 12 ಗಂಟೆಗೆ ತುಲಾಭಾರ ಸೇವೆ, ಸಂಜೆ 5ಕ್ಕೆ ತಾಯಂಬಕ, ವೀಣಾರಾಧನೆ, ರಾತ್ರಿ 9ಕ್ಕೆ ಉತ್ಸವ ಬಲಿ ನಡೆಯುವುದು.

ಏ.16ರಂದು ಬೆಳಗ್ಗೆ 5 ಗಂಟೆಗೆ ವಿಶೇಷೋತ್ಸವ, ಉತ್ಸವ ಬಲಿ. ಮಧ್ಯಾಹ್ನ ತುಲಾಭಾರ ಸೇವೆಗಳು, ಸಂಜೆ ತಾಯಂಬಕ, ದೀಪಾರಾಧನೆ, ರಾತ್ರಿ 8ಕ್ಕೆ ಮಹಾ ದೀಪೋತ್ಸವ, ಉತ್ಸವ ಬಲಿ, ಸೇವೆ ಸುತ್ತುಗಳು ನಡೆಯಲಿದೆ.

ಏ.17ರಂದು ಬೆಳಗ್ಗೆ 5ಕ್ಕೆ ಉತ್ಸವ ಬಲಿ, ವಿಶೇಷೋತ್ಸವ, ದರ್ಶನ ಬಲಿ, ಮಧ್ಯಾಹ್ನ ತುಲಾಭಾರ ಸೇವೆಗಳು, ಸಂಜೆ 5ಕ್ಕೆ ತಾಯಂಬಕ, ದೀಪಾರಾಧನೆ. ರಾತ್ರಿ 7ಗಂಟೆಗೆ ಉತ್ಸವ ಬಲಿ, ಮೂಲಸ್ಥಾನ ಉಳಿಯತ್ತಡ್ಕಕ್ಕೆ ಶ್ರೀ ದೇವರ ಘೋಷಯಾತ್ರೆ, ಶ್ರೀ ವೀರಮಾರುತಿ ವ್ಯಾಯಮ ಶಾಲೆ ಕಾಸರಗೋಡು ಇವರ ತಾಲೀಮು ಪ್ರದರ್ಶನ, 8.30ಕ್ಕೆ ಮೂಲಸ್ಥಾನ ಉಳಿಯತ್ತಡ್ಕದಲ್ಲಿ ಕಟ್ಟೆಪೂಜೆ. 10 ಗಂಟೆಗೆ ಮಧೂರು ಬೆಡಿಕಟ್ಟೆಯಲ್ಲಿ ಕಟ್ಟೆಪೂಜೆ, ಸಾಂಪ್ರದಾಯಿಕ ಸುಡುಮದ್ದು ಪ್ರದರ್ಶನ, ಶಯನ, ಕವಾಟ ಬಂದನ ನಡೆಯುವುದು.

ಏ.18ರಂದು ಬೆಳಿಗ್ಗೆ 7ಗಂಟೆಗೆ ಕವಾಟೋದ್ಘಾಟನೆ, ಮಧ್ಯಾಹ್ನ ತುಲಾಭಾರ ಸೇವೆಗಳು, ಸಂಜೆ 5 ಗಂಟೆಗೆ ತಾಯಂಬಕ, ದೀಪಾರಾಧನೆ, ರಾತ್ರಿ 9ಕ್ಕೆ ಉತ್ಸವ ಬಲಿ, 10 ಗಂಟೆಗೆ ವಿಶೇಷ ವಿದ್ಯುತ್ ದೀಪಾಲಂಕೃತಗೊಂಡ ಶ್ರೀ ಕ್ಷೇತ್ರದ ಆರಾಟು ಕೆರೆಯಲ್ಲಿ ಶ್ರೀ ದೇವರ ಅವಭೃತ ಸ್ನಾನ, ಬಟ್ಟಲು ಕಾಣಿಕೆ, ರಾಜಾಂಗಣ ಪ್ರಸಾದ, ಧ್ವಜಾವರೋಹಣ ನಡೆಯುವುದು. ಪ್ರತಿ ದಿನ ವಿವಿಧ ವೇದಿಕೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಜರಗಲಿದೆ.

ಪಾಲಕುನ್ನು ಕರಿಪ್ಪೊಡಿ ಪೆರುಂಕಳಿಯಾಟ ಮಹೋತ್ಸವ: ಸಂಘಟನಾ ಸಮಿತಿ ಸಭೆ



ಕಾಸರಗೋಡು: ಪಾಲಕುನ್ನು ಕರಿಪ್ಪೊಡಿ ಶ್ರೀ ತಿರೂರ್ ಮುಚ್ಚಿಲೋಟ್ ಭಗವತಿ ದೈವಸ್ಥಾನದಲ್ಲಿ ಪೆರುಂಕಳಿಯಾಟ ಮಹೋತ್ಸವವನ್ನು 16 ವರ್ಷಗಳ ನಂತರ ನಡೆಸಲು ನಿರ್ಧರಿಸಲಾಗಿದ್ದು, ಪೆರುಂಕಳಿಯಾಟ ಮಹೋತ್ಸವದ ಸಂಘಟನಾ ಸಮಿತಿ ಸಭೆ ಏ.12ರಂದು ಮಧ್ಯಾಹ್ನ 2.30ಕ್ಕೆ ದೇವಸ್ಥಾನದ ಆವರಣದಲ್ಲಿ ನಡೆಯಲಿದೆ. ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್ ಸಮಾರಂಭವನ್ನು ಉದ್ಘಾಟಿಸುವರು ಎಂದು ಪಾಲಕುನ್ನು ಕರಿಪ್ಪೊಡಿ ದೈವಸ್ಥಾನ ಸಮಿತಿ ಪದಾಧಿಕಾರಿಗಳು ಕಾಸರಗೋಡು ಪ್ರೆಸ್‌ಕ್ಲಬ್‌ನಲ್ಲಿ ಜರಗಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಪಂಚಾಯತ್ ಅಧ್ಯಕ್ಷ ಪಿ.ವಿ.ರಾಜೇಂದ್ರನ್ ಅಧ್ಯಕ್ಷತೆ ವಹಿಸುವರು. ಶಾಸಕ ಸಿ.ಎಚ್. ಕುಂಞಂಬು, ಜಿ.ಪಂ. ಮಾಜಿ ಅಧ್ಯಕ್ಷೆ ಪಿ.ಬೇಬಿ ಬಾಲಕೃಷ್ಣನ್, ಬ್ಲಾಕ್ ಪಂ. ಅಧ್ಯಕ್ಷೆ ಕೆ.ಸುಜಾತ, ಅಪರಾಧ ವಿಭಾಗದ ಪೊಲೀಸ್ ವರಿಷ್ಠಾಧಿಕಾರಿ ಪಿ.ಬಾಲಕೃಷ್ಣನ್ ನಾಯರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

5 ಲಕ್ಷ ಭಕ್ತರು ಭಾಗವಹಿಸುವ ನಿರೀಕ್ಷೆ

ಪೆರುಂಕಳಿಯಾಟ ಮಹೋತ್ಸವವನ್ನು 2027ನೇ ಜನವರಿ 22ರಿಂದ 27ರ ವರೆಗೆ ನಡೆಸಲು ನಿರ್ಧರಿಸಲಾಗಿದ್ದು, 5 ಲಕ್ಷ ಭಕ್ತರು ಭಾಗವಹಿಸುವ ನಿರೀಕ್ಷೆಯಿದೆ.

ವಾಣಿಯ ಸಮುದಾಯದ ಕುಲದೇವತೆ ಮುಚ್ಚಿಲೋಟ್ ಭಗವತಿಯ ಜೊತೆಗೆ ಕನ್ನಂಗಾಟ್ ಭಗವತಿ, ಪುಲಿಯೂರು ಕಾಳಿ, ಪುಲಿಯೂರು ಕಣ್ಣನ್, ನರಂಬಿಲ್ ಭಗವತಿ, ಮೂವಾಳಂಕುಯಿ ಚಾಮುಂಡಿ, ಕೋಲ ಸ್ವರೂಪ ತಾಯಿ, ವಿಷ್ಣುಮೂರ್ತಿ, ಪಂಜುರ್ಲಿ ದೈವಗಳ ಆರಾಧನೆಯೂ ನಡೆಯಲಿದೆ. ದೈವಸ್ಥಾನದ ಆಡಳಿತ ಸಮಿತಿ ಅಧ್ಯಕ್ಷ ಅಂಬು ಇಕ್ಕಿ, ಉಪಾಧ್ಯಕ್ಷ ರವಿ ಕಳನಾಡು, ಪ್ರಧಾನ ಕಾರ್ಯದರ್ಶಿ ಎ.ವಿ.ಕೃಷ್ಣನ್ ಮಾಸ್ಟರ್, ಕೋಶಾಧಿಕಾರಿ ತಂಬಾನ್ ಚೇಡಿಕುನ್ನು, ಪಿ.ವೇಣುಗೋ ಪಾಲನ್, ಜಗನ್ ಕರ್ತಾ ತರಕ್ಕಲ್ ಸುದ್ದಿಗೋಷ್ಠಿಯಲ್ಲಿದ್ದರು.



ಪೆರಿಯದಲ್ಲಿರುವ ಕೇರಳ ಕೇಂದ್ರೀಯ ವಿವಿ ಸಮಾಜ ಕಾರ್ಯ ವಿಭಾಗ, ಆಸ್ಟರ್ ಮಿಮ್ಸ್ ಆಸ್ಪತ್ರೆ ಇವುಗಳ ಜಂಟಿ ಆಶ್ರಯದಲ್ಲಿ ವಿಶ್ವ ಆರೋಗ್ಯ ದಿನದ ಅಂಗವಾಗಿ ಪೆರಿಯ ಕಲ್ಯೋಟ್‌ನಲ್ಲಿ ವೈದ್ಯಕೀಯ ಶಿಬಿರ, ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಯಿತು. ಈ ಸಂದರ್ಭ ವಿವಿಧ ಆರೋಗ್ಯ ತಪಾಸಣೆ ನಡೆಸಲಾಯಿತು. ಕಾರ್ಯಕ್ರಮದ ನೇತೃತ್ವವನ್ನು ಸಮಾಜ ಕಾರ್ಯ ವಿಭಾಗದ ಅಧ್ಯಕ್ಷೆ ಡಾ.ಜಿಲ್ಲಿ ಜೋನ್, ವಿದ್ಯಾರ್ಥಿಗಳಾದ ರಿಯಾ ಮನೋಜ್, ಸೂರ್ಯ ಎಸ್. ವಹಿಸಿದ್ದರು.



ಕಾಸರಗೋಡು ಜಿಲ್ಲೆಯ ಹೊಸದುರ್ಗ ತಾಲೂಕಿನ ಚೀಟ್ಟುಕುಂಡು ಕೀಕಾನ ಮೀತಲ್ ವೀಡ್ ತರವಾಡಿನಲ್ಲಿ ಶ್ರೀ ವಯನಾಟು ಕುಲವನ್ ದೈವಂಕಟ್ಟು ಮಹೋತ್ಸವವು ಭಕ್ತಿ ಭಾವದಿಂದ ಸಂಪನ್ನಗೊಂಡಿತು. ಮಹೋತ್ಸವದ ಅಂಗವಾಗಿ ಶ್ರೀ ವಯನಾಟು ಕುಲವನ್ ದೈವ, ಶ್ರೀ ವಿಷ್ಣುಮೂರ್ತಿ ಹಾಗೂ ವಿವಿಧ ದೈವಗಳು ಕೋಲ ನಡೆಯಿತು. ಸಹಸ್ರಾರು ಮಂದಿ ಭಕ್ತರು ಪಾಲ್ಗೊಂಡರು.

ಕಾಸರಗೋಡು-ಮಂಜೇಶ್ವರದಲ್ಲಿ ಬಿಜೆಪಿ ಗೆಲುವಿನ ನಿರೀಕ್ಷೆ: ಅಶ್ವಿನಿ

ಕಾಸರಗೋಡು: ಮಂಜೇಶ್ವರ ಮತ್ತು ಕಾಸರಗೋಡು ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಗೆಲುವಿಗೆ ಸಾಧ್ಯತೆ ಹೆಚ್ಚಿದೆ. ಈ ಎರಡು ಮಂಡಲಗಳಲ್ಲಿ ಮತದಾರರು ಬಿಜೆಪಿಯ ಅಭಿವೃದ್ಧಿ ಚಿಂತನೆಗಳ ಪರವಾಗಿದ್ದರು ಎಂದು ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ, ಬಿಜೆಪಿ ಜಿಲ್ಲಾಧ್ಯಕ್ಷೆ ಎಂ.ಎಲ್. ಅಶ್ವಿನಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ನಕಲಿ ಮತದಾನವಾದ ಸುಳಿವು

ವಿದೇಶಗಳಲ್ಲಿ ದುಡಿಯುತ್ತಿರುವ ಕಾಸರಗೋಡು ಜಿಲ್ಲೆಯವರ ಪೈಕಿ ಹೆಚ್ಚಿನವರು ಊರಿಗೆ ಬಂದು ಮತ ಚಲಾಯಿಸಲು ಸಾಧ್ಯವಾಗಿಲ್ಲ, ಇದರಿಂದಾಗಿ ಯುಡಿಎಫ್ ಮತಗಳ ಕುಸಿತಕ್ಕೆ ಕಾರಣವಾಗಿದೆ. ಇದೇ ವೇಳೆ ಮುಸ್ಲಿಂಲೀಗ್ ಭದ್ರಕೋಟೆಗಳಲ್ಲಿ ವ್ಯಾಪಕ ನಕಲಿ ಮತದಾನವಾದ ಬಗ್ಗೆ ಸುಳಿವು ಲಭಿಸಿದೆ. ಕೆಲವು ಮತಗಟ್ಟೆಗಳಲ್ಲಿ ಎಲ್‌ಡಿಎಫ್ ಮತ್ತು ಯುಡಿಎಫ್ ಪರಸ್ಪರ ಒಳಮೈತ್ರಿ ಮಾಡಿಕೊಂಡು ಚುನಾವಣೆಯಲ್ಲಿ ಭಾಗವಹಿಸಿರುವುದು ಬಹಿರಂಗಗೊಂಡಿದ್ದು, ಅತ್ಯಂತ ನಾಚಿಕೆಗೇಡು ಎಂದು ಅವರು ತಿಳಿಸಿದ್ದಾರೆ.



ಮಹಿಳಾ ಮೀಸಲಾತಿಗೆ ಕಾನೂನು ತಿದ್ದುಪಡಿ: ಸ್ವಾಗತಾರ್ಹ

ಕಾನೂನು ತಿದ್ದುಪಡಿ ಮೂಲಕ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಶೇಕಡಾ 33ರಷ್ಟು ಮಹಿಳಾ ಮೀಸಲಾತಿ ಜಾರಿಗೆ ತರಲು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರವು ಮುಂದಾಗಿರುವುದು ಸ್ವಾಗತಾರ್ಹ ಕ್ರಮವೆಂದು ಬಿಜೆಪಿ ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಆರ್ಥಿಕ ಪ್ರಗತಿಗೆ ಬದ್ಧ

ನರೇಂದ್ರ ಮೋದಿ ಸರಕಾರವು ಮಹಿಳೆಯರ ಕಲ್ಯಾಣ ಮತ್ತು ಆರ್ಥಿಕ ಪ್ರಗತಿಗೆ ಬದ್ಧವಾಗಿದೆ. ಸ್ಥಳೀಯಾಡಳಿತ ಸಂಸ್ಥೆಗಳಲ್ಲಿ ಶೇಕಡಾ 50ರಷ್ಟು ಮೀಸಲಾತಿಯನ್ನು ಒದಗಿಸಿದಂತೆ ಲೋಕಸಭೆ ಮತ್ತು ವಿಧಾನಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯ ಹೆಚ್ಚಳದೊಂದಿಗೆ ಮಹಿಳಾ ಸಮುದಾಯದ ಪರವಾಗಿ ಅನೇಕ ವಿಷಯಗಳನ್ನು ಜಾರಿಗೆ ತರಬಹುದು ಎಂದು ನುಡಿದರು.

ಮಹಿಳಾ ವಿರೋಧಿ ನಿಲುವು

ಪ್ರಗತಿಪರ ಮತ್ತು ಮಹಿಳಾ ಸಮಾನತೆ ಎಂದು ಹೇಳಿಕೊಳ್ಳುವ ಕೇರಳಕ್ಕೆ ಒಬ್ಬ ಮಹಿಳಾ ಮುಖ್ಯಮಂತ್ರಿಯೂ ಇಲ್ಲದಿರುವುದು ಎಡ ಮತ್ತು ಐಕ್ಯರಂಗಗಳ ಮಹಿಳಾ ವಿರೋಧಿ ಚಿಂತನೆಗೆ ಉದಾಹರಣೆಯಾಗಿದೆ. ಕಾಸರಗೋಡು ಜಿಲ್ಲೆಯಿಂದ ಒಬ್ಬ ಮಹಿಳಾ ಪ್ರತಿನಿಧಿಯನ್ನು ಕೇರಳ ವಿಧಾನಸಭೆಗೆ ಇಲ್ಲಿಯವರೆಗೆ ಆರಿಸದಿರುವುದು ಎಲ್‌ಡಿಎಫ್ ಮತ್ತು ಯುಡಿಎಫ್ ಒಕ್ಕೂಟಗಳ ಮಹಿಳಾ ವಿರೋಧಿ ನಿಲುವು ಇದರಲ್ಲಿ ಸ್ಪಷ್ಟಗೊಳ್ಳುತ್ತದೆ ಎಂದು ಎಂ.ಎಲ್.ಅಶ್ವಿನಿ ಈ ಸಂದರ್ಭದಲ್ಲಿ ಗಮನ ಸೆಳೆದಿದ್ದಾರೆ.

ಉದ್ಯಾವರ ಮಾಡ ಶ್ರೀ ಅರಸು ಮಂಜಿಷ್ಣಾರ್ ದೈವ ಕ್ಷೇತ್ರದ ಉತ್ಸವ ದಿನ ನಿಗದಿಯ 'ಕುದಿಕಳ' ಸಂಪನ್ನ

ಮಂಜೇಶ್ವರ: ಸುಮಾರು 800 ವರ್ಷಗಳಿಂದ ಧಾರ್ಮಿಕ ಸೌಹಾರ್ದತೆಗೆ ಸಾಕ್ಷಿಯಾಗಿರುವ ಉದ್ಯಾವರ ಮಾಡ ಶ್ರೀ ಅರಸು ಮಂಜಿಷ್ಣಾರ್ ದೈವ ಕ್ಷೇತ್ರದ ವಾರ್ಷಿಕ ಮಹೋತ್ಸವ ದಿನಾಂಕ ನಿಗದಿಪಡಿಸುವ ಸಮಾರಂಭವಾದ ಕುದಿಕಳ ಎಂಬ ಹೆಸರಿನಲ್ಲಿ ಸಂಪ್ರದಾಯ ಪ್ರಕಾರ ಕಾರ್ಯಕ್ರಮವು ಸಂಪನ್ನಗೊಂಡಿತು.

ಕೋಮು ಸೌಹಾರ್ದತೆಗೆ ನಿದರ್ಶನ

ಮುಸ್ಲಿಂ ಸಮುದಾಯದ ವ್ಯಾಪಾರಿಯೊಬ್ಬರಿಂದ ದೈವಪಾತ್ರಿಗಳು ವೀಳ್ಯದೆಲೆ ಮತ್ತು ಅಡಿಕೆ ಖರೀದಿಸುವುದು ಸಮಾರಂಭದ ವಿಶೇಷತೆಯಾಗಿದೆ. ಇದು ಕೋಮು ಸೌಹಾರ್ದತೆಗೆ ನಿದರ್ಶನವಾಗಿದೆ.



ಉದ್ಯಾವರ ಸಾವಿರ ಜಮಾಅತ್ ಮಸೀದಿ ಸದಸ್ಯರು ಮತ್ತು ಶ್ರೀ ಕ್ಷೇತ್ರದ ಬ್ರಹ್ಮಸಭೆ ಎರಡು ಕಡೆಗಳಲ್ಲಿ ಕುಳಿತು ಮಹೋತ್ಸವದ ದಿನಾಂಕ ನಿಗದಿಪಡಿಸಿದರು. ಬಳಿಕ ಸಂಪ್ರದಾಯದಂತೆ ಅಡಿಕೆ, ತೆಂಗಿನಕಾಯಿ ಹಾಗೂ ವೀಳ್ಯದೆಲೆ ಮಾರಾಟ ನಡೆಯಿತು.

ಮುಸ್ಲಿಂ ಸಮುದಾಯದ ಟಿ.ಎಸ್.ಸಯ್ಯದ್ ಅವರಿಂದ ವೀಳ್ಯದೆಲೆ ಹಾಗೂ ಅಡಿಕೆಯನ್ನು ಖರೀದಿಸಲಾಯಿತು. ವಿಷು ಹಬ್ಬ ಕಳೆದು ಬರುವ ಮೊದಲ ಶುಕ್ರವಾರ ಮಸೀದಿಗೆ ತೆರಳಿ ಜಮಾಅತ್ ಸದಸ್ಯರನ್ನು ಉತ್ಸವಕ್ಕೆ ಆಮಂತ್ರಿಸಲು ತೀರ್ಮಾನಿಸಲಾಯಿತು.

ದಿನಾಂಕ ನಿಗದಿ ಸಂದರ್ಭದಲ್ಲಿ ಪ್ರಮುಖರಾದ ಸಂಜೀವ ಶೆಟ್ಟಿ, ಕಿರಣ್ ಶೆಟ್ಟಿ, ತಿಮ್ಮ ಭಂಡಾರಿ, ಉಮೇಶ್ ಪೂಮಣ್ಣು ಹಾಗೂ ವಿವಿಧ ಸಮಾಜದ ಮುಖಂಡರು ಭಾಗವಹಿಸಿದ್ದರು.

ಮೇ 9: ಧ್ವಜಾರೋಹಣ

ಶ್ರೀ ಕ್ಷೇತ್ರದ ಉತ್ಸವವು ಮೇ 9ರಂದು ಧ್ವಜಾರೋಹಣಗೊಂಡು 11 ಮತ್ತು 12ರಂದು ಬಂಡಿ ಉತ್ಸವ ಜರಗಲಿದೆ.


VIDYANIKETHANA P U COLLEGE, Gonikoppal, Kodagu
PUC COMMERCE
100%
PUC Science
99.44%
HEARTY CONGRATULATIONS FROM
MANAGEMENT, PRINCIPAL, STAFF AND STUDENTS
COMMERCE
M V SATHVI DECHAMMA
TOTAL : 583
B V PALLAVI 579
DAKSHA MUTHAMMA S S 579
RUHEENA BEGUM 577
M P Ayush Poovaiah 567
Fida Fathima M U 560
Muthanna C E 560
Neha D J 572
Shahanaz K A 572
Ninad Nanjappa P G 571
Alfia Haneen 567
M P Ayush Poovaiah 567
Fida Fathima M U 560
Muthanna C E 560
Hithashree Muthamma P R 558
Neha M S 558
Charishma K T 556
Muthamma M M 555
Aryan B M 551
Muthamma M M 555
Aryan B M 551
Fathima Rinsiya P N 550
Fathimath Samna 550
Ridha M A 550
K G Nithin 549
Nehal Poonacha 540
Yashma K U 545
Shradha Ponnamma K P 544
Preetham V S 541
Anvitha K A 540
Varsha A M 540
Kushalappa N M 539
Sujal K M 535
Deeksha B R 528
Shreya Ponnamma K S 527
Srujana K M 527
Manya Thangamma C T 526
Monik Prajwal K 526
Fathimath Afnidha K A 525
Hamshika P N 523
Sana 521
I D Richel Dechamma 519
Farsana T A 512
Nishitha P H 510
Nehal C M 508
Arun Kumar A 507
Meghana C P 506
Thaniya A G 504
Ujwal Bopanna N S 504
Nafeesa M F 502
SCIENCE
State 9th Rank
II District Topper
HARIKRISHNAN M
Total – 591
State 9th Rank
II District Topper
VIPUL UTHAPPA B C
Total – 591
State 10th Rank
III District Topper
JENCIA DAVID
Total – 590
Jasmin D 587
T N CHARAN 585
Mohammed Nahim 583
Jamsheena T M 582
Muhammad Adil A 581
Sanvidarsha B V 580
Shahala C M 578
Cariappa G C 577
Niharika P A 576
Thafsiya C A 576
Angelin Menezes 573
Yana Kaverappa K 572
Shivali K S 572
Avani B S 572
Yashwanth H M 572
Abinand P D 571
Afeefa M M 571
Alfaridha S 570
P P Ganapathy 570
Huzaifa Manna 570
Shahana K H 570
Deepak Devaiah K N 568
Lekhan P L 568
Niya M 566
Vinisha K V 566
Ansif K M 565
Dhanya B I 564
Vishmitha G P 563
Anushka Bojamma C P 563
Shrungar H M 563
Nischitha M Y 559
Hanna Fathima M H 558
Fathima Ziya 558
Jeethin H U 558
Priyadarshini H M 557
K Hana Appaiah 555
Nihala P N 555
Rajeshwari M K 555
Alina S R 554
Charvi C 553
Thanush B K 553
Fathimath Nishma 549
Parvathi R 549
T S Swaliha 549
Diya D 548
Amna Sharin P S 547
Anvita P Rao 547
Dhrithi A G 546
C D Sarthak Belliappa 544
Chandana V K 544
Rana Fathima PU 543
Sandesh S K 543
B Ravichandran 548
Shreya P R 536
Anchal B H 534
C P Kaveramma 534
Poojith Nanjappa K P 534
Nathali Neelamma N P 533
Nazla Sherin 533
Meghan K D 532
Gagan B S 532
Manvith H R 531
T S Lisha Bojamma 531
Anurag V A 529
Sabir Shabib Nawaz 528
Tanisha B A 528
Akash B S 528
Glania Sharon Rozario 528
Nidhish M A 528
Suhana K H 527
Jees Prakash 526
Lanya Dechamma N 525
Gayana K R 524
Harshitha M J 524
Fathima Adila H M 522
Surya S 521
Prajwal Somaiah K K 520
Karan Karumbaiah 519
Mohammed Farhan 518
Krupa T S 517
Divya R 517
Ghanika Devamma A P 515
Ila Thangamma 514
Shahala Fathima C A 513
Kruthik C 512
Mohammed Mushraf M M 511
Subeesh K S 511
Clarina M K 510
Azmina M H 503
K T Sajan Somaiah 507
Mohammed Zahid M Z 504
Anushree T S 502
K B Preethi 501
K D Rajan Bopanna 500
REGISTRATION OPEN FOR I PUC SCIENCE AND COMMERCE ADMISSION FOR THE ACADEMIC YEAR 2026-27.
For details contact : Principal – 9480788300, College Office : 08274-298333, 9886092537, 9482056454